

ರಾಷ್ಟ್ರಪತಿ ವಿದ್ವತ್ ಪ್ರಶಸ್ತಿ ಪುರಸ್ಕೃತ ಸಿದ್ಧಾಂತೀ

ಪ್ರೊ. ಡಾ. ಗುರುಪಾದ ಕೆ. ಹೆಗಡೆ

‘ಭಾ’ ಅಂದರೆ ಪ್ರಕಾಶ, ಜ್ಞಾನ; ‘ಭಾ’ ದಲ್ಲಿ, ಜ್ಞಾನದಲ್ಲಿ, ಆತ್ಮಜ್ಞಾನದಲ್ಲಿ ‘ರತ’ ರಾದವರ, ತೊಡಗಿಕೊಂಡವರ ದೇಶ ಭಾರತ ಅನ್ನುವ ಅರ್ಥದಲ್ಲಿ ಈ ದೇಶವನ್ನು ಭಾರತ ಎಂದು ಕರೆಯಲಾಗಿದೆ. ಈ ಭಾರತವೆಂಬ ಹೆಸರು ಯಾವುದೋ ರಾಜನ ಹೆಸರಿನಿಂದ ಖಂಡಿತವಾಗಿ ಬಂದದ್ದಲ್ಲ.

ಪರಮಾತ್ಮನ ಶಕ್ತಿಯೇ ಚಿಚ್ಛಕ್ತಿ; ಅರ್ಥಾತ್ ಚಿತ್ರಕಾಶ. ಮಹಾಯೋಗಿಶ್ರೇಷ್ಠ ಋಷಿಗಳಿಗೆ ಯೋಗಸಮಾಧಿಯಲ್ಲಿ ಗೋಚರಿಸಿದ ವೇದಗಳು ಈ ಚಿತ್ರಕಾಶದ ವಿವಿಧಾರ್ಥಗಳನ್ನು ಒಳಗೊಂಡಿದ್ದು ಅವೆಲ್ಲವೂ ಮಾನವನ ಬದುಕಿಗೆ ಬೇಕಾದ ‘ಧರ್ಮ’ಅರ್ಥಾತ್ ಕರ್ತವ್ಯ, ‘ಅರ್ಥ’ ಅಂದರೆ ಯೋಗ್ಯಕರ್ತವ್ಯದಿಂದ ಬದುಕಿಗೆ ಅವಶ್ಯಕವಾದ ಧನಾರ್ಜನೆ, ‘ಕಾಮ’ ಅರ್ಥಾತ್ ಸುಂದರ ಹಾಗೂ ಸುಖೀ ಬದುಕಿಗೆ ಬೇಕಾದ ಸರ್ವಕಾಮನೆಗಳು ಈ ಮೂರನ್ನೂ ಸಾಧಿಸಿಕೊಳ್ಳುತ್ತ ಪರಮಗುರಿಯಾದ ಪರಮಾತ್ಮನಲ್ಲಿ ಒಂದಾಗಿ ಶಾಶ್ವತಸುಖವನ್ನು ನಿರಂತರವಾಗಿ ಅನುಭವಿಸಬೇಕೆಂಬ ‘ಮೋಕ್ಷ’, ಗಳೆಂಬ ಚತುರ್ವಿಧಪುರುಷಾರ್ಥಗಳ ಸಾಧನೆಯ ಮರ್ಮವನ್ನು ತಿಳಿಸುತ್ತ ಹೋಗುತ್ತವೆ. ಇಷ್ಟೇ ಅಲ್ಲದೆ ನಾಲ್ಕೂ ಯುಗಗಳು ಹಾಗೂ ಯುಗಾದಿಯಿಂದ ಆರಂಭವಾಗಿ ಮಹಾಲಯದವರೆಗಿನ ಎಲ್ಲ ಭಾರತೀಯ ಸನಾತನ ಹಬ್ಬಗಳು ಈ ಚತುರ್ವಿಧಪುರುಷಾರ್ಥಗಳನ್ನೇ ಅರ್ಥೈಸುತ್ತ ಜೀವಾತ್ಮ- ಪರಮಾತ್ಮರ ಯೋಗವನ್ನೇ, ಸಂಯೋಗವನ್ನೇ ತಮ್ಮ ಪರಮಗುರಿಯನ್ನಾಗಿ ಇಟ್ಟುಕೊಂಡಿವೆ.

ಲೌಕಿಕವಾಗಿಯೂ ಸಹ ಜಗದ ಜನರೆಲ್ಲರಲ್ಲಿಯೂ ಒಂದೇ ಮನಸ್ಸಿರಲಿ ಎಂದೂ ಎಲ್ಲರೂ ಸರ್ವಸಮಾನಸುಖಿಗಳಾಗಲಿ ಎಂದೂ ಹಾರೈಸುವ ವೇದಗಳ ಸೂಕ್ತಗಳು ಸದಾಕಾಲ ಸರ್ವತ್ರ ಆದರಣೀಯವೇ ಸರಿ.

ಅಕ್ಷತಾ ಪ್ರಕಾಶನ, ಮೈಸೂರು 9845129777 । ಬೆಂಗಳೂರು 8970529283

ಚಿತ್ರಕಾಶದರ್ಶಿಕಾ

ಪ್ರೊ. ಡಾ. ಗುರುಪಾದ ಕೆ. ಹೆಗಡೆ

ಚಿತ್ರಕಾಶದರ್ಶಿಕಾ



ಪ್ರೊ. ಡಾ॥ ಗುರುಪಾದ ಕೆ. ಹೆಗಡೆ

ಅಕ್ಷತ ಪ್ರಕಾಶನ, ಮೈಸೂರು





ಯೋಗ ಪಿತಾಮಹ

ಶ್ರೀ ಶ್ರೀ ಪತಂಜಲಿ ಮುನಿವರ್ಯಯರು

ಚಿತ್ಪ್ರಕಾಶದರ್ಶಿಕಾ

ರಾಷ್ಟ್ರಪತಿ ವಿದ್ವತ್ ಸಮ್ಮಾನ ಪ್ರಶಸ್ತಿ ಪುರಸ್ಕೃತ

ಸಿದ್ಧಾಂತೀ ಪ್ರೊ॥ ಡಾ॥ ಗುರುಪಾದ ಕೆ.ಹೆಗಡೆ

ಶಾಸ್ತ್ರವಿದ್ಯಾನಿಧಿ, ಜ್ಯೋತಿಶ್ಶಾಸ್ತ್ರಮಹಾನಿಧಿ, ವೇದರತ್ನ

ದರ್ಶನವಾರಿಧಿ, ಆದರ್ಶ ಸೇವಾರತ್ನ

ಪ್ರಕಾಶನ :

ಅಕ್ಷತ ಪ್ರಕಾಶನ

ಗೋವಿಂದಕೃಪ, ನಂ. 240, ತ್ಯಾಗಮಾರ್ಗ

ಮೊದಲನೆಯ ಹಂತ, ಸಿದ್ಧಾರ್ಥ ಬಡಾವಣೆ

ಮೈಸೂರು – 570011

ಮೊಬೈಲ್ : 9845129777

CHITPRAKAASHADARSHIKAA :

by Siddhaantee Prof. **Dr. Gurupad K. Hegde**

Rtd. Professor of Sanskrit, # 520 “Shreemaataa”

Maruti Temple Road, 4th Cross, 2nd Main

Tonachikoppalu - Kuvempunagar

Mysuru-570023. Cell : 8762320683

Published by : **Akshata Prakashana**

Govindakrupa, # 240, Tyagamarga, First Stage,

Siddhartha Extension, Mysuru - 570011

Mysore : Mob : 9845129777 Bengaluru : Ph : 8970529283

ಲೇಖಕರು :

ಸಿದ್ಧಾಂತೀ ಪ್ರೊ॥ ಡಾ॥ ಗುರುಪಾದ ಕೆ.ಹೆಗಡೆ

ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು

520 **“ಶ್ರೀಮಾತಾ”**, 4ನೇ ಕ್ರಾಸ್, 2ನೇ ಮೇನ್, ಮಾರುತಿ ಟೆಂಪಲ್ ರೋಡ್,

ತೊಣಚಿಕೊಪ್ಪಲು–ಕುವೆಂಪುನಗರ, ಮೈಸೂರು–570023

ಮೊ : 8762320683

ಪ್ರಥಮ ಮುದ್ರಣ : 2021

ಪ್ರತಿಗಳು : 1000

ಪುಟಗಳು : 216

ಬೆಲೆ : 150/–

ಮುದ್ರಕರು :

ಗುಪ್ತ ಆಫ್ ಸೆಟ್ ಪ್ರಿಂಟರ್ಸ್

ವಿದ್ಯಾರಣ್ಯಪುರಂ, ಮೈಸೂರು– 8

ದೂ : 0821–2482023

ಪ್ರಕಾಶಕರ ನುಡಿ

ನಮ್ಮ ಅಕ್ಷತ ಪ್ರಕಾಶನದಿಂದ ರಾಷ್ಟ್ರಪತಿ ಪ್ರಶಸ್ತಿಗೆ ಭಾಜನರಾದ **ಪ್ರೊ॥ ಡಾ॥ ಗುರುಪಾದ ಕೆ.ಹೆಗಡೆ**ಯವರ 'ಚಿತ್ರಕಾಶದರ್ಶಿಕಾ' ಎಂಬ ಈ ಕೃತಿಯನ್ನು ಪ್ರಕಟಿಸಲು ನಮಗೆ ತುಂಬ ಸಂತೋಷವೆನಿಸುತ್ತದೆ. ವೇದಗಳಿಗೆ ಅರ್ಥಯೋಗವನ್ನು ಒದಗಿಸಿ ಅವರು ಬರೆದ **"ಚಿತ್ರಕಾಶ"**ವನ್ನು ನೋಡಿದಾಗ ಅದಕ್ಕೆ ವಿವರಣೆಯ ಯೋಗವನ್ನು ಒದಗಿಸಿಕೊಟ್ಟಲ್ಲಿ ಒಂದು ಪುಸ್ತಕವಾಗಿ ಅದನ್ನು ಪ್ರಕಟಿಸುವುದಾಗಿ ನಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದೆವು. ನಮ್ಮ ಅಪೇಕ್ಷೆಗೆ ಮನ್ನಣೆ ಕೊಟ್ಟು ಅವರು 'ದರ್ಶಿಕಾ' ಅನ್ನುವ ಹೆಸರಿನಲ್ಲಿ ವಿವರಣೆಯನ್ನು ಬರೆದುಕೊಟ್ಟಿದ್ದಾರೆ. ವೇದಗಳೆಲ್ಲವೂ ಯೋಗಮಾರ್ಗದರ್ಶನದಲ್ಲಿಯೇ ಒಡಮೂಡಿ ಬಂದಿವೆ ಅನ್ನುವ ಡಾ॥ ಹೆಗಡೆಯವರ ದರ್ಶನವು ನಮ್ಮ ಶ್ರೀಪತಂಜಲಿಯೋಗ ಪದ್ಧತಿಗೆ ತುಂಬ ಹೊಂದಿಕೊಳ್ಳುತ್ತಿದ್ದು ಅವರ ಈ ಕೃತಿಯನ್ನು ನಮಗೆ ಪ್ರಕಟಿಸಲು ಅನುವು ಮಾಡಿಕೊಟ್ಟಿದ್ದಕ್ಕೆ ಅವರಿಗೆ ನಾವು ತುಂಬ ಕೃತಜ್ಞರಾಗಿದ್ದೇವೆ.

ಈ ಕೃತಿಯನ್ನು ನಮ್ಮ ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ಮೈಸೂರಿನ ಗುಪ್ತ ಆಫ್‌ಸೆಟ್ ಪ್ರಿಂಟರ್ಸ್ ರವರಿಗೆ ವಂದನೆಗಳು. ಯೋಗಮಾರ್ಗದಲ್ಲಿ ಇರುವವರೆಲ್ಲ ಈ ಕೃತಿಯನ್ನು ಓದಬೇಕು ಅನ್ನುವುದು ನಮ್ಮ ಅಪೇಕ್ಷೆ. ಈ ಕೃತಿಯು ಪಂಡಿತರಿಗೂ ಪಾಮರರಿಗೂ ಸಮಾನವಾಗಿ ಸ್ವೀಕಾರಯೋಗ್ಯವಾದುದು ಎನ್ನುವುದು ನಮ್ಮ ಪ್ರಾಮಾಣಿಕ ಅನಿಸಿಕೆ.

ಅಕ್ಷತಪ್ರಕಾಶನದ ಪರವಾಗಿ ... ಭಿಕ್ಷುಕ್

ಶ್ರೀನುಡಿ

ಚಿತ್ರಕಾಶದರ್ಶಿಕಾ ಎಂಬ ಈ ಹೊತ್ತಿಗೆಯಲ್ಲಿ ವೇದಗಳನ್ನು ದೈನಂದಿನದಲ್ಲಿ ಪಠಿಸುವ ಅನೇಕರಿಗೆ ಮತ್ತು ಶ್ರೀಸಾಮಾನ್ಯರಿಗೂ ವೇದ್ಯವಾಗುವಂತೆ, ವೇದಗಳ ಸೂಕ್ತಗಳನ್ನು ಪರಿಚಯಿಸುವುದರ ಜೊತೆಗೆ ಭಾವಭಿತ್ತಿಯ ಒಳಹೊಕ್ಕು ಬ್ರಹ್ಮಜ್ಞಾನವನ್ನೂ ಪರಿಚಯಿಸಲಾಗಿದೆ. ಈ ಕೃತಿಯಲ್ಲಿ ವೇದದ ಸೂಕ್ತಗಳನ್ನು ಕನ್ನಡಕ್ಕೆ ಭಾವಾರ್ಥಸಹಿತವಾಗಿ ತಂದಿರುವುದು ನಿಜಕ್ಕೂ ವೇದಗಳ ಕುರಿತಾಗಿ, ಲೇಖಕರ ಆಸ್ಥೆಯನ್ನು ಮತ್ತು ಅಭಿರುಚಿಯನ್ನು ಹಾಗೆಯೇ, ಭಾಷೆಯ ಮೇಲಿನ ಪಾಂಡಿತ್ಯ ಪ್ರೌಢಿಮೆಗಳನ್ನು ಅನಾವರಣಗೊಳಿಸುತ್ತದೆ. ಕೆಲವು ಭಾವಗೀತೆಗಳೂ ಈ ಕೃತಿಯಲ್ಲಿದ್ದು ಅವು ಆತ್ಮವನ್ನು ಜಾಗೃತಗೊಳಿಸುವವೇ ಆಗಿದ್ದುದು ಇಲ್ಲಿಯ ವಿಶೇಷ.

"ನಾನೃಷಿಃ ಕುರುತೇ ಕಾವ್ಯಂ" ಎಂಬ ಉಕ್ತಿಯಂತೆ ಋಷಿಯಾದವನಿಗೆ ಮಾತ್ರ ಇಂತಹ ಕಾವ್ಯಗಳನ್ನು ರಚಿಸಲು ಸಾಧ್ಯ. ಇಲ್ಲಿ ಮೂಡಿಬಂದಿರುವುದು ಋಷಿ ಮೂಲವೇ ಆಗಿದ್ದು ಮೂಲಪ್ರಕಾಶವನ್ನು, ಅರ್ಥಾತ್ ಪರಬ್ರಹ್ಮವನ್ನು ಅರಿಯಲು ಚಿತ್ರಕಾಶದ ಅವಶ್ಯಕತೆ ಇದ್ದೇ ಇದೆ. ಚಿತ್ರಕಾಶವು ಉಂಟಾಗಲು ಇಂತಹ ಕೃತಿಗಳು ಅತ್ಯವಶ್ಯ. ವೇದಗಳ ಸೂಕ್ತಗಳನ್ನು ಸರಳವಾಗಿ ಅರ್ಥವಾಗುವಂತೆ ಚಿತ್ರಿಸಿರುವುದರ ಮುಖೇನ ಚಿತ್ರಕಾಶದ ವಿಕಾಸಕ್ಕೆ ಈ ಕೃತಿಯು ಕಾರಣವಾಗುವುದು. ಇಲ್ಲಿ ಚಿತ್ರಕಾಶಕ್ಕೆ ಕೊಟ್ಟ ದರ್ಶಿಕಾ ಎಂಬ ವಿವರಣೆಯು ಅತ್ಯಂತ ಗಹನವಿಚಾರಗಳನ್ನೊಳಗೊಂಡು ಆತ್ಮಬೋಧಕವಾಗಿದೆ; ಇದರಿಂದಾಗಿ ಈ ಗ್ರಂಥಕ್ಕೆ ನೀಡಿರುವ ಚಿತ್ರಕಾಶದರ್ಶಿಕಾ" ಎಂಬ ಹೆಸರು ಅತ್ಯಂತ ಸೂಕ್ತವಾಗಿದೆ. ಲೇಖಕರಾದ ಡಾ. ಗುರುಪಾದ ಕೆ. ಹೆಗಡೆಯವರ ಜೀವನ ಶೈಲಿ ಹಾಗೂ ಇವರು ಬರೆದಿರುವ ಇನ್ನುಳಿದ ಕೃತಿಗಳನ್ನು ಗಮನಿಸಿದರೆ ಇವರ ಋಷಿ ಜೀವನವು ಸರಳವಾಗಿ ಗೋಚರವಾಗುತ್ತದೆ. ಇವರು ಬರೆದಿರುವ "ಸಂಸ್ಕೃತವ್ಯಾಕರಣದೀಪಿಕಾ" ಗ್ರಂಥವು ಸಂಸ್ಕೃತ ಭಾಷಾಭ್ಯಾಸಿಗಳಿಗೆ ಅತ್ಯನುಕೂಲವಾಗಿದ್ದು, ಭಾಷಾಶಾಸ್ತ್ರಕ್ಕೆ ಪಾಣಿನಿಯು ನೀಡಿದ ಕೊಡುಗೆಗಳನ್ನು ಈ ಕೃತಿಯು ಅತ್ಯಂತ ಸರಳವಾಗಿ ಕನ್ನಡೀಕರಿಸುತ್ತದೆ. ಇದನ್ನು ಗುರುತಿಸಿಯೇ ಮೈಸೂರು ವಿಶ್ವವಿದ್ಯಾನಿಲಯವು ತನ್ನ "ಸುವರ್ಣ ಮಹೋತ್ಸವ ಸಂಶೋಧನ ಪ್ರಶಸ್ತಿ" ಯನ್ನು 1980ರಲ್ಲಿ ಇವರಿಗೆ ನೀಡಿ ಗೌರವಿಸಿದೆ. ಇವರ ಶ್ಲೇಷಸಿದ್ಧಾಂತಾದಿ ಗ್ರಂಥಗಳನ್ನು ಅವಲೋಕಿಸಿದರೆ ಯಾವುದೇ ಮಂತ್ರದೃಷ್ಟಾರರ ಅಥವಾ ಋಷಿಯ ಮನಃಸ್ಥಿತಿಯು ಮಂತ್ರದರ್ಶನದ ಸಮಯದಲ್ಲಿ

ಶ್ಲೇಷದೊಂದಿಗೆ ಅಥವಾ ನಾನಾರ್ಥಗಳೊಂದಿಗೆ ಅವಶ್ಯವಾಗಿ ರಾರಾಜಿಸುತ್ತಿತ್ತು ಅನ್ನುವುದು ವೇದ್ಯವಾಗುತ್ತದೆ. ನಾನಾರ್ಥಯುತವಾದ ಮಂತ್ರಗಳ ಮುಖೇನ ಜಗತ್ಕಲ್ಯಾಣವನ್ನು ಹಾಗೂ ಆತ್ಮ ಕಲ್ಯಾಣವನ್ನು ಸಾಧಿಸುವ ಸಾಹಿತ್ಯವೇ ಋಷಿ ಸಾಹಿತ್ಯವೆಂದು ತರ್ಕಬದ್ಧವಾಗಿ ಡಾ. ಗುರುಪಾದ ಕೆ. ಹೆಗಡೆಯವರು ಎಲ್ಲರಿಗೂ ಅರ್ಥವಾಗುವಂತೆ ತಂದಿದ್ದಾರೆ. ತಮ್ಮಲ್ಲಿ ಹುದುಗಿದ್ದ ಶ್ಲೇಷ ತತ್ತ್ವವನ್ನು ಹೊರತೆಗೆದು ಅದನ್ನು ಒಂದು ಸಿದ್ಧಾಂತವನ್ನಾಗಿ ರೂಪಿಸುವ ಇವರ ಸಾರ್ಥಕ ಪ್ರಯತ್ನವನ್ನು ಅವಲೋಕಿಸಿದರೆ ಇವರೂ ಸಹ ಋಷಿಗಳೇ ಸರಿ: ಪ್ರಾಚೀನ ಋಷಿಗಳ ಮನದಾಳವನ್ನು ಅರಿಯಬಲ್ಲ ಇವರ ಶಕ್ತಿ ಅಗಾಧವಾದುದು. ಸಂಪ್ರದಾಯಗಳ ಮತ್ತು ನವಗ್ರಹಗಳ ಅಂತರಾರ್ಥಗಳನ್ನು ಇವರು ವಿವರಿಸುವ ರೀತಿಯೂ ಋಷಿ ಸದೃಶವಾಗಿಯೇ ಇದೆ. ಯುಗಾರ್ಥಸಹಿತವಾದ ಮಹಾವಿಷ್ಣುವಿನ ದಶಾವತಾರಗಳ ಸೂಕ್ಷ್ಮಾರ್ಥವನ್ನು ಇವರು ವಿವರಿಸಿದ್ದು ತುಂಬ ಮನೋಜ್ಞವಾಗಿದೆ. 'ಶ್ಲೇಷಾಚಾರ್ಯರೆಂದೆನಿಸಿ ಮತ್ತು ತಾವು ಒಬ್ಬ "ಆಚಾರ್ಯ"ರೇ ಸರಿ ಅನ್ನುವುದನ್ನು ಡಾ. ಗುರುಪಾದ ಕೆ. ಹೆಗಡೆಯವರು ಋಜುವಾತುಗೊಳಿಸಿದ್ದಾರೆ. ಇವರ ಋಷಿಸದೃಶತ್ವಕ್ಕೆ ಪೂರಕವಾಗಿ ಇವರ "ಅಧ್ಯಾತ್ಮ ಶ್ರೀ ರಾಮಸ್ತೋತ್ರ" "ಅಧ್ಯಾತ್ಮ ಸ್ತೋತ್ರಮಂತ್ರಗಳು", "ಶ್ಲೇಷಸಿದ್ಧಾಂತ", "ಸನಾತನಶಬ್ದಾರ್ಥಚಿಂತಾಮಣಿ" "ಶ್ರೀಮಾತಾಲಲಿತಾ" ಮುಂತಾದ ಕೃತಿಗಳು ಕಂಡುಬರುತ್ತವೆ. ಇವರು ಬರೆದಿರುವ ಸಾಹಿತ್ಯದಲ್ಲಿ ಗುರುಪಾದವೆಂಬ ಅಂಕಿತನಾಮವನ್ನು ಕಾಣುತ್ತೇವೆ. ಇದು ಕೃತಿಕಾರರ ಹೆಸರೇ ಆಗಿದ್ದರೂ ಕೂಡ "ಗುರುಪಾದ' ವೆಂಬುದು ಬ್ರಹ್ಮದ ಚರಣವನ್ನೇ ಸೂಚಿಸುವ ಅರ್ಥದಲ್ಲಿ ಬಂದಿರುವುದು ಇಲ್ಲಿ ಗಮನಾರ್ಹವಾಗಿದೆ. ಇವರಿಂದ ರಚಿತವಾದ 'ಚಿತ್ಪ್ರಕಾಶ ದರ್ಶಿಕಾ' ಎಂಬ ಈ ಕೃತಿಯು,

"ವೇದಾದಿಜ್ಞಾನಸಾಹಿತ್ಯಸ್ಫೂರ್ತಿದೋ ಮೋಕ್ಷಕಾರಕಃ।
ಸತ್‌ತತ್ತ್ವಪೋಷಕೋಽಪ್ಯೇಷ ಚಿತ್ಪ್ರಕಾಶೋ ವಿರಾಜತೇ॥"

ಎಂಬಂತೆ, ವೇದಾದಿಜ್ಞಾನಸಾಹಿತ್ಯವೆಲ್ಲ ಸ್ಫೂರ್ತಿದಾಯಕವಾದ ಚಿತ್ಪ್ರಕಾಶದಿಂದ ವಿರಾಜಿಸುತ್ತಿದ್ದು, ಮೋಕ್ಷಕಾರಕವಾದ ಚಿತ್ ತತ್ತ್ವವನ್ನು ಅವು ಪ್ರತಿಪಾದಿಸುವಂಥಾದ್ದಾಗಿವೆ.

ಆಚಾರ್ಯರೇ ಆದ ಡಾ॥ ಗುರುಪಾದ ಕೆ. ಹೆಗಡೆಯವರಿಂದ ಇಂತಹ ಉತ್ತಮ ಜ್ಞಾನದಾಯಕ ಕೃತಿಗಳು ಕನ್ನಡ ಸಾರಸ್ವತಲೋಕಕ್ಕೆ ಇನ್ನೂ ಸಮೃದ್ಧವಾಗಿ ಆ ಪರಾಶಕ್ತಿಯು ಕೊಡಮಾಡಲೆಂದು ಆಶಿಸುತ್ತೇವೆ.

ಡಾ. ಮರಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು
ವೀರಾಪುರ ಹಿರೇಮಠ, ಸಾಗರ ತಾ॥

ಚಿತ್ಪ್ರಕಾಶದರ್ಶಿಕಾ ಪ್ರವೇಶ

ಓಂಕಾರದಿಂದ ಮೂಡಿಬಂದ ಈ ನಮ್ಮ ಜಗತ್ತಿನಲ್ಲಿ ಮೊದಲನೆಯದಾಗಿ ಪ್ರಕಟಗೊಂಡು ಬಂದ ಗ್ರಂಥ ವೇದ, ಋಗ್ವೇದ. ಋಗ್ವೇದಕ್ಕೂ ಹಿಂದೆ ಜಗತ್ತಿನಲ್ಲಿ ಯಾವುದೇ ಗ್ರಂಥವಿರಲಿಲ್ಲವೆನ್ನುವುದು ಭಾಷಾಶಾಸ್ತ್ರಜ್ಞರೆಲ್ಲರ ಒಮ್ಮತದ ನಿಲುವು. ವೇದಸಾಹಿತ್ಯವನ್ನು ನೀಡಿದ ಭಾರತವೇ ಮೊಟ್ಟಮೊದಲು ಸಾಹಿತ್ಯವನ್ನು ಆ ಮೂಲಕ ಪ್ರಪಂಚಕ್ಕೆ ತಂದ ದೇಶವೆನ್ನುವುದು ಭಾರತೀಯರಿಗೆಲ್ಲ ಬಹುಹೆಮ್ಮೆಯ ಸಂಗತಿ. 'ಭಾ' ಅಂದರೆ ಜ್ಞಾನ, ಬೆಳಕು, ವೇದಗಳನ್ನು ಸಮಸ್ತ ಜಗತ್ತಿಗೆ ನೀಡುವುದರ ಮೂಲಕ ಭಾ–ದಲ್ಲಿ, ಜ್ಞಾನದಲ್ಲಿ ರತವಾದ, ನಿರತವಾದ ದೇಶವೆಂಬ ಖ್ಯಾತಿಯೊಂದಿಗೆ ಈ ದೇಶವನ್ನು ಭಾರತವೆಂದು ಕರೆಯಲಾಯಿತು. ವೇದಕ್ಕೆ ಮೂಲ ಯೋಗ, ಯೋಗಪದ್ಧತಿ, ಯೋಗಶಾಸ್ತ್ರವೆನ್ನುವುದು ಅಷ್ಟೇ ಹೆಮ್ಮೆಯ ಸಂಭ್ರಮ.

ಯೋಗವಿಲ್ಲದೆ ವೇದವಿಲ್ಲ ; ಏಕೆಂದರೆ, ವೇದವನ್ನು ಯಾರೋ ಋಷಿ–ಮುನಿಗಳು ಬರೆದದ್ದು ಎಂದು ಎಲ್ಲಿಯೂ ಹೇಳಲಾಗುವುದಿಲ್ಲ; ಬದಲಾಗಿ ಋಷಿ–ಮುನಿಗಳು ದರ್ಶಿಸಿದ್ದು ಎಂದೇ ಹೇಳಲಾಗುತ್ತದೆ. 'ಅಗ್ನಿಮ್ ಈಳೇ ಪುರೋಹಿತಮ್...'– ಪುರೋಹಿತನಾದ ಅಗ್ನಿಯನ್ನು ಪ್ರಾರ್ಥಿಸುತ್ತೇನೆ...ಎಂದು ಮುಂತಾಗಿ ಪ್ರಾರಂಭವಾಗುವ ಋಗ್ವೇದದ ಪ್ರಪ್ರಥಮ ಮಂತ್ರದಲ್ಲಿ ಬರುವ ಅಗ್ನಿಯೆಂದರೆ ಎದುರಿಗಿರುವ, ಅರ್ಥಾತ್, ಪುರೋಹಿತವಾದ ಯಜ್ಞಾಗ್ನಿಯ ಜೊತೆಯಲ್ಲಿ ಜ್ಞಾನವೆಂಬ ಅಗ್ನಿ ಎಂಬ ಅರ್ಥವೇ ಪ್ರಧಾನವಾಗಿರುವುದು. ಇದನ್ನೇ ಗೀತೆಯಲ್ಲಿ ಶ್ರೀಕೃಷ್ಣನು 'ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇಽರ್ಜುನ' ಎಂದು ಪುನರುಚ್ಚರಿಸಿದ್ದು. ಜ್ಞಾನವೆಂಬ ಅಗ್ನಿಯು ಜೀವಾತ್ಮವನ್ನು ಜನನ–ಮರಣ ಚಕ್ರಕ್ಕೆ ತಳ್ಳುವ ಕರ್ಮಫಲಗಳೇನಿವೆಯೋ ಅವನ್ನು ಭಸ್ಮಗೊಳಿಸಿ ಜೀವಾತ್ಮವನ್ನು ಶುದ್ಧಾತ್ಮವನ್ನಾಗಿ ಮಾಡಿ ಪರಮಾತ್ಮನಲ್ಲಿ ಐಕ್ಯಗೊಳಿಸುವುದು ಎಂಬ ಅರ್ಥದಲ್ಲಿರುವ ಈ ಮಂತ್ರವು ಋಷಿಗೆ ಗೋಚರಿಸಿದ್ದು ಸಮಾಧಿಸ್ಥಿತಿಯಲ್ಲಿ; ಇಲ್ಲಿ ಪುರೋಹಿತನೆಂದರೂ ಪರಮಾತ್ಮನೇ, ಅಗ್ನಿಯೆಂದರೂ ಪರಮಾತ್ಮನೇ. ಇಂತಹ ಅದ್ಭುತಾರ್ಥದ ವೇದಮಂತ್ರವು ಯೋಗಾಸನ ಪ್ರಾಣಾಯಾಮಾದಿಗಳಲ್ಲಿ ಪಾರಂಗತನಾಗಿ ಧ್ಯಾನ–ಧಾರಣಾದಿಗಳ ಮೂಲಕ ಸಮಾಧಿ ಸ್ಥಿತಿಗೆ ತಲುಪಿದ ಯೋಗಿಯಾದ ಋಷಿಗೆ ಆತನ ಆಂತರಂಗಿಕ ಜ್ಯೋತಿಃಸ್ವರೂಪದ ನಯನಕ್ಕೆ ಗೋಚರಿಸಿತು. ಋಗ್ವೇದದ ಮುಂದಿನ ಮಂತ್ರಗಳಷ್ಟೇ ಅಲ್ಲದೆ ನಾಲ್ಕೂ ವೇದರಾಶಿಗಳ ಮಂತ್ರಗಳೆಲ್ಲವೂ ಋಷಿಮುನಿಗಳಿಗೆ ಗೋಚರಿಸಿದ್ದು ಅವರ ಸಮಾಧಿಸ್ಥಿತಿಯಲ್ಲಿಯ ಆಂತರಂಗಿಕ ಚಕ್ಷುವಿಗೆ. ಆದುದರಿಂದ ವೇದರಾಶಿಯೆಂಬ ನಾನಾರ್ಥಗಳ ಭಂಡಾರವೇ ಉದಯಿಸಿದ್ದು ಭಾರತೀಯ ಯೋಗಪದ್ಧತಿಯ ಮೂಲಕವೇ ಸರಿ.

ರುದ್ರ–ಚಮೆ–ಶ್ರೀಸೂಕ್ತ–ಪುರುಷಸೂಕ್ತಾದಿಗಳನ್ನು ದಿನನಿತ್ಯ ಪೂಜಾ–ಸಂದರ್ಭಗಳಲ್ಲಿ ಹೇಳಲಾಗುತ್ತದೆ. ಇವುಗಳಲ್ಲೆಲ್ಲ ಶಬ್ದಾರ್ಥಗಳ ಜೊತೆಯಲ್ಲಿ ಆಧ್ಯಾತ್ಮಿಕ ಅರ್ಥಗಳು ಅಪಾರವಾಗಿವೆ. ಈ ಮಂತ್ರಗಳ ಜೊತೆಯಲ್ಲಿ ಇನ್ನೂ ಕೆಲವು ಸೂಕ್ತಗಳನ್ನು

ಹಾಗೂ ಕೆಲವು ಉಪನಿಷತ್ತುಗಳ ವಿಚಾರಗಳನ್ನು ಆಯ್ದುಕೊಂಡು ಅವುಗಳ ಭಾವಾರ್ಥ–ಆಧ್ಯಾತ್ಮಿಕಾರ್ಥಗಳನ್ನು ಸ್ಥೂಲವಾಗಿ ಕನ್ನಡ ಪದ್ಯರೂಪದಲ್ಲಿ ಈ ಗ್ರಂಥದಲ್ಲಿ ತರಲಾಗಿದೆ.

ಇಲ್ಲಿ ಈ ಲೇಖಕನದೇ ಕೆಲವು ಆಧ್ಯಾತ್ಮಿಕ ಪದ್ಯಗಳೂ ಇವೆ, ಚಿತ್ ಅಂದರೆ ಕಣ್ಣಿಗೆ ಕಾಣುವ ಜಗತ್ತೆಂಬ ಸತ್ಯಕ್ಕೆ ಮೂಲವಾದ ಪರಾತ್ಪರನ ಸ್ಪಂದನವೆಂಬ ಶಕ್ತಿ; ಇದನ್ನು ಚಿಚ್ಛಕ್ತಿ ಎಂದು ಕರೆಯಲಾಗುವುದು. ಈ ಚಿಚ್ಛಕ್ತಿಯನ್ನು ಋತ ಎಂದೂ ಗುರುತಿಸಲಾಗುವುದು. ಈ ಚಿತ್ ಅನ್ನುವ ಋತವು ಜಗತ್ತೆಂಬ ಸತ್ಯವನ್ನು ಪವಿತ್ರಗೊಳಿಸಲಿ ಎಂಬ ಆಶಯವನ್ನು 'ಸತ್ಯಮ್ ಋತೇನ ಪರಿಷಿಂಚಾಮಿ' ಅನ್ನುವ ಮಂತ್ರದಲ್ಲಿ ಕಾಣಬಹುದು. ಈ ಋತವನ್ನು, ಅರ್ಥಾತ್, ಚಿತ್–ತತ್ತ್ವವನ್ನು ಪ್ರಕಾಶಕ್ಕೆ ತರುವ ಪ್ರಯತ್ನವನ್ನು ಈ ಗ್ರಂಥದಲ್ಲಿ ನಡೆಸಲಾಗಿದೆ; ಆದುದರಿಂದ ಈ ಗ್ರಂಥವು 'ಚಿತ್ಪ್ರಕಾಶ'. ಇದನ್ನು ಓದಿದ ಶ್ರೀಯುತ ಕೃಷ್ಣಪ್ಪನವರು ಶ್ರೀ ಪತಂಜಲಿ ಯೋಗ ಸಂಸ್ಥೆಯಲ್ಲಿ ಸಂಚಾಲಕರೊಬ್ಬರಾಗಿದ್ದು ಅನೇಕ ಯೋಗ ಪುಸ್ತಕಗಳನ್ನು ಪ್ರಕಟಗೊಳಿಸುವ ಮೂಲಕ ಯೋಗಶಾಸ್ತ್ರಕ್ಕೆ ತಮ್ಮದೇ ಆದ ಗುರುತರ ಕೊಡುಗೆಯನ್ನು ನೀಡಿದ ಮಹನೀಯರು. ಅವರು ಈ ಚಿತ್ಪ್ರಕಾಶ ಪದ್ಯಗಳಿಗೆ ತುಸು ವಿವರಣೆಯನ್ನು ಬರೆದುಕೊಟ್ಟರೆ ತಾವು ಆ ವಿವರಣೆಯೊಂದಿಗೆ ಈ ಗ್ರಂಥವನ್ನು ಪ್ರಕಟಪಡಿಸುವುದಾಗಿ ಕೇಳಿಕೊಂಡದ್ದರಿಂದ ನಾನು ವಿವರಣೆಯನ್ನು ಬರೆಯಲು ತೊಡಗಬೇಕಾಯಿತು. ನನ್ನ ಈಗಿನ ವಿವರಣೆಯು ಚಿತ್ಪ್ರಕಾಶದರ್ಶಿಕಾ, ಚಿತ್ಪ್ರಕಾಶವನ್ನು ತೋರಿಸುವ, ಸರಳಗೊಳಿಸುವ ಸರಸ್ವತಿಯೆಂದಾಯಿತು. ಯಾವುದೇ ಶಬ್ದವೂ ಸರಸ್ವತಿಯ ವ್ಯಕ್ತರೂಪವೇ ಆಗಿರುತ್ತದೆ. ಆದುದರಿಂದ ಈ ವಿವರಣೆಯೂ ಸರಸ್ವತಿಯೇ ಸರಿ. ನನ್ನನ್ನು ಈ ಗ್ರಂಥದ ಬರವಣಿಗೆಯ ಮಾಧ್ಯಮವನ್ನಾಗಿ ಆರಿಸಿಕೊಂಡ ಆ ಮಹಾಸರಸ್ವತಿಗೆ ನಾನು ಅತ್ಯಂತ ಚಿರಋಣಿಯಾಗಿರುವೆ. ಈ ಗ್ರಂಥಕ್ಕೆ ಮುನ್ನುಡಿಯ ರೂಪದಲ್ಲಿ ಆಶೀರ್ವಚನವನ್ನು ಕರುಣಿಸಿದ ಷ॥ಬ್ರ॥ ಶ್ರೀ ಡಾ॥ ಮರುಳಸಿದ್ಧಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳಿಗೆ, ನನ್ನ ಆತ್ಮೀಯ ಅಜ್ಜಯ್ಯನವರಿಗೆ ಅನಂತಾನಂತ ವಂದನೆಗಳು. ಈ ಗ್ರಂಥವನ್ನು ಪ್ರೀತಿಯಿಂದ ಪ್ರಕಟಿಸಿದ ಶ್ರೀ ಪತಂಜಲಿ ಯೋಗ ಸಂಸ್ಥೆಯ ಶ್ರೀಯುತ ಕೃಷ್ಣಪ್ಪನವರ **ಅಂಕಿತನಾಮಾಂಕಿತ** ಸಂಸ್ಥೆಗೆ ಪ್ರೀತ್ಯಾದರನಮನಗಳು.

ಪ್ರೂಫ್ ನೋಡಲು ಸಹಕರಿಸಿದ ಸತಿ ಸುಲೇಖಾಳಿಗೂ ಹಸ್ತಪ್ರತಿಯನ್ನು ಸಿದ್ಧಪಡಿಸುವಾಗ ಸಹಕರಿಸಿದ ಮಗಳು ಅಮರಜಾಳಿಗೂ ಶುಭಾಶಿಷಗಳು. ಈ ಕೃತಿಯನ್ನು ಡಿ.ಟಿ.ಪಿ. ಸಹಿತವಾಗಿ, ಅಂದವಾಗಿ ಮುದ್ರಿಸಿಕೊಟ್ಟ ಗುಪ್ತ ಪ್ರಿಂಟರ್ಸ್‌ನ ಮಾಲೀಕರಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆಗಳು. ಈ ಚಿತ್ಪ್ರಕಾಶದರ್ಶಿಕೆಯು ಕನ್ನಡಭಾಷೆಯನ್ನು ಬಲ್ಲವರೆಲ್ಲರ ಮನಸ್ಸನ್ನು ಉಜ್ವಲವಾಗಿ ಬೆಳಗಲೆಂದು ಹಾರೈಸುವೆ.

ರಾಷ್ಟ್ರಪತಿ ವಿದ್ವತ್ ಸಮ್ಮಾನ ಪ್ರಶಸ್ತಿ ಪುರಸ್ಕೃತ
ಸಿದ್ಧಾಂತೀ ಪ್ರೋ॥ ಡಾ॥ ಗುರುಪಾದ ಕೆ.ಹೆಗಡೆ
ಶಾಸ್ತ್ರ ವಿದ್ಯಾನಿಧಿ, ಜ್ಯೋತಿಶ್ಶಾಸ್ತ್ರಮಹಾನಿಧಿ, ವೇದರತ್ನ
ದರ್ಶನವಾರಿಧಿ, ಆದರ್ಶ ಸೇವಾರತ್ನ

ಮೈಸೂರು
15–03–2020

ಅನುಕ್ರಮಣಿಕೆ

	ಪ್ರಕಾಶಕರ ನುಡಿ	
	ಶ್ರೀನುಡಿ	
	ಚಿತ್ಪ್ರಕಾಶದರ್ಶಿಕಾ ಪ್ರವೇಶ	
1.	ಓಂ–ಗಣೇಶ–ಮಾರುತಿ–ದರ್ಶಿಕಾ	1
2.	ಓಂ ಗಾಯತ್ರೀ–ದರ್ಶಿಕಾ	10
3.	ರುದ್ರನಮಕ; ರುದ್ರ–ಮಹಾರುದ್ರದರ್ಶಿಕಾ	18
4.	ವಿಷ್ಣುಚಮಕ–ಅಗ್ನಾವಿಷ್ಣೂದರ್ಶಿಕಾ	27
5.	ಪುರುಷಸೂಕ್ತ–ದರ್ಶಿಕಾ	33
6.	ಶ್ರೀಸೂಕ್ತ–ದರ್ಶಿಕಾ	45
7.	ಸರಸ್ವತೀಸೂಕ್ತ–ದರ್ಶಿಕಾ	51
8.	ದುರ್ಗಾಸೂಕ್ತ–ದರ್ಶಿಕಾ	59
9.	ಕಃಪ್ರಜಾಪತಿಸೂಕ್ತ–ದರ್ಶಿಕಾ	65
10.	ವಾಗಾಂಭೃಣೀ–ದರ್ಶಿಕಾ	70
11.	ಅನ್ನಸೂಕ್ತ–ದರ್ಶಿಕಾ	74
12.	ಸೋಮರಸ–ದರ್ಶಿಕಾ	81
13.	ಸರಮಾ–ದರ್ಶಿಕಾ	91
14.	ದಾಶರಾಜ್ಞಯುದ್ಧ–ದರ್ಶಿಕಾ	98
15.	ಸೂರ್ಯಸೂಕ್ತ–ದರ್ಶಿಕಾ	105
16.	ಈಶಾವಾಸ್ಯ–ದರ್ಶಿಕಾ	109
17.	ಭಾರತೀಯ ಹಬ್ಬಗಳಲ್ಲಿ ಅಧ್ಯಾತ್ಮ–ದರ್ಶಿಕಾ	118
18.	ನವಗ್ರಹತತ್ತ್ವ–ದರ್ಶಿಕಾ	133
19.	ಅಘಮರ್ಷಣಸೂಕ್ತ–ದರ್ಶಿಕಾ	145
20.	ಪಂಚಾಯತನಪೂಜಾ–ದರ್ಶಿಕಾ–ಪಂಚಮೂರ್ತಿಸ್ತುತಿಃ	151
21.	ವಿಶ್ವಪ್ರೇಮ–ದರ್ಶಿಕಾ	160
22.	ಭಾರತಮಾತಾಸ್ತುತಿ	165
23.	ಭಾ–ರತತ್ತ್ವ	167
24.	ಬೆಳಗಲದು ಚಿತ್ಪ್ರಕಾಶ	169
25.	ನಾ ಬಿಂದುಲೀನ	172
26.	ಬರುವುದಾನಂದ	174
27.	ಮಾತೃ ಗುರುವಂದನಾದಿಗಳು	175
28.	ಅಂಬಿಕಾ	176
29.	ಯುಗಾರ್ಥಸಹಿತವಿಷ್ಣುದಶಾವತಾರ ದರ್ಶಿಕಾ	178
30.	ಪರಿವರ್ತಿತ ಪ್ರಾಚೀನ ನವಗ್ರಹ ಪ್ರಾರ್ಥನಾ	203
31.	ಲೇಖಕರ ಬಗ್ಗೆ ಮಾಹಿತಿ	204

೧. ಓಂಕಾರ ಹಾಗೂ ಗಣಪತಿ – ಮಾರುತಿ ದರ್ಶಿಕಾ

ಓಂ–ಗಣೇಶ–ಮಾರುತಿಯರು

ಗಣಪತಿಯು ಓಂಕಾರ ಮಾರುತಿಯು ಓಂಕಾರ
ಸೃಷ್ಟಿಯಲಿ ಮೊದಲು ಮೂಡಿದ್ದು ಓಂಕಾರ ದಿಟದಿ ॥ಪ॥

ಒಬ್ಬನೇ ಒಬ್ಬನಾ ಪರಂಬ್ರಹ್ಮ ತಾನನೇಕನೆಂದೆನಿಸುವಾಗ
ಮೂಡಿಬಂದಿಹ ಮೊದಲ ಸ್ಪಂದನವದುವೆ ಓಂಕಾರ
ಅದಕೆಂದೆ ನಿರ್ವಿಕಲ್ಪಧ್ಯಾನಾಸಕ್ತಮನುಜನಲ್ಲಿ

ಮೊದಲು ಮೂಡಿಬರುವುದನಾಹತನಾದವೋಂಕಾರ ॥1॥
ಅಕಾರೋಕಾರಮಕಾರಸಮಾವೇಶವೋಂಕಾರ
ಮಕಾರದಿಂ ಸೃಷ್ಟ್ಯುಕಾರದಿಂ ಸ್ಥಿತಿ ಯುಕಾರದಿಂದ ಲಯವು
ಕ್ರಮದಲ್ಲಿ ಬ್ರಹ್ಮ –ಹರಿ–ಹರರೆಂಬ ಹೆಸರಾ ತತ್ತ್ವಗಳಿಗೆ
ಪ್ರಾಚೀನ ಸನಾತನಪದ್ಧತಿಯಲ್ಲಿ ಬಂದಿತೀ ಕ್ರಮವು ॥2॥

ಎಲ್ಲೆಲ್ಲು ದೈವೀಗತಿಯನ್ನು ಗುರುತಿಸಿದ ಚಿಂತಕರು
ಬ್ರಹ್ಮನನು ಪರಬ್ರಹ್ಮಭಾವದಲಿಟ್ಟು ಮುಂದೆ
ಹರಿಪಂಥ–ಹರಪಂಥಗಳೆಂಬ ಪಂಥದ್ವಯಕ್ಕೆ ಬಂದು
ಭಾವಿಸಿದರೋಂಕಾರವನು ತಮಗೆ ಬೇಕೆನಿಸಿದಂತೆ ॥3॥

ಕಲ್ಪಿಸಿದರೋಂಕಾರದ ಕೊಂಬನ್ನು ಕಣ್ಸೆಳೆವ ಸೊಂಡಿಲನ್ನಾಗಿ
ಅಕಾರೋಕಾರಗಳನ್ನು ಮುಖ–ದೇಹಭಾವಗಳಲ್ಲಿ ತಂದು
ಅಧ್ಯಾತ್ಮದರ್ಥಬರುವಂತೆ ಜನ್ಮಕಥೆಯನ್ನು ಹೆಣೆದು
ರೂಪಿಸಿದಾಗ ತಾ ಬಂದ ಗಣಪತಿಯು ಶೈವಪದ್ಧತಿಯ ॥4॥

ಆತ್ಮದರಿವಿರದಹಂಭಾವಸೂಚಕವು ಮೂಲತಲೆಯಾಗಿರಲು
ತಂದೆ ಗುರು ಶಿವನದನು ತೆಗೆದು ತಾ ತಂದು ಜೋಡಿಸಿದ
ಗಜಮುಖವು ಧ್ವನಿಸುವುದು ನಿಜದರಿವ ದಿಟದಿ

ರೋಚಕವಿದು ಸಾಧನೆಗೆ ಪ್ರತಿ ಮನುಜನನು ಕೊಂಡೊಯ್ವ ಕಥೆಯು ॥5॥
ಸೊಂಡಿಲು ಸುಷುಮ್ನೆ ಗುರುಬೋಧೆಯಾಲಿಸಲು ದೊಡ್ಡ ಕಿವಿಯು
ನಿಸ್ಸಾರವನು ತೊರೆದು ಸತ್ವವನು ಗುರುತಿಸಲತಿಸೂಕ್ಷ್ಮ ನಯನ
ಬೇಕುಗಳಿಗಂಕೆಯನು ಸೂಚಿಪುದು ಸರ್ಪವೇಷ್ಟನವು
ಸುಷುಮ್ನಾಬಿಲದಲ್ಲಿ ಚಲಿಪ ಕುಂಡಲಿನಿಯೇ ಇಲಿಯು ವಾಹನವು ॥6॥

ಎಲ್ಲವಕ್ಕೂ ಮೊದಲು ಓಂಕಾರವದರಿಂದಲಾಗಿ
ಗಣಪತಿಗೆ ಸಲ್ಲುವುದೆಲ್ಲೆಡೆಗೆ ಮೊದಲ ಪೂಜೆ
ಜೀವಿಯವ ಪ್ರಕೃತಿಯಲಿ ಮೈವೆತ್ತಿ ಬಂದು
ಪರಮಪದದೆಡೆ ಚಲಿಪ ತತ್ತ್ವವದು ಗಣೇಶನಲ್ಲಿಹುದು ॥7॥

ಓಂಕಾರದಲ್ಲಿರುವ ಕೊಂಬನ್ನು ಬಾಲವಾಗಿಸಲು
ಅಕಾರೋಕಾರಗಳು ದೇಹದ ರೂಪು ತಳೆದಿರಲು
ಬಂದನಾ ಹನುಮಂತ ತಾ ವಾಯುಪುತ್ರನೆಂದೆನಿಸಿ
ಯೋಗಸಾಧಕ ಜನರಿಗಾರಾಧ್ಯ ದೇವನಾಗಿ ॥8॥

ಹನುಮಂತನುದಯವಾದದ್ದು ಕಪಿಯ ಕುಲದಲ್ಲಿ
ಕಪಿಶಬ್ದಕಿಲ್ಲಿಹುದು ಬಹು ವಿಶೇಷವೆಂದೆನಿಸುವರ್ಥ
ಕಮ್ಮೆಂದರದು ಸುಖವು ಪಾತಿಯೆಂದರದನು ರಕ್ಷಿಸುವ ಕಾರ್ಯ
ಕಂಪಾತೀತಿ ಕಪಿಯಿಲ್ಲಿ ಸುಖರಕ್ಷಣಾತತ್ತ್ವವಾಗಿಹುದು ॥9॥

ಪ್ರಾಣಾಪಾನವ್ಯಾನೋದಾನಸಮಾನರೂಪಗಳಲಿ
ವಾಯುವದು ಜೀವಿಯನು ರಕ್ಷಿಸುವ ಕಾರ್ಯದಲಿ ನಿತ್ಯ ನಿರತ
ಯಾವುದೇ ಪೂಜೆಯಲಿ ನೈವೇದ್ಯವೀ ವಾಯುಪಂಚಕಕೆ
ನಡೆವುದೆಲ್ಲೆಡೆಗಳಲಿ ಸನಾತನಪದ್ಧತಿಯಿರುವ ಕಡೆಗಳಲಿ ॥10॥

ಹೃದಯದಲ್ಲಿದ್ದು ರಕ್ತಚಾಲಕವಾಗಿರುವುದದು ಪ್ರಾಣ
ದೇಹಕ್ಕೆ ಬೇಡವಾದುದನು ಹೊರಹಾಕುವುದಪಾನ
ಕಂಠದಲ್ಲುದಾನ ನಾಭಿಯಲಿ ಸಮಾನ ದೇಹವ್ಯಾಪಿ ವ್ಯಾನ

ಹೀಗೆ ದೇಹದಲಿದ್ದು ವಾಯುವು ಸಲಹುವುದು ಜೀವಿಗಳ ಪಂಚವಿಧಗಳಲಿ ||11||
ಮೂಗಿನಿಂದಲೆ ನಿಯಮದಲಿ ಗೈದ ಶ್ವಾಸೋಚ್ಛ್ವಾಸಕ್ರಿಯೆಯು
ಪ್ರಾಣಾಯಾಮವೆಂದಾಗಿಹುದು ಯೋಗಮಾರ್ಗದಲಿ
ಮೂಗಿನಿಂ ಕೆಳಭಾಗ ಹನು ಹನುಮೂಲಕದವಾಯು
ಹನುಮಂತನೆಂದಾಯ್ತು ಮಾರುತಿಯು ತಾ ಪ್ರಾಣಾಯಾಮತತ್ತ್ವ ||12||

ಪ್ರಾಣಾಯಾಮದಲಿ ವಾಯುವಿನ ನಡೆ ಸುಷುಮ್ನಾನಾಡಿಯಲ್ಲಿ
ಸುಷುಮ್ನೆಯೇ ಬಾಲವಾಗಿಹುದು ಮಾರುತಿಯ ದೇಹದಲ್ಲಿ
ಸುಷುಮ್ನೆಯಲಿ ವಾಯುಸಂಚಾರ ಷಟ್ಚಕ್ರಸಾಧನೆಗೆ ಮೂಲ
ಅದಕಾಗಿ ಯೋಗಮಾರ್ಗದಲಿ ಮಾರುತಿಗೆ ಪ್ರಥಮ ಪೂಜೆ ||13||

ಪ್ರಾಣಾಯಾಮದಿಂ ಮನುಜನಾರೋಗ್ಯರಕ್ಷಣೆಯು
ಅದರಿಂದ ದೇಹದಲಿ ಸ್ಥಿತಿತತ್ತ್ವಸಂಸ್ಥಿತಿಯು
ಸ್ಥಿತಿತತ್ತ್ವವೇ ಹರಿಯಾತ ರಾಮನೆಂದೆನಿಸಿ ಜೀವಾತ್ಮ
ಆತ್ಮಕ್ಕೆ ಪರಮಾತ್ಮಪದಕೇರಲು ಬೇಕು ಪ್ರಾಣಾಯಾಮತತ್ತ್ವ ||14||

ಗಣೇಶಮಾರುತಿಯರೋಂಕಾರದೆರಡು ರೂಪಗಳು
ಅರ್ಥೈಸಿಕೊಂಡಿವರ ತತ್ತ್ವಗಳ ನಿರ್ಮಲಭಾವದಿಂದ
ನಡೆದಲ್ಲಿ ಸುಖವಿಲ್ಲಿ ಪರದಲ್ಲಿ ಪರಮಪದವು
ನಿಶ್ಚಿತವು ಪರಮಗುರುಪಾದಕರುಣೆ ಬೇಕಿದಕೆ ||15||

ಗಣಪತಿಯು ಓಂಕಾರ ಮಾರುತಿಯು ಓಂಕಾರ
ಸೃಷ್ಟಿಯಲಿ ಮೊದಲು ಮೂಡಿದ್ದು ಓಂಕಾರ ದಿಟದಿ ||ಪ||

ಯೋಗಿಯ ಧ್ಯಾನಕ್ರಮದಲ್ಲಿ ಮೊದಲು ಮೂಡಿಬರುವುದು ‘ಓಂ’ ನಿನಾದ. ಧ್ಯಾನದಲ್ಲಿ ಮನಸ್ಸು ಪೂರ್ತಿಯಾಗಿ ವಿಶ್ರಾಂತಿಗೆ ತೆರಳಿದಾಗ, ಆತ್ಮತತ್ತ್ವವನ್ನು ಆವರಿಸಿರುವ ಮನಸ್ಸೆಂಬ ಪರದೆಯು ಸರಿದು ಹೋದಾಗ, ಆತ್ಮವು ತಾನೇ ತಾನಾಗಿ ವಿಜೃಂಭಿಸಲು ಉದ್ಯುಕ್ತವಾಗುತ್ತದೆ. ಆತ್ಮದ ಆ ಸುವ್ಯಕ್ತ ಸ್ಥಿತಿಯು ಯೋಗಿಯನ್ನು ಅತೀಂದ್ರಿಯ ಸ್ಥಿತಿಗೆ ತಲುಪಿಸಲು ತೊಡಗುತ್ತದೆ. ಆಗ ಅಂತರಂಗದಲ್ಲಿ ತಾನಾಗಿ

ಮೂಡಿ ಬರುವ ಓಂಕಾರದ ತರಂಗಗಳು ಭಾಸವಾಗುತ್ತ ಹೋಗುತ್ತವೆ. ಈ ಓಂಕಾರನಾದವು ಪ್ರಾರಂಭದಲ್ಲಿ ಅಸ್ಪಷ್ಟವಾಗಿ ಬರುತ್ತಿದ್ದು ಸಾಧನೆಯು ನಿರಂತರವಾಗಿ ಸಾಗಿದಾಗ ಸುದೀರ್ಘವಾಗಿ ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಸಂಗಡ ಹಣೆಯ ಬುಡದಲ್ಲಿ, ಹುಬ್ಬುಗಳ ಮಧ್ಯದಲ್ಲಿ ಸೂಕ್ಷ್ಮವಾಗಿ ಬೆಳಕು ಮೂಡಿಬರಲು ಹಾತೊರೆಯುತ್ತದೆ. ಧ್ಯಾನದ ಕ್ರಮದಲ್ಲಿ ಇನ್ನೂ ಮುಳುಗಿದಂತೆಲ್ಲ ಆ ಸೂಕ್ಷ್ಮ ಬೆಳಕು ಸ್ಪಷ್ಟವಾಗುತ್ತ ಹೋಗಿ ಕ್ರಮೇಣ ನಕ್ಷತ್ರದ ಸ್ಥಿತಿಗೆ ಹಾಗೂ ಮತ್ತೂ ಮುಂದುವರಿದು ಚಂದ್ರಬಿಂಬದ ಸ್ಥಿತಿಗೆ ತಲುಪುತ್ತದೆ.

ಹೀಗೆ ಓಂಕಾರ–ಪ್ರಕಾಶಗಳು ಮೂಡಿಬರುವಾಗ ಧ್ಯಾನವು ನಿರ್ವಿಕಲ್ಪಕವಾಗಿರ ಬೇಕಾಗುತ್ತದೆ. ಧ್ಯಾನದಲ್ಲಿ ನಿರ್ವಿಕಲ್ಪಕ ಮತ್ತು ಸವಿಕಲ್ಪಕ ಎಂದು ಎರಡು ವಿಧ. ಯಾವುದೇ ದೇವತೆಯನ್ನು, ಅಂದರೆ ಇಷ್ಟವೆನಿಸಿದ ಶಿವನನ್ನೋ, ವಿಷ್ಣುವನ್ನೋ ಅಥವಾ ವಿಷ್ಣುವಿನ ಯಾವುದೇ ಅವತಾರಸ್ವರೂಪವನ್ನೋ ಅಥವಾ ಯಾವುದೇ ಹೆಸರಿನ ದೇವಿಯನ್ನೋ ಸ್ವರೂಪವನ್ನೋ ಮನಸ್ಸಿನಲ್ಲಿ ಇಟ್ಟುಕೊಂಡು ನಡೆಸುವ ಧ್ಯಾನವು ಸವಿಕಲ್ಪಕ ಧ್ಯಾನವೆನಿಸುತ್ತದೆ. ಆಗ ಮನಸ್ಸು ಆ ದೇವತೆಯಲ್ಲಿ ಒಂದಾಗಿ ಮುಂದುವರಿಯಬೇಕಾಗುತ್ತದೆ. ಅದಕ್ಕಾಗಿ ಮನಸ್ಸನ್ನು ಆ ದೇವತಾಸ್ವರೂಪವನ್ನಾಗಿಯೇ ಸಿದ್ಧಗೊಳಿಸಬೇಕಾಗುತ್ತದೆ. ಇದು ತುಂಬ ವಿಳಂಬಿತ ಸಾಧನೆಯಾಗುತ್ತದೆ. ಯಾವುದೇ ದೇವಿ–ದೇವಮೂರ್ತಿಯಿದ್ದರೂ ಅದು ಪ್ರಕೃತಿಯ ಒಂದು ಅಂಗವೇ ಆಗಿರುತ್ತದೆ. ಹೀಗಾಗಿ ಪ್ರಕೃತಿಯನ್ನು ಮೊದಲು ಒಲಿಸಿಕೊಳ್ಳಬೇಕಾಗುತ್ತದೆ ; ಪ್ರಕೃತಿಯನ್ನು ಓಲೈಸಬೇಕಾಗುತ್ತದೆ. ಇದಕ್ಕೆ ಗುರುವಿನ ನಿರಂತರ ಮಾರ್ಗದರ್ಶನದ ಅವಶ್ಯಕತೆಯಿರುತ್ತದೆ. ಹೀಗೆ ಪ್ರಕೃತಿಯನ್ನು ಓಲೈಸಿ ಅನಂತರ ಆ ಇಷ್ಟದೇವತೆಯಲ್ಲಿ ಒಂದಾಗಿ ಸಾಧನೆಗೈದಾಗ ಅಲ್ಲಿ ಒದಗಿಬರುವ ಸಿದ್ಧಿಯೂ ಸವಿಕಲ್ಪಕವಾಗಿರುತ್ತದೆ.

ತನ್ನ ಧ್ಯಾನದ ಅರ್ಥಾತ್ ಸಾಧನೆಯ, ಅಂದರೆ ತಪಸ್ಸಿನ ಪ್ರತಿಫಲದ ಅಪೇಕ್ಷೆಯು ಯೋಗಿಯಲ್ಲಿ ಅವಶ್ಯವಾಗಿ ಕಾಣಿಸಿಕೊಳ್ಳುತ್ತದೆ. ಸಿದ್ಧಿ ಲಭಿಸಿದಾಗ ಆ ಸಿದ್ಧಿಯನ್ನು ಕೀರ್ತಿಗಾಗಿಯೋ ಅಥವಾ ಐಹಿಕ ಸುಖೋಪಭೋಗಕ್ಕಾಗಿಯೋ ಉಪಯೋಗಿಸಿ ಕೊಳ್ಳುವ ಅಭಿಲಾಷೆ ಯೋಗಿಯಲ್ಲಿ ಕಂಡುಬರುತ್ತದೆ; ರಾಜಕಾರಣಿಗಳಿಂದ ಮೊದಲುಗೊಂಡು ಸಾಮಾನ್ಯರವರೆಗೆ ಆ ಯೋಗಿಯ ಕೃಪೆಗೆ ಹಾತೊರೆಯಬಹುದು. ಅವರ ಕಷ್ಟಗಳನ್ನು ದೂರ ಮಾಡಿದ್ದರಿಂದ ಮತ್ತಷ್ಟು ಪುಣ್ಯ ಸಂಚಯವಾಗಿ ಆ ಪುಣ್ಯದ ಫಲವನ್ನು ಅನುಭವಿಸಲು ಆ ಯೋಗಿಯು ಮತ್ತೆ ಜನ್ಮಕ್ಕೆ ಬರಬೇಕಾಗುತ್ತದೆ. ಅಂತಹ ಯೋಗಿಯ ಕೃಪೆಯನ್ನು ಪಡೆದ ಯಾರೇ ಆಗಲಿ ಬೇರೆಯವರಿಗೆ ತೊಂದರೆಯೆನಿಸುವ ಯಾವುದೇ ಕಾರ್ಯವನ್ನು ಎಸಗಿದರೂ ಆ ಪಾಪದ ಫಲದಲ್ಲಿ

ಆಶೀರ್ವದಿಸಿದ ಯೋಗಿಯೂ ಭಾಗಿಯಾಗಬೇಕಾಗುತ್ತದೆ. ಇದರಿಂದ ಮತ್ತೆ ದುಃಖ–ಸುಖಗಳೆರಡಕ್ಕೂ ಕಾರಣವಾಗುವ ಪುನರ್ಜನ್ಮವು ಶತಃಸಿದ್ಧ.

ಆದರೆ ನಿರ್ವಿಕಲ್ಪಕ ಧ್ಯಾನದಲ್ಲಿ ಸಿದ್ಧಿಯಿಂದ ಲಭಿಸುವ ಅಧ್ಯಾತ್ಮ ಶಕ್ತಿಯು ಯೋಗಿಯನ್ನು ಕೀರ್ತಿಗಾಗಲೀ ಮತ್ತೆ ಯಾವುದೇ ಆಮಿಷಕ್ಕಾಗಲೀ ಕೊಂಡೊಯ್ಯದೆ ಆತನ ಅಥವಾ ಅವಳ ಆತ್ಮವನ್ನು ಮೋಕ್ಷದೆಡೆಗೆ ಅಂದರೆ ಪರಮಾತ್ಮನಲ್ಲಿ ಒಂದಾಗುವತ್ತ ನಡೆಸುತ್ತದೆ. ಯಾವುದೇ ದೇವನ ಅಥವಾ ದೇವಿಯ ಮೂರ್ತಿಯನ್ನು ಮನಸ್ಸಿನಲ್ಲಿ ತಾರದೆ, ಅಷ್ಟೇ ಅಲ್ಲ ಮನಸ್ಸನ್ನು ತಹಬದಿಗೆ ಸರಿಸಿ ನಡೆಸುವ ಧ್ಯಾನವು ನಿರ್ವಿಕಲ್ಪಕ ಧ್ಯಾನವೆನಿಸುತ್ತದೆ. ಇದಕ್ಕಾಗಿ ಮೊದಲು ಮನಸ್ಸನ್ನು ಹದಗೊಳಿಸಬೇಕಾಗುತ್ತದೆ. ಪತಂಜಲಿ ಮಹರ್ಷಿಯು ಹೇಳಿದ 'ಚಿತ್ತವೃತ್ತಿನಿರೋಧ': ಅನ್ನುವ ಮಾತನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಮನಸ್ಸು ಯಾವಾಗಲೂ ಕಾರ್ಯಪ್ರವೃತ್ತವಾಗಿರುತ್ತದೆ. ಏನಾದರೂ ಒಂದನ್ನು ವಿಚಾರ ಮಾಡುತ್ತ ಇರುವುದು. ಅಥವಾ ಏನಾದರೂ ಒಂದನ್ನು ಅನಿಸಿಕೊಳ್ಳುವುದು ಅಥವಾ ಏನಾದರೊಂದನ್ನು ನಿರ್ಧರಿಸುವುದು ಮನಸ್ಸಿನಲ್ಲಿ ನಡೆಯುತ್ತ ಇರುತ್ತದೆ. ಇವುಗಳಿಂದ ಮನಸ್ಸನ್ನು ಮುಕ್ತಗೊಳಿಸುವುದೇ ಚಿತ್ರವೃತ್ತಿನಿರೋಧ. ಈ ಮೂರರಲ್ಲಿ ಯಾವುದೇ ಒಂದರಲ್ಲಿ ಮನಸ್ಸು ತೊಡಗಿಸದೆ, ಅತ್ತ ಆತ್ಮವು ಪ್ರವರ್ತಿಸದಿರಲು ಮನಸ್ಸನ್ನು ನಿರ್ಲಕ್ಷಿಸುತ್ತ ಹೋದಾಗ ಮನಸ್ಸು ತಾನಾಗಿ ಸುಮ್ಮನಾಗುತ್ತದೆ. ಆಗ ಅದನ್ನು ಬದಿಗೆ ಸರಿಸಬಹುದು. ಹೀಗೆ ಮನಸ್ಸನ್ನು ಬದಿಗೆ ಸರಿಸಿ ಧ್ಯಾನದಲ್ಲಿ ತೊಡಗಿದಾಗ ಆತ್ಮವು ಅಂತರಂಗದಲ್ಲಿ ಪ್ರಕಟಗೊಳ್ಳಲು ತೊಡಗುತ್ತದೆ; ಆತ್ಮವು ಪ್ರಕಟಗೊಳ್ಳುವುದು ಓಂಕಾರದ ಧ್ವನಿತರಂಗದ ಮೂಲಕ ಹಾಗೂ ತಾನಾಗಿ ಅಂತರಂಗಕ್ಕೆ ಅರಿವಾಗುವ ಪ್ರಕಾಶದ ಅಥವಾ ಜ್ಯೋತಿಯ ಮೂಲಕ.

ಪ್ರತಿಯೊಬ್ಬ ವ್ಯಕ್ತಿಯಲ್ಲಿ, ಅಷ್ಟೇ ಅಲ್ಲ ಯಾವುದೇ ಜೀವಿಯಲ್ಲಿರುವ ಆತ್ಮವು ಪರಮಾತ್ಮನ ಅವಿಭಾಜ್ಯ ಅಂಗವಾಗಿದೆ. ಆದುದರಿಂದ ಆತ್ಮದ ಅರಿವೇ ಪರಮಾತ್ಮನ ಅರಿವು. ಪರಮಾತ್ಮನಲ್ಲಿ ಏನೂ ಸಂಕಲ್ಪವಿರುವುದಿಲ್ಲ. ಸಂಕಲ್ಪ–ವಿಕಲ್ಪಗಳೇನಿದ್ದರೂ ಪರಮಾತ್ಮನ ಶಕ್ತಿಯಾದ ಪ್ರಕೃತಿಯದು. ಆದುದರಿಂದ ಯೋಗಿಯಲ್ಲಿ ಸಂಕಲ್ಪರಹಿತಸ್ಥಿತಿಯೇ ಪರಮಾತ್ಮನ ಸ್ಥಿತಿಯೆಂಬ ದೃಢಪ್ರಜ್ಞೆಯಿರುವುದು ತುಂಬ ಸೂಕ್ತ.

ಜಗತ್ತು ಪ್ರಾರಂಭವಾಗುವುದು ಪರಮಾತ್ಮನ ಸ್ಪಂದಸ್ಥಿತಿಯಾದ ಓಂಕಾರದಿಂದ. ಓಂಕಾರದಿಂದಲೇ ಜಗತ್ತಿನ ಪ್ರಾದುರ್ಭಾವವೆಂದು ಉಪನಿಷತ್ತುಗಳೆಲ್ಲ ಒಳನುಡಿಯುತ್ತವೆ. ಓಂಕಾರದಲ್ಲಿಯ ಅಕಾರವು ಸ್ಥಿತಿತತ್ತ್ವದ ವಿಷ್ಣುವನ್ನು ಅರ್ಥೈಸಿದರೆ ಉಕಾರವು ಲಯತತ್ತ್ವದ ಶಿವನನ್ನು ಅರ್ಥೈಸುತ್ತದೆ ಹಾಗೂ ಮಕಾರವು ಸೃಷ್ಟಿತತ್ತ್ವದ ಬ್ರಹ್ಮನನ್ನು ಅರ್ಥೈಸುತ್ತದೆ. ಸನಾತನ ಸಂಸ್ಕೃತಿಯ ಪರಂಪರಾಗತ ನಂಬಿಕೆಯಂತೆ ಈ ವಿಷ್ಣು–

ಶಿವ – ಬ್ರಹ್ಮರೆಂಬ ತ್ರಿಮೂರ್ತಿಗಳಿಂದಾಗಿಯೇ ಜಗತ್ತು ನಿರಂತರವಾಗಿ ಚಲಿಸುತ್ತ ಇರುತ್ತದೆ. ಯೋಗಿಯ ನಿರ್ವಿಕಲ್ಪಕ ಧ್ಯಾನದಲ್ಲಿ ಜಗತ್ತಿಗೆ ಕಾರಣೀಭೂತರಾದ ಈ ತ್ರಿಮೂರ್ತಿಗಳಿಗೆ ಮೂಲವಾದ ಓಂಕಾರವು ಅನುಭವಗಮ್ಯವಾದಾಗ ಯೋಗಿಯು ಜಗತ್ತಿನ ಆಮಿಷಗಳಿಗೆ ಒಳಗಾಗಿಬಿಟ್ಟರೆ ಆಗ ಆ ಯೋಗಿಯು ತ್ರಿಮೂರ್ತಿಗಳ ತತ್ತ್ವಾಧೀನನಾಗಬೇಕಾಗುತ್ತದೆ. ಓಂಕಾರದಿಂದ ಮುಂದುವರಿದು ಯೋಗಿಯು ಪರಮಾತ್ಮನೆಡೆ ಸಾಗಿದಾಗ, ಅಂದರೆ ನಿರ್ವಿಕಲ್ಪದಲ್ಲಿಯೇ ಮುಂದುವರಿದಾಗ ಆತ್ಮಾನುಭೂತಿಯಲ್ಲಿ ಹಾಗೂ ಆತ್ಮಾನಂದ–ನಿತ್ಯಾನಂದಗಳಲ್ಲಿ ಯೋಗಿಯೂ ಲೀನನಾಗುವುದು ನಡೆಯುತ್ತದೆ ; ಆ ಸ್ಥಿತಿಯಲ್ಲಿಯೇ ಮುಂದುವರಿಯುವುದೇ ಮೋಕ್ಷ ಸಾಧನೆಯೆನಿಸುವುದು.

ಸವಿಕಲ್ಪಕನಿರ್ವಿಕಲ್ಪಕಗಳಲ್ಲಿ ಯಾವುದೇ ವಿಧವಾದ ಧ್ಯಾನಕ್ಕೆ ತೊಡಗುವಾಗ ಮನಸ್ಸನ್ನು ನಿಯಂತ್ರಿಸಲು ಶ್ವಾಸೋಚ್ಛ್ವಾಸದ ಮೇಲಿನ ಹತೋಟಿಯು ಅತ್ಯಾವಶ್ಯಕ. ಶ್ವಾಸವನ್ನು ಮೂಗಿನಲ್ಲಿಯೇ ತೆಗೆದುಕೊಂಡು ಮೂಗಿನಲ್ಲಿಯೇ ಬಿಡುತ್ತ ಹೋಗಬೇಕು ಹಾಗೂ ಮೂಗಿನ ಎಡಹೊಳ್ಳೆಯಿಂದ ಪ್ರಾರಂಭಿಸಿ ಶ್ವಾಸವನ್ನು ತೆಗೆದುಕೊಂಡು ಬಲಹೊಳ್ಳೆಯಲ್ಲಿ ಬಿಡುವುದು ಮತ್ತು ಬಲಹೊಳ್ಳೆಯಲ್ಲಿ ತೆಗೆದುಕೊಂಡು ಎಡಹೊಳ್ಳೆಯಲ್ಲಿ ಬಿಡುವುದು ಮತ್ತು ಅಭ್ಯಾಸ ಬಲದಿಂದ ಶ್ವಾಸವನ್ನು ತುಸು ಒಳಗಡೆಯೇ ನಿಲ್ಲಿಸಿಕೊಳ್ಳುವುದೂ ನಡೆದಾಗ ಕ್ರಮೇಣ ಈ ಎರಡೂ ಹೊಳ್ಳೆಗಳು ಶ್ವಾಸೋಚ್ಛ್ವಾಸವನ್ನು ಒಮ್ಮೆಲೇ ತೆಗೆದುಕೊಂಡು ಹೊರಗೆ ಬಿಡಲು ಸಮರ್ಥವಾಗುವವು. ಈ ಎರಡೂ ಹೊಳ್ಳೆಗಳಲ್ಲಿ ಏಕಕಾಲದಲ್ಲಿಯೇ ವಾಯುಚಾಲನೆಯಾಗುವುದರಿಂದಾಗಿ ಸುಷುಮ್ನಾನಾಡಿಯು ಜಾಗೃತವಾಗುವುದು. ಪ್ರತಿವ್ಯಕ್ತಿಯಲ್ಲಿಯೂ ಎಡಗಡೆಗೆ ಇರುವುದು ಇಡಾ ಎಂಬ ಹೆಸರಿನ ನಾಡಿ ಹಾಗೂ ಬಲಗಡೆಗೆ ಇರುವುದು ಪಿಂಗಲಾ ಎಂಬ ನಾಡಿ : ಇವೆರಡರ ಮಧ್ಯೆ ಇರುವುದು ಸುಷುಮ್ನಾನಾಡಿ ಈ ಸುಷುಮ್ನೆಯೇ ಅಧ್ಯಾತ್ಮನಾಡಿ, ಆತ್ಮದರ್ಶಕನಾಡಿ, ಓಂಕಾರನಿನಾದಕನಾಡಿ ಹಾಗೂ ಪ್ರಕಾಶದರ್ಶಕನಾಡಿ. ಈ ಸಾಧನೆಗೆ ಗುರುವನ್ನು ಆಶ್ರಯಿಸಬೇಕಾದುದು ಅತ್ಯವಶ್ಯ. ಹೀಗೆ ಶ್ವಾಸವನ್ನು ಸರಿಯಾದ ದಾರಿಗೆ ತರುವುದಕ್ಕೆ ಪ್ರಾಣಾಯಾಮ ಅನ್ನುವರು.

ಯೋಗಿಯ ಆತ್ಮದರ್ಶನಕ್ಕೆ ಮೊದಲು ಓಂಕಾರದರ್ಶನ ಹಾಗೂ ಆತ್ಮಸಾಧನೆಗೆ ಮೊದಲು ಪ್ರಾಣಾಯಾಮ ಅನ್ನುವ ಕಾರಣದಿಂದ ಓಂಕಾರ–ಪ್ರಾಣಾಯಾಮಗಳಿಗೆ ಆದ್ಯತೆಯನ್ನು ಕೊಡಲಾಯಿತು. ಮತ್ತು ಓಂಕಾರ ಪ್ರಾಣಾಯಾಮಗಳಿಗೆ ಸುಪ್ರಸಿದ್ಧ ಗಣಪತಿ–ಮಾರುತಿಯರ ರೂಪಗಳನ್ನು ಕೊಡಲಾಯಿತು. ಇವುಗಳಿಗೆ ಗಣಪತಿಯ ರೂಪವನ್ನು ಕೊಡಲು ಹೊರಟ ಋಷಿಮುನಿಗಳು ಸುಷುಮ್ನಾನಾಡಿಯನ್ನು ಹಾಗೂ

ಓಂಕಾರದಲ್ಲಿಯ ಕೊಂಬನ್ನು ಗಜಮುಖನಲ್ಲಿಯ ಸೊಂಡಿಲನ್ನಾಗಿ ಗುರುತಿಸಿದರು ; ಆನೆಯ ದೊಡ್ಡದಾದ ಕಿವಿಯನ್ನು ತತ್ತ್ವಬೋಧನೆಯನ್ನು ಸರಿಯಾಗಿ ಆಲಿಸುವ ದೊಡ್ಡ ಹಾಗೂ ವಿಶಾಲವಾದ ಕಿವಿಯನ್ನಾಗಿಯೂ ಆನೆಯ ಚಿಕ್ಕ ಚಿಕ್ಕ ಕಣ್ಣುಗಳಿಂದಾಗಿ ಆಧ್ಯಾತ್ಮ ತತ್ತ್ವದ ಸತ್ವವನ್ನು ಗುರುತಿಸುವ ಸೂಕ್ಷ್ಮ ನಯನವನ್ನಾಗಿಯೂ ಗಣಪತಿಯಲ್ಲಿ ಕಲ್ಪಿಸಿದರು. ಸುಷುಮ್ನಾನಾಡಿಗೆ ಗುಹಾಲಯ ಎಂಬ ಹೆಸರೂ ಇದೆ. ಇದರ ಒಳಗಿನ ಪೊಳ್ಳಿನ ಆಕಾರವೇ ಗುಹೆ. ಈ ಸುಷುಮ್ನಾ ಎಂಬ ಗುಹೆಯಲ್ಲಿ ಸಂಚರಿಸುವ ಕುಂಡಲಿನೀ ಶಕ್ತಿಯನ್ನು ಗಣಪತಿಯ ವಾಹನವನ್ನಾಗಿ, ಅರ್ಥಾತ್, ಬಿಲದಲ್ಲಿ ಸಂಚರಿಸುವ ಇಲಿಯನ್ನಾಗಿ ರೂಪಿಸಲಾಯಿತು.

ಜಗತ್ತಿನ ಸೃಷ್ಟಿಯ ಸಂದರ್ಭದಲ್ಲಿ ಮೊದಲು ಮೂಡಿಬಂದದ್ದು ಹಾಗೂ ಅಧ್ಯಾತ್ಮ ಸಾಧನೆಯಲ್ಲಿ ಮೊದಲು ಮೂಡಿ ಬರುವುದು ಓಂಕಾರವಾದುದರಿಂದ ಈ ಓಂಕಾರವನ್ನು ಪ್ರತಿಮಂತ್ರಕ್ಕೂ ಹೇಗೆ ಮೊದಲು ತರಲಾಗುವುದೋ ಹಾಗೆಯೇ ಓಂಕಾರದ ರೂಪವೇ ಆದ, ಓಂಕಾರದಲ್ಲಿಯ ಅಕಾರವನ್ನೇ ಅರ್ಥಾತ್ ಸೃಷ್ಟಿತತ್ತ್ವವನ್ನೇ, ಅಂದರೆ ಮಹಾವಿಷ್ಣುವನ್ನೇ ಡೊಳ್ಳು ಹೊಟ್ಟೆಯನ್ನಾಗಿ ಭಾವಿಸಲ್ಪಟ್ಟ ಮಹಾಗಣಪತಿಗೆ ಅಗ್ರ ಪೂಜೆ ಎಂದು ವಿಧಿಸಲಾಯಿತು. ಲಯತತ್ತ್ವದ ಶಿವನನ್ನು ಮೋಕ್ಷಕಾರಕನನ್ನಾಗಿಯೂ ಗುರುತಿಸಿದ ಋಷಿಮುನಿಗಳು ಮೋಕ್ಷದೆಡೆಗೆ ಕೊಂಡೊಯ್ಯುವ ಓಂಕಾರ–ಪ್ರಾಣಾಯಾಮಗಳ ಸಾಕಾರನೆನಿಸಿದ ಗಣಪತಿಯನ್ನು, ಆತನ ಗಜಮುಖದ ಬಗ್ಗೆ ಸುಂದರವಾದ ಕಥೆಯೊಂದನ್ನು ರಚಿಸಿ ಅವನನ್ನು, ಗಜಮುಖನನ್ನಾಗಿ ಮಾಡಿ ಶಿವ – ಶಕ್ತಿಯರ ಮಗನೆಂಬ ಭಾವಕ್ಕೆ ಆತ್ಮನನ್ನು ಬಿಂಬಿಸಿದರು.

ಮುಂದೆ ರಾಮಾಯಣದ ರಚನೆಯ ಕಾಲದ ಆ ಸಂದರ್ಭದಲ್ಲಿ ರಾಮನನ್ನು ಮಹಾವಿಷ್ಣುವಿನ ಅವತಾರವೆಂದು ಕಂಡು ವೈಷ್ಣವ ಪದ್ಧತಿಯಲ್ಲಿಯೂ ಓಂಕಾರ ಪ್ರಾಣಾಯಾಮಗಳಿಗೆ ರೂಪವೊಂದನ್ನು ಕೊಡಲು ಉದ್ಯಮಿಸಿದ ಋಷಿ – ಮುನಿಗಳು ಮಾರುತಿಯನ್ನು ಕಲ್ಪಿಸುವುದಕ್ಕೆ ಮುಂದಾದರು. ಬೆನ್ನುಹುರಿಗೆ ಹೊಂದಿಕೊಂಡು ಬರುವ ಇಡಾ – ಪಿಂಗಳಾಮಧ್ಯದ ಸುಷುಮ್ನಾನಾಡಿಯನ್ನು ಇಲ್ಲಿ ಮಾರುತಿಯ ಬಾಲವನ್ನಾಗಿ ರೂಪಿಸಿದರು. ಇದಕ್ಕಾಗಿ ಮಾರುತಿಯನ್ನು ಕಪಿಯ ರೂಪದಲ್ಲಿ ತಂದರು. ಇಲ್ಲಿ ಕಪಿಯೆಂದರೆ ಒಂದು ಪ್ರಾಣಿವಿಶೇಷವಾದ ಮಂಗ ಎಂದು ಭಾವಿಸಲಾಗದು. ಇಲ್ಲಿ 'ಕಪಿ' ಶಬ್ದಕ್ಕೆ ವಿಶೇಷವಾದ ಅರ್ಥವನ್ನು ತರಲಾಯಿತು. 'ಕಂ' ಅಂದರೆ ಸುಖ; 'ಕಂ ಪಾತಿ ಇತಿ ಕಪಿಃ', – 'ಸುಖವನ್ನು, ಅಂದರೆ ಶರೀರದ ಸ್ವಾಸ್ಥ್ಯವನ್ನು ಹಾಗೂ ಪರಮಸುಖವಾದ ಮೋಕ್ಷವನ್ನೂ ದೊರಕಿಸಿಕೊಡಬಲ್ಲ ಹಾಗೂ ರಕ್ಷಿಸಬಲ್ಲ ತತ್ತ್ವವಾದ ಪ್ರಾಣಾಯಾಮವೇ ಇಲ್ಲಿಯ ವಿಶೇಷಾರ್ಥದಲ್ಲಿಯ ಕಪಿ. ಈ ಕಪಿಯಲ್ಲಿಯ

ಬಾಲವೇ ಸುಷುಮ್ನಾ. ಸಾಮಾನ್ಯ ಕಪಿಗೆ ಬಾಲದಲ್ಲಿ ವಿಶೇಷವಾದ ಶಕ್ತಿಯೇನೂ ಇರುವುದಿಲ್ಲ ; ಆದರೆ ಸುಷುಮ್ನಾನಾಡಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ಇಲ್ಲಿಯ ಕಪಿವಿಶೇಷನಾದ ಹನುಮಂತನಿಗೆ ಬಾಲದಲ್ಲಿಯೇ ಅಪಾರವಾದ ಶಕ್ತಿ. ಸುಷುಮ್ನೆಯಲ್ಲಿ ಮೂಡಿಬರುವ ಜ್ಞಾನವೆಂಬ ಅಗ್ನಿಯೇ ಲಂಕೆಯನ್ನು ಸುಡುವ ಸಾಮರ್ಥ್ಯದ ಮಾರುತಿಯ ಬಾಲದ ತುದಿಯಲ್ಲಿಯ ಅಗ್ನಿ. 'ಲಂ' ಅಂದರೆ ಪೃಥ್ವೀತತ್ತ್ವ; 'ಲಂ ಕಾರಯತಿ ಇತಿ ಲಂಕಾ' ಪೃಥ್ವೀತತ್ತ್ವದ ಜಂಜಾಟದ ಮೊತ್ತವನ್ನೇ ಲಂಕೆಯನ್ನಾಗಿ ರಾಮಾಯಣದಲ್ಲಿ ತರಲಾಯಿತು. ಆ ಜಂಜಾಟವನ್ನೆಲ್ಲ ಹೋಗಲಾಡಿಸುವ, ನಿರ್ನಾಮಗೈಯುವ ಪ್ರಾಣಾಯಾಮದ ಕಾರ್ಯವನ್ನು ಅಲ್ಲಿ ಲಂಕಾದಹನವನ್ನಾಗಿ ನಿರೂಪಿಸಲಾಯಿತು. ಸುಷುಮ್ನೆಯೊಂದಿಗೆ ಓಂಕಾರದಲ್ಲಿಯ ಕೊಂಬೂ ಸಹ ಇಲ್ಲಿ ಮಾರುತಿಯೆಂಬ ಕಪಿಯ ಬಾಲವಾಯಿತು.

ಈ ಮಾರುತಿಯನ್ನು ಹನುಮಂತನೆಂದು ಕರೆಯಲಾಯಿತು. 'ಮರುತ್' ಅಂದರೆ ಪ್ರಕೃತಿಯಲ್ಲಿಯ ವಾಯುತತ್ತ್ವ. ಜೀವಿಯು ಶ್ವಾಸಕ್ಕಾಗಿ ಸ್ವೀಕರಿಸಿದ ವಾಯುವನ್ನು ಆ ವಾಯುತತ್ತ್ವದ ಮಗನೆಂದು ಭಾವಿಸಲಾಯಿತು ಹಾಗೂ 'ಮರುತಃ ಅಪತ್ಯಂ ಪುಮಾನ್'– ಮರುತ್ತನ ಮಗ ಎಂದು ಭಾವಿಸಲ್ಪಟ್ಟ ಈ ತತ್ತ್ವವನ್ನು ಮಾರುತಿ ಎಂದು ಕರೆಯಲಾಯಿತು. ಹಾಗೆಯೇ ಪ್ರಾಣಾಯಾಮದಲ್ಲಿ ಶ್ವಾಸೋಚ್ಛ್ವಾಸಗೈಯುವಾಗ ಮೇಲ್ತುಟಿಯ ಮೇಲೆ ಇರುವ ಮೂಗಿನಿಂದಲೇ ಶ್ವಾಸದ ವಾಯುವಿನ ಸಂಚಾರವಾದುದರಿಂದ ಮಾರುತಿಯನ್ನು ಹನುಮಂತನೆಂದೂ ಕರೆಯಲಾಯಿತು. ಏಕೆಂದರೆ (ಪುರುಷರ ಮೀಸೆಯ ಸ್ಥಳವಾದ) ಮೇಲ್ತುಟಿಯ ಮೇಲ್ಭಾಗಕ್ಕೆ ಸಂಸ್ಕೃತದಲ್ಲಿ 'ಹನು' ಎಂದು ಹೇಳಲಾಗುವುದು. ಈ ಹನುವಿನ ಮೂಲಕವೇ ಪ್ರಾಣಾಯಾಮದಲ್ಲಿ ಶ್ವಾಸೋಚ್ಛ್ವಾಸದ, ಅರ್ಥಾತ್, ಶ್ವಾಸದ ಪೂರಕ – ರೇಚಕಗಳು ಮಾರುತಿಯನ್ನು ಹನುಮಾನ್ ಎಂದು ಗುರುತಿಸಲಾಯಿತು. ಹೀಗೆ ಗಣಪತಿಯೆಂದರೂ ಓಂಕಾರ ಪ್ರಾಣಾಯಾಮಗಳು ಮತ್ತು ಮಾರುತಿಯೆಂದರೂ ಓಂಕಾರ ಪ್ರಾಣಾಯಾಮಗಳು, ಧಾರ್ಮಿಕವಾಗಿ ಇವರನ್ನು ದೇವರನ್ನಾಗಿ ಕಂಡು ಗುಡಿ–ಗೋಪುರಗಳನ್ನು ನಿರ್ಮಿಸಿ ಅವುಗಳಲ್ಲಿ ಇವರನ್ನು ಸ್ಥಾಪಿಸಿ ಪೂಜಿಸಲಾಯಿತು. ಯೋಗಸಾಧನೆಗೆ ಸುಷುಮ್ನಾನಾಡಿಯ ಚಾಲನೆಯೇ ಮೂಲವಾದುದರಿಂದ ಯೋಗಮಾರ್ಗದಲ್ಲಿ ಹನುಮಂತನಿಗೆ ಪ್ರಥಮ ಗೌರವ. ಯೋಗಾರ್ಥದಲ್ಲಿ ರಾಮ ಅಂದರೆ ಜೀವಾತ್ಮ. 'ರ' ಅಂದರೆ ಅಗ್ನಿತತ್ತ್ವ 'ಮ' ಅಂದರೆ ತ್ರಿಮೂರ್ತಿಗಳಲ್ಲಿ ಬ್ರಹ್ಮನಿಗೆ ಸಂಬಂಧಿಸಿದ ಪುನರ್ಜನ್ಮತತ್ತ್ವ ; ಜನ್ಮ – ಪುನರ್ಜನ್ಮ ತತ್ತ್ವಕ್ಕೆಳಸಿದ ಜೀವಾತ್ಮವೇ ರಾಮ. ಜೀವಾತ್ಮವು

ಮೋಕ್ಷಮಾರ್ಗಕ್ಕೆ ಪ್ರವರ್ತಿಸಿದಾಗ ಪ್ರಾಣಾಯಾಮದ ಅತ್ಯಾವಶ್ಯಕತೆಯಿರುವುದರಿಂದಾಗಿ ರಾಮನಿದ್ದಲ್ಲಿ ಮಾರುತಿ – 'ಯತ್ರ ಯತ್ರ ರಘುನಾಥಕೀರ್ತನಂ ತತ್ರ ತತ್ರ ಮಾರುತೇಃ ಉಪಸ್ಥಿತಿಃ' ಅನ್ನುವ ಭಾವ ಬಲಿಯಿತು.

ರಾಮಾಯಣದಲ್ಲಿ ಬರುವ ಕಪಿಗಳ ಬಗ್ಗೆ ಒಂದು ಪುಟ್ಟ ವಿವರಣೆ. ರಾಮಾಯಣದಲ್ಲಿಯ ಕಪಿಗಳೆಲ್ಲ ಸೂಚಿಸುವುದು ವಾಯುತತ್ತ್ವವನ್ನೇ ಆಗಿದೆ. ಶ್ವಾಸೋಚ್ಛ್ವಾಸದ ವಾಯುವು ದೇಹದಲ್ಲಿ ಐದು ವಿಧಗಳಲ್ಲಿ ಭಾವಿಸಲ್ಪಡುವುದು. ಶ್ವಾಸವು ಕಂಠದ ಮೂಲಕ ಒಳಗೆ ಹೋಗುವಾಗ ಹಾಗೂ ಹೊರಗೆ ಬರುವಾಗ ಅದು ಉದಾನವಾಯು ; ರಾಮಾಯಣದಲ್ಲಿ ಈ ವಾಯುವನ್ನು, ಇದು ರೋಮಗಳಿಂದ ಕೂಡಿದ ಮೂಗಿನ ಹೊಳ್ಳೆಗಳ ಮೂಲಕ ಹೋಗಿ ಬರುವುದರಿಂದಾಗಿ, ರೋಮರಾಜಿವಿರಾಜಿತ ಕರಡಿಯ ರೂಪದಲ್ಲಿ ಕಂಡು ಜಾಂಬುವಂತನನ್ನಾಗಿ ತರಲಾಯಿತು. ವಾಯುವು ಹೃದಯಸ್ಥಾನಕ್ಕೆ ಹೋದಾಗ ಅದನ್ನು 'ಪ್ರಾಣ' ಎಂದು ಗುರುತಿಸಲಾಯಿತು. ಹಾಗೂ ರಾಮಾಯಣದಲ್ಲಿ ಈ ಪ್ರಾಣವನ್ನು ಸುಗ್ರೀವನನ್ನಾಗಿ ತರಲಾಯಿತು. ಹೃದಯ ಸ್ಥಳದಲ್ಲಿದ್ದು ರಕ್ತವನ್ನು ಎಲ್ಲ ನರನಾಡಿಗಳಿಗೆ ಚೆನ್ನಾಗಿ ಪೂರೈಸುವ ವಾಯುತತ್ತ್ವ ಸುಗ್ರೀವ. ವಲತೇ ಅಧೋ ಮುಖಮ್' – ಕೆಳಗಡೆಗೆ ಪ್ರವರ್ತಿಸುವ ವಾಯುವನ್ನು ಅರ್ಥಾತ್ ಅಪಾನವಾಯುವನ್ನು ವಾಲಿಯೆಂದು ಗುರುತಿಸಲಾಯಿತು. ನಾಭಿ ಪ್ರದೇಶದಲ್ಲಿಯ ವಾಯುವನ್ನು ಸಮಾನವಾಯುವನ್ನಾಗಿಯೂ ಹಾಗೂ ಇಡೀ ದೇಹದಲ್ಲಿ ಸಂಚರಿಸುವ ವಾಯುವನ್ನು ವ್ಯಾನವಾಯುವನ್ನಾಗಿಯೂ ಗುರುತಿಸಲಾಯಿತು. ರಾಮಾಯಣದಲ್ಲಿ ಇವರು ನೀಲ–ನಲರು. ರಾಮಾಯಣದಲ್ಲಿ ಈ ವ್ಯಾನವಾಯುವೆಂಬ ನಲನೇ ಸಮುದ್ರದಲ್ಲಿ ಸೇತುವೆಗೆ ಕಲ್ಲು–ಗುಡ್ಡಗಳನ್ನು ಜೋಡಿಸುತ್ತ ಹೋದವನು. ದೇಹದಲ್ಲಿಯ ಈ ಐದು ವಿಧ ವಾಯುತತ್ತ್ವಗಳಿಗೇ ಯಾವುದೇ ದೇವರಿಗೆ ನೈವೇದ್ಯ ಮಾಡುವಾಗ ಆ ನೈವೇದ್ಯದ ಸಮರ್ಪಣೆ – ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ ಎಂದು ಮುಂತಾಗಿ.

* * * * *

೨. ಓಂ ಗಾಯಿತ್ರಿ

[**ಪೀಠಿಕೆ :** ಋಗ್ವೇದದ ಮೂರನೆಯ ಮಂಡಲದ ಅರವತ್ತೆರಡನೆಯ ಸೂಕ್ತದಲ್ಲಿ ಹತ್ತನೆಯ ಮಂತ್ರವಾಗಿ ಸರ್ವ ಪ್ರಖ್ಯಾತವಾದ ಗಾಯಿತ್ರೀ ಮಂತ್ರವು ಬರುತ್ತದೆ. "ಸವಿತೃದೇವನ ಶ್ರೇಷ್ಠ ತೇಜಸ್ಸನ್ನು ಧ್ಯಾನಿಸುವೆವು; ಅದು ನಮ್ಮ ಬುದ್ಧಿಯನ್ನು ಬೆಳಗಿಸಲಿ" ಎಂಬ ಅರ್ಥವನ್ನು ಕೊಡುವ "ತತ್ಸವಿತೃವರೇಣ್ಯಂ ಭರ್ಗೋ ದೇವಸ್ಯಧೀಮಹಿ; ಧಿಯೋ ಯೋ ನಃ ಪ್ರಚೋದಯಾತ್" ಎಂಬ ಮಂತ್ರವೇ ಗಾಯಿತ್ರೀಮಂತ್ರವೆಂದು ಖ್ಯಾತವಾದದ್ದು. ವಿಶ್ವಾಮಿತ್ರ ಋಷಿಯಿಂದ ದರ್ಶಿಸಲ್ಪಟ್ಟ ಈ ಮಂತ್ರದಲ್ಲಿ ಗಾಯತ್ರಿಯು ಛಂದಸ್ಸಾಗಿದ್ದು ದೇವತೆಯು ಸವಿತೃ, ಅರ್ಥಾತ್ ಸೂರ್ಯ. ಛಂದಸ್ಸಿನ ಹೆಸರಿನಲ್ಲಿಯೇ ಈ ಮಂತ್ರವು ಪ್ರಖ್ಯಾತವಾದದ್ದು ಒಂದು ವಿಶೇಷ. ಗಾಯತ್ರೀ ಛಂದಸ್ಸಿನಲ್ಲಿ ಎಂಟು ಅಕ್ಷರಗಳ ಮೂರು ಪಾದಗಳಿರುತ್ತವೆ. ಇಲ್ಲಿ ಮೊದಲನೆಯ ಪಾದದಲ್ಲಿ ಏಳೇ ಅಕ್ಷರಗಳಿರುವುದರಿಂದ 'ಓಂ' ಅನ್ನು ಸೇರಿಸಿಕೊಂಡು ಎಂಟು ಅಕ್ಷರಗಳನ್ನಾಗಿ ಮಾಡಿಕೊಳ್ಳಬೇಕೆನ್ನುವುದು ಇಲ್ಲಿಯ ಇಂಗಿತ. ಓಂ ಅನ್ನುವುದು ಪರಬ್ರಹ್ಮಪರ್ಯಾಯ ವಾದದ್ದು. ಅದೇ ಪರಾಶಕ್ತಿಯೂ ಹೌದು, ಗಾಯತ್ರಿಯ ಬಗ್ಗೆ ಹೆಚ್ಚಿನ ವಿವರಣೆಗಾಗಿ ಇದೇ ಗುರುಪಾದ ಕೆ.ಹೆಗಡೆಯವರ ಶ್ಲೇಷಸಿದ್ಧಾಂತವೆಂಬ ಸಂಸ್ಕೃತ–ಕನ್ನಡ–ಇಂಗ್ಲೀಷ್–ಹಿಂದೀ ಗ್ರಂಥಗಳನ್ನು ಅವಲೋಕಿಸಬಹುದು.]

ಸವಿತೃತೇಜಸ್ಸಿಹುದು ಬ್ರಹ್ಮಶಕ್ತಿ ಗಾಯತ್ರಿ ಮಾತೆ
ಅನ್ನ–ವಿದ್ಯೆ–ಪರಾಜ್ಞಾನಪ್ರದಾತೆ ಶ್ರೀಮಾತೆ ಲಲಿತೆ ॥ಪ॥

ಬ್ರಹ್ಮಾಂಡವಾರಂಭಗೊಂಡದ್ದು ಓಂಕಾರದಿಂದ
ತಟಸ್ಥ ಪರಬ್ರಹ್ಮಸ್ಪಂದನದಿಂದಲೋಂಕಾರ
ಓಂಕಾರವೇ ಸೃಷ್ಟಿ–ಸ್ಥಿತಿ–ಲಯಶಕ್ತಿ ಗಾಯತ್ರಿ
ಪರಬ್ರಹ್ಮ–ಪರಾಶಕ್ತಿ–ಬ್ರಹ್ಮಾಂಡತ್ರಯಬೋಧಕವು ಓಂಕಾರ ॥1॥

ಗಾಯತ್ರೀ ಮಂತ್ರಕ್ಕೆ ಮೊದಲು ಓಂಕಾರದುಚ್ಚಾರ
ಇದರಿಂದ ಮೊದಲ ಪಾದದೆಂಟಕ್ಷರಗಳು ಪೂರ್ಣಗೊಳ್ಳುವವು
ಬ್ರಹ್ಮ–ಹರಿ–ಹರರೆಂಬ ಸೃಷ್ಟಿ–ಸ್ಥಿತಿ–ಲಯಭಾವಸಹಿತ
ಇಚ್ಛಾ–ಕ್ರಿಯಾ–ಜ್ಞಾನಶಕ್ತಿಗಳ ಮೇಳೈಪವೋಂಕಾರದಲ್ಲಿ ॥2॥

ಮೂರು ಶಕ್ತಿಗಳೊಕ್ಕೂಟವಾಗಿ ಸವಿತೃದೇವನವನು
ಬಂದಿಹನು ಜ್ಞಾನಗೋಚರಕೆ ಭಾವಸಮಾಧಿಯಲ್ಲಿ
ಋಷಿಯಾತನೆನಿಸಿದನು ವಿಶ್ವಾಮಿತ್ರನೆಂದು
ವಿಶ್ವಕ್ಕೆ ಸೂರ್ಯ ತಾನಾದ ಋಷಿಯೀ ಮಂತ್ರದರ್ಶನಕಾಲದಲ್ಲಿ ॥3॥

ಸವಿತೃನೆಂದರೆ ಸೂರ್ಯನಾ ಮಹಾಸೂರ್ಯ ನಿಜದಿ
ಚರ್ಮಚಕ್ಷುಗೋಚರವೀ ಕೋಟಿಸೂರ್ಯರಿಗೆ ಮೂಲ
ಅವನೇ ಪರಬ್ರಹ್ಮನವನ ತೇಜಸ್ಸು ಪರಾಶಕ್ತಿಯಿಹಳು
ಸೃಷ್ಟಿ–ಸ್ಥಿತಿ–ಲಯಶಕ್ತಿ ಮೂಲಳಾ ಪರಾಶಕ್ತಿ ಗಾಯತ್ರಿ ಮಾತೆ ॥4॥

ಬ್ರಹ್ಮಾಂಡಮೂಲನಾ ಸವಿತೃ ತಟಸ್ಥನೆನಿಸಿದರು ಕೂಡ
ಅವನ ಸ್ಪಂದನವಾಗಿ ತಾ ಹೊರಹೊಮ್ಮುವುದು ಶ್ರೇಷ್ಠ ತೇಜಸ್ಸು
ಸೃಷ್ಟಿ–ಸ್ಥಿತಿ–ಲಯಕಾರ್ಯಗಳ ಮೂಲತ್ರಿಶಕ್ತಿಯಾಗಿಹುದು
ಆ ತೇಜಸ್ಸಿನ ಧ್ಯಾನದಿಂ ಶ್ರೇಯಸ್ಸು ಇಹ–ಪರಗಳಲ್ಲಿ ॥5॥

'ಗಾಯಂತಂ ತ್ರಾಯತ ಇತಿ' ಗಾಯತ್ರಿಯೆಂದಾಗ
ಹಾಡುವವನ ರಕ್ಷಕಳು ಗಾಯತ್ರಿಯೆಂದು ಅರ್ಥ
ಛಂದೋರೂಪದಲಿ ಗಾಯತ್ರಿ ದೇಹಸೂಚಕಳು
ಜೀವನವೆ ಗೀತೆ ದೇಹಸ್ಥ ಜೀವಾತ್ಮ ಗಾಯಕನು ॥6॥

ಸವಿತೃ ಶಬ್ದವು ಒಡನೆ ಮೂರರ್ಥಗಳ ಮೂಲ
ಪರಬ್ರಹ್ಮ–ಸೂರ್ಯ–ಜೀವಾತ್ಮಬೋಧಿ
ಗಾಯತ್ರಿಮಂತ್ರಾತ್ಮ ಮಹಾಸೂರ್ಯನಾ ಸವಿತೃದೇವ
ಕೋಟಿಶಸ್ಸೂರ್ಯರಿಗೆ ತಂದೆಯವ ಜೀವಾತ್ಮಮೂಲ ಮತ್ತೆ ॥7॥

'ಪಿತಾ ವೈ ಪುತ್ರನಾಮಾಸಿ'ಯೆಂಬ ವೇದೋಕ್ತಿಯಲ್ಲಿ
ತಂದೆಯೇ ಮಗನಾಗಿ ತಾನವತರಣಗೈಯುವವನು
ಎಂದೆಂಬ ವಿಶಾಲಾರ್ಥವಿದ್ದಿಹುದು ಅದರಿಂದಲೀಗ
ಸೂರ್ಯ–ಜೀವಾತ್ಮರೆಲ್ಲರಾ ಪರಂಬ್ರಹ್ಮ ಸವಿತಾ ॥8॥

ಭರ್ಗವೆಂದರತಿ ಶ್ರೇಷ್ಠ ತೇಜಸ್ಸು ಗಾಯತ್ರಿಯೆಂಬರ್ಥದಲ್ಲಿ
ಸೂರ್ಯಸಂಬಂಧದಲಿ ಕಿರಣಗಳು ಮತ್ತೊಂದು ಅರ್ಥದಲ್ಲಿ
ಜೀವಾತ್ಮಸಂಬಂಧಿ ಅನ್ನ–ಸ್ವರ್ಗಗಳರ್ಥ ಬೇರೊಂದು
ಈ ಎಲ್ಲವೂ ತಾನಾಗಿ ಗಾಯತ್ರಿ ರಕ್ಷಿಪಳು ಜಗವ ॥9॥

ತ್ರಿಗಮನಳು ಗಾಯತ್ರಿಯೆಂದೂ ಹೇಳಲಾಗುವುದು
ಸ್ವರ್ಗ–ಮರ್ತ್ಯ–ಪಾತಾಳಗಳಲ್ಲಿ ಗಮನವವಳದ್ದು
ಪ್ರಾಕ್ತನದಿಂದಿನ ಮುಂದಿನ ಜನ್ಮಸೂಚಕಗಳೇ ಮೂರು ಲೋಕಗಳು
ಈ ಮೂರರಲ್ಲೂ ಜೀವಾತ್ಮರಕ್ಷಕಳು ಗಾಯತ್ರಿ ಮಾತೆ ॥10॥

ಧಿಯಃವೆನ್ನುವ ಶಬ್ದವದು ಗಾಯತ್ರೀಮಂತ್ರದಲ್ಲಿ
ಪ್ರಜ್ಞೆ–ಯಜ್ಞಜ್ಞಾನ–ಪರಾವಿದ್ಯೆಗಳನ್ನು ತಾನು ಸಮವಾಗಿ
ಅರ್ಥೈಸುವುದು ಒಡನೆ ಪ್ರಜ್ಞೆ ಬದುಕಿನ ವಿದ್ಯೆ
ಕಾಯಕವಿದ್ಯೆ ಯಜ್ಞಜ್ಞಾನ–ಪರಾವಿದ್ಯೆ ಮೋಕ್ಷದವು ॥11॥

ಲೌಕಿಕಾಸಕ್ತರಿಗೆ ಸ್ವರ್ಗಾಸಕ್ತರಿಗೆ ಸಮಸಮದಿ
ಮುಮುಕ್ಷುಗಳಿಗೆಲ್ಲರೀ ಮೂವರಿಗೆ ಒಡನೆ
ಯೋಗ್ಯವೆನಿಪಜ್ಞಾನ–ವಿಜ್ಞಾನ ಪ್ರದಾತೆ ಶ್ರೀಮಾತೆ
ಗಾಯತ್ರಿ ತಾನಿಹಳು ಲಲಿತಾ ರಾಜರಾಜೇಶ್ವರಿಯು ನಿಜದಿ ॥12॥

ಸಚ್ಚಿದಾನಂದವೆನ್ನುವುದು ಸೋಮರಸ ಮಧುವು
ಆತ್ಮಸಾಧನೆಯಲ್ಲಿ ನಿರತ ಧನ್ಯಾತ್ಮರಿಗೆ ಗಾಯತ್ರಿ ಮಾತೆ
ನೀಡುವಳು ಈ ಮಧುವ ಸಮೃದ್ಧ ನಿತ್ಯಾನ್ನದೊಡನೆ
ಸರ್ವತ್ರ ಲಲಿತಗಮನೆ ಲಲಿತೆ ಸಿರಿಮಾತೆಯವಳು ॥13॥

ಭೂರ್ಭುವಸ್ಸುವಹಗಳೆಂಬ ತ್ರಿಲೋಕಾರ್ಥವ್ಯಾಹೃತಿಸಹಿತಳಾಗಿ
ಉಕ್ತ ಗಾಯತ್ರಿ ಋಗ್ಯಜುಸ್ಸಾಮವೆಂಬ ವೇದತ್ರಯಗಳನ್ನು
ಮತ್ತದೋ ಬ್ರಹ್ಮ–ವಿಷ್ಣು–ರುದ್ರನಾಮಕ ಗ್ರಂಥಿಗಳನು
ಅರ್ಥೈಸುವಳು ಮತ್ತವುಗಳನು ವ್ಯಾಪಿಸಿದ್ದಿಹಳು ॥14॥

ಪಂಚಭೂತಗಳೊಂದು ಪಂಚಪ್ರಾಣಗಳೊಂದು
ಪಂಚಜ್ಞಾನೇಂದ್ರಿಯಗಳೊಂದು ಪಂಚಕರ್ಮೇಂದ್ರಿಯಗಳಿನ್ನೊಂದು
ಪಂಚತನ್ಮಾತ್ರಗಳೊಂದು ಈ ರೀತಿಯಲ್ಲಿ
ಪಂಚ ಶಿರದವಳಿಹಳು ಗಾಯತ್ರಿಮಾತೆ ॥15॥

ಷಟ್ಕುಕ್ಷಿಗಳಿಂದ ಶೋಭಿಪಳು ಗಾಯತ್ರಿ ದೇವಿ
ಷಡಂಗಗಳೇ ಷಡುದರಗಳು ವೇದಗಳಿಗನ್ವಯಿಸಿದಂತೆ
ಅಧ್ಯಾತ್ಮಕನ್ವಯಿಸೆ ಷಟ್ಚಕ್ರಗಳಾರು ಕುಕ್ಷಿಗಳು
ಸಹಸ್ರಾರಸ್ಥ ಗಾಯತ್ರಿಯದಾರು ಕುಕ್ಷಿಗಳು ಜ್ಞಾನ–ವಿಜ್ಞಾನ ॥16॥

ಶಿರದಲ್ಲಿ ಬ್ರಹ್ಮ ಮುಖದಲ್ಲಿ ಅಗ್ನಿ ಹೃದಯದಲ್ಲಿ ವಿಷ್ಣು
ಕೇಶದಲಿ ಹರನು ಸಪ್ತನದಿಗಳೇ ರಕ್ತ ಮಾಂಸಾಸ್ಥಿಗಳೆ ಪೃಥ್ವಿ
ಶ್ವಾಸವದು ವಾಯು ನರ–ನಾಡಿಗಳೆಲ್ಲ ದೇವ–ದೇವಿಯರು
ಸರ್ವಮಯಗಾಯತ್ರಿ ನೀಡಲೆಲ್ಲರಿಗೆ ಇಹ–ಪರದ ಸುಖವ ॥17॥

ಯೋಗಸಾಧಕನ ಸಾಧನೆಗೆ ನಿಲುಕುವಳು ಗಾಯತ್ರಿ
ಮೊದಲನಾಹತನಾದವೋಂಕಾರವಾಗಿ
ಮುಂದೆ ಜ್ಯೋತಿರ್ಮಯದ ಬಿಂದುರೂಪದಲಿ ಬಂದು
ಯೋಗಿಯನು ಮಹಾಸೂರ್ಯನಲಿ ಲೀನಗೊಳಿಸುವಳು ॥18॥

ತ್ರಿ–ಗಮನಳಾಗಿ ಬ್ರಹ್ಮ–ವಿಷ್ಣು–ರುದ್ರಗ್ರಂಥಿಗಳನಾವರಿಸಿದಾಕೆ
ಗಾಯತ್ರಿಯಾಗುವಳು ಆ ತ್ರಿ–ಗ್ರಂಥಿಭೇದಕಳು
ಮತ್ತಾ ಗ್ರಂಥಿಗಳ ಸ್ಥಾನದಲಿ ಪ್ರಸ್ಥಾಪಿಸುವಳಾಕೆ
ಅಗ್ನಿ–ಸೂರ್ಯ–ಸೋಮರನು ಸಾಧಕನಿಗನುಗ್ರಹಗೈಯುವವಳಾಗಿ ॥19॥

ಛಂದೋರೂಪದಲಿರುವ ಗಾಯತ್ರಿಯ ಮೂರುಪಾದಗಳು
ಪರಮ ಗುರುಪಾದಗಳವು ಸಾಧಕತ್ರಯಕೆ
ಇಹಲೋಕ–ಪರಲೋಕ–ಪರಮಪದವೀಸಕ್ತ
ಮನುಜರಿಗವು ನೀಡುವವು ಅವರವರೆಲ್ಲರಿಷ್ಟಾರ್ಥಗಳ ಮುದದಿ ॥20॥

ಸವಿತೃತೇಜಸ್ಸಿಹುದು ಬ್ರಹ್ಮಶಕ್ತಿ ಗಾಯತ್ರಿ ಮಾತೆ
ಅನ್ನ–ವಿದ್ಯೆ–ಪರಾಜ್ಞಾನಪ್ರದಾತೆ ಶ್ರೀಮಾತೆ ಲಲಿತೆ ॥ಪ॥

ಶ್ರೀ ಗಾಯತ್ರೀದರ್ಶಿಕಾ

ಜಗತ್ತಿನ ಹುಟ್ಟು–ಬದುಕು–ಲಯಗಳಿಗೆ ಮೂಲ ಪರಬ್ರಹ್ಮನೇ ಸರಿ ಅನ್ನುವುದು ತಾತ್ತ್ವಿಕವಾಗಿ ನಿಜವಾದರೂ ನೈಜವಾಗಿ ಚಿಂತಿಸಿದಾಗ ಆ ಪರಬ್ರಹ್ಮನ ಶಕ್ತಿಯೇ ಇವೆಲ್ಲವನ್ನೂ ನಡೆಸಿಕೊಂಡು ಹೋಗುವುದು ಅನ್ನುವುದು ಅರಿವಿಗೆ ಬರದಿರದು. ಏಕೆಂದರೆ ವೇದಗಳ ಸಾರಸರ್ವಸ್ವಗಳೆನಿಸಿದ ಉಪನಿಷತ್ತುಗಳು ಪರಬ್ರಹ್ಮನನ್ನು ನಿರ್ಗುಣನೆಂದೂ ನಿರಾಕಾರನೆಂದೂ ನಿಷ್ಪ್ರಪಂಚನೆಂದೂ ಬಣ್ಣಿಸುತ್ತವೆ. ಪರಬ್ರಹ್ಮನ ಶಕ್ತಿಯೇ ಮೂಲತಃ ಪರಾಶಕ್ತಿಯೆನಿಸಿದರೂ ಅದು ಪ್ರಕೃತಿಯಾಗಿಯೂ ಪ್ರವರ್ತಿಸುತ್ತ ಜೀವರಾಶಿಗಳನ್ನೆಲ್ಲ ಜನ್ಮ–ಪುನರ್ಜನ್ಮಚಕ್ರದಲ್ಲಿ ತೊಳಲಾಡಿಸುತ್ತ ಇರುತ್ತದೆ ಹಾಗೂ ಜೀವಿತಗಳಿಗೆಲ್ಲ ಸುಖ–ದುಃಖಗಳ ಸಂಬಂಧಗಳನ್ನು ಉಂಟು ಮಾಡುತ್ತ ಆ ಮೂಲಕ ತಾನು ನಲಿದಾಡುತ್ತ ಇರುತ್ತದೆ ಅನ್ನುವುದು ಅಧ್ಯಾತ್ಮ ಚಿಂತನೆಯ ತಿರುಳು. ದಿವ್ಯವಾದ, ಪರಾಶಕ್ತಿಯನ್ನು ಧ್ಯಾನಕ್ಕೆ ಮಾತ್ರ ನಿಲುಕುವ ಒಂದು ಮಹಾಜ್ಯೋತಿ ಎಂದು ಮಹಾತ್ಮರು ಕಂಡುಕೊಂಡರು. ಆ ಮಹಾಜ್ಯೋತಿಯನ್ನು ಮಹಾಸೂರ್ಯನನ್ನಾಗಿ ಭಾವಿಸಿ 'ಪೂಷನ್ ಏಕರ್ಷೇ.....' ಎಂದು ಮುಂತಾಗಿ ಈಶಾವಾಸ್ಯೋಪನಿಷತ್ತು ಕೊಂಡಾಡಿತು. ಆ ಪರಂಜ್ಯೋತಿಯೆಂಬ ಮಹಾಸೂರ್ಯನಿಂದ ಹೊರಬಂದ ಕಿರಣಗಳನ್ನು ಪ್ರತ್ಯಗಾತ್ಮಗಳೆಂದು ಗುರುತಿಸಲಾಯಿತು. ಆ ಆತ್ಮಗಳನ್ನೆಲ್ಲ ನಿನ್ನಲ್ಲಿ ಸಮಾವೇಶಗೊಳಿಸಿಕೋ ಎಂಬ ಪ್ರಾರ್ಥನೆಯನ್ನು ಅತ್ಯಂತ ಪ್ರಾಚೀನವೆನಿಸಿದ ಆ ಈಶಾವಾಸ್ಯೋಪನಿಷತ್ತು 'ವ್ಯೂಹ ರಶ್ಮೀನ್ ಸಮೂಹ' ಅನ್ನುತ್ತ ಆ ಸೂರ್ಯನನ್ನೇ ವಿನಂತಿಸಿಕೊಂಡದ್ದೂ ಇದೆ.

ಗಾಯತ್ರೀಮಂತ್ರದ ಋಷಿಯಾದ ಬ್ರಹ್ಮರ್ಷಿ ವಿಶ್ವಾಮಿತ್ರನು ಆ ಮಹಾಸೂರ್ಯನನ್ನು ಸವಿತೃ ಎಂದು ದರ್ಶಿಸಿದ. 'ಸರ್ವಸ್ಯ ಪ್ರಸವಿತಾ ಸವಿತಾ'– ಎಲ್ಲವನ್ನೂ ನಿರ್ಮಿಸುವವ ಸವಿತೃ. ಆ ಸವಿತೃನೆಂಬ ಮಹಾಸೂರ್ಯನ, ಅರ್ಥಾತ್ ಜ್ಯೋತಿಯ, ಪರಂಜ್ಯೋತಿಯ ತೇಜಸ್ಸು ಅಥವಾ ದಿವ್ಯಪ್ರಭೆಯೇನಿದೆಯೋ ಅದನ್ನು 'ಭರ್ಗಃ' ಎಂದು ಆ ಬ್ರಹ್ಮರ್ಷಿಯು ದರ್ಶಿಸಿದ.

ಆಗ ಕಂಡುಬಂದ ಮಂತ್ರವು ಗಾಯಿತ್ರೀ ಛಂದಸ್ಸಿನಲ್ಲಿ ಒಡಮೂಡಿದ್ದರಿಂದ ಜನರ ಅನುಕೂಲಕ್ಕಾಗಿ ಆ ದಿವ್ಯ ಪ್ರಭೆಯನ್ನು ಅಂದರೆ, ಭರ್ಗವನ್ನು ಗಾಯತ್ರೀ ಎಂದು ಕರೆದ. ಪೃಥ್ವೀ – ಅಪ್ (ನೀರು) – ತೇಜಸ್ಸು – ವಾಯು – ಆಕಾಶಾತ್ಮಕವಾಗಿ, ಹೀಗೆ ಪಂಚಭೂತಾತ್ಮಕವಾಗಿ ಗಾಯತ್ರೀ ಛಂದಸ್ಸಹಿತವಾಗಿ ಕಂಡುಬಂದ ಆ ಪರಬ್ರಹ್ಮನೆಂಬ ಮಹಾಸೂರ್ಯನ, ಅರ್ಥಾತ್, ಸವಿತೃವಿನ ಪ್ರಭೆಯನ್ನು ಪಂಚಮುಖೀದೇವಿಯನ್ನಾಗಿ ಮುಂದೆ ಪರಿಭಾವಿಸಲಾಯಿತು. ಆ ಸವಿತೃವಿನ ಭರ್ಗವೇ,

ತೇಜಸ್ಸೇ, ಪ್ರಭೆಯೇ ಗಾಯತ್ರಿಯೆನಿಸಿ ಮೋಕ್ಷಾರ್ಥಿಗಳಿಗೆ ಪರಾಶಕ್ತಿಯಾಗಿ ಮೋಕ್ಷಪ್ರದಳೂ ಭೋಗಾಪೇಕ್ಷಿಗಳಿಗೆ ಜನ್ಮ–ಪುನರ್ಜನ್ಮಕಾರಕಳಾದ ಮೂಲಪ್ರಕೃತಿಯೂ ಆಗಿ ಎರಡೂ ಕಾರ್ಯಗಳನ್ನೂ ನಿರಂತರವಾಗಿ ನಡೆಸುತ್ತ ವಿರಾಜಮಾನಳಾಗಿರುವುದು. ಆ ಗಾಯತ್ರಿಯನ್ನೇ ಶ್ರೀಮಾತೆ ಲಲಿತೆ ಎಂದು ಮುಂದೆ ಬಂದ ಪುರಾಣಗಳು ಸ್ತುತಿಸುತ್ತಿವೆ.

ಗಾಯಿತ್ರೀಮಂತ್ರದಲ್ಲಿಯ 'ಸವಿತುಃವರೇಣ್ಯಂ ಭರ್ಗಃ' ಅನ್ನುವಲ್ಲಿ ಬರುವ ಸವಿತೃವು ಪರಮಾತ್ಮನೂ ಹೌದು ಹಾಗೂ ಮಹಾಸೂರ್ಯನೆನಿಸಿದ ಅಥವಾ ಮಹಾಜ್ಯೋತಿಯೆನಿಸಿದ ತನ್ನದೇ ಕಿರಣವಾದ, ಕಿಡಿಯಾದ, ಅಂಶವಾದ ಪ್ರತ್ಯಗಾತ್ಮನೂ ಹೌದು ಮತ್ತು ಎಲ್ಲವನ್ನೂ ಒಳಗೊಂಡ ಪರಬ್ರಹ್ಮನೂ ಹೌದು ; ಆತನ ತೇಜಸ್ಸನ್ನು ವಿಶ್ವಾಮಿತ್ರ ಬ್ರಹ್ಮರ್ಷಿಯು 'ಭರ್ಗಃ' ಎಂದು ಕರೆದನಲ್ಲವೆ? ಆ 'ಭರ್ಗಃ' ಅನ್ನುವ ಶಬ್ದಕ್ಕೂ ಮೂರು ಅರ್ಥಗಳಿವೆ ; ಭರ್ಗವೆಂದರೆ ಕಿರಣದ ಜೊತೆಯಲ್ಲಿ ಅನ್ನವೂ ಹೌದು. ಸ್ವರ್ಗವೂ ಹೌದು. ಹಾಗೆಯೇ ಪರಾನಂದವಿಲೀನತೆಯೂ, ಅರ್ಥಾತ್, ಮೋಕ್ಷವೂ ಹೌದು. ಗಾಯತ್ರಿಯು ಸಾಮಾನ್ಯರಿಗೆ ಅನ್ನ ಸ್ವರ್ಗಗಳನ್ನು ನೀಡಿದರೆ ಯೋಗಿಗಳಿಗೆ ಪರಾನಂದವಿಲೀನತೆಯನ್ನು ಕರುಣಿಸುವ ಮಹಾಮಾತೆ ಶ್ರೀಮಾತೆಯಾಗಿಹಳು. ಈ ಮಂತ್ರದಲ್ಲಿಯ 'ಧಿಯಃ' ಅನ್ನುವ ಶಬ್ದವೂ ಸಹ ಸಾಮಾನ್ಯರ ಅರ್ಥದಲ್ಲಿ ಲೌಕಿಕ ವಿದ್ಯೆ ಹಾಗೂ ಯಜ್ಞ–ಯಾಗಾದಿಗಳಿಗೆ ಸಂಬಂಧಿಸಿದಂತೆ ಪೂಜಾ–ಯಜ್ಞಾದಿಗಳ ಜ್ಞಾನ ಮತ್ತು ಮೋಕ್ಷಾರ್ಥಿಗಳಿಗೆ ಸಂಬಂಧಿಸಿದಂತೆ ಪರಬ್ರಹ್ಮವಿಷಯಕವಾದ ಪರಾಜ್ಞಾನವಾಗಿದೆ.

ಪರಂಜ್ಯೋತಿಯ ಪ್ರಭೆಯಾದ, ಶಕ್ತಿಯಾದ ಗಾಯತ್ರಿಯು ಬ್ರಹ್ಮಾಂಡದಾರಂಭದಲ್ಲಿ ಓಂಕಾರವಾಗಿ ಮೂಡಿ ಬಂದು ಆ ಓಂಕಾರದಲ್ಲಿಯ ಅಕಾರ–ಉಕಾರ–ಮಕಾರಗಳು ಸ್ಥಿತಿ–ಲಯ–ಪುನರ್ಜನ್ಮಗಳಿಗೆ ಕಾರಣವಾದವು. ಅಂದರೆ, ಕ್ರಮವಾಗಿ ಮಕಾರ–ಅಕಾರ–ಉಕಾರಗಳಿಗೆ ಬ್ರಹ್ಮ–ವಿಷ್ಣು–ಮಹೇಶ್ವರರ ರೂಪಗಳನ್ನು ಕೊಟ್ಟು ಪುರಾಣಗಳು ಆ ಮೂವರನ್ನು ತ್ರಿಮೂರ್ತಿಗಳೆಂದು ಕರೆದವು. ಪರಬ್ರಹ್ಮತೇಜಸ್ಸಿನ ಪ್ರಭೆಯಾದ ಗಾಯತ್ರಿಯೇ ಶ್ರೀಮಾತೆ ಲಲಿತೆಯೆನಿಸಿ ಆ ತ್ರಿಮೂರ್ತಿಗಳ ಶಕ್ತಿಗಳಾಗಿ ಅಂದರೆ ಕ್ರಮವಾಗಿ ಸರಸ್ವತಿ–ಲಕ್ಷ್ಮಿ–ಪಾರ್ವತಿಯರಾಗಿ, ಆ ತ್ರಿಮೂರ್ತಿಗಳ ಪತ್ನಿಯರಾಗಿ ವಿರಾಜಿಸಿದ್ದು.

ಈ ಎಲ್ಲ ಅರ್ಥಗಳನ್ನು ಅಂತರಂಗದಲ್ಲಿ ತಂದುಕೊಳ್ಳಲಿಕ್ಕಾಗಿ ಗಾಯತ್ರೀ ಮಂತ್ರದ ಪ್ರಾರಂಭದಲ್ಲಿ ಓಂಕಾರವನ್ನು ಹೇಳಲಾಗುವುದು ; ಅದಕ್ಕಾಗಿಯೇ ಎಂಟು ಅಕ್ಷರಗಳಿರಬೇಕಾದ ಈ ಮಂತ್ರದ ಪ್ರಥಮಪಾದದಲ್ಲಿ ಕೇವಲ ಏಳು ಅಕ್ಷರಗಳು ಮಾತ್ರ ಇವೆ. ಇಲ್ಲಿ ಓಂ ತತ್ಸವಿತೃವರೇಣ್ಯಂ' ಎಂದು ಹೇಳಿದಾಗ ಮಾತ್ರ ಇಲ್ಲಿ ಎಂಟು ಅಕ್ಷರಗಳ ಪಾದವು ಸ್ಪಷ್ಟವಾಗುವುದು. ಗಾಯತ್ರೀ ಛಂದಸ್ಸಿನ ಮೂರು ಪಾದಗಳು ಇಲ್ಲಿ ಮೂರು ಲೋಕಗಳನ್ನು ಪ್ರತಿಪಾದಿಸುತ್ತವೆ. ಮೂರು ಲೋಕಗಳೆಂದರೆ ಸ್ವರ್ಗ–ಮರ್ತ್ಯ–ಪಾತಾಳ. ಈ ಲೋಕಗಳು ಜೀವಾತ್ಮಕ್ಕೆ ಸಂಬಂಧಿಸಿಯೇ ಬರುತ್ತವೆ. ಪಾತಾಳವೆಂದರೆ

ಹಿಂದಿನ ಜನ್ಮ ಹಾಗೂ ಮರ್ತ್ಯಲೋಕವೆಂದರೆ ಭೂಮಿಯ ಮೇಲಿನ ಪ್ರಸ್ತುತ ಜನ್ಮ ಹಾಗೂ ಸ್ವರ್ಗವೆಂದರೆ ಪ್ರಸ್ತುತ ಜನ್ಮದಲ್ಲಿ ನಡೆಸಿದ ಪುಣ್ಯಕರ್ಮಗಳ ಫಲವಾಗಿ ಲಭಿಸುವ ಉತ್ತಮ ವಾತಾವರಣದಲ್ಲಿಯ ಪುನರ್‌ಜನ್ಮ. ಪಾತಾಳವೆಂದರೆ ಅಧೋಗತಿಯ ಜನ್ಮವೆಂಬ ಅರ್ಥವೂ ಇಲ್ಲಿದೆ. ಇಹ ಜನ್ಮದಲ್ಲಿ ಪರಪೀಡನೆ – ಸ್ವಾರ್ಥಮಾತ್ರವಿದ್ದಲ್ಲಿ ಮುಂದಿನ ಜನ್ಮದಲ್ಲಿ ಅಧೋಗತಿಗೆ ಹೋಗುವುದು. ಇದೇ ಇಲ್ಲಿಯ ಪಾತಾಳಲೋಕದ ಸೂಚಿತಾರ್ಥ. ಈ ಮೂರರಲ್ಲಿಯೂ ಗಾಯತ್ರಿಯ ಆಳ್ವಿಕೆ ಪೂರ್ತಿಯಾಗಿ ಇದ್ದೇ ಇದೆ ಅನ್ನುವುದಕ್ಕಾಗಿಯೇ ಪರಬ್ರಹ್ಮನ ಭರ್ಗವು ಅರ್ಥಾತ್ ತೇಜನ್ನು ಮೂರು ಪಾದಗಳ ಗಾಯತ್ರೀ ಛಂದಸ್ಸಿನಲ್ಲಿ ವಿಶ್ವಾಮಿತ್ರ ಮಹರ್ಷಿಗೆ ದರ್ಶನಕೊಟ್ಟಿದ್ದು.

ಗಾಯತ್ರೀ ಮಂತ್ರವನ್ನು ಜಪಿಸುವಾಗ ಭೂಃ – ಭುವಃ–ಸುವಃ ಅನ್ನುತ ಮೂರು ವ್ಯಾಹೃತಿಗಳನ್ನು ಹೇಳಿಕೊಳ್ಳಬೇಕಾಗುವುದು. ಮೇಲೆ ಹೇಳಿದ ಮೂರು ಲೋಕಗಳ ಸಂಸ್ಮರಣೆಗಾಗಿ ಈ ವ್ಯಾಹೃತಿಯನ್ನು ತರಲಾಗಿದೆ. ಸಂಗಡ ಭೂಃ ಅಂದಾಗ ಷಟ್ಚಕ್ರಗಳಲ್ಲಿ ಮೂಲಾಧಾರ – ಸ್ವಾಧಿಷ್ಠಾನ ಚಕ್ರಗಳಿಂದೊಡಗೂಡಿದ ಬ್ರಹ್ಮಗ್ರಂಥಿಯ ಅರಿವೂ ಆಗಬೇಕು. ಹಾಗೂ ಮಣಿಪೂರಕ –ಅನಾಹತ ಚಕ್ರಗಳಿಂದೊಡಗೂಡಿದ ವಿಷ್ಣುಗ್ರಂಥಿಯ ಅರಿವೂ ಆಗಬೇಕು ಮತ್ತು ವಿಶುದ್ಧಿ– ಆಜ್ಞಾಚಕ್ರಗಳಿಂದೊಡಗೂಡಿದ ರುದ್ರಗ್ರಂಥಿಯ ಅರಿವೂ ಆಗಬೇಕು ಅನ್ನುವ ಇಂಗಿತವೂ ಇಲ್ಲಿದೆ. ಯೋಗಿಗಳು ಈ ಮೂರೂ ಗ್ರಂಥಿಗಳನ್ನು ವಿಭೇದಿಸಿದಾಗ ಗಾಯತ್ರಿಯು ತ್ರಿಪುರಸುಂದರಿಯೆನಿಸುವಳು. ತ್ರಿಪುರಾಸುರ ಸಂಹಾರಿಣಿಯೆನಿಸುವಳು. ಸಮ್ಯಕ್ ದೀರ್ಯತೇ ಅನಯಾ ಇತಿ' ಸುಂದರೀ'– ಚೆನ್ನಾಗಿ ಸೀಳಿ ಮುನ್ನಡೆವವಳು ಇಲ್ಲಿಯ ಸುಂದರೀ; ತ್ರಿಪುರಭೇದಕಳೇ ತ್ರಿಪುರಸುಂದರೀ. ಆದರೆ ಸಾಮಾನ್ಯರಿಗೆ ತ್ರಿಪುರಗಳನ್ನು ಆವರಿಸಿ ಲೌಕಿಕದಲ್ಲಿ ತೊಡಗಿಸುವ ಮಾಯಾವಿನಿ ಈ ತ್ರಿಪುರಸುಂದರಿಯು.

ಗಾಯತ್ರೀಮಂತ್ರಾನುಷ್ಠಾನದ ಸಮಯದಲ್ಲಿ ಕರ–ಹೃದಯಾದಿ ಅಂಗನ್ಯಾಸಗಳನ್ನು ಮಾಡಿಕೊಂಡು ಹೇಳಿಕೊಳ್ಳಬೇಕಾದ "ಗಾಯತ್ರ್ಯಾಃ ಗಾಯತ್ರೀ ಛಂದಃ ವಿಶ್ವಾಮಿತ್ರಋಷಿಃ ಸವಿತಾ ದೇವತಾ ಅಗ್ನಿರ್ಮುಖಮ್ ಬ್ರಹ್ಮಾ ಶಿರೋ ವಿಷ್ಣುರ್ಹೃದಯಂ ರುದ್ರಃ ಶಿಖಾ ಪೃಥಿವೀಯೋನಿಃ ಪ್ರಾಣಾಪಾನವ್ಯಾನೋದಾನ ಸಮಾನಾಃ ಸಪ್ರಾಣಾ ರಕ್ತ–ಶ್ವೇತವರ್ಣಾ (ಸಾಯಂಕಾಲೇ ಕೃಷ್ಣವರ್ಣಾ) ಸಾಂಖ್ಯಾಯನಸಗೋತ್ರಾ ಗಾಯತ್ರೀ ಚತುರ್ವಿಂಶತ್ಯಕ್ಷರಾ ತ್ರಿಪದಾ ಷಟ್ಕುಕ್ಷಿಃ ಪಂಚಶೀರ್ಷಾ ಉಪನಯನೇ ವಿನಿಯೋಗಃ: ಎಂಬ ಮಂತ್ರವನ್ನು ಪಠಿಸಬೇಕಾಗುತ್ತದೆ. ಈ ಮಂತ್ರದಲ್ಲಿ ಗಾಯತ್ರಿಯನ್ನು ಸೌಮ್ಯಳನ್ನಾಗಿ ಚಿತ್ರಿಸಲಾಗಿದೆ. ಗಾಯತ್ರೀಮಾತೆಯು ದರ್ಶನ ಕೊಟ್ಟಿದ್ದು ಗಾಯತ್ರೀ ಎಂಬ ಛಂದಸ್ಸೆಂಬ ಶರೀರದ ಮೂಲಕ ; ದರ್ಶನ ಕೊಡಲು ಮಾಧ್ಯಮವಾಗಿ ಆಕೆ ಆಯ್ದುಕೊಂಡದ್ದು ವಿಶ್ವಾಮಿತ್ರ ಮಹರ್ಷಿಯನ್ನು. 'ಮಿತಾತ್ ತ್ರಾಯತೇ ಇತಿ ಮಿತ್ರಃ' – ಯಾವುದೋ ಒಂದು

ಮಿತಿಯಿಂದ ರಕ್ಷಿಸಿ ಹೊರಗೆ ಪ್ರಕಾಶಕ್ಕೆ ತರುವವನು ಮಿತ್ರ ; ಋಷಿಯು ಜಗತ್ತಿಗೆ ಮಿತ್ರನಾದಾಗ ಮಾತ್ರ, ಸೂರ್ಯನಾದಾಗ ಮಾತ್ರ ಅವನಿಗೆ ಗಾಯತ್ರೀದರ್ಶನದ ಭಾಗ್ಯ. ಸವಿತೃದೇವನಿಗೆ ಸಂಬಂಧಿಸಿದವಳು ಗಾಯತ್ರೀ; ಅರ್ಥಾತ್, ಮಹಾಸೂರ್ಯನಾದ ಸವಿತೃವಿನ ಪ್ರಭೆಯೇ, ಶಕ್ತಿಯೇ ಗಾಯತ್ರೀ. ಅಗ್ನಿಯೇ ಅಂದರೆ, ಜ್ಞಾನವೇ ಆಕೆಯ ಮುಖ ಬ್ರಹ್ಮನೇ ಅಂದರೆ ಶಬ್ದವೇ ಆಕೆಯ ಶಿರಸ್ಸು. ವಿಷ್ಣುವೇ ಅಂದರೆ ಸರ್ವವ್ಯಾಪಕತ್ವವೇ ಅವಳ ಹೃದಯ : ಅವಳ ಪ್ರಾದುರ್ಭಾವಸ್ಥಾನವು, ಅರ್ಥಾತ್ ಯೋನಿಯು ಪೃಥ್ವೀಮಾತೆ ; ಪ್ರಾಣ – ಅಪಾನ–ವ್ಯಾನ–ಉದಾನ–ಸಮಾನಗಳೆಂಬ ಪಂಚಪ್ರಾಣಗಳೇ ಅವಳ ಉಸಿರು ; ಬೆಳಗಿನ ಹೊತ್ತಿನಲ್ಲಿ ಕೆಂಪುವರ್ಣದವಳಾಗಿ, ಮಧ್ಯಾಹ್ನ ಶ್ವೇತವರ್ಣದವಳಾಗಿ ಸಾಯಂಕಾಲ ಕೃಷ್ಣವರ್ಣದವಳಾಗಿ ಗೋಚರಿಪ ಮೂರು ಬಣ್ಣದವಳು ಶ್ರೀಮಾತೆಗಾಯತ್ರೀ. ಅಸಂಖ್ಯಸಂಖ್ಯೆಗಳೇ, ಅರ್ಥಾತ್ ಸಾಂಖ್ಯಾಯನವೇ, ಅಂದರೆ ಸಂಖ್ಯೆಗಳ ಮಾರ್ಗವೇ ಅವಳ ಗೋತ್ರ. ವೈದಿಕವಾಗಿ 24 ಅಕ್ಷರಗಳ ಮೂಲಕ ಅಭಿವ್ಯಕ್ತ ಗೊಂಡ ಗಾಯತ್ರಿಗೆ ಆರು ಉದರಗಳು. ಶಿಕ್ಷಾ–ಕಲ್ಪ–ವ್ಯಾಕರಣ–ಜ್ಯೋತಿಷ್ಯ ಛಂದಃ–ನಿರುಕ್ತಗಳೆಂಬ ವೈದಿಕ ಷಡಂಗಗಳೇ ಗಾಯತ್ರಿಯ ಆರು ಉದರಗಳು ; ಆಧ್ಯಾತ್ಮಿಕವಾಗಿ ಗಾಯತ್ರಿಯ ಆರು ಉದರಗಳು ಮೂಲಾಧಾರಾದಿ ಷಟ್ ಚಕ್ರಗಳು. ಗಾಯತ್ರಿಯ ಐದು ಶಿರಸ್ಸುಗಳೆಂದರೆ ಪೃಥ್ವಿ–ಅಪ–ತೇಜ–ವಾಯು–ಆಕಾಶಗಳೆಂಬ ಪಂಚಭೂತಗಳ ಜೊತೆಯಲ್ಲಿ ವಾಕ್–ಪಾಣಿ–ಪಾದ–ಪಾಯು–ಉಪಸ್ಥಾನಗಳೆಂಬ ಪಂಚ ಕರ್ಮೇಂದ್ರಿಯಗಳೂ ತ್ವಕ್–ಚಕ್ಷು–ಶ್ರೋತ್ರ–ಜಿಹ್ವಾ–ನಾಸಿಕಗಳೆಂಬ ಪಂಚಜ್ಞಾನೇಂದ್ರಿಯಗಳೂ ಪಂಚಭೂತಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಗಂಧ–ರಸ–ರೂಪ–ಸ್ಪರ್ಶ–ಶಬ್ದಗಳೆಂಬ ಪಂಚತನ್ಮಾತ್ರಗಳೂ ಆಗುತ್ತವೆ.

ಯೋಗಸಾಧನೆಯಲ್ಲಿ ಗಾಯತ್ರಿಯು ಮೂಲಾಧಾರ–ಸ್ವಾಧಿಷ್ಠಾನ–ಮಣಿಪೂರಕ ಚಕ್ರಗಳನ್ನು ದಾಟಿ ಅನಾಹತಕ್ಕೆ ಸಾಧಕನು ಹೋದಾಗ ಓಂಕಾರಾದಿ ಅನಾಹತನಾದದ ಅನುಭವವನ್ನು ನೀಡುತ್ತ ಅಲ್ಲಿಂದ ವಿಶುದ್ಧಿಯನ್ನು ದಾಟಿ ಆಜ್ಞಾಚಕ್ರದಲ್ಲಿ ಯೋಗಿಯು ಕೇಂದ್ರೀಕೃತನಾದಾಗ ಜ್ಯೋತಿರ್ಮಯ ಬಿಂದುವಿನ ರೂಪದಲ್ಲಿ ದರ್ಶನಕೊಡುತ್ತಾಳೆ. ಅದೇ ಗಾಯಿತ್ರಿಯೇ ಶ್ರೀಚಕ್ರದಲ್ಲಿಯ ಬಿಂದು ; ಪುರಾಣಗಳಲ್ಲಿಯ ಶ್ರೀಮಾತೆ ಲಲಿತೆ.

ಹೀಗೆಲ್ಲ ಗಾಯತ್ರಿಯು ಸಾಮಾನ್ಯರನ್ನು ಲೌಕಿಕದಲ್ಲಿ ತೊಡಗಿಸುವ ತ್ರಿಮೂರ್ತಿಗಳ ಶಕ್ತಿಯಾದರೆ ಯೋಗಿಗಳನ್ನು ಪರಮಹಂಸಸ್ಥಿತಿಗೆ ಕೊಂಡೊಯ್ಯುವ ತ್ರಿಪುರಸುಂದರಿಯೂ ಆಗಿರುವಳು. ಇಂತಹ ಗಾಯತ್ರಿಯ ಉಪಾಸನೆಯನ್ನು ನಡೆಸಿ ಧನ್ಯರಾಗುವುದು ಮಾನವಜೀವಿಗಳ ಪುಣ್ಯವಿಶೇಷವೇ ಸರಿ. ಗಾಯತ್ರಿಯ ಉಪಾಸನೆಗೆ ಗಂಡು–ಹೆಣ್ಣು–ಜಾತಿ–ಮತ–ಧರ್ಮಗಳ ಯಾವುದೇ ಕಟ್ಟುಪಾಡುಗಳು ಇಲ್ಲವೇ ಇಲ್ಲ. ಏಕೆಂದರೆ ಎಲ್ಲರೂ ಆ ಮಾತೆಯ ಸಂತಾನವೇ ಸರಿ.

* * * * *

೩. ರುದ್ರನಮಕ

[**ಪೀಠಿಕೆ :** ರುದ್ರಪ್ರಶಾಂತೀಕರಣಸೂಕ್ತ ಎಂದು ಕರೆಯಲ್ಪಡುವ ರುದ್ರನಮಕವು ಕೃಷ್ಣಯಜುರ್ವೇದದ ತೈತ್ತರೀಯ ಸಂಹಿತೆಯಲ್ಲಿ ನಾಲ್ಕನೆಯ ಅಷ್ಟಕದಲ್ಲಿಯ ಐದನೆಯ ಪ್ರಪಾಠಕದಲ್ಲಿ 1 ರಿಂದ 11ರವರೆಗಿನ ಮಂತ್ರಗಳಾಗಿ ಬಂದಿದೆ. ಈ ರುದ್ರನಮಕವು ವಾಜಸನೇಯಿ ಮಾಧ್ಯಂದಿನ ಶುಕ್ಲಯಜುರ್ವೇದ ಸಂಹಿತೆಯ ಹದಿನಾರನೆಯ ಅಧ್ಯಾಯವಾಗಿಯೂ ಬಂದಿದೆ. ಈ ರುದ್ರನಮಕವನ್ನು ದಿನಂಪ್ರತಿ ದೇವಪೂಜಾ ಸಮಯದಲ್ಲಿ ದೇವರಿಗೆ ಅಭಿಷೇಕಗೈಯುತ್ತ ಪಠಿಸುವ ಪದ್ಧತಿಯು ಅನೇಕ ಕಡೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಈ ರುದ್ರನಮಕದ ಭಾವಾರ್ಥ ಸಂಗ್ರಹವನ್ನು ಆಧ್ಯಾತ್ಮಿಕ ವಿವರಣೆಗಳೊಂದಿಗೆ ಕನ್ನಡ ಪದ್ಯ ರೂಪದಲ್ಲಿ ಇಲ್ಲಿ ತರಲಾಗಿದೆ.]

ಸತ್ಯಪಥಭ್ರಷ್ಟತೆಗೆ ಕ್ರುದ್ಧ ನಾ ರುದ್ರ
ರೋದನಕ್ಕೊಯ್ಯುವವನೀತನತ್ಯುಗ್ರ
ಅತ್ತಾಗ ಕೊಡುವವನೆಂಬರ್ಥದಲ್ಲೀತ
ಭವವಿಭವದಾರೋಗ್ಯ–ಜ್ಞಾನಪ್ರದಾತ ॥ಪ॥

ಬಲಶಾಲಿ ಬಿಲ್ಲನ್ನು ಝೇಂಕರಿಸುವವನೀತ
ನೂರಾರು ಬಾಣಗಳು ತೀಕ್ಷ್ಣವತಿಚೂಪು
ಬಂದೆರಗಿ ಬಾಧಿಪವು ಬತ್ತಳಿಕೆಯೊಳಗಿಂದ
ಕಂಗೆಟ್ಟು ನೋವುಂಡು ನರ ತಾನು ತತ್ತರಿಸುವ॥
ನರ ತಾನು ತತ್ತರಿಸುವ ॥1॥

ಸುಷುಮ್ನೆಯೇ ಬಿಲ್ಲು ಸೆಟೆದು ನಿಂತಿಹುದು
ಪಥಭ್ರಷ್ಟ ಜೀವಕ್ಕೆ ಶಿಕ್ಷೆಯನು ಕೊಡಲು
ಬಾಣಗಳು ನೋಡಲ್ಲಿ ಕಷ್ಟ–ರುಜೆ–ರೋಗಗಳು
ದುಷ್ಕರ್ಮಫಲಗಳವು ಗತಿಯಿಲ್ಲದನುಭವಿಸದೆ॥
ಗತಿಯಿಲ್ಲದನುಭವಿಸದೆ ॥2॥

ಅತ್ಯಾಶೆ ಅತಿಭೋಗ ಅತ್ಯಹಂಕಾರ
ದುರ್ನೀತಿ ದುಸ್ತರ್ಕ–ದುರ್ಮ್ಮಾನ ದರ್ಪ
ಮೆರೆಯುತಿದ್ದರೆ ರುದ್ರನತ್ಯುಗ್ರಬಾಣಕ್ಕೆ
ಬಿಲ್ಲಿಗೇರುವ ತವಕ ಇದನಾಗ ನರನರಿಯನು ॥
ಇದನಾಗ ನರ ತಿಳಿಯನು ॥3॥

ಸರ್ವವಿಧ ಧನದಾತ ತಾ ಧನಚೋರನಾಗುವನು
ಸರ್ವವಿಧ ಸುಖದಾತ ತಾ ಸುಖಚೋರನಾಗುವನು
ಅಗಲತ್ಯುಗ್ರ ರುದ್ರ ತಾ ಕಳ್ಳರಲ್ಲೊಡೆಯ
ಇಷ್ಟಜನ–ಮನೆ–ಭೂ–ವಾಹನಕೆಲ್ಲ ತಪ್ತ ಬಾಣದೇಟುಗಳು॥
ಬಹುತಪ್ತಬಾಣದೇಟುಗಳು ॥4॥

ಸಾವಿರದ ಸಂಖ್ಯೆಯಲಿ ರುದ್ರಪುತ್ರರು ಘೋರ
ಅತಿಭೋಗ ತಂದಿರುವ ವಾಯುಪ್ರಕೋಪ
ಅವರ ಶರಗಳ ಹೊಡೆತ ನೂರಾರು ರೋಗಗಳು
ಮಿತಾಹಾರಯೋಗದಿಂದವುಗಳತಿ ಶಾಂತ ॥
ಯೋಗದಿಂದವುಗಳತಿ ಶಾಂತ ॥5॥
ಈ ರುದ್ರನವ ಮುಂದೆ ಜನ್ಮಜನ್ಮಾಂತರದಿ
ಶನಿಯಾದಿ ನೀಚದುಃಸ್ಥಗ್ರಹಗಳೆಂದೆನಿಸಿ
ಕಾಡುವನು ಇದಕೆಲ್ಲ ಪಥಭ್ರಷ್ಟ ನಡತೆಯೇ
ಮೂಲಕಾರಣ ತಿಳಿದು ನೋಡಲಿದು ಮನನ ॥
ತಿಳಿದು ನೋಡಲಿದು ಮನನ ॥6॥

ರುದ್ರಬಿಲ್ಲಾಗಿಹುದು ಶನಿಗ್ರಹದ ಸಂಕೇತ
ಸೆಟೆದ ಬಿಲ್ಲದು ಕಷ್ಟ–ಕೋಟಲೆಯ ಗುರುತು
ಬಾಣವೇ ಬುಧ ಮತ್ತೆ ಬುಧನೆಂದರಾ ವಿಷ್ಣು
ಸ್ಥಿತಿತತ್ತ್ವವ್ಯಗ್ರತೆಯೆ ಬಾಣದುಗ್ರತೆಯು ॥
ವ್ಯಗ್ರತೆಯೆ ಬಾಣದುಗ್ರತೆಯು ॥7॥

ಪ್ರಾರಬ್ಧವಿಲ್ಲಿ ತಾ ಬತ್ತಳಿಕೆಯಾಗಿಹುದು
ಅಕ್ಷಯಸ್ಥಿತಿಯಲ್ಲಿ ಕರ್ಮಫಲ ಬಾಣ
ಉತ್ತಮೋತ್ತಮ ಕರ್ಮದಿಂ ಬಿಲ್ಬಾಣ ಮೃದುವು
ಕರ್ಮಫಲತ್ಯಾಗದಲಿ ಬತ್ತಳಿಕೆ ಶೂನ್ಯ ॥
ತ್ಯಾಗದಲಿ ಬತ್ತಳಿಕೆ ಶೂನ್ಯ ॥8॥

ಕಾಮ–ಕ್ರೋಧ–ಲೋಭ–ಮೋಹ–ಮದ–ಮಾತ್ಸರ್ಯಗಳೇ ನಮ್ಮ ವೈರಿಗಳು
ಆ ಷಡ್ವೈರಿಗಳ ನಾಶಗೈಯಲಾ ರುದ್ರನತಿ ಚೂಪುಬಾಣಗಳು
ಸತ್ಯಪಥಪಯಣದಿಂ ರುದ್ರನ ಬಿಲ್ಲ ಹೆದೆ ಸಡಿಲು
ಇನ್ನಿಲ್ಲದಾಗುವುದಾತನ ಬಾಣಗಳ ಮೊನಚು
ಇನ್ನಿಲ್ಲದಾಗುವುದು ಬಾಣಗಳ ಮೊನಚು ॥9॥

ತುಷ್ಟಿ–ಪುಷ್ಟಿಗಳೊಡೆಯ ಸಾಧಕರ ಸನ್ಮಂತ್ರಮೂರ್ತಿ
ಭವಸಂಹಾರಕಾಸ್ತ್ರ ಜಾಗೃತ್–ಸ್ವಪ್ನ–ಸುಷುಪ್ತಸ್ಥಿತಿಗಳೊಡೆಯ
ಚರಾಚರಸ್ಥರೆಲ್ಲರಿಗು ಮೂಲ ತಾನಾಗಿದ್ದು
ಜಗದಲೆಲ್ಲರ ಸರ್ವಕರ್ತವ್ಯಗಳ ನಿರೀಕ್ಷಕನು ರುದ್ರ
ಸರ್ವಕರ್ತವ್ಯಗಳ ನಿರೀಕ್ಷಕನು ರುದ್ರ ॥10॥

ದೇವಗಣಗಳಿಗಧಿಪ ವಿಶ್ವರೂಪೀ–ರಥಿಕ
ಸೇನಾನಿ–ಪಾಪಹರ–ಪ್ರಾಣಹರನುದಾರಿ–ಸಹಸ್ರನೇತ್ರ
ಸರ್ವವ್ಯಾಪಕ–ಹಿರಿಯ–ತಡೆರಹಿತ–ಸ್ರೋತ
ಸರ್ವಾತ್ಮನೀ ಸರ್ವನಿಯಂತ್ರಕ ರುದ್ರದೇವ
ಸರ್ವನಿಯಂತ್ರಕ ರುದ್ರದೇವ ॥11॥

ಪಶುತ್ವವೇ ರುದ್ರಹೋಮಕ್ಕೆ ಆಹುತಿಯು
ದುರ್ವರ್ತನಗಳವು ಸಮಿತ್ತುಗಳು ಅಲ್ಲಿ
ನೈಜಪ್ರೇಮವದು ಗೋಘೃತವು ತಾನಿಹುದು
ವಿವೇಕವೇ ಜ್ವಲಿಪ ಯಜ್ಞಾಗ್ನಿಯಾಗಿಹುದು
ಜ್ವಲಿಪ ಯಜ್ಞಾಗ್ನಿಯಾಗಿಹುದು ॥12॥

ಗೋಪರೆಂದರೆ ದೇಹದಲ್ಲಿಯ ಜ್ಞಾನತಂತುಗಳು ಅವರು
ಜಲಹಾರ್ಯ ತರಳೆಯರು ಸೂಚಕರು ಶುದ್ಧ ಜೀವನದ
ಭಾಗ್ಯವರ್ಧಕ ರುದ್ರನವ ಭವಾಭವರೋಗವೈದ್ಯ
ನಮನವಾತಗೆ ಸರ್ವರೂಪಸಂಸ್ಥಿತಗೆ
ಸರ್ವರೂಪಸಂಸ್ಥಿತಗೆ ॥13॥

ಭೂಮಿ–ಜ್ಞಾನಾರ್ಥಗಳಲ್ಲಿ "ಗೋ" ಶಬ್ದ ವಿಹುದಿಲ್ಲಿ
ಅವುಗಳನು ಧರಿಸಿದ ರುದ್ರ ತಾ ಗಂಧರ್ವನಿಹನು
ಜೀವ–ಗಾನಾರ್ಥದಲೂ ಮತ್ತೆ ಗಂಧರ್ವನೀತ
ಮೂಲಾಧಾರದಿಂ ಸಹಸ್ರಾರಪರ್ಯಂತ ಗಮನ ರುದ್ರನದು
ಸಹಸ್ರಾರಪರ್ಯಂತ ಗಮನ ರುದ್ರನದು ॥14॥

ಉಚ್ಚಗಿರವಾಸಾಪತ್ಯ–ಗಣ–ಬುದ್ಧಿ–ಚರಾಚರಕ್ಕಧಿಪ
ಅನ್ನ–ಬಲ–ಪಶು–ಭೂ–ಧನ–ಧಾನ್ಯ–ವೃಕ್ಷಗಳಿಗೊಡೆಯ
ಸರ್ವಸುಂದರಭುಜಾಯುಧಯಾನ – ಮಾನ – ಸಮ್ಮಾನ್ಯ
ಜ್ಞಾನಯಜ್ಞಧಿ ತುಷ್ಟ ರುದ್ರ ತಾ ನೀಡುವವನವುಗಳನ್ನೆಲ್ಲ
ರುದ್ರ ತಾ ನೀಡುವವನವುಗಳನ್ನೆಲ್ಲ ॥15॥

ರುದ್ರ ತಾ ಬಹುರೂಪದಿಂ ವ್ಯಾಪಿಸಿಹ ದಶದಿಕ್ಕುಗಳನು
ಸೂರ್ಯ–ಚಂದ್ರಾಗ್ನಿ–ಮಳೆ–ಗಾಳಿಗಳ ರೂಪದಿಂದ
ಅನ್ನರೂಪದಲಿದ್ದು ಸಲಹುವವನಾತ ಸರ್ವಜೀವಿಗಳ
ಸತ್ಪಥದ ನಡೆ–ನುಡಿಗಳಿಗೆ ರುದ್ರ ತಾನೊಲಿದು ಬರುವವನು
ರುದ್ರ ತಾನೊಲಿದುಬರುವವನು ॥16॥

ಆತ್ಮಸಾಧನಾಪಥದ ದಿಕ್ಕನ್ನು ತಪ್ಪಿಸುತ
ಮನವನ್ನು ಸ್ವಾರ್ಥಕ್ಕೆ ಸೆಳೆದೊಯ್ಯುವಂಥ
ಆತ್ಮಷಡ್ವೈರಿಗಳು ನಿಜದಲ್ಲಿ ನಮ್ಮ ದ್ವೇಷಿಗಳು
ಮಹಾರುದ್ರನ ಕ್ರೂರದವಡೆಗಳಿಗಾಹುತಿಗಳಾಗಲವರು
ಷಡ್ವೈರಿಗಳು ಆಹುತಿಗಳಾಗಲವರು ॥17॥

ವ್ಯಾಪಿಸಿರುವನು ರುದ್ರ ಸರ್ವತ್ರ ಬಹುರೂಪಗಳಲಿ
ಅಷ್ಟದಿಕ್ಕುಗಳಲ್ಲಿ ಮತ್ತೆ ಮೇಲೆಲ್ಲ ಕೆಳಗೆ
ಆ ಆ ರೂಪಗಳಲೆಲ್ಲ ಸುಪ್ರಸನ್ನನು ವರದ
ಸತ್ಯನಿಷ್ಠೆಯಿಂದವನ ಗುರುಪಾದಪದ್ಮಗಳಿಗೆರಗಿದಾಗ ॥18॥

ಸತ್ಯಪಥಭ್ರಷ್ಟತೆಗೆ ಕ್ರುದ್ಧ ನಾ ರುದ್ರ
ರೋದನಕ್ಕೊಯ್ಯುವವನೀತನತ್ಯುಗ್ರ
ಅತ್ತಾಗ ಕೊಡುವವನೆಂಬರ್ಥದಲ್ಲೀತ
ಭವವಿಭವದಾರೋಗ್ಯ–ಜ್ಞಾನಪ್ರದಾತ ॥ಪ॥

ರುದ್ರ–ಮಹಾರುದ್ರ ದರ್ಶಿಕಾ

ರುದ್ರನಮಕದಲ್ಲಿ ಬರುವ ರುದ್ರನು ಪ್ರಮುಖವಾಗಿ ಕಂಡುಬರುವುದು ಧನ್ವನನಾಗಿ, ಅರ್ಥಾತ್, ಧನುರ್ಧಾರಿಯಾಗಿ. ಇಷು ಸಮನ್ವಿತನಾಗಿ, ಅರ್ಥಾತ್ ಬಾಣಪ್ರಯೋಗ ಚತುರನಾಗಿ, "ನಮಸ್ತೇಸು ಧನ್ವನೇ ಬಾಹುಭ್ಯಾಂ ಉತ ತೇ ನಮಃ ।ಯಾ ತೇ ಇಷುಃ ಶಿವತಮಾ ಶಿವಂ ಬಭೂವ ತೇ ಧನುಃ" – ಬಿಲ್ಲುಗಾರನಾದ ನಿನಗೆ ಕೈಗಳನ್ನು ಮೇಲೆತ್ತಿ ನಮಸ್ಕರಿಸುವೆವು ; ನಿನ್ನ ಬಾಣ–ಬಿಲ್ಲುಗಳು ನಮಗೆ ಕಲ್ಯಾಣಕಾರಕವಾಗಿ ಪರಿಣಮಿಸುತ್ತಿರಲಿ ಎಂಬ ಪ್ರಾರ್ಥನೆಯೊಂದಿಗೆ ರುದ್ರನ, ಆ ಮಹಾರುದ್ರನ ನಮಕವಿದು ಪ್ರಾರಂಭವಾಗುತ್ತದೆ. ಯಾವುದೇ ವ್ಯಕ್ತಿಯು ಸತ್ಯಪಥದಿಂದ, ನ್ಯಾಯೋಚಿತವಾದ ಬದುಕಿನಿಂದ ದೂರ ಸರಿದು ಅನ್ಯಾಯದ ಮಾರ್ಗದಲ್ಲಿ ತನ್ನ ಸ್ವಾರ್ಥವನ್ನು ಸಾಧಿಸಲು ತೊಡಗಿದರೆ ರುದ್ರನವ ಕಡು ರುದ್ಧನಾಗುವನು. ಅಂತಹ ವ್ಯಕ್ತಿಯನ್ನು ನೂರಾರು ವಿಧಗಳಲ್ಲಿ ಜನ್ಮ – ಜನ್ಮಾಂತರಗಳಲ್ಲಿ ಗೋಳಾಡಿಸುವವನಾಗುವನು. ಅನ್ಯಾಯದ ಮಾರ್ಗದಲ್ಲಿ ಚಲಿಸುವ ವ್ಯಕ್ತಿಯ ವಿಷಯದಲ್ಲಿ ಪರಮಾತ್ಮನು, ಶಿವನು ಅತ್ಯುಗ್ರ ರುದ್ರನಾಗುವನು. 'ರೋದಯತಿ ಇತಿ ರುದ್ರಃ' – ಅಳುವಂತೆ ಮಾಡುವವನು ರುದ್ರ ಹಾಗೂ 'ರುದಿತಂ ರಾತಿ ದದಾತಿ ಇತಿ ರುದ್ರಃ' – ದುಃಖವನ್ನುಂಟುಮಾಡುವವನು ರುದ್ರ. 'ರೋದನಾತ್ ದ್ರವತಿ ಇತ್ಯಪಿ ರುದ್ರಃ' ಎಂದೂ ರುದ್ರಶಬ್ದವನ್ನು ಬಿಡಿಸಬಹುದು. ಆಗ ಪಶ್ಚಾತ್ತಾಪದಿಂದ ಅತ್ತರೆ ಹಾಗೂ ಪ್ರಾರ್ಥಿಸಿಕೊಂಡರೆ ದಯಾಳುವಾಗುವವನೂ ರುದ್ರ ಎಂದೂ ಆಗುತ್ತದೆ. ಪಾಪದ ಫಲವನ್ನು ಅನುಭವಿಸಿ ರೋದಿಸುತ್ತ ಆ ಶಿವನನ್ನು ಪ್ರಾರ್ಥಿಸಿಕೊಂಡಾಗ ಕಷ್ಟ ಕೊಡುವ ಆ ಮಹಾರುದ್ರನು ಶಾಂತನಾಗಿ ಕಷ್ಟಗಳನ್ನು

ಪರಿಹರಿಸುವನು ಅನ್ನುವ ಆಶಯವೂ ಈ ರುದ್ರ ಶಬ್ದದಲ್ಲಿದೆ ಹಾಗೂ ಈ ರುದ್ರನಮಕದಲ್ಲಿದೆ. ಆತನು ಶುಭ ಫಲವನ್ನು ಕೊಡಲು ಹೊರಟರೆ ಸಂಪತ್ಸಮೃದ್ಧಿಯ ಜೊತೆಯಲ್ಲಿ ಆರೋಗ್ಯ ಹಾಗೂ ಅಧ್ಯಾತ್ಮಜ್ಞಾನವನ್ನು ಕರುಣಿಸುವನು.

ರುದ್ರನ ಬಾಣಗಳು ಬಹು ಬಿರುಸಿನವು ಹಾಗೂ ಬಹುತೀಕ್ಷ್ಣವಾದವುಗಳು. ಆತನ ಬತ್ತಳಿಕೆಯಲ್ಲಿ ಅಸಂಖ್ಯಾಸಂಖ್ಯ ಭೀಕರ ಬಾಣಗಳು ರಾರಾಜಿಸುತ್ತವೆ. ರುದ್ರಪ್ರಾರ್ಥನೆಯಲ್ಲಿ ಬರುವುದೆಲ್ಲ ಆತನ ಬಾಣಗಳು ನಮ್ಮನ್ನು ಘಾತಿಸದೆ ನಮ್ಮ ವೈರಿಗಳ ಮೇಲೆರಗಲಿ ಎಂಬುದೇ ಆಗಿದೆ. ದೇವರ ಬಗ್ಗೆ ನಂಬಿಕೆಯಿದ್ದರೂ ಅಹಂಕಾರದಿಂದಾಗಿ ಜನರು ದರ್ಪಿಷ್ಟರಾಗುವುದು ವಂಚನೆ–ಸುಳ್ಳು–ಪರದೂಷಣೆ–ಪರಸ್ತ್ರೀ ಅಥವಾ ಪುರುಷ–ಪರಧನಾಕಾಂಕ್ಷೆ–ಆಶೆ–ಅತ್ಯಾಶೆಗಳಿಗೆ ಒಳಗಾಗಿ ದುರ್ಗಾಮಿಗಳಾಗಿ ಸಜ್ಜನರಂತೆ ಸೋಗು ಹಾಕುವುದು ಎಲ್ಲೆಲ್ಲಿಯೂ ಕಂಡು ಬರುವ ವಾಸ್ತವತೆ. ಇನ್ನು ಕೆಲವರು ತರ್ಕಕ್ಕೆಳಸಿ ದೇವರು–ಧರ್ಮ ಇವೆಲ್ಲ ಮನುಷ್ಯನೇ ಮಾಡಿಕೊಂಡದ್ದು ; ಜೀವನದಲ್ಲಿ ಸುಖವಾಗಿ ಬದುಕುವುದೇ ಮುಖ್ಯ ಎಂದೆಲ್ಲ ವಾದಿಸುತ್ತ ಅನ್ಯಾಯದ ಮಾರ್ಗದಲ್ಲಿ ಭೂಮಿ ಧನ–ಧಾನ್ಯಾದಿಗಳನ್ನೂ ಅಧಿಕಾರಾದಿಗಳನ್ನು ಪಡೆದು ವಿಜೃಂಭಿಸುವುದು ಕಂಡುಬರುತ್ತದೆ. ಪೂರ್ವಜನ್ಮಗಳಲ್ಲಿ ನಡೆಸಿದ ಪುಣ್ಯಕಾರ್ಯಗಳ ಫಲಗಳಿಂದಾಗಿ ತಾತ್ಕಾಲಿಕವಾಗಿ ಸುಖ–ಸಮೃದ್ಧಿಗಳಿದ್ದರೂ ಈ ಎಲ್ಲ ರೀತಿಯವರೂ ಮುಂದೆ ಕಷ್ಟ–ಕಾರ್ಪಣ್ಯಗಳಲ್ಲಿ, ರೋಗ–ರುಜಿನಗಳಲ್ಲಿ ತೊಳಲಾಡಬೇಕಾಗುವುದು ಹಾಗೂ ನರಕಸದೃಶವಾದ ಜೀವನದಲ್ಲಿ ಕಷ್ಟಪಡಬೇಕಾಗಬಹುದು. ಮೂಲತಃ ಕಲ್ಯಾಣಕಾರಕನಾಗಿರುವ ಶಿವನು, ಪರಮಾತ್ಮನು ಅಂತಹ ಜನರಿಗೆಲ್ಲ ಭೀಕರ ರುದ್ರನಾಗುವನು ; ತನ್ನ ಭಯಂಕರ ಬಿಲ್ಲಿನಿಂದ ತೀಕ್ಷ್ಣ ತೀಕ್ಷ್ಣ ಬಾಣಗಳನ್ನು ಪ್ರಯೋಗಿಸುವನು. ಇಲ್ಲಿ ಬಾಣಗಳೆಂದರೆ ಭಯಂಕರ ರೋಗ–ರುಜಿನಗಳೂ ಹಾಗೂ ದಾರಿದ್ರ್ಯವೆಂದೂ ಅರ್ಥ.

ಅನ್ಯಾಯದ ಮಾರ್ಗದಲ್ಲಿ ನಡೆಯುವವರ ವಿಷಯದಲ್ಲಿ ರುದ್ರನು 'ಸ್ತೇನಾನಾಂ ಪತಿ' ಯೂ ಅಂದರೆ ಚೋರಾತಿಚೋರನೂ ಆಗುವನು. ಉತ್ತಮಕರ್ಮಗಳ ಫಲವಾಗಿ ಶಿವನು ಧನ–ಸುಖ ಮುಂತಾದವುಗಳ ದಾತಾರನಾದರೆ ದುಷ್ಕರ್ಮಫಲವಾಗಿ ಅದೇ ಶಿವನು ರುದ್ರನಾಗಿ ಧನ–ಸುಖ–ಆರೋಗ್ಯಾದಿಗಳನ್ನು ಕಸಿಯುವವನಾಗುವನು ; ಆಗ ಆತ ಕಳ್ಳರೊಡೆಯನೆನಿಸುವನು. ಬಹು ವಿಧವಾಗಿ ಅನ್ಯಾಯದಲ್ಲಿ ತೊಡಗಿಸಿಕೊಂಡವರಿಗೆ ರುದ್ರನು ಒಬ್ಬನೇ ಆಗಿ ಕಾಣಿಸಿಕೊಳ್ಳದೆ ಸಾವಿರದ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುವನು. ಅಂದರೆ, ಸಾವಿರ ರೀತಿಗಳಲ್ಲಿ ಅನ್ಯಾಯಿಗಳ ಸಂಪತ್ತು – ಸಂತಾನ – ಸಂಗಾತಿಗಳನ್ನು ದೂರಗೊಳಿಸುವನು ; ಆರೋಗ್ಯದ ಮೇಲೆಯೂ ಆತನ ಕ್ರೂರದೃಷ್ಟಿ ಬೀಳುವುದು. ಇವೆಲ್ಲ ದುಃಖಗಳೂ ಆತನ ತೀಕ್ಷ್ಣ ಬಾಣಗಳ ಹೊಡೆತಗಳೆಂಬ ಕಾವ್ಯಮಯವಾದ ವರ್ಣನೆ ಇಲ್ಲಿದೆ.

ಆಧ್ಯಾತ್ಮಿಕವಾಗಿ ಇಲ್ಲಿ ಬರುವ ರುದ್ರನ ಬಿಲ್ಲು ಸುಷುಮ್ನಾನಾಡಿಯಾಗಿದೆ. ಸೂರ್ಯನನ್ನು ಅರ್ಥೈಸುವ ಪಿಂಗಳಾನಾಡಿ ಹಾಗೂ ಚಂದ್ರನನ್ನು ಅರ್ಥೈಸುವ ಇಡಾನಾಡಿಗಳು ಮಾತ್ರ ಸದಾ ಪ್ರವರ್ತಿಸುತ್ತಿದ್ದಲ್ಲಿ ಮನುಷ್ಯನು ಸ್ವಾರ್ಥಿಯಾಗುವನು. ಸೂರ್ಯನು ಬುದ್ಧಿಯ ಪ್ರತೀಕನು ಹಾಗೂ ಚಂದ್ರನು ಮನಸ್ಸಿನ ಪ್ರತೀಕನು. ಇವರು ಲೌಕಿಕದಲ್ಲಿಯ ಸುಖ–ಸಮೃದ್ಧಿಗಳಿಗೆ ಕಾರಕರು; ಅದಕ್ಕಾಗಿ ಸ್ವಾರ್ಥಪರಕೆಲಸಗಳಿಗೂ ಇವರು ಪ್ರೇರಕರಾಗುವರು. ಆದರೆ ಸುಷುಮ್ನಾನಾಡಿಯ ಗುಣವು ಸನ್ಮಾರ್ಗ ಪ್ರೇರಕವಾದುದು. ಈ ನಾಡಿಗೆ ಆಸ್ಪದವಿಲ್ಲದಿದ್ದಲ್ಲಿ ಇದೇ ಸೆಟೆದು ನಿಂತು ರುದ್ರನ ಬಿಲ್ಲಾಗಿಬಿಡುವುದು. ಅನೇಕಾನೇಕ ಕಷ್ಟಗಳಿಗೆ ಈ ಸುಷುಮ್ನೆಯೇ ಕಾರಣವಾಗಿಬಿಡುವುದು. ಯೋಗ ಮಾರ್ಗದಲ್ಲಿ ಸುಷುಮ್ನೆಯೆಡೆಗೆ ಗಮನ ಹೋದಾಗ, ಅಲ್ಲಿ ವಾಯುವಿನ ನಿತ್ಯಸಂಚಾರ ನಡೆಯುತ್ತಿರುವಾಗ ಮನಸ್ಸು–ಬುದ್ಧಿಗಳು ಸನ್ಮಾರ್ಗದಲ್ಲಿ ಚಲಿಸಲಾರಂಭಿಸುವವು. ಆಗ ಕಷ್ಟ–ಕೋಟಲೆಗಳಿಂದ ಮನುಷ್ಯನು ಪಾರುಗಾಣುವನು.

ನವಗ್ರಹಗಳಲ್ಲಿ ಶನಿಯು ಕಷ್ಟದಾಯಕನೆಂದು ಕುಖ್ಯಾತನಾಗಿರುವನು. ಪುಣ್ಯದ ಫಲಗಳನ್ನು ಗುರು – ಶುಕ್ರರೇ ಮುಂತಾದ ಗ್ರಹಗಳು ನೀಡುವವರಾದರೆ ಪಾಪದ ವಿಶಿಷ್ಟ ಫಲಗಳನ್ನು ನೀಡುವವ ಶನಿ. ಯಾವ ವ್ಯಕ್ತಿಯಲ್ಲಿ ಪಾಪಕಾರ್ಯಗಳ ಫಲವಿರುವುದಿಲ್ಲವೋ ಆ ವ್ಯಕ್ತಿಗೆ ಶನಿಯು ಏನೂ ತೊಂದರೆಯನ್ನು ಕೊಡಲಾರನು. "ಮಾನಸ್ತೋಕೇ ತನಯೇ ಮಾನ ಆಯುಷಿ ಮಾನೋ ಗೋಷು ಮಾನೋ ಅಶ್ವೇಷುರೀರಿಷಃ। ವೀರಾನ್ಮಾನೋ ರುದ್ರ ಭಾಮಿತೋವಧೀಃ ಹವಿಷಾ ವಿಧೇಮತೇ"– ಹೇ ರುದ್ರ, ನಮ್ಮ ಚಿಕ್ಕ ಮಕ್ಕಳನ್ನು ನೋಯಿಸದಿರು; ನಮ್ಮ ಆಯುಷ್ಯಕ್ಕೆ ಹಾನಿಯಾಗದಂತೆ ಮಾಡು; ನಮ್ಮ ವಾಹನಾದಿಗಳಿಗೆ ಅನುಗ್ರಹಿಸು; ಆಹುತಿಪೂರ್ವಕವಾಗಿ ನಿನ್ನನ್ನು ಪ್ರಾರ್ಥಿಸುವೆವು ಎಂದು ರುದ್ರನನ್ನು ಬೇಡಿಕೊಂಡಾಗ ಆತನೇ ಶನಿಯಾಗಿ ತನ್ನ ಸಂಚಾರದಲ್ಲಿ, ಗೋಚರದಲ್ಲಿ ಸುಖವನ್ನೇ ನೀಡುವನು ; ಇಷ್ಟೇ ಅಲ್ಲ ಮೋಕ್ಷಕಾರಕನೂ ಆಗುವನು. ಆಗ ವ್ಯಕ್ತಿಯು ಜನ್ಮಕ್ಕೆ ಬರುವಾಗ ಶನಿಯು ಸ್ವಕ್ಷೇತ್ರ–ಉಚ್ಚಕ್ಷೇತ್ರ–ಮೂಲತ್ರಿಕೋಣಗಳಲ್ಲಿ ನೆಲಸಿದ್ದು ಶುಭದಾಯಕನಾಗುವನು. ಅನ್ಯಾಯ ಮಾರ್ಗದಲ್ಲಿ ಪ್ರವರ್ತಿಸದೆ ಸನ್ಮಾರ್ಗದಲ್ಲಿಯೇ ವ್ಯಕ್ತಿಯು ಎಚ್ಚರಿಕೆಯಿಂದ ನಡೆದಾಗ ಶನಿಯು ಶುಭಕಾರಕನೇ ಆಗುವನು.

ದೇವತೆಗಳೆಲ್ಲ ವ್ಯಕ್ತಿಯ ಜಾತಕದಲ್ಲಿ ನವಗ್ರಹಗಳ ರೂಪದಲ್ಲಿ ನೆಲೆಸಿರುತ್ತಾರೆ. ಹಿಂದಿನ ಜನ್ಮಗಳ ಪುಣ್ಯ–ಪಾಪಗಳಿಗನುಗುಣವಾಗಿ ನವಗ್ರಹಗಳು ಜಾತಕದಲ್ಲಿ ಶುಭಾಶುಭ ಸ್ಥಾನಗಳನ್ನು ಪಡೆದಿರುತ್ತವೆ. 'ದೇವತಾಃ ಗ್ರಹರೂಪೇಣ ದರ್ಶಯಂತಿ ಶುಭಾಶುಭಮ್'

ಅನ್ನುವ ಉಕ್ತಿಗೆ ಅನುಗುಣವಾಗಿ ದೇವತೆಗಳು ಗ್ರಹಗಳ ರೂಪದಲ್ಲಿಯೇ ಒಳಿತು ಕೆಡುಕುಗಳನ್ನು ನೀಡುವವರು. ಪುಣ್ಯ ಕಾಯಕಗಳ ಫಲವಿದ್ದಲ್ಲಿ ಜಾತಕದಲ್ಲಿ ಗ್ರಹಗಳೆಲ್ಲ ತಮ್ಮ ಶುಭಸ್ಥಾನಗಳಲ್ಲಿ ವಿರಾಜಿಸುವವು ; ಪಾಪಕಾರ್ಯಗಳ ಫಲಾಧಿಕ್ಯವಿದ್ದಲ್ಲಿ ದುಃಸ್ಥಿತಿಯಲ್ಲಿ, ಅಶುಭಸ್ಥಾನಗಳಲ್ಲಿ ಗ್ರಹಗಳು ಇರುತ್ತವೆ. ಆಗ ಶನಿಗ್ರಹವು ಬಹುಕಷ್ಟ ಪರಂಪರೆಯನ್ನೇ ನೀಡುವುದಾಗುವುದು ; ಆಗ ಆ ಶನಿಗ್ರಹವೇ ರುದ್ರನಮಕದಲ್ಲಿ ಬರುವ ಮಹಾರುದ್ರ ; ತೀಕ್ಷ್ಣ ಬಾಣಪ್ರಯೋಗ ಚತುರ, ಸಂಪತ್ಸಮೃದ್ಧಿಸುಖಹಾರಕ ಸ್ತೇನನಾಂ ಪತಿ, ಅರ್ಥಾತ್ ಕಳ್ಳರೊಡೆಯ; ಶನಿಗ್ರಹಕ್ಕೆ ಸಂಬಂಧಿಸಿದ ಮಂಡಲ ಬಿಲ್ಲು ; ಇದೇ ಬಿಲ್ಲು ಶನಿಯು ರುದ್ರನಾದಾಗ ಆತನ ಕೈಯಲ್ಲಿಯ ಘನಘೋರ ಧನುಸ್ಸು.

ಏಕೋSಹಂ ಬಹುಸ್ಯಾಮ್ ಅನ್ನುವ ಉಪನಿಷದುಕ್ತಿಯ ಪ್ರಕಾರ ದೇವರು ಒಬ್ಬನೇ ಒಬ್ಬನಾಗಿದ್ದು ಬಹುರೂಪಗಳಲ್ಲಿ ಕಾಣಿಸಿಕೊಳ್ಳುವನು. ಸ್ಥಾವರ – ಜಂಗಮಾದಿಗಳಿಗೆಲ್ಲ ಆ ಒಬ್ಬನೇ ಒಬ್ಬ ಪರಮಪುರುಷನೇ ಅಧಿಪತಿಯು; ಏಕೆಂದರೆ ಆ ಒಬ್ಬನೇ ಒಬ್ಬನಿಂದ ಜಗತ್ತೆಲ್ಲ ನಿರ್ಮಾಣಗೊಂಡದ್ದು ಮತ್ತು ನಡೆಯುತ್ತಿರುವುದು. ಆದ್ದರಿಂದ ಆತನನ್ನು ಸಂಪ್ರೀತನನ್ನಾಗಿ ಮಾಡಿ ಅವನಿಂದಲೇ ಒಳಿತನ್ನು ಪ್ರಾರ್ಥಿಸಿ ಪಡೆಯಬೇಕು. ಜಾಗೃತಾವಸ್ಥೆ, ಸ್ವಪ್ನಾವಸ್ಥೆ, ಸುಷುಪ್ತಾವಸ್ಥೆಗಳೆಂಬ ಮೂರು ಅವಸ್ಥೆಗಳಿಗೂ ಅವನೇ ಒಡೆಯನೂ, ನಿರೀಕ್ಷಕನೂ ಆದುದರಿಂದ ಅವನ ದೃಷ್ಟಿಯಿಂದ ತಪ್ಪಿಸಿಕೊಂಡು ಯಾವುದೇ ಕಾರ್ಯವು ನಡೆಯಲು ಸಾಧ್ಯವಿಲ್ಲ. ಎಲ್ಲರನ್ನೂ ನಿಯಂತ್ರಿಸುವ ಆತನ ಮೇಲೆ ಯಾರ ನಿಯಂತ್ರಣವೂ ಇಲ್ಲ. ಆ ಪರಮಪುರುಷ ಪರಮಾತ್ಮನೇ ನವಗ್ರಹಗಳಾಗಿ ಪ್ರತಿ ಜೀವಿಯ ಜಾತಕದಲ್ಲಿ ವಿರಾಜಿಸುವುದು ; ಆದುದರಿಂದ ಬೇರೆ ಯಾವುದನ್ನೋ, ಯಾರನ್ನೋ ಪ್ರಸನ್ನಗೊಳಿಸಿ ಆತನಿಗೆ ಹೇಳಿಸಲಾಗದು ; ಆತನ ಮೇಲೆ ಯಾವುದೇ ಒತ್ತಡವನ್ನು ತರಲಾಗದು. ಶನಿಯು ರುದ್ರನಾಗಿ ಕಾಣಿಸಿಕೊಂಡಾಗ "ಶಿವಾ ಶರವ್ಯಾ ಯಾ ತವ ತಯಾನೋ ರುದ್ರ ಮೃಡಯ" ನಿನ್ನ ಬಾಣಗಳ ಸಾಲು ಕಲ್ಯಾಣಕಾರಕವಾಗಲಿ; ಅದರ ಸಹಾಯದಿಂದ ನಮ್ಮನ್ನು ಸಂಕಟಗಳಿಂದ ಪಾರುಮಾಡು ಎಂದು ಪ್ರಾರ್ಥಿಸಿಕೊಳ್ಳುವುದು. ಜಾತಕದಲ್ಲಿ ಶನಿಯು ಅತ್ಯಂತ ಕ್ರೂರನಿದ್ದಲ್ಲಿ, ಅಂದರೆ ರುದ್ರನು ಅತ್ಯಂತ ಕ್ರುದ್ಧರುದ್ರನಾಗಿದ್ದಲ್ಲಿ ರುದ್ರಹೋಮವನ್ನು ಮಾಡಿಸಲು ಜ್ಯೋತಿಷಿಗಳು ಸೂಚಿಸುವರು. ಹೋಮದ ಅರ್ಥವೂ ಅಮೋಘವಾಗಿದೆ. ಒಂದು ಕಾಲದಲ್ಲಿ ಹೋಮಕ್ಕೆ ಪಶುಬಲಿಯಿತ್ತೆಂದು ಹೇಳಲಾಗುವುದು. ಆದರೆ ಆಗಲೂ "ಪಶು" ಅನ್ನುವುದನ್ನು ಪಶುವೃತ್ತಿ ಅನ್ನುವ ಅರ್ಥದಲ್ಲಿ ಹೇಳಲಾಗುತ್ತಿತ್ತು. ಜನರು ತಪ್ಪಾಗಿ ಭಾವಿಸಿ ಪಶುವನ್ನು ಆಹುತಿಕೊಡುತ್ತಿದ್ದರೆ ಅದು ಜನರ ತಪ್ಪು. ಮನುಷ್ಯನಲ್ಲಿಯ ಪಶುವೃತ್ತಿಯನ್ನು ಹೋಮದಲ್ಲಿ ಸುಟ್ಟು ಹಾಕಿದಾಗ ಸಾತ್ವಿಕವೃತ್ತಿ ಜಾಗೃತವಾಗುವುದು. ಆಗ ಮನುಷ್ಯನಿಂದ ಪುಣ್ಯಕಾರ್ಯವು

ಘಟಿಸುವುದು ; ಪುಣ್ಯಕಾರ್ಯವೆಂದರೆ ಪರರಿಗೆ ಉಪಕಾರವಾಗುವಂತಹ ಕಾರ್ಯ. 'ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್' ಎಂಬ ಉಕ್ತಿ ವೇದ ಕಾಲದಿಂದಲೂ ಪ್ರಚಲಿತವಿದೆ. ದುರ್ವರ್ತನೆಗಳೆಂಬ ಸಮಿತ್ತುಗಳನ್ನು ಯಜ್ಞದಲ್ಲಿ ಅಗ್ನಿಗೆ ಅರ್ಪಿಸಬೇಕು. ಅಂದರೆ ಸಮಿತ್ತುಗಳನ್ನು ಅರ್ಪಿಸುವಾಗ ತನ್ನ ದುರ್ವರ್ತನೆಗಳನ್ನು ಸುಡುತ್ತಿರುವುದಾಗಿ ಭಾವಿಸಬೇಕು. ಇಲ್ಲಿ ಬರುವ ಗೋಪರು ದೇಹದಲ್ಲಿಯ ಜ್ಞಾನವಾಹಕ ನಾಡಿಗಳು. ಗೋ ಅಂದರೆ ಜ್ಞಾನ ಅನ್ನುವ ಅರ್ಥವೇ ಪ್ರಮುಖ. ಕೃಷ್ಣನನ್ನು ಕುರಿತು ಗೋಪಾಲ ಅಂದಾಗ ಆತ ಕೇವಲ ಆಕಳುಗಳನ್ನು ಸಲಹಿದವ ಅನ್ನುವುದು ಮೇಲು ನೋಟದ ಅರ್ಥ ಮಾತ್ರ. ಅಂತರಂಗದ ಅರ್ಥವು ಜ್ಞಾನ ಅನ್ನುವುದೇ ಆಗಿದೆ. ಮಾನವ ಶರೀರದಲ್ಲಿಯ 72 ಸಾವಿರ ನಾಡಿಗಳಲ್ಲಿ 16 ಸಾವಿರ ನಾಡಿಗಳು ಜ್ಞಾನನಾಡಿಗಳು ; ಅಧ್ಯಾತ್ಮಕ್ಕೆ ಸಂಬಂಧಿಸಿ ಈ ಜ್ಞಾನನಾಡಿಗಳು ಬರುತ್ತವೆ. ಕೃಷ್ಣನಿಗೆ 16 ಸಾವಿರ ಹೆಂಡಂದಿರು ಅನ್ನುವುದು ಇದೇ ಅರ್ಥದಲ್ಲಿದೆ. ಕೃಷ್ಣ ಅಂದರೆ ಜ್ಞಾನ ಅನ್ನುವ ಅರ್ಥವೂ ಇದೆ. ಕೃಷ್ಣ ಅಂದರೆ ತನ್ನೆಡೆಗೆ ಕೃಷ್+ನ ನಯತಿ ಇತಿ. ತನ್ನೆಡೆ ಆಕರ್ಷಿಸಿಕೊಳ್ಳುವ ಮೋಕ್ಷ ಕಾರಕ ಜ್ಞಾನವೇ ಕೃಷ್ಣ. ಈ ಜ್ಞಾನಕ್ಕೆ ಸಂಬಂಧಿಸಿದ ನಾಡಿಗಳನ್ನು ಕೃಷ್ಣನ ಹೆಂಡಂದಿರನ್ನಾಗಿ ಮಹಾಭಾರತದಲ್ಲಿ ಹಾಗೂ ಭಾಗವತದಲ್ಲಿ ರೂಪಕಕ್ಕೆ ಅಳವಡಿಸಲಾಗಿದೆ. ಇಲ್ಲಿ ಗೋ ಅಂದಾಗ ಭೂಮಿ ಎಂದೂ ಆಗುವುದು. ಜ್ಞಾನ ಎಂದೂ ಆಗುವುದು.

ರುದ್ರನ ಬಾಣಗಳು ವೈರಿಗಳ ಮೇಲೆ ಎರಗಲಿ ಅನ್ನುವಲ್ಲಿಯೂ ಆಧ್ಯಾತ್ಮಿಕ ಅರ್ಥವಿದೆ ಹಾಗೂ ಆ ಆಧ್ಯಾತ್ಮಿಕ ಅರ್ಥವೇ ಮುಖ್ಯ. ವೈರಿಗಳು ಅಂದರೆ ಯಾವುದೇ ಮನುಷ್ಯರೂಪದ ಅಥವಾ ರೋಗಗಳ ರೂಪದ ವೈರಿಗಳೆಂದು ತಿಳಿದರೆ ಅದು ಸರಿಯಲ್ಲ. ಏಕೆಂದರೆ ಮನುಷ್ಯರೂಪದ ಒಬ್ಬ ವೈರಿ ಸತ್ತರೆ ಮತ್ತೆ ಇನ್ನೊಬ್ಬ ಹುಟ್ಟಿ ಬರುವನು ; ರೋಗದ ವಿಷಯದಲ್ಲಿಯೂ ಹಾಗೆಯೇ. ಮನುಷ್ಯನ ನಿಜವಾದ ವೈರಿಗಳು ಕಾಮ–ಕ್ರೋಧ–ಲೋಭ–ಮೋಹ–ಮದ–ಮಾತ್ಸರ್ಯಗಳು. ಇವುಗಳನ್ನು ನಾಶಪಡಿಸಿದರೆ ಯಾವುದೇ ವೈರಿಗೂ ಆಸ್ಪದವಿಲ್ಲ ಹಾಗೂ ಯಾವುದೇ ರೋಗಕ್ಕೂ ಆಸ್ಪದವಿಲ್ಲದಂತಾಗುವುದು. ಇಲ್ಲಿಯ ರುದ್ರನ ಪ್ರಾರ್ಥನೆಯಲ್ಲಿ ಭೀಕರಬಾಣಗಳು ನಮ್ಮಲ್ಲಿಯೇ ಇರುವ ಈ ಷಡ್ವೈರಿಗಳ ಮೇಲೆ ಎರಗಲಿ ಎಂಬುದೇ ನಿಜವಾದ ಅರ್ಥ. ಈ ಮುಂತಾದ ಅರ್ಥಗಳನ್ನು ಅರಿತು ರುದ್ರನ ಮಂತ್ರಪಠನ–ರುದ್ರಹೋಮಾದಿಗಳನ್ನು ನಡೆಸಿದರೆ ಮನುಷ್ಯ ಸನ್ಮಾರ್ಗಗಾಮಿಯಾಗಿ ಮೋಕ್ಷಕ್ಕೆ ಅರ್ಹನಾಗುವನು.

* * * * *

೪. ವಿಷ್ಣು ಚಮಕ ದರ್ಶಿಕಾ

[**ಪೀಠಿಕೆ :** ಕೃಷ್ಣಯಜುರ್ವೇದದಲ್ಲಿಯ ತೈತ್ತರೀಯ ಸಂಹಿತೆಯ ನಾಲ್ಕನೆಯ ಅಷ್ಟಕದ ಏಳನೆಯ ಪ್ರಪಾಠವಾಗಿ ಚಮಕಾಧ್ಯಾಯವು ಬರುತ್ತದೆ. ವಾಜಸನೇಯೀ ಸಂಹಿತೆಯ ಮಾಧ್ಯಂದಿನ ಶುಕ್ಲಯಜುರ್ವೇದದ 18ನೆಯ ಅಧ್ಯಾಯವಾಗಿಯೂ ಚಮಕವು ಬರುತ್ತದೆ. ವಿಶೇಷವಾದ ಪೂಜಾಸಂದರ್ಭಗಳಲ್ಲಿ ರುದ್ರಾಧ್ಯಾಯದೊಡನೆ ಚಮಕಾಧ್ಯಾಯದ ಪಾರಾಯಣಕ್ರಮವು ರೂಢಿಯಲ್ಲಿದೆ. ಚಮಕದಲ್ಲಿ ಬರುವವೆಲ್ಲವೂ "ಯಜ್ಞೇನ ಕಲ್ಪಂತಾಂ"–ಎಲ್ಲವೂ ಯಜ್ಞಕ್ಕಾಗಿ ಅನ್ನುವ ವಾಕ್ಯಕ್ಕೆ ಅನ್ವಾಚಕಗಳಾಗಿವೆ. ಚಮಕದ ಭಾವಾರ್ಥವನ್ನು ಅತ್ಯಾವಶ್ಯಕ ಆಧ್ಯಾತ್ಮಿಕ ವಿವರಣೆಯೊಂದಿಗೆ ಇಲ್ಲಿ ಕನ್ನಡಪದ್ಯರೂಪದಲ್ಲಿ ತರಲಾಗಿದೆ.]

ಅಗ್ನಿ – ವಿಷ್ಣುಗಳೆಂದರಾ ಚಮಕದಲ್ಲಿ
ಜೀವಾತ್ಮ– ಪರಮಾತ್ಮ ನಲಿದಾಟ ದಿಟವು ॥ಪ॥

ಎಲ್ಲ ಜೀವಾತ್ಮಗಳು ನೀನಾಗಿ ಮೆರೆಯುತಿರೆ
ಅಲ್ಲೆಲ್ಲವಿರುವ ನಾ ಪರಮಾತ್ಮ ದಿಟವು
ನೀನು –ನಾನೆನ್ನುವುದು ಮೇಲುನೋಟಕೆ ಸತ್ಯ
ಈ ದ್ವೈತ ಪರಮಾರ್ಥತಥ್ಯದಲಿ ಮಿಥ್ಯ
ಈ ದ್ವೈತ.. .. .. ತಥ್ಯದಲಿ ಮಿಥ್ಯ ॥1॥

ವಿಷ್ಣುವೆಂದರೆ ಸರ್ವವ್ಯಾಪನಾತತ್ತ್ವ
ಪರಮಾತ್ಮನಿಹನಾತ ಸರ್ವವ್ಯಾಪಕನು
ರುದ್ರನಾಗಿಹನಾತನೇ ರುದ್ರನಮಕದಲಿ
ರೂಪಯುತ ಪರಮಾತ್ಮನಗ್ನಿಯಾಗಿಹನು॥
ರೂಪ.. .. ..ಯಾಗಿಹನು ॥2॥

ತ್ರಿಜಗದ್ವಿಕಾಸದಲಿ ನಿತ್ಯ ತೊಡಗಿರುವ
ಪ್ರಕೃತಿಯ ಸ್ಥಿತಿತತ್ತ್ವ ಮಹಾವಿಷ್ಣುವಾಗಿಹುದು
ಸರ್ವದಾ ಸಂಸ್ಥಿತಿಯಲ್ಲಿ ಜಗವ ಮುನ್ನಡೆಸಲಿಕೆ
ಬ್ರಹ್ಮಾಂಡದಲ್ಲಿಯ ಚರಾಚರಸರ್ವಸ್ವವಾ ವಿಷ್ಣುವಿಗೆ ಬೇಕು॥
ಚರಾ.. .. .. ಬೇಕು ॥3॥

ಜೀವ ವಿಕಾಸಕ್ಕೆ ಅನ್ನವೇ ಮೂಲವಾಗಿಹುದು
ವಾಜವೆಂದರೆ ಅನ್ನ ಸರ್ವಾಹಾರಪಾನೀಯ
ಅಗ್ನಿತತ್ತ್ವವಿಲ್ಲದಲೆ ಜೀವಜಂತುಗಳ ವಿಕಾಸವೇ ಇಲ್ಲ
ಅದಕೆಂದೆ ಅಗ್ನಿ–ವಿಷ್ಣುಗಳಿಲ್ಲಿ ಚಮಕದಲ್ಲಿ॥
ಅಗ್ನಿವಿಷ್ಣುಗಳಿಲ್ಲಿ.. .. ..ದಲ್ಲಿ ॥4॥

ಅಗ್ನಿಕಣಗಳು ಜೀವ–ಜೀವಾತ್ಮರಾಗಿಹರು
ಈಶೋಪನಿಷತ್ತಿನಲಿ ಅಗ್ನಿಯಿವ ಸೂರ್ಯ
ಸರ್ವಮೋಕ್ಷವ ಬಯಸಿ ಋಷಿಯು ಬೇಡುವನಲ್ಲಿ
ಒಟ್ಟುಗೂಡಿಸಿಕೊಳಲು ಕಿರಣಗಳನೆಲ್ಲ॥
ಒಟ್ಟುಗೂಡಿಸಿ.. .. ..ನೆಲ್ಲ ॥5॥

ನಾನು ನೀನಲ್ಲದಿನ್ನೊಂದರಸ್ತಿತ್ವವಿಹುದು
ಅದಕಿಹುದು ಜಗದೆಲ್ಲ ವಸ್ತುಗಳ ರೂಪ
ಪಂಚಭೂತಗಳೆಂಬ ಹೆಸರುಗಳು ಅದಕೆ
ಅದನೆಲ್ಲ ವ್ಯಾಪಿಸಿದ ತತ್ತ್ವವದು ವಿಷ್ಣು॥
ಅದನೆಲ್ಲ.. .. .. ವಿಷ್ಣು ॥6॥

ಎಲ್ಲವೂ ಬೇಕವಗೆ ಲೋಕವಿಕಸನಕೆ
ಅದು ಯಜ್ಞ; ಗೀತೆಯಲ್ಲಿದು ಲೋಕಸಂಗ್ರಹವು
ಯಜ್ಞವೆಂದರೆ ವಿಷ್ಣು ಅದು ಮೊದಲು ಬಯಸುತಿದೆ
ಶುದ್ಧಾನ್ನ ಮತ್ತದರ ಸ್ವಾಮ್ಯ–ಮೂಲಗಳ॥
ಶುದ್ಧಾನ್ನ.. .. .. ಮೂಲಗಳ ॥7॥

ಜೀವಸಹಿತಂಗಾಂಗವೋಜಸ್ಸು ಬಲವು
ಮನಸ್ಸಪ್ತಧಾತ್ವಾಯುಸುಖರಕ್ಷ್ಯವಸ್ಥೆ
ವೇದ್ಯಶ್ರದ್ಧೆ ಸತ್ಯಧನಕಾಂತಿ ಕ್ರೀಡೆ
ಮೋದಮತಿ ಸಂಜಾತಸುಕೃತಗಳು ಯಜ್ಞಕ್ಕೆ॥
ಮೋದಮತಿ.. .. .. ಯಜ್ಞಕ್ಕೆ ॥8॥

ಭೂತಭವಿಷ್ಯದ್ವರ್ತಮಾನಕರ್ಮಫಲವೃದ್ಧಿ
ಸಾಮರ್ಥ್ಯ–ಮತಿ–ಸುಮತಿ–ಬಂಧು–ಭದ್ರ–ಶ್ರೇಯಸ್ಸು
ಯಶಸ್ಸೌಭಾಗ್ಯಯೋಗ್ಯಭೂಕೃಷಿವಸ್ತುಸರ್ವಾರ್ಥಸುಖವು
ಪೂಜಾಜ್ಞಾವರ್ತಿಸಖಸಂತಾನಋತಾಮೃತವೆಲ್ಲ ಯಜ್ಞಕ್ಕೆ॥
ಋತಾಮೃತವೆಲ್ಲ ಯಜ್ಞಕ್ಕೆ ॥9॥

ರೋಗರುಜಿನೌಷಧನಿರೋಗದೀರ್ಘಾಯು
ಶತ್ರುರಾಹಿತ್ಯ ಸುಖಗಮನ ಸುಖಶಯನ ಸುದಿನ
ಬಲಪೋಷಕರಸಜೇನುಘೃತಸುಗ್ರಾಸವೃಷ್ಟಿ
ಪುಷ್ಟಿರಾಷ್ಟ್ರ ರಾಜ್ಯಾಂಗಗಳೆಲ್ಲ ಯಜ್ಞಕ್ಕಾಗಿ ಬೇಕು॥
ರಾಜ್ಯಾಂಗಗಳೆಲ್ಲ ಯಜ್ಞಕ್ಕಾಗಿ ಬೇಕು ॥10॥

ಅನ್ನವೆಂದರಾಹಾರವದಕಾಗಿ ತರಕಾರಿ ಜಲಪಾತ್ರೆಧಾನ್ಯ
ಕಲ್ಲುಮಣ್ಣು ಮರಳುರತ್ನಗುಪ್ತಾರ್ಜಿತವಿತ್ತಧಾತುಗಳು
ಗ್ರಾಮ್ಯಾಗ್ರಾಮ್ಯ ಪಶುಪಕ್ಷಿಮನೆ ಮತ್ತದರ ವಸ್ತುಗಳು
ಗಳಿಕೆ ಶಕ್ತಿ ಸಂಕಲ್ಪಸ್ವರ್ಗಾದಿಗಳೆಲ್ಲ ಯಜ್ಞಕ್ಕಾಗಿ ಮುಡಿಪು॥
ಸ್ವರ್ಗಾದಿಗಳೆಲ್ಲ ಯಜ್ಞಕ್ಕಾಗಿ ಮುಡಿಪು ॥11॥

ಉಷಃಕಾಲಾದಿಕಾಲಗಳು ಅಗ್ನ್ಯಾದಿ ದೇವತೆಗಳು ಪೂರ್ವಾದಿ ದಿಕ್ಕುಗಳು
ಮನುಷ್ಯಾದಿ ಜೀವಿಗಳು ಪೃಥಿವ್ಯಾದಿಲೋಕಗ್ರಹಗಳವು
ಸರ್ವನರನಾಡಿಗಳು ರಶ್ಮಿಗಳು ಜಾಗೃತ್ ಸ್ವಪ್ನಸುಷುಪ್ತಿಗಳು
ವಿಶ್ವತೈಜಸಪ್ರಾಜ್ಞತತ್ತ್ವಗಳೆಲ್ಲ ಪರಮಾತ್ಮಯಜ್ಞಕಾಗಿ॥
ತತ್ತ್ವಗಳೆಲ್ಲ ಪರಮಾತ್ಮಯಜ್ಞಕಾಗಿ ॥12॥

ತಪೋವೇದ ಶಾಸ್ತ್ರ ಶಿಲ್ಪಾದಿ ವಿದ್ಯೆಗಳು ಎಲ್ಲ
ಚತುರಾಶ್ರಮಾಜ್ಞಾಯಜ್ಞಗಳಿಗಾಪ್ತವಾದ
ಶರೀರಾದಿಗಳೆಂಬ ಸಮಿತ್ತೇತ್ಯಾದಿ ವಸ್ತುಗಳು
ಭೂಭೋಗಸ್ವರ್ಗನರಕಾದಿಗಳೆಲ್ಲ ಯಜ್ಞಕಾಗಿ॥
ಭೂಭೋಗ.. .. .. ಯಜ್ಞಕಾಗಿ ॥13॥

ಒಂದರಿಂದ ನಲವತ್ತೆಂಟೆಂಬ ಸಂಖ್ಯೆಗಳು ಎಲ್ಲ
ಗುಪ್ತಾಗುಪ್ತರೋಗ–ಮಳೆ ಬಿರುಗಾಳಿ ಬೀಸು
ಶುಭಾಶುಭಚಿತ್ತಾಹಂಕಾರ ಬ್ರಹ್ಮವಿದ್ಯೆಗಳು ಎಲ್ಲ
ಮೀಸಲಾಗಿಹವು ಜಗದ್ವಿಕಸನ ಯಜ್ಞಕಾಗಿ॥
ಮೀಸಲಾಗಿಹವು.. .. ..ಯಜ್ಞಕಾಗಿ ॥14॥

ಅಗ್ನಿಸ್ಸರ್ವದೇವತಾತ್ಮನೆಂಬ ತಿಳುವಳಿಕೆಯಲಿ ಬ್ರಹ್ಮ
ವಿಷ್ಣುಸ್ಸರ್ವದೇವಸ್ವರೂಪನೆಂಬ ಸಂಕಥನ
ಸರ್ವಾತ್ಮ ಲಯಕರ್ತ ರುದ್ರನೆನ್ನುವ ಮಾತು
ಎಲ್ಲವೂ ಪರಮಾತ್ಮಮಯತತ್ತ್ವಕೆಳಸುವವು॥
ಎಲ್ಲವೂ ತತ್ತ್ವಕೆಳಸುವವು ॥15॥

ಮಂತ್ರವಿದ್ಯೆಯೆ ಇಡೆಯು ಗೋರೂಪದಲ್ಲಿ
ಜಗದಲ್ಲಿ ಮೆರೆಯುತಿದೆ ಯಜ್ಞನಿಯು ಅದುವೇ
ವಿಶ್ವೇದೇವತೆಗಳೆಲ್ಲರ ರೂಪದಲ್ಲಿರುವ
ಪರಮಾತ್ಮ ಕರುಣಿಸಲಿ ಸರ್ವ ಶಾಂತತೆಯ॥
ಕರುಣಿಸಲಿ ಸರ್ವಶಾಂತತೆಯ ॥16॥

ಭೂಮಾತೆ ಹಿಂಸೆಯನು ನೀಡದಿರಲೆಮಗೆ
ನಡೆಯುತಿದೆ ಸತ್ಕರ್ಮರೂಪಿಸನ್ಮಂತ್ರಯಜ್ಞ
ಅಮೃತವನೆ ತುಂಬುವೆವು ನಡೆನುಡಿಗಳಲ್ಲಿ
ದೇವಪಿತೃಗುರುಪಾದಂಗಳು ತರಲಿ ಸರ್ವಶುಭವೆಮಗೆ
ದೇವ.. .. ..ವೆಮಗೆ ॥17॥

ಅಗ್ನಿ–ವಿಷ್ಣುಗಳೆಂದರಾ ಚಮಕದಲ್ಲಿ
ಜೀವಾತ್ಮ–ಪರಮಾತ್ಮ ನಲಿದಾಟ ದಿಟವು ॥ಪ॥

ಅಗ್ನಾವಿಷ್ಣುದರ್ಶಿಕಾ

ಅಗ್ನಿ-ವಿಷ್ಣು ಗಳೀರ್ವರ ಇರುವಿಕೆಯೇ ಈ ಪ್ರಪಂಚವೆನ್ನುವುದನ್ನು ಉದ್ಘೋಷಿಸುವ ಮಂತ್ರವಿದು ರುದ್ರಚಮಕದ ಮುಂದಿನ ಭಾಗವೆನಿಸಿದೆ. ಇದನ್ನು ವಿಷ್ಣು ಚಮಕವೆನ್ನುವುದು ಹೆಚ್ಚಿನ ಮಟ್ಟಿಗೆ ಸೂಕ್ತವಾಗುವುದು.

ವಿಷ್ವಾನ್ವಯತಿ ಸರ್ವಾನ್ ಇತಿ ವಿಷ್ಣುಃ' – ಎಲ್ಲವುಗಳಲ್ಲಿಯೂ, ಎಲ್ಲರಲ್ಲಿಯೂ ಪ್ರವೇಶಿಸಿ ಆ ಎಲ್ಲವನ್ನೂ, ಎಲ್ಲರನ್ನೂ ನಡೆಸಿಕೊಂಡು ಹೋಗುವವನು ವಿಷ್ಣು ಅಂದಾಗ ಸರ್ವವ್ಯಾಪಕ ಪರಮಾತ್ಮನೇ ವಿಷ್ಣುವಾಗುವನು. ಈತನ ಮತ್ತೊಂದು ಸ್ವರೂಪವೇ ಅಗ್ನಿ ; ಅಂದರೆ ರೂಪಾತೀತ ವಿಷ್ಣುವು ರೂಪತಳೆದಾಗ ಅಗ್ನಿಯೆನಿಸುವನು. ಈ ಅರ್ಥದಲ್ಲಿ ವಿಷ್ಣುವು ಪರಮಾತ್ಮ ಹಾಗೂ ಅಗ್ನಿಯು ಜೀವಾತ್ಮ. ಅರ್ಥಾತ್, ಜೀವದೊಂದಿಗೆ ಇರುವ ಪ್ರತ್ಯಗಾತ್ಮ ; ಈಶಾವಾಸ್ಯ ಉಪನಿಷತ್ತು ಹೇಳುವ ಪರಮಾತ್ಮನೆಂಬ ಮಹಾ ಸೂರ್ಯನಿಂದ, ಅಥವಾ ಪರಂಜ್ಯೋತಿಯಿಂದ ಹೊರಗೆ ಬಂದ ಕಿರಣರೂಪದ ಅಥವಾ ಕುಡಿಯೊಂದರ ರೂಪದಲ್ಲಿಯ ಆತ್ಮ. ಇದು ಜೀವದೊಂದಿಗೆ ಸೇರಿದಾಗ ಜೀವಾತ್ಮ.

ಆತ್ಮ – ಪರಮಾತ್ಮರೇ ಇಲ್ಲಿಯ ಅಗ್ನಿ-ವಿಷ್ಣುಗಳು ; ರುದ್ರನಮಕದಲ್ಲಿ ಬರುವ ಆ ಮಹಾರುದ್ರನೇ ಈ ವಿಷ್ಣುಚಮಕದಲ್ಲಿ ಬರುವ ವಿಷ್ಣು. ಪರಮಾತ್ಮನ ಭಾಗವೇ ಆದ, ಅಂಶವೇ ಆದ ಆತ್ಮವು. ಸಮಷ್ಟಿ ವಾಯುವಿನ ಪ್ರತ್ಯಗಾತ್ಮವೆನಿಸುವುದು. ಆ ಪ್ರತ್ಯಾಗಾತ್ಮವು ಜೀವ ಸಹಿತವಾದಾಗ ಜೀವಾತ್ಮವೆನಿಸುವುದು ; ಆಗ ಅದನ್ನು ವೇದಾದಿಗಳಲ್ಲಿ ಪಶು ಎಂದು ಭಾವಿಸಲಾಗುವುದು. ಜೀವಾತ್ಮವು ಪಶುವಾದರೆ ಪರಮಾತ್ಮನು ಪಶುಪತಿ. ಆ ಪಶುಪತಿಯೇ ಇಲ್ಲಿಯ ವಿಷ್ಣು ಹಾಗೂ ಪಶುವೇ ಇಲ್ಲಿಯ ಅಗ್ನಿ. ಈ ಚಮಕದ ಪ್ರಾರಂಭದಲ್ಲಿ ಬರುವ ವಾಜ ಪ್ರಸವ, ಪ್ರಯತಿ, ಧೀತಿ, ಕ್ರತುಗಳೆಲ್ಲ ಈ ಪರಮಾತ್ಮಾಗ್ನಿಗಳ ಜನಕ-ಜನ್ಯಭಾವಕ್ಕೆ ಪೋಷಕವಾಗಿಯೇ ಬರುತ್ತವೆ. ವಾಜ, ಅಂದರೆ ಶೌರ್ಯ ಮತ್ತು ಅನ್ನ ; ಶೌರ್ಯದಿಂದ ಅನ್ನ, ಅನ್ನದಿಂದ ವೀರ್ಯ – ಪ್ರಸವಾದಿಗಳು ಹಾಗೂ ಪ್ರಯತಿ, ಅರ್ಥಾತ್, ಜೀವಾತ್ಮದ ಮುಂದುವರಿಕೆ, ಮುಂದಿನ ಎಲ್ಲ ವಸ್ತುಗಳೂ ದೇಹಧೃತ ಜೀವಾತ್ಮದ ಬೆಳವಣಿಗೆ ಮತ್ತು ಅಸ್ತಿತ್ವಕ್ಕಾಗಿ ಬೇಕಾಗುವ ಸಾಧನಗಳು. ಕೃತುವೆಂದರೆ ಯಜ್ಞ, ಜೀವಾತ್ಮದ ಬೆಳವಣಿಗೆಗೆ ಪೋಷಕವಾದ ಸಮಸ್ತ ಕರ್ಮಗಳೂ, ಕರ್ತವ್ಯಗಳೂ, ಅವನ್ನು ನಡೆಸಿದಾಗ ಅದು ಕೃತುವೇ ಸರಿ, ಯಜ್ಞವೇ ಸರಿ. ಪರಮಾತ್ಮನಿಗೆ ಸಲ್ಲಿಸುವ ಯಜ್ಞಕಾರ್ಯವಿದು ಎಂಬ ಭಾವದಲ್ಲಿಯೇ ಸತ್ಪಥದಲ್ಲಿ ನಡೆಯುವ ಮನುಷ್ಯನು ಸದಾ ಕಾಲ ಕರ್ತವ್ಯದಲ್ಲಿ ತೊಡಗಿರಬೇಕು ಅನ್ನುವ ಗೀತಾರ್ಥವೂ ಇಲ್ಲಿದೆ. ಮನುಷ್ಯನು

ನಿರಂತರವಾಗಿ ಕರ್ತವ್ಯದಲ್ಲಿ ತೊಡಗಿರಬೇಕೆಂದೂ ಹಾಗೂ ಆ ಕರ್ತವ್ಯವು ಲೋಕಸಂಗ್ರಹಕ್ಕಾಗಿ ಅರ್ಥಾತ್, ಲೋಕಹಿತಕ್ಕಾಗಿ ಮಾತ್ರ ಉದ್ದೇಶಿತವಾಗಿರಬೇಕೆಂದೂ ಭಗವದ್ಗೀತೆಯು ಪದೇ ಪದೇ ಒಡನುಡಿಯುತ್ತದೆ. ಚಮಕದಲ್ಲಿ ಬರುವ 'ಯಜ್ಞೇನ ಕಲ್ಪತಾಂ' ಅನ್ನುವ ಉಕ್ತಿಯು ಗೀತೆಯಲ್ಲಿಯ ಲೋಕಸಂಗ್ರಹವೆಂಬ ಭಾವಕ್ಕೆ ಮೂಲಸ್ರೋತವಾಗಿದೆ. ಎಲ್ಲ ಕರ್ಮಗಳೂ, ಕರ್ತವ್ಯಗಳೂ ಯಜ್ಞಾರ್ಥವೆನಿಸಿದಾಗ ಜಗತ್ತೆಲ್ಲ ಅಮೃತಮಯವಾಗುವುದು ; ಆಗ 'ಮಧುಮನಿಷ್ಯೇ ಮಧುಜನಿಷ್ಯೇ' ಮುಂತಾದ ಮಾತುಗಳು ಸಾರ್ಥಕವಾಗುವವು.

ಇಲ್ಲಿ ಬರುವ ಒಂದರಿಂದ ನಲವತ್ತೆಂಟರ ವರೆಗಿನ ಸಂಖ್ಯೆಗಳು ಪರಮಾತ್ಮನಿಂದ ಮೊದಲುಗೊಂಡು ಸತ್ವರಜಸ್ತಮಗಳೆಂಬ ಮೂರು ಗುಣಗಳು ಹಾಗೂ ಪಂಚಭೂತಾದಿಗಳು, ಪಂಚಜ್ಞಾನೇಂದ್ರಿಯಗಳು ಮತ್ತು ಮನಸ್ಸು ಎಂಬ ಹನ್ನೊಂದು ತತ್ತ್ವಗಳು ಎಂದು ಮುಂತಾಗಿ ಇಡೀ ಜಗತ್ತನ್ನೇ ನಲವತ್ತೆಂಟು ತತ್ತ್ವಗಳಲ್ಲಿ ಸಮಾವೇಶಿತ ಗೊಳಿಸುತ್ತವೆ.

ಎಲ್ಲವೂ ಯಜ್ಞಕ್ಕಾಗಿ ಅಂದಾಗ ಸ್ವಾರ್ಥಭಾವವು ಪೂರ್ತಿಯಾಗಿ ನಷ್ಟವಾಗುವುದು ಹಾಗೂ ಜೀವಾತ್ಮನು ಕರ್ಮಬಂಧನದಿಂದ ಬಿಡುಗಡೆಗೊಂಡು ಪಾಪ-ಪುಣ್ಯಗಳ ಗೊಡವೆಯಿಲ್ಲದೆ ಕ್ರಮೇಣ ಜೀವಭಾವದಿಂದಲೂ ಮುಕ್ತಗೊಂಡು, ಕೇವಲ ಆತ್ಮನಾಗಿ ತಾನೂ ಪರಮಾತ್ಮನಲ್ಲಿ ಸಾಯುಜ್ಯವನ್ನು ಪಡೆಯುವನು ; ಆಗ ಅಗ್ನಿಭಾವವು ವಿಷ್ಣುವಿನಲ್ಲಿ ಐಕ್ಯಗೊಳ್ಳುವುದು.

* * * * *

೫. ಪುರುಷಸೂಕ್ತ ದರ್ಶಿಕಾ

[**ಪೀಠಿಕೆ :** ಋಗ್ವೇದದ ಹತ್ತನೆಯ ಮಂಡಲದ ತೊಂಬತ್ತನೆಯ ಸೂಕ್ತವೇ ಪುರುಷಸೂಕ್ತ, ಹದಿನಾರು ಮಂತ್ರಗಳಲ್ಲಿ ಅರ್ಥಾತ್,ಶ್ಲೋಕಗಳಲ್ಲಿ ಈ ಪುರುಷಸೂಕ್ತವಿದೆ. ದೇವಪೂಜಾಸಂದರ್ಭಗಳಲ್ಲಿ ಈ ಸೂಕ್ತವನ್ನು ದೇವರಿಗೆ ಸಲ್ಲಿಸುವ ಜಲಾಭಿಷೇಕದೊಂದಿಗೆ ಪಠಿಸುವ ಪದ್ಧತಿಯು ಸಾಮಾನ್ಯವಾಗಿ ಎಲ್ಲಕಡೆಗೂ ಕಂಡುಬರುವುದು. ಇಲ್ಲಿಯ ಋಷಿಯು ನಾರಾಯಣನೆನಿಸಿದರೆ ದೇವತೆಯು ಪುರುಷನೆನಿಸಿದ್ದಾನೆ. ಈ ಸೂಕ್ತದ ಭಾವಾರ್ಥಸಹಿತವಾದ ಆಧ್ಯಾತ್ಮಿಕ ಅರ್ಥದ ವಿವೇಚನೆಯು ಈ ಪದ್ಯದಲ್ಲಿದೆ.]

ಪುರುಷನೆಂದರೆ ತ್ರಿಮೂರ್ತಿಗಳ ಮೂಲಪುರುಷ
ರೂಪಲಿಂಗಾತೀತ ಪರಬ್ರಹ್ಮದ ಪುಲ್ಲಿಂಗ ರೂಪ ॥ಪ॥

ಪುರಿಶೇತೆಯೆಂದಾಗ ದೇಹಿಯವ ಪುರುಷ
ಪೂರ್ಣತೆಯ ಸಂಕೇತದ ಪುರವೆಂದರಿಲ್ಲಿ ದೇಹ
ಪೂರ್ಣನವ ಪೂರ್ಣದಲಿ ಪರಿಪೂರ್ಣನಾಗಿ
ಜೀವಾತ್ಮನೆನಿಸಿದ ದೇಹಸ್ಥಿತ ಪರಮಾತ್ಮ ಪುರುಷ ॥1॥

ಪುರ್ಯುಷತಿಯೆಂದಾಗ ದೇಹವೇ ತಾನೆಂದು ಭಾವಿಸುತ್ತಿರುವ
ದೇಹಿಯಲಿ ಬೆಳಕ ಕಿಡಿಯನು ಬೆಳಗಿಸುವವನು ಪುರುಷ
ಸಂಚಿತಾಗಾಮಿಕರ್ಮಫಲದಿಂ ನಿರ್ಲಿಪ್ತಗೊಳಿಸಿ
ಜೀವಾತ್ಮದಲಿ ಸೋಽಹಂಭಾವವನು ಮೆರೆಸುವವ ಪುರುಷ ॥2॥

ಪೂರ್ವೌಷದೇತಿ ಪ್ರಾಕ್ತನದೆಲ್ಲವನು ದಹಿಸುವವ ಪುರುಷ
ಪ್ರಾಕ್ತನವೆಂದರದುವೇ ಪ್ರಾರಬ್ಧಫಲಸಂಗ್ರಹ
ತನ್ನನರಿತವನ ಕರ್ಮಫಲಗಳಿನ್ನಿಲ್ಲದಂತೆ ದಹಿಸಿ
ಶೂನ್ಯತೆಯ ಅರಿವಿನಲಿ ಪೂರ್ಣತೆಯ ನೀಡುವವ ಪುರುಷ ॥3॥

ಬ್ರಹ್ಮ ವಿಷ್ಣು ರುದ್ರನಾಮಗಳ ಮೂರುಗ್ರಂಥಿಗಳು
ಪುರವೆಂದು ಅವುಗಳನು ಕರೆಯಲಾಗುವುದು
ಪುರಿಶೇತೆಯೆಂದಾಗ ಪುರುಷವಾಸವು ಅಲ್ಲಿ
ಪುರೌಷದೆಂದಾಗ ಸಾಧಕನ ತ್ರಿಪುರದಾಹಕನು ಪುರುಷ ॥4॥

ಪುರುಷನನು ದರ್ಶಿಸಿದ ಋಷಿಯಿಲ್ಲಿ ತಾನು
ಪುರುಷಸೂಕ್ತದಲಿ ನಾರಾಯಣನೆನಿಸಿ ನಿಂತ
ತುರೀಯಾವಸ್ಥೆಗೆಳೆಸಿದ ಸಮಾಧಿಸಂಸ್ಥಿತಿಯಲ್ಲಿ
ಪರಮಾತ್ಮನನುಭೂತಿ ಋಷಿಯಲ್ಲಿ ಪೂರ್ಣ ॥5॥

ನಾರವೆಂದರೆ ನೀರು ಸ್ಥಿತಿತತ್ತ್ವದಾವಾಸ
ಜಲತತ್ತ್ವದಿಂ ಸರ್ವಜೀವಾತ್ಮ ಸ್ಥಿತಿಯು
ಸ್ಥಿತಿತತ್ತ್ವವಿರೆ ಪುರುಷನಸ್ತಿತ್ವದರ್ಶನವು
ಋಷಿಗಿಲ್ಲಿ ನಾರಾಯಣನೆಂಬಭಿಧಾನವದಕೆ ॥6॥

ಜೀವರಾಶಿಗಳಮಿತವದರಿಂದ ಪುರುಷನಿಗೆ
ಸಾವಿರದ ಸಂಖ್ಯೆಯಲಿ ತಲೆ–ಕಣ್ಣು–ಕಾಲು
ಸಾವಿರದ ಸಂಖ್ಯೆಯದು ಸೂಚಿಸುತ್ತಿಹುದು
ಗಣನೆಯನು ಮೀರಿದ ಪುರುಷನಾಕೃತಿಯ ॥7॥

ಶಿರವು ಬಹುಮುಖ್ಯವದು ಮಿದುಳಿನಾವಾಸ
ಪ್ರಾರಬ್ಧ–ಸಂಚಿತಾಗಾಮಿಕರ್ಮಫಲ ಮಿದುಳು
ಕರ್ಮಫಲಕನುಸಾರ ಜೀವನದ ರೂಪುರೇಷೆ
ವ್ಯಕ್ತಿತ್ವಕಾಧಾರ ನಿಜದಿ ಮಸ್ತಿಷ್ಕ ॥8॥
ತಲೆಯ ನಂತರದ ಪ್ರಮುಖಾಂಗವದು ನೇತ್ರ
ನೇತ್ರದಿಂದಲೆ ವಸ್ತುರೂಪಗಳ ತಿಳಿವು
ಒಳಗಣ್ಣು ಮತ್ತೊಂದು ಸುಜ್ಞಾನನೇತ್ರ
ಪರವಸ್ತುವಿಜ್ಞಾನವದರಿಂದ ದಿಟವು ॥9॥

ಮಹತ್ತನ್ನು ಸೂಸುವವು ದೇವಗುರುಪಾದಗಳು
ಪಾದಗಳಿಗದಕಾಗಿ ನಮನ ಸಲ್ಲುವುದು
ಭೂಮಿಯೆಂದರೆ ಇಲ್ಲಿ ಸಕಲ ಬ್ರಹ್ಮಾಂಡ
ದಶಾಂಗುಲವೆನ್ನುವುದು ಲೋಕಾತೀತ ಕೈವಲ್ಯ ॥10॥

ಹಿಂದೆಷ್ಟು ಯುಗಗಳಲಿ ಜಗವಿದ್ದು ಪ್ರಳಯವಾಗಿತ್ತೋ!
ಮುಂದೆಷ್ಟು ಸಲ ಪ್ರಳಯವಾಗಿ ಜಗದುದಯವಾಗುವುದೋ!
ಆ ಎಲ್ಲವಾಗಿಹನು ಪರಮಪದಕಧಿಪ ಪುರುಷ
ಅನ್ನದಲಿ ತನ್ನಸ್ತಿತ್ವವನು ತೋರುವವನವನು ॥11॥

ಅನ್ನದಿಂದಲೆ ಲೋಕದಸ್ತಿತ್ವವಿದು ಸತ್ಯ
ಪಾನ ಮತ್ತಶನವಸ್ತು ಸೂಚಕವು ಅನ್ನ
ಅನ್ನದಿಂ ಪುರುಷನವ ವ್ಯಕ್ತರೂಪದಲಿ
ಬ್ರಹ್ಮಾಂಡಭಾವದಲಿ ಬೆಳೆಯುತ್ತಲಿರುವ ॥12॥

ಹಿಂದಿನದು ಇಂದಿನದು ಮುಂದಿನದು ಎಂಬ
ಎಲ್ಲ ಕಾಲದ್ದೆಲ್ಲವಾ ಪುರುಷಮಹಿಮೆಯನು
ಸುವ್ಯಕ್ತಗೊಳಿಸುತಿವೆ ಬಹುವಿಧಗಳಲ್ಲಿ
ಊಹೆಗಳಿಗಾತೀತ ಮಹಿಮೆ ಪುರುಷನದು ॥13॥

ಸೃಷ್ಟಿಸ್ಥಿತಿಲಯ ತತ್ತ್ವಗಳಿಗೊಳಪಡುತ್ತಿರುವ
ಬ್ರಹ್ಮಾಂಡವಿದು ಕಾಲುಭಾಗವಾತನದು
ಇಂದ್ರಿಯಗಮ್ಯವೆಲ್ಲವೂ ಪುರುಷನೇಕಾಂಶ
ಮುಕ್ಕಾಲು ಮತ್ತಿಹುದು ಪುರುಷನಮೃತದಿವ್ಯಲೋಕ ॥14॥

ವ್ಯಕ್ತಬ್ರಹ್ಮಾಂಡದಾಚೆ ಮುಕ್ಕಾಲು ಭಾಗವಾಗಿರುವ
ಪುರುಷ ತಾ ತನ್ನೊಂದು ಕಾಲುಭಾಗದಲಿ
ಮತ್ತೆ ಮತ್ತಸ್ತಿತ್ವಕೆ ಬರುತ್ತ ತಾನಿಹನು
ಚೇತನಾಚೇತನಗಳಮಿತ ರೂಪದಲಿ ॥15॥

ಪ್ರಳಯವೆಂದರೆ ತನ್ನಲ್ಲಿ ತನ್ನದೇ ಸೃಷ್ಟಿಯನು
ತಾನೆಳೆದುಕೊಳ್ಳುವಾಟವೀ ಪುರುಷ ತಾ ರುದ್ರನಾಗಿ
ಸಾಧಕನ ಪ್ರಳಯದಲಿ ಶೂನ್ಯವೇ ತಾನಾಗಿ
ಬಹುಶಾಂತನಾ ಪುರುಷನವನದ್ವಿತೀಯ ॥16॥

ದ್ವಿತೀಯತ್ವದಪೇಕ್ಷೆಯಾ ಪುರುಷನಲಿ ಮೂಡಿ
ಬಂದಾಗ ಕಂಡದ್ದು ವಿರಾಡದುವೆ ಈ ಪ್ರಕೃತಿ
ಪ್ರಕೃತ್ಯಣುಸಂಘಾತ ಬೆಸೆದು ಬ್ರಹ್ಮಾಂಡ
ನಿಂತನಾ ಪುರುಷನಲ್ಲೆಲ್ಲ ತಾನೇ ತಾನಾಗಿ ॥17॥

ತಾನೆ ಪ್ರತ್ಯಣುವಾಗಿ ಮತ್ತಣುಪರ್ವಗಳು ತಾನಾಗಿ
ಚೇತನಾಚೇತನವಸ್ತುಗಳ ರೂಪ ತಾ ತಳೆದು
ಇವೆಲ್ಲವನು ಮೀರಿ ಗಣನಾತೀತ ಜೀವಾತ್ಮರೆನಿಸಿ
ಪುರುಷ ತಾ ತೊಡಗಿದನು ಪಾಂಚಭೌತಿಕಪುರದ ಸೃಷ್ಟಿಯಲಿ ॥18॥

ಪುರದ ಮುನ್ನಡೆಗಾಗಿ ಜ್ಞಾನ–ಕರ್ಮೇಂದ್ರಿಯಗಳನು
ಅವುಗಳಧಿಪ ಮನೋ ಮುಂತಾದವುಗಳನು ಒಡನೆ
ಸೃಜಿಸಿ ತಾನವುಗಳಲಿ ನೆಲಸಿದನು ಪುರುಷ
ನಿಂತವವು ದೇವ–ದಾನವರೆನಿಸಿ ವಿಶ್ವದಲಿ ॥19॥

ದೇವತೆಗಳಾ ಪುರುಷನನು ಹವಿಸ್ಸೆಂದಾಗಿ ಮಾಡಿ
ನಡೆಸಿದರು ಯಜ್ಞವನು ಸತತವೆಡೆಬಿಡದೆ
ಯಜ್ಞದಲಿ ಸರ್ವಾಂಗಪುರುಷನೇ ಪುರುಷ
ಯಜ್ಞ ನಡೆಯುತ್ತಿದೆ ವಿಶ್ವವಿಕಾಸವದುವೇ ॥20॥
ಸಂತತಿಯ ಸಂತೋಷವೆಂಬ ವಸಂತವದು ತುಪ್ಪ
ಗ್ರೀಷ್ಮಾದಿ ಸಮಿತ್ತುಗಳಿಂ ಸುವ್ಯಕ್ತಬೆಳವಣಿಗೆ
ಪುರೋಡಾಶಾದಿ ಹವಿರ್ಭಾಗಗಳು ಈ ಯಜ್ಞದಲ್ಲಿ
ಶರದೃತುಲಭ್ಯ ಬೆಳೆಗಳಿವು ನಿತ್ಯಸಮೃದ್ಧಿ ॥21॥

ಪರಮಪುರುಷನನು ಜೀವಾತ್ಮಭಾವಕ್ಕೆ ತಂದು
ಪಶುವಾಗಿಸಿ ಮೇಲೆ ರಾಗಸಿಂಚನವು ಯಜ್ಞಕಾಗಿ
ದೇವತೆ–ಸಾಧ್ಯ–ಋಷಿಗಳೆಂಬಭಿಧಾನದವರು
ಜ್ಞಾನ–ಪ್ರಾಣ–ವಿಜ್ಞಾನತಂತುಗಳು ಕ್ರಮದಿ ॥22॥

ಸೃಜನ ಮೂಲದ ವೀರ್ಯ ಸರ್ವಹುತ ಪುರುಷ
ಆಹಾರಫಲಶುಕ್ಲದಧಿಮಿಶ್ರಿತಾಜ್ಯ
ಪ್ರಕೃತಿ ಸತ್ವವು ಶೋಣಿತವು ತಾನಿರಲು
ಜನಪದ–ಕಾಡುಪ್ರಾಣಿಸಂತತಿಯ ಉದಯ ॥23॥

ಪರಮಪುರುಷನಿಗನ್ನ ಸರ್ವವಸ್ತುಗಳೂ
ಆ ಎಲ್ಲವೂ ಮತ್ತೆ ಸರ್ವಹುತ ಪುರುಷ
ಜ್ಞಾನವರ್ಧನೆಗಾಗಿ ತಪಃ ಪುರುಷಯಜ್ಞ
ತಪೋಯಜ್ಞದಿಂ ಛಂದಸ್ಸಹಿತ ವೇದಗಳ ಉದಯ ॥24॥

ಛಂದಸ್ಸು ಮೂಡಿತದು ವೇದವಾಹನವಾಗಿ
ದಿವ್ಯತೆಯನುಸುರುವವು ಮಂತ್ರ–ಪದ್ಯಗಳು
ಪರಮಾತ್ಮಯಜ್ಞದಿಂದಶ್ವಾದಿ ಪ್ರಾಣಿಗಳು
ಅವುಗಳಿಂ ಯಜ್ಞಾದಿಗಳು ಮತ್ತಿತರ ಸೌಲಭ್ಯ ॥25॥

ಪುರುಷ ತಾ ಪಶುವಾಗಿ ಯಜ್ಞ ನಡೆದಿರಲು
ಅಂದರವ ಜೀವಾತ್ಮವಾಗಿ ತಾ ಜನಿಸುತ್ತಲಿರಲು
ಮೂಡಿಬಂದಿತು ಪುರುಷನಂಗಾಂಗ ಕಲ್ಪನೆಯು
ಭಿನ್ನಾಂಗ ಹೋಮದಿಂ ಮನುಜರ ನಾಲ್ಕು ವರ್ಗಗಳು ॥26॥
ವಿದ್ಯೆಯನು ಮುನ್ನಡೆಸುವವ ಮುಖದಿಂದ ಬಂದ
ರಕ್ಷಕ ಕ್ಷತ್ರಿಯನು ಬಂದ ಭುಜದಿಂದ
ತೊಡೆಯಿಂದ ವ್ಯಾಪಾರಿಕೃಷಿಕರೊಡಮೂಡಿದರು
ಸೇವನಾವೃತ್ತಿಯವ ಪಾದದಿಂ ಬಂದ ॥27॥

ಮುನ್ನಡೆಯ ವಿದ್ಯೆಗತಿಮುಖ್ಯ ತಲೆ ಮತ್ತು ವಾಕ್ಕು
ಭುಜಬಲವು ಮತ್ತು ತಲೆ ಮುಖ್ಯ ರಾಜ್ಯವಾಳಲಿಕೆ
ನಿಂತು ತಿರುಗುವ ವೈಶ್ಯಗತಿ ಮುಖ್ಯ ತಲೆ ಮತ್ತು ತೊಡೆಯು
ನಡೆವ ಪಾದವೇ ಮುಖ್ಯ ವಿದ್ಯೆಯಿಲ್ಲದ ಸೇವನಾಕಾರ್ಯದವಗೆ ॥28॥

ಜಾತಿಸೂಚಕವೆಂದು ವೃತ್ತಿಯನು ಗಣಿಸಲಾಗದು ಇಲ್ಲಿ
ಬುದ್ಧಿಬಲಕನುಸಾರ ವರ್ಣ–ವೃತ್ತಿಗಳು ಆಗ
ತಲೆತಲಾಂತರದ ಜಾತಿಪದ್ಧತಿಯು ಇರಲಿಲ್ಲವಾಗ
ಇರುವುದೀಗಲೂ ಬುದ್ಧಿಬಲವದು ವೃತ್ತಿಗಾಧಾರ ॥29॥

ಯಜ್ಞಹುತಪುರುಷನ ಮನದಿಂದ ಚಂದ್ರ
ಕಣ್ಣಿನಿಂ ಸೂರ್ಯಚಂದ್ರಾಗ್ನಿಯರು ಮುಖದಿಂದ
ಪ್ರಾಣದಿಂದುದ್ಭೂತ ವಾಯುತತ್ತ್ವವು ಎಂದು
ಋಷಿವರನು ಕಂಡ ತಾ ಧ್ಯಾನಯೋಗದಲಿ ॥30॥

ಮನಃಕಾರಕಚಂದ್ರ ಮನದಿಂದ ಬಂದುದಕೆ
ಆತ್ಮದರ್ಶಕ ಸೂರ್ಯ ಚಕ್ಷುಸಂಬಂಧಿ
ವಾಯುತತ್ತ್ವವೆ ಮೂಲ ಪ್ರಾಣಪಂಚಕಕೆ
ಅಗ್ನಿಯವ ದೇವಮುಖ ಮುಖರನಾ ಇಂದ್ರ ॥31॥

ದ್ಯಾವಾಪೃಥಿವಿಗಳ ನೆಲೆಯಂತರಿಕ್ಷವದು
ಮೂಡಿ ಬಂದಿತ್ತಲ್ಲಿ ಪುರುಷನ ನಾಭಿಯಾಹುತಿಯಿಂ
ಅಂತರಿಕ್ಷದಲಿ ಭೂತತತ್ತ್ವ–ದಿವ್ಯತ್ವಗಳ ಸಂಧಿ
ಬಂಧ ಬೆಸೆವಗ್ನಿಯಿಹ ಮಣಿಪೂರಚಕ್ರವದು ನಾಭಿ ॥32॥
ತಲೆಯಿಂದಲಾಕಾಶ ಪಾದಂಗಳಿಂದ ಭೂಮಿ
ಕಿವಿಗಳಿಂ ದಿಕ್ಕು ಮತ್ತೆಲ್ಲ ಲೋಕಗಳು ಒಡನೆ
ಬುದ್ಧಿ–ನೆಲೆ–ಶಬ್ದ–ದೃಶ್ಯಗಳ ಪೂರ್ಣಸೃಷ್ಟಿ
ಜಗದ ಸರ್ವಾಂಗವಿಕಸನೆಯ ಪೂರ್ಣತೆಯು ಯಜ್ಞ ॥33॥

ಪುರುಷನನೆ ಪಶುವಾಗಿಸಿದ ದೇವಯಜ್ಞದಲಿಲ್ಲಿ
ಜ್ಞಾನವಾಹಕ ಛಂದಸ್ಸುಗಳು ಸಪ್ತಪರಿಧಿಗಳು
ಜ್ಞಾನ–ಕರ್ಮ–ಭೂತ–ಪ್ರಾಣಪಂಚಕ–ಮನಗಳೆಂಬ
ಇಪ್ಪತ್ತೊಂದು ಸಮಿಧಗಳಿಲ್ಲಿ ಜೀವ ಬೆಳಗಲಿಕೆ ॥34॥

ಯಜ್ಞದಿಂ ಯಜ್ಞವೆನೆ ವಿಕಾಸದಿಂ ಮತ್ತೆ ಸುವಿಕಾಸ
ಚಿತ್ತಶುದ್ಧದ ಕರ್ತವ್ಯದಿಂ ನಿತ್ಯ ನೂತನತೆ
ಸುವಿಕಾಸಯಜ್ಞದಲಿ ನಿತ್ಯ ತೊಡಗುವವ
ಭೂಷಿತನು ಆ ದಿವ್ಯ ಕೀರ್ತಿಲೋಕದಲಿ ॥35॥

ಗುರುಪಾದಪದ್ಮಮುಖದಿಂದೊಡಮೂಡಿ ಬಂದಿರುವ
ಸಿರಿಗನ್ನಡಪುರುಷಸೂಕ್ತವಿದನೆಂದೆಂದು ಬಿಡದೆ
ನಿತ್ಯಪಠಿಸಿದವನಿಗಿನಿತು ಭವ ಬಂಧವಿಲ್ಲ
ಅರಿಷಡ್ವರ್ಗದಿಂ ಮುಕ್ತಿ ಸರ್ವಸೌಭಾಗ್ಯ ॥36॥

ಪುರುಷನೆಂದರೆ ತ್ರಿಮೂರ್ತಿಗಳ ಮೂಲಪುರುಷ
ರೂಪಲಿಂಗಾತೀತ ಪರಬ್ರಹ್ಮದ ಪುಲ್ಲಿಂಗ ರೂಪ ॥ಪ॥

ಪುರುಷಸೂಕ್ತದರ್ಶಿಕಾ

ಈ ಪುರುಷ ಸೂಕ್ತದ ಪುರುಷನೆಂದರೆ ಜಗತ್ತಿಗೆ ಮೂಲಕಾರಣನೂ ಏಕಮೇವಾದ್ವಿತೀಯನೂ ಆದ ಪರಮಾತ್ಮ, ಪರಬ್ರಹ್ಮ. ಪರಬ್ರಹ್ಮನು ತನ್ನ ಸ್ಪಂದನದಲ್ಲಿ ಓಂಕಾರವಾಗಿ ಮೂಡಿಬಂದನು. ಆ ಓಂಕಾರವೇ ಆತನ ಚಿತ್‌ಸ್ವರೂಪದಲ್ಲಿಯ ಶಕ್ತಿ, ಚಿಚ್ಛಕ್ತಿ. ಚಿತ್ ಶಕ್ತಿಯೆಂದರೆ ಯೋಗಿಗಳ ಯೋಗಾನುಭೂತಿಗೆ ಮಾತ್ರ ನಿಲುಕುವ ಕೇವಲ ದಿವ್ಯ ಪ್ರಭಾರೂಪದ ಶಕ್ತಿ. ಆ ಶಕ್ತಿಯ ಪ್ರತೀಕವಾಗಿ ಮೂಡಿಬಂದ ಓಂಕಾರವು ಸತ್‌ಶಕ್ತಿಗೆ ಆಧಾರಭೂತವಾದ ಅ–ಉ–ಮ್‌ಗಳಾಗಿ ವಿಭಕ್ತಗೊಂಡಾಗ ಸತ್ವಗುಣ–ರಜೋಗುಣ–ತಮೋಗುಣಗಳು ಆವಿರ್ಭವಿಸಿದವು ; ಇವುಗಳಲ್ಲಿ 'ಮ್'ವು ಸತ್ವಗುಣಾತ್ಮಕವಾಗಿ ಸೃಷ್ಟಿತತ್ತ್ವವೆನಿಸಿತು. ಅರ್ಥಾತ್, ಪುರಾಣಗಳು ಪ್ರಸ್ತುತಪಡಿಸುವ ಸೃಷ್ಟಿಕರ್ತ ಬ್ರಹ್ಮನೆನಿಸಿತು. 'ಅ' ಅನ್ನುವುದು ರಜೋಗುಣಾತ್ಮಕವಾಗಿ ಸ್ಥಿತಿಕಾರಕ ವಿಷ್ಣುವೆನಿಸಿತು. 'ಉ' ಅನ್ನುವುದು ಲಯತತ್ತ್ವವೆನಿಸಿತು. ಅರ್ಥಾತ್ ಪುರಾಣಗಳಲ್ಲಿ ಶಿವನೆನಿಸಿತು. ಸತ್ ತತ್ವಕ್ಕೆ ಸೇರಿದ ಈ ಮೂರೂ ತತ್ತ್ವಗಳು ಸಮಸ್ತ ಗ್ರಹಗಳ ಮೂಲವಾದ ಪೃಥಿವ್ಯಾದಿ ಪಂಚಭೂತಗಳ ಅಸ್ತಿತ್ವಕ್ಕೆ ಹಾಗೂ ಈ ಪಂಚಭೂತಗಳ ಪರಿಧಿಗೆ ಬಂದ (ಮಹಾಸೂರ್ಯನಾದ, ಅರ್ಥಾತ್, ಪರಂಜ್ಯೋತಿಯಾದ ಪರಮಾತ್ಮನಿಂದ ಹೊರಸೂಸಿ ಬಂದ ಆತನದೇ ಅಂಶವೆನಿಸಿದ, ಭಾಗವೆನಿಸಿದ, ಭಕ್ತವೆನಿಸಿದ ಪ್ರತ್ಯಗಾತ್ಮಗಳಿಗೆ ತಮ್ಮದೇ ಆದ ಜೀವಾಂಶವನ್ನು ಹೊದಿಸಿ, ಅರ್ಥಾತ್ ಪ್ರಾಣಮಯತ್ವಕ್ಕೆ

ಆ ಪ್ರತ್ಯಗಾತ್ಮಗಳನ್ನು ತಂದು ಅವುಗಳನ್ನು ಜೀವಾತ್ಮಗೊಳಿಸಿ ಹಾಗೂ ಜನ್ಮ–ಜೀವನ–ಲಯ ಚಕ್ರದಲ್ಲಿ, 84 ಲಕ್ಷ ಜೀವರಾಶಿಗಳಲ್ಲಿ ಸುತ್ತು ಹೊಡೆಸುತ್ತ ನಿರಂತರ ಚಲನೆಯಲ್ಲಿವೆ. ಹೀಗೆ ಈ ಜಗತ್ತಿನಲ್ಲಿ ಕಂಡುಬರುವ ಹಾಗೂ ಯೋಗಿಗಳ ಅನುಭವವೇದ್ಯ ಸಮಸ್ತ ತತ್ತ್ವಗಳಿಗೂ ಮತ್ತು ಸಮಸ್ತ ಜೀವಾತ್ಮಗಳಿಗೂ ಮೂಲಪುರುಷನಾದ ಆ ಪರಮ ಪುರುಷನೇ ಈ ಪುರುಷಸೂಕ್ತದಲ್ಲಿಯ ಪುರುಷ.

ಈ ಪುರುಷ ಶಬ್ದವನ್ನು 'ಪುರಿ ಶೇತೇ' – ದೇಹವೆಂಬ ಪುರದಲ್ಲಿ ವಾಸಿಸುವವನು ಎಂದೂ 'ಪುರಿ ಉಷತಿ' – ದೇಹವೆಂಬ ಪುರದಲ್ಲಿ ಪ್ರಕಾಶಿಸುವವನು ಎಂದೂ 'ಪುರಿ ಓಷತೇ' ಎಂದಾಗ – ದೇಹದಲ್ಲಿ ಉಷ್ಣರೂಪದಲ್ಲಿ ವಿರಾಜಿಸುವವನು ಎಂದೂ ಅರ್ಥೈಸಿಕೊಳ್ಳಲಾಗುವುದು. 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ' ಎಂಬ ಗೀತೆಯಲ್ಲಿಯ ಕೃಷ್ಣೋಕ್ತಿಯೂ ಈ ಪುರುಷಶಬ್ದದ ವ್ಯುತ್ಪತ್ತಿಯ ಭಾವವೇ ಆಗಿದೆ. ಸಾಮಾನ್ಯ ಕ್ರಿಮಿಯಿಂದ ಮೊದಲುಗೊಂಡು ಆನೆಯವರೆಗಿನ ಎಲ್ಲ ಚಿಕ್ಕದೊಡ್ಡ–ಬಹುದೊಡ್ಡ ಪ್ರಾಣಿಗಳ ದೇಹಗಳಲ್ಲಿ ವಿರಾಜಿಸುವ ಆತ್ಮತತ್ತ್ವವು, ಅರ್ಥಾತ್ ಅಗ್ನ್ಯಾತ್ಮಕ ಉಷ್ಣತೆಯು ಆ ಪರಮಪುರುಷನ ಅಂಗವೇ ಆಗಿದೆ. ಭಾಗವೇ ಆಗಿದೆ. ಈ ಅಂಗವು, ಭಾಗವು ಭಾವರೂಪದಲ್ಲಿ 'ನಾನು' ಅನ್ನುವ ತತ್ತ್ವವಾಗಿದೆ. ಪ್ರತಿಯೊಂದು ಜೀವಿಯಲ್ಲಿಯ ನಾನು – 'ಅಹಂ' ಅನ್ನುವುದು ಏನಿದೆಯೋ ಅದೇ ಆ ಪರಮಪುರುಷನ ಪ್ರತ್ಯಗಾತ್ಮಸ್ವರೂಪ, ಅಥವಾ ಅಂಶಾತ್ಮಸ್ವರೂಪ. ದೇಹವು ಆ ನಾನು ಅನ್ನುವ 'ನನ್ನ' ದೇ ಹೊರತು ನಾನಲ್ಲ. ದೇಹ ಹೋದ ಮೇಲೆ, ಮರಣಿಸಿದ ಮೇಲೆ ಆ ನಾನು ಅನ್ನುವ ಆತ್ಮವು, ಅಂದರೆ ಪ್ರತ್ಯಗಾತ್ಮವು ಜೀವಸಹಿತವಾಗಿ, ಅರ್ಥಾತ್, ಜೀವಾತ್ಮವಾಗಿ ಇನ್ನೊಂದು ದೇಹಪಡೆದು ಮತ್ತೆ ಸತ್ ತತ್ತ್ವದ ಜಗತ್ತಿನಲ್ಲಿ, ಯಾವುದೋ ಸತಿ–ಪತಿಯರ, ಹೆಣ್ಣು–ಗಂಡು ಪ್ರಾಣಿಗಳ ಮಗುವಾಗಿ, ಮರಿಯಾಗಿ ಜನಿಸುತ್ತದೆ. ಜೀವಾತ್ಮವು ಪರಮಪುರುಷನಿಂದ ವಿಭಕ್ತಗೊಂಡ ಆತ್ಮವಾಗಿರುವುದರಿಂದ, ತಿಳಿದಿರಲಿ ಅಥವಾ ತಿಳಿಯದೇ ಇರಲಿ, ಪ್ರತಿಯೊಂದು ವ್ಯಕ್ತಿಯೂ ಆ ಪರಮಾತ್ಮನ ಭಕ್ತನೇ ಸರಿ, ಭಕ್ತಳೇ ಸರಿ, ಅರ್ಥಾತ್ ಭಾಗವೇ ಸರಿ.

ಹೇಗೆ ಆ ಪರಮಪುರುಷನು ಪರಿಪೂರ್ಣನೋ ಹಾಗೆ ಜೀವಾತ್ಮಗಳೂ, ಅಂದರೆ, ಜಗತ್ತಿನಲ್ಲಿಯ ಜೀವಸಹಿತವಾದ ಪ್ರತ್ಯಗಾತ್ಮಗಳೆಲ್ಲವೂ ಪರಿಪೂರ್ಣವೇ ಆಗಿರುವವು. ಅದಕ್ಕಾಗಿಯೇ ಉಪನಿಷತ್ತುಗಳಲ್ಲಿ 'ಪೂರ್ಣಸ್ಯ ಪೂರ್ಣಮ್ ಆದಾಯ ಪೂರ್ಣಮ್ ಏವ ಅವಶಿಷ್ಯತೇ' – ಅದು ಪೂರ್ಣ ಇದೂ ಪೂರ್ಣ. ಪೂರ್ಣದಿಂದ ಪ್ರತ್ಯೇಕಿತಗೊಂಡದ್ದೆಲ್ಲವೂ ಪೂರ್ಣವೇ ; ಪೂರ್ಣದಿಂದ ಹೊರಬಂದ ಎಲ್ಲವೂ ಆ ಪೂರ್ಣಸಹಿತವಾಗಿ ಪೂರ್ಣವೇ ಆಗಿವೆ ಎಂದು ಉದ್ಘೋಷಿಸಲಾಗಿದೆ.

ಪರಮಪುರುಷನಿಂದ ಪ್ರತ್ಯೇಕಿತಗೊಂಡ ಆತ್ಮಗಳು, ಜೀವಾತ್ಮಗಳಾಗಿ ಜನ್ಮ–ಸ್ಥಿತಿ–ಮರಣಗಳಿಗೆ ಒಳಪಟ್ಟಾಗ, ಅವುಗಳ ಸ್ಥಿತಿಭಾವದಲ್ಲಿ ಅಂದರೆ ಜೀವಿತಭಾವದಲ್ಲಿ

ಅವು ಯಾವ ಯಾವ ಕರ್ಮಗಳನ್ನು ನಡೆಸುತ್ತವೆಯೋ ಆ ಆ ಪಾಪ–ಪುಣ್ಯ ಕರ್ಮಗಳಿಗನುಗುಣವಾಗಿ ಮುಂದಿನ ಜನ್ಮಕ್ಕೆ ಹೋಗುವವು. ಅಂದರೆ ಮನುಷ್ಯನಾಗಿ ಹುಟ್ಟಿದ ಜೀವಾತ್ಮವು ತನ್ನ ಕುಕೃತ್ಯದಿಂದಾಗಿ, 'ಪರಪೀಡನೆಯೇ ಪಾಪ' ಅನ್ನುವ ಅರ್ಥದಲ್ಲಿಯ ಪಾಪಕಾರ್ಯಗಳಿಂದಾಗಿ ಮುಂದಿನ ಜನ್ಮದಲ್ಲಿ ಕ್ರಿಮಿಯೂ ಆಗಬಹುದು. ಯಾವುದೋ ಶ್ವಾನವೂ ಆಗಬಹುದು. ಹಂದಿಯೇ ಮುಂತಾದ ಹಿಂಸ್ರ ಪ್ರಾಣಿಯೋನಿಯಲ್ಲಿಯೂ ಜನಿಸಬಹುದು; ಸ್ಥಾವರವಾಗಿ ಇರುವ ಗಿಡ–ಮರ–ಮಟ್ಟುಗಳ ರೂಪದಲ್ಲಿಯೂ ಜನಿಸಬಹುದು. 'ಪರೋಪಕಾರಃ ಪುಣ್ಯಾಯ' – ಅನ್ನುವ ಅರ್ಥದಲ್ಲಿಯ ಪುಣ್ಯಕಾರ್ಯಗಳನ್ನೇ ನಡೆಸುತ್ತಿದ್ದರೆ ಇನ್ನೂ ಉತ್ತಮ ಸ್ಥಿತಿಯ ಮಾನವ ಜನ್ಮದಲ್ಲಿ ಬರಬಹುದು ಹಾಗೂ ತಾನು ನಡೆಸುವ ಕರ್ತವ್ಯವೆಲ್ಲ ಪರಮಾತ್ಮನ ಸೇವೆ ಎಂಬ ಭಾವದಲ್ಲಿ ಬದುಕಿದರೆ ಕರ್ಮಲೇಪನವಿಲ್ಲದೆ ಮತ್ತೆ ಆ ಪರಮಾತ್ಮನೆಂಬ ಮಹಾಸೂರ್ಯನಲ್ಲಿ ಒಂದಾಗಲೂ ಬಹುದು, ಅಂದರೆ ಮೋಕ್ಷವನ್ನು ಪಡೆಯಲೂ ಬಹುದು.

ಸೃಷ್ಟಿ–ಸ್ಥಿತಿ–ಲಯಗಳಿಗೆ ಕಾರಣವಾಗುವ ತತ್ತ್ವಗಳು ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿ, ರುದ್ರಗ್ರಂಥಿಗಳೆಂಬ ರೂಪದಲ್ಲಿ ದೇಹದಲ್ಲಿ ನೆಲೆಸಿರುತ್ತವೆ. ಯೋಗಮಾರ್ಗದಲ್ಲಿ ಈ ಮೂರು ಗ್ರಂಥಿಗಳನ್ನು ಮೂರು ಪುರಗಳನ್ನಾಗಿ ಚಿತ್ರಿಸಲಾಗಿದೆ. ಈ ಪುರಗಳಿಂದ ಕೂಡಿದ ದೇಹದಲ್ಲಿ ನೆಲಸಿದಾಗ ಆ ಪರಮ ಪುರುಷನ ಅಂಗವೇ ಆದ ಪ್ರತ್ಯಗಾತ್ಮನು ಪ್ರತ್ಯಕ್ ಪುರುಷನೆನಿಸುವನು. ಯೋಗಮಾರ್ಗದಲ್ಲಿ ಸಾಧನೆಗೈದು ಈ ಮೂರೂ ಪುರಗಳನ್ನೂ ಭೇದಿಸಿದಾಗ ಆ ದೇಹಸ್ಥ ಪುರುಷನು ಅಂದರೆ ಆತ್ಮನು ತ್ರಿಪುರಾರಿಯಾಗುವನು, ತ್ರಿಪುರಸಂಹಾರಿಯಾಗುವನು ಹಾಗೂ ಸಾಕ್ಷಾತ್ ಪರಮಪುರುಷನೇ ಆಗುವನು.

ಮಹರ್ಷಿಯೊಬ್ಬನು ಈ ಪರಮಪುರುಷನನ್ನು ಮೇಲೆ ವಿವರಿಸಿದ ಎಲ್ಲ ಅರ್ಥಗಳೊಂದಿಗೆ ತನ್ನ ಸಮಾಧಿಸ್ಥಿತಿಯಲ್ಲಿ ದರ್ಶಿಸಿದಾಗ ಅವನು ವೇದನಾರಾಯಣ ಋಷಿಯೆಂದೆನಿಸಿದ ಅಂದರೆ ಎಲ್ಲವನ್ನೂ ಬಲ್ಲ ನಾರಾಯಣನೆನಿಸಿದ. ನಾರ ಅನ್ನುವ ಶಬ್ದಕ್ಕೆ ನೀರು ಅನ್ನುವ ಅರ್ಥವು ಇರುವಂತೆಯೇ ಜ್ಞಾನ ಅನ್ನುವ ಅರ್ಥವೂ ಇದೆ. ಜ್ಞಾನಮಾರ್ಗಗಾಮಿಯೇ ನಾರಾಯಣ, ಈ ಅರ್ಥದಲ್ಲಿಯೇ 'ನಾರ' ಅಂದರೆ ಜ್ಞಾನವನ್ನು ಆತ್ಮಜ್ಞಾನವನ್ನು 'ದ' ಅಂದರೆ ಕೊಡಬಲ್ಲ ಗುರುತತ್ತ್ವವೇ ನಾರದ. ಈ ಗುರುತತ್ತ್ವವು ಲೌಕಿಕದಿಂದ ಆತ್ಮವನ್ನು ವಿಮುಖಗೊಳಿಸುವುದರಿಂದಾಗಿ ನಾರದನನ್ನು ಜಗಳಗಂಟನೆಂದು ಪುರಾಣಗಳಲ್ಲಿ ಬಿಂಬಿಸಲಾಗಿದೆ. ಆದರೆ ನಿಜವಾದ ಅರ್ಥದಲ್ಲಿ ನಾರಾಯಣನ ಬಗ್ಗೆ ಪೂರ್ಣಜ್ಞಾನವುಳ್ಳ ಗುರುವೇ ನಾರದ.

'ನಾರ' ಅಂದರೆ ನೀರೂ ಆಗುವುದರಿಂದ ಹಾಗೂ ನೀರಿಗೆ ಜೀವನವೆಂಬ ಪರ್ಯಾಯ ಶಬ್ದವೂ ಇರುವುದರಿಂದ ಹಾಗೂ ಜೀವನವೇ ಸ್ಥಿತಿತತ್ತ್ವದ ವ್ಯಕ್ತಭಾವವಾದುದರಿಂದ ಸ್ಥಿತಿತತ್ತ್ವದ ಅಧಿದೇವನನ್ನು ನಾರಾಯಣ ಎಂದೂ ಕರೆಯಲಾಗುವುದು. ಪರಮಪುರುಷನಾದ ನಾರಾಯಣನೇ ಬದುಕಿಗೆ ಆಧಾರವಾದ ನಾರಾಯಣ ಅನ್ನುವ ತಥ್ಯವನ್ನು ಮನಗೊಂಡ ಋಷಿಯು ವೇದ ನಾರಾಯಣನೆನಿಸಿದ.

ಪರಮಪುರುಷನಾದ ನಾರಾಯಣನು ಸಾವಿರ ಸಾವಿರ ಸಂಖ್ಯೆಯ ಜೀವರಾಶಿಗಳಾಗಿ ಅಭಿವ್ಯಕ್ತಗೊಂಡದ್ದರಿಂದಾಗಿ ಆತನು ಸಹಸ್ರಶೀರ್ಷನೆನಿಸಿದ. ಸಹಸ್ರಾಕ್ಷ ಎಂದು ಮುಂತಾಗಿ ಆತನನ್ನು ದರ್ಶಿಸಲಾಯಿತು. ಸಮಸ್ತಭೂತರಾಶಿಗಳೊಂದಿಗಿನ ಜಗತ್ತೇ ಆತನೆಂಬ ತತ್ತ್ವವನ್ನು ವೇದ ನಾರಾಯಣ ಮಹರ್ಷಿಯು ತನ್ನ ಸಮಾಧಿಸ್ಥಿತಿಯಲ್ಲಿ ಕಂಡನು. ಆ ಪರಮಪುರುಷನೇ ಅನ್ನವಾಗಿ, ಅನ್ನರಸವಾಗಿ, ವೀರ್ಯವಾಗಿ ಶೋಣಿತಯುಕ್ತಗೊಂಡು. ಮಗುವಾಗಿ ಅವತರಿಸಿ ಬರುವುದನ್ನೆಲ್ಲ ಯಜ್ಞವೊಂದರ ರೂಪಕಾತ್ಮಕವಾಗಿ ಆ ಮಹರ್ಷಿಯು ದರ್ಶಿಸಿದ. ಆ ಪರಮಪುರುಷನನ್ನು ಮನುಷ್ಯನೊಬ್ಬನ ಆಕಾರದಲ್ಲಿ ಭಾವಿಸಿ ಆತನ ಶಿರಸ್ಸಿನಿಂದ ಪಾದಗಳವರೆಗಿನ ಅಂಗಾಂಗಳಿಗೆಲ್ಲ ಅವುಗಳ ಕಾರ್ಯಕ್ಷಮತೆಗಳನ್ನು ಲಕ್ಷ್ಯದಲ್ಲಿಟ್ಟು ನಾಲ್ಕು ವರ್ಣಗಳನ್ನಾಗಿ, ಜಾತಿಗಳನ್ನಾಗಿ ಹಾಗೂ ವಿಭಿನ್ನ ದೇವತೆಗಳನ್ನಾಗಿ ಆತನ ದರ್ಶನದ ಅನುಭೂತಿಯ ವಿಭಾಗಿಸಿತು.

ದೇಹದಲ್ಲಿ ಶಿರಸ್ಸು ಬಹುಮುಖ್ಯವಾದ ಅಂಗ. ಏಕೆಂದರೆ ಸರ್ವಕಾರಕವಾದ ಹಾಗೂ ಸರ್ವಕಾರಣವಾದ ಮಿದುಳು ಇರುವುದು ಈ ಅಂಗದಲ್ಲಿ. ಪ್ರಾರಬ್ಧ ಅಂದರೆ ಪ್ರಸ್ತುತ ನಡೆಯುತ್ತಿರುವ, ಸಂಚಿತ ಅಂದರೆ ಹಿಂದಿನ ಜನ್ಮಗಳಲ್ಲಿ ನಡೆಸಿದ ಕರ್ಮಗಳ ಹಾಗೂ ಆಗಾಮಿ ಅಂದರೆ ಮುಂದೆ ಈ ಹಿಂದಿನ ಕರ್ಮಫಲವಾಗಿ ನಡೆಯುವ ಎಲ್ಲ ಕರ್ಮಫಲಗಳನ್ನು ತನ್ನಲ್ಲಿ ಸಂಗ್ರಹಿಸಿಕೊಳ್ಳುವ ಮಿದುಳನ್ನು ಪುರಾಣಗಳಲ್ಲಿ ಚಿತ್ರಗುಪ್ತ ಎಂದು ಕರೆಯಲಾಯಿತು. ಈ ಮಿದುಳೇ ಮುಂದಿನ ಆಗು–ಹೋಗುಗಳಿಗೆ ಕಾರಣೀಭೂತವಾಗುವುದು ; ಈ ಮಿದುಳಿರುವುದು ಮಸ್ತಿಷ್ಕದಲ್ಲಿ ಅನ್ನುವ ಕಾರಣದಿಂದಾಗಿ ಹಾಗೂ ಬ್ರಹ್ಮ ಅಂದರೆ ಜ್ಞಾನವೇ ಅರ್ಥಾತ್ ವಿವಿಧ ವಿದ್ಯೆಗಳ ಸಂಗ್ರಹವೇ ಈ ಶಿರಸ್ಥ ಮಿದುಳು ಅನ್ನುವ ಕಾರಣದಿಂದ 'ಬ್ರಹ್ಮ ನಿಯತೇ ಅನೇನ' ಎಂಬ ವ್ಯುತ್ಪತ್ತಿಗನುಗುಣವಾಗಿ ತಲೆಯನ್ನು ಬ್ರಾಹ್ಮಣ ಎಂದು ಆ ಮಹರ್ಷಿಯು ದರ್ಶಿಸಿದ. ರಾಜನ್ಯ, ಅಂದರೆ ಕ್ಷತ್ರಿಯಜಾತಿ ಅಥವಾ ವರ್ಣ. 'ಅಪಾಯದಿಂದ ರಕ್ಷಿಸುವವನು ಕ್ಷತ್ರಿಯ ; 'ಕ್ಷತಾತ್ ತ್ರಾಯತೇ ಇತಿ ಕ್ಷತ್ರಿಯ: – ಪ್ರಜೆಗಳಿಗೆ ಯಾವುದೇ ಪೀಡೆಯುಂಟಾಗದಂತೆ ನೋಡಿಕೊಳ್ಳುವವ ಕ್ಷತ್ರಿಯ. ದೇಹದಲ್ಲಿ ಇದನ್ನು

ನಡೆಸಿಕೊಡುವುದು ಬಾಹು, ಅರ್ಥಾತ್ ಕೈಗಳು. ಆದ್ದರಿಂದ ಬಾಹೂ ರಾಜನ್ಯಕೃತಃ' – ಬಾಹುವೇ ಕ್ಷತ್ರಿಯವರ್ಣ ಎಂದು ಆ ಋಷಿಗೆ ದರ್ಶನವಾಯಿತು. ಕೃಷಿ–ವಾಣಿಜ್ಯ ಚಟುವಟಿಕೆಗಳಿಗೆ ಬೇಕಾಗುವುದು ಸತತವಾಗಿ ನಿಂತುಕೊಂಡಿರುವ ಹಾಗೂ ನಡೆದಾಡುವ ಶಕ್ತಿಯನ್ನು ಕೊಡುವ ತೊಡೆಗಳು ; ಕೃಷಿ – ವಾಣಿಜ್ಯಚಟುವಟಿಕೆಗಳನ್ನೆಲ್ಲ ವೈಶ್ಯವೃತ್ತಿಯದೆಂದು ವಿಭಾಗಿಸಿ ತೊಡೆಯನ್ನು ವೈಶ್ಯವರ್ಣದ ಜನಕನೆಂದು ಬಣ್ಣಿಸಲಾಯಿತು – 'ಊರೂ ತದಸ್ಯ ಯದ್ವೈಶ್ಯಃ' ಎಂದು ಹೇಳಲಾಯಿತು. ವಿದ್ಯೆಯು ನೀಡಬಲ್ಲ ಜ್ಞಾನಸಂಪಾದನೆಗೆ ಅಸಮರ್ಥರಾದ ಹಾಗೂ ರಕ್ಷಣೆ–ಕೃಷಿ–ವಾಣಿಜ್ಯಾದಿಗಳಿಗೂ ಅಸಮರ್ಥದ, ಅರ್ಥಾತ್ ಮಂದಮತಿಗಳಾದ ಜನರು ತಮ್ಮ ಬದುಕಿಗಾಗಿ ಈ ಮೊದಲಿನ ಮೂರೂ ವರ್ಣದವರ ಗೃಹಕೃತ್ಯ–ಕೆಲಸಕಾರ್ಯಗಳಿಗೆ ಸಹಾಯಕರಾಗಿ, ಸೇವೆಸಲ್ಲಿಸುವವರಾಗಿ ಜೀವನವನ್ನು ನಡೆಸುತ್ತ ಇರಬೇಕಾದ ಅನಿವಾರ್ಯತೆಯಿಂದಾಗಿ, 'ಶೂದ್' ಅಂದರೆ ಸೇವೆ ಮಾಡು ಅನ್ನುವ ಅರ್ಥದಲ್ಲಿ ಶೂದ್ರರಾಗಿ ವಿಭಾಜಿತರಾದದ್ದನ್ನು ಋಷಿಯು ದರ್ಶಿಸಿದ. ಸೇವೆಗಾಗಿ ಓಡಾಡಲು ಪಾದಗಳ ಬಲವು ಅವಶ್ಯಕವೆನಿಸಿದ್ದರಿಂದ 'ಪದ್ಭ್ಯಾಂ ಶೂದ್ರೋ ಅಜಾಯತ' ಎಂದು ಆ ಋಷಿಗೆ ಮಂತ್ರದ ಗೋಚರವಾಯಿತು.

ಶೂದ್ರ ಹಾಗೂ ಪಾದವೆಂದರೆ ಕನಿಷ್ಠವಾದುದು ಎಂದು ಸರ್ವಥಾ ಭಾವಿಸಲಾಗದು. ಯಾರೇ ಆಗಲಿ ನಮಿಸುವುದು ಪಾದಗಳಿಗೆ ; ಆದುದರಿಂದ ದೇಹದಲ್ಲಿ ಪಾದಕ್ಕೆ ಬಹಳ ಮಹತ್ವವಿದೆ. ಮನುಷ್ಯನಲ್ಲಿಯ ಪುಣ್ಯ–ಪಾಪತರಂಗಗಳು ದೇಹದಿಂದ ಹೊರಗೆ ಹೋಗುವುದು ಪಾದಗಳ ಹಾಗೂ ಕೈಗಳ ಬೆರಳತುದಿಗಳ ಮೂಲಕ. ಪುಣ್ಯವಂತರಿಗೆ ನಮಸ್ಕರಿಸಿದಾಗ ಅವರಲ್ಲಿಯ ಪುಣ್ಯದ ತರಂಗಗಳು ನಮಸ್ಕರಿಸಿದವರ ಶಿರಸ್ಸಿನ ಮೂಲಕ ಅವರ ಮಿದುಳನ್ನು ಪ್ರವೇಶಿಸುತ್ತವೆ ಹಾಗೂ ಅವರಿಗೆ ಒಳಿತನ್ನು ಉಂಟು ಮಾಡುತ್ತವೆ. (ಪಾಪಿಗಳಿಗೆ ನಮಸ್ಕರಿಸಿದರೆ ಅವರ ಪಾದಗಳಿಂದ ಅಥವಾ ಅವರು ತಲೆಯ ಮೇಲೆ ಕೈಯಿಟ್ಟರೆ ಕೈ ಬೆರಳುಗಳಿಂದ ಪಾಪದ ತರಂಗಗಳು ಹೊರಗೆ ಬಂದು ನಮಸ್ಕರಿಸಿದವರ ಶಿರಸ್ಸಿನಲ್ಲಿಯ ಮಿದುಳನ್ನು ಪ್ರವೇಶಿಸುವುದರಿಂದಾಗಿ ಪಾಪಕರ್ಮನಿರತರಿಗೆ ನಮಸ್ಕರಿಸುವುದು ಉಚಿತವಲ್ಲ.) ಪಾದಗಳಿಗೆ ಈ ಮಹಾತ್ಮೆ ಇರುವುದರಿಂದ ಪಾದದಿಂದ ಜನಿಸಿದವರೆಂದು ಶೂದ್ರವರ್ಣದವರನ್ನು ಕಡೆಗಾಣಿಸುವುದು ಸರ್ವಥಾ ತಪ್ಪೆನಿಸುವುದು ; ಮಹಾತ್ಮರ ಪಾದಗಳಿಗೆ ಇರುವ ಗೌರವವು ಶೂದ್ರವರ್ಣದವರಿಗೆ ಅವಶ್ಯವಾಗಿ ಸಲ್ಲುವುದು.

ವೇದಗಳಲ್ಲೆಲ್ಲ, ಅಂದರೆ ಪ್ರಾಚೀನ ಕಾಲದಲ್ಲಿ ಜಾತಿಯ ವಿಭಾಗವು, ಅರ್ಥಾತ್ ಚಾತುರ್ವರ್ಣ್ಯವು ಹುಟ್ಟಿನಿಂದ ಬರುವುದಾಗಿರದೆ ಜನರ ಕರ್ತವ್ಯಕ್ಷೇತ್ರಗಳಿಂದಾಗಿ ರೂಪುಗೊಂಡಿರುವುದನ್ನು ಅವಶ್ಯಕವಾಗಿ ಗಮನಿಸಬೇಕು.

ಈ ಪುರುಷಸೂಕ್ತದಲ್ಲಿ ಬರುವ ಯಜ್ಞವು ಭೌತಿಕವಾದ ಹೋಮಕುಂಡದಲ್ಲಿ ನಡೆಸುವ ಯಜ್ಞಕ್ಕೆ ಸೀಮಿತವೆಂದು ಖಂಡಿತವಾಗಿ ಭಾವಿಸಲಾಗದು. ಇಲ್ಲಿ ಯಜ್ಞದ ನಿಜವಾದ ಅರ್ಥ ಪಂಚಭೂತಗಳಿಂದ ನಿರ್ಮಾಣಗೊಳ್ಳುವ, ಪಾಂಚಭೌತಿಕಪುರವೆನಿಸಿದ ದೇಹಗಳ ಅರ್ಥಾತ್, ಸಮಸ್ತ ಪ್ರಾಣಿವರ್ಗಗಳ ಆವಾಸಗಳ ಸೃಷ್ಟಿ–ಪುನಃಸೃಷ್ಟಿ ಎಂಬುದೇ ಆಗಿದೆ. ಆ ಪರಮಪುರುಷನು ದೇಹಗಳಿಗೆ ಅರ್ಪಿತವಾದ ಆಹಾರದಲ್ಲಿ ತಾನೇ ಅಣುವಾಗಿ ಪ್ರತ್ಯಣುವಾಗಿ ಜೀವಾಣುವಾಗಿ ವೀರ್ಯಸ್ಥಗೊಂಡು ಭ್ರೂಣವಾಗಿ ಶಿಶುವಾಗಿ ಹೆಣ್ಣು–ಗಂಡು ಪ್ರಾಣಿಗಳಾಗಿ (ಅರ್ಥಾತ್ ಮನುಷ್ಯ ಮುಂತಾದವುಗಳಾಗಿ) ರೂಪುಗೊಳ್ಳುವುದೇ ಆಗಿದೆ. ಕರ್ತವ್ಯ–ಕರ್ಮಗಳೆಂಬ ನಿತ್ಯ ಯಜ್ಞದಲ್ಲಿ ಆಹುತಿಯು ನಿರಂತರವಾಗಿ ಸಲ್ಲುವಂತೆ ಪುನರಾಹಾರ–ವೀರ್ಯಾಣು ಮುಂತಾದವುಗಳಿಗೆ ಕಾರಣವಾಗುವಂತೆ ನಡೆಯುವ, ನಿರಂತರವಾಗಿ ಸಂಪನ್ನಗೊಳ್ಳುವ ಯಜ್ಞವೇ ಇಲ್ಲಿ ಬರುವ ಪುರುಷನು ನಡೆಸುವ ಯಜ್ಞವಾಗಿದೆ.

ವೇದಗಳಲ್ಲಿ ಬರುವ 'ಪುರುಷ' ಅನ್ನುವ ಶಬ್ದವು ಕೇವಲ ಗಂಡು ಜೀವಿಗಳಿಗೆ ಮಾತ್ರ ಅನ್ವಯವೆಂದು ಭಾವಿಸಿದರೆ ಅದು ಬಹುದೊಡ್ಡ ತಪ್ಪು. ಇಲ್ಲಿ ದೇಹವೆಂಬ ಪುರದಲ್ಲಿ ವಾಸಿಸುವ ಜೀವಾತ್ಮತತ್ತ್ವಕ್ಕೆ ಬಂದ ಪರಮಾತ್ಮನೇ ಪುರುಷನಾದುದರಿಂದ ಹೆಣ್ಣು–ಗಂಡುಗಳೆಲ್ಲವೂ 'ಪುರುಷ' ಎಂದೇ ಆಗುವುದು.

'ಒಳಗೆ ಸುಳಿವಾತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ' ಎಂಬ ಶರಣವಾಣಿಯೂ ಈ ಮಾತನ್ನು ಒಡನುಡಿಯುತ್ತದೆ. ಹೆಣ್ಣು–ಗಂಡುಗಳೆಂಬ ಭೇದವು ಕೇವಲ ದೇಹಕ್ಕೆ ಸೀಮಿತವೇ ಹೊರತು ಪುರುಷ ಸೂಕ್ತದ ಈ ಪರಮ ಪುರುಷನಿಗೆ ಈ ಎರಡರಲ್ಲಿ ಯಾವ ಭೇದವೂ ಇಲ್ಲ. ಆ ಪುರುಷನೇ ಎಲ್ಲರಲ್ಲಿರುವ ಪರಮಪುರುಷ ; ಪರಿಪೂರ್ಣ ಪುರುಷ.

* * * * *

೬. ಶ್ರೀ ಸೂಕ್ತ ದರ್ಶಿಕಾ

[**ಪೀಠಿಕೆ :** ಶ್ರೀಸೂಕ್ತವು ಋಗ್ವೇದದ ಒಂದು ಖಿಲ, ಅರ್ಥಾತ್, ಭಾಗವಾಗಿ ಬರುತ್ತದೆ. ಪರಬ್ರಹ್ಮದ ಸ್ಥಿತಿತತ್ತ್ವಾತ್ಮಕಶಕ್ತಿಯೇ ಶ್ರೀಃ. "ಶ್ರೇಯಃ ಪ್ರೇಯ ಉಭಯಾತ್ಮಿಕಾ ಶ್ರೀಃ" ಅನ್ನುವ ಉಕ್ತಿಗನುಗುಣವಾಗಿ ಶ್ರೇಯಸ್ಸಿನ ಭಾವದಲ್ಲಿ ಶ್ರೀಯು ಮೋಕ್ಷಕಾರಕಳಾಗಿದ್ದರೆ ಪ್ರೇಯಸ್ಸಿನ ಭಾವದಲ್ಲಿ ಶ್ರೀಯು ಇಹಜೀವನಕ್ಕೆ ಸೌಖ್ಯದಾಯಕಳು. ಜೀವನದಲ್ಲಿ ಜೀವಂತಿಕೆಯನ್ನು ಹೊರಸೂಸುವ ಶಕ್ತಿಯೇ ಶ್ರೀಃ. ಜೀವಂತಿಕೆಯ ಲಕ್ಷಣವನ್ನೇ ಲಕ್ಷ್ಮಿಯೆಂದು ಗ್ರಹಿಸಲಾಯಿತು. ಕೂಡಲೇ ಗಮನಸೆಳೆಯುವ, ಲಕ್ಷ್ಯಕ್ಕೆ ಬರುವ ತತ್ತ್ವವೇ ಲಕ್ಷ್ಮಿ. ಐಶ್ವರ್ಯವು ಎಲ್ಲರ ಮನಸ್ಸನ್ನು ಆಕರ್ಷಿಸುವುದಾದರಿಂದ ಐಶ್ವರ್ಯವನ್ನೂ ಮಹಾಲಕ್ಷ್ಮಿಯೆಂದು ಕರೆಯಲಾಯಿತು. ಬದುಕುವಿಕೆಗೆ ಧನಧಾನ್ಯಾದಿಗಳು ಅತ್ಯಾವಶ್ಯಕವಾದುದರಿಂದ ಧನಧಾನ್ಯಬೋಧಕ ಲಕ್ಷ್ಮಿಯನ್ನು ಸ್ಥಿತಿತತ್ತ್ವಾಧಿಪನಾದ ವಿಷ್ಣುವಿನ ಶಕ್ತಿಯೆಂದು, ಅರ್ಥಾತ್, ಪತ್ನಿಯೆಂದು ಗ್ರಹಿಸಲಾಯಿತು. ಶಕ್ತಿಯನ್ನೇ ಪತ್ನಿಯನ್ನಾಗಿ ಭಾವಿಸುವುದು ವೇದ – ಪುರಾಣಗಳಲ್ಲಿ ನಡೆದು ಬಂದ ಒಂದು ಪದ್ಧತಿ. ಇಲ್ಲಿ ಶ್ರೀಸೂಕ್ತದ ಭಾವವನ್ನು ಅಧ್ಯಾತ್ಮ ವಿವರಣೆಯೊಂದಿಗೆ ಪದ್ಯರೂಪದಲ್ಲಿ ತರಲಾಗಿದೆ. ದೇವಪೂಜಾಸಂಧರ್ಭದಲ್ಲಿ ಈ ಸೂಕ್ತವನ್ನು ಪಠಿಸುವ ಪದ್ಧತಿಯು ಎಲ್ಲ ಕಡೆಗೂ ಸಾಮಾನ್ಯವಾಗಿ ಕಂಡುಬರುತ್ತದೆ.]

ಶ್ರೀಸೂಕ್ತವಿದು ಮಹಾಲಕ್ಷ್ಮೀ ದೇವಿಸಂಸ್ತುತಿಯು
ಸ್ಥಿತಿತತ್ತ್ವದಧಿದೇವಶಕ್ತಿಯೇ ಲಕ್ಷ್ಮೀ ॥ಪ॥

ಹಿರಣ್ಯವರ್ಣದಲಿ ಶ್ರೀಲಕ್ಷ್ಮಿಯಿಹಳು
ಸೂಚಿಸಲು ಜೀವಾಗ್ನಿಯೂ ತಾನಿರುವುದನ್ನು
ಗುರುವನ್ನು ಧ್ವನಿಸುತಿದೆ ಬಂಗಾರವರ್ಣ
ಜೀವಾತ್ಮಬೋಧಕನು ಗುರುವು ಗ್ರಹವಾಗಿ ॥1॥

ಹರಿಯ ಮುನ್ನಡೆಸುವ ಶಕ್ತಿ ತಾ ಹರಿಣೀ
ಸ್ಥಿತಿತತ್ತ್ವಕಧಿದೇವ ಹರಿಯು ನೋಡಿಲ್ಲಿ
ಸ್ಥಿತಿತತ್ತ್ವದಿರುವಿಕೆಗೆ ಬೇಕು ಧನ–ಧಾನ್ಯ
ಹರಿಣಿಯೆಂದರೆ ಇಲ್ಲಿ ಧನ–ಧಾನ್ಯಮೂಲ ॥2॥

ಬಂಗಾರ–ಬೆಳ್ಳಿಗಳ ಕೊರಳಿನಾಭರಣ
ಗುರುಶುಕ್ರಸಂಸ್ಥಿತಿಯ ಬೋಧಿಸುತ್ತಿಹುದು
ಬಂಗಾರಕಧಿಪ ಗುರು ಬೆಳ್ಳಿಗಾ ಶುಕ್ರ
ಗುರು ಜೀವವಾಗಿಹನು ಶುಕ್ರ ತಾ ಪ್ರೇಮಕಧಿಪ ॥3॥

ಸರ್ವದಾ ಚಟುವಟಿಕೆ ಸಂಜೀವ ಕಳೆಯು
ಅದನು ಸೂಸುತ್ತಿರುವ ಮನವು ಬೇಕೆಮಗೆ
ಆ ಮನವೆ ಸಿರಿಲಕ್ಷ್ಮಿ; ಜಾತವೇದನಿಗೆ
ಕರೆತರಲು ಮೊರೆಯಿಹುದು ಅವಳನ್ನು ಇಲ್ಲಿ ॥4॥

ಜಾತವೇದನೆ ಅಗ್ನಿ ಬಲ್ಲನವ ದಿಟದಿ
ಜನಿಸಿ ಬಂದಿಹ ಸರ್ವ ಜೀವಾತ್ಮಗಳನೂ
ಅಗ್ನಿಯಿಂದಲೆ ಮಾತ್ರ ಜೀವಾತ್ಮದಸ್ತಿತ್ವ
ಜ್ವಲಿತಾಗ್ನಿ ಕರೆದಾಗ ಸುಸ್ಥಿರಲಕ್ಷ್ಮಿಯಾಗಮನ ॥5॥

ಅಶ್ವರಥಮಧ್ಯದಲಿ ಕುಳಿತ ಶ್ರೀದೇವಿ
ತಾನಿಹಳು ಗಜಘೀಂಕಾರದಾನಂದಲೋಲೆ
ಅಶ್ವ ಬಲವನ್ನು ಗಜವಷ್ಟೈಶ್ವರ್ಯವನ್ನು
ಧ್ವನಿಸುತಿವೆ ಲಕ್ಷ್ಮಿಯಿಂದವು ನಮಗೆಟುಕಿ ಬರಲಿ ॥6॥

ದಾರಿದ್ರ್ಯ–ವಿಘ್ನಗಳು ತೊಲಗಿ ಹೋಗಲಿ ಒಡನೆ
ಉತ್ತಮರ ಸಂಸರ್ಗವೈಶ್ವರ್ಯಕೀರ್ತಿ
ದೊರಕಲೆಮಗೆಮ್ಮ ಬದುಕೆಂಬ ರಾಷ್ಟ್ರದಲ್ಲಿ
ಶ್ರೀದೇವಿಯನು ಕುರಿತ ತಪಃಫಲವಾಗಿ ಶೀಘ್ರ ॥7॥

ಭೂತತತ್ತ್ವಮಾರ್ಗದಲಿ ಮೈದೋರಿ ಬರುವವಳು
ತಡೆರಹಿತೆ ನಿತ್ಯವರ್ಧನೆ ಕೀರ್ತಿಪುಷ್ಟಿಕಾರಕಳು
ಪಂಚಭೂತಗಳಧಿಪೆ ಮನದಿಚ್ಛೆಯನ್ನು
ಸತ್ಯಗೊಳಿಸುವಳು ಲಕ್ಷ್ಮಿ ಧ್ಯಾನಿಸುವೆವವಳ ॥8॥

ಅನ್ನದಿಂ ರೂಪಗಳು ಸರ್ವಜೀವಿಗಳ
ಜಲದಿಂದ ಸ್ನಿಗ್ಧತೆಯ ಸೃಷ್ಟಿ ಲೋಕದಲಿ
ಅನ್ನ-ಜಲಗಳು ನೆಲಸಲೆಮ್ಮ ಮನೆಗಳಲ್ಲಿ
ಮನೆ-ಮನೆಗಳಲಿ ನೆಲಸಲಾ ಶ್ರೀಮಾತೆ ಲಕ್ಷ್ಮೀ ॥9॥

ಭಕ್ತಿಯಲಿ ಕರೆದಾಗ ಕರಗುವ ಗಜಲಕ್ಷ್ಮಿಯವಳು
ಸರ್ವಪ್ರಸವೆ ಸೂರ್ಯೆ ಚಂದದಲಿ ಚಂದ್ರಳಾಕೆ
ಯಜ್ಞಾಗ್ನಿ ಕರೆತರಲಿ ಲಕ್ಷ್ಮಿಯನು ಅವಳಿಂ
ಪಡೆಯುವೆವು ಅಧಿಕಾರ ಹೈನ-ಹೇಮಗಳ ॥10॥

ಸರ್ವರುದಯಕೆ ಸೂರ್ಯನಿರೆ ಚಂದ್ರನಿಹ ಸರ್ವರೇಳಿಗೆಗೆ
ಸರ್ವಪ್ರಸವಕಸವಿತೃಪ್ರಭೆ ಗಾಯತ್ರಿ ಸರ್ವರಕ್ಷಕಳು
ಚಂದ್ರನಿಹ ನಿಜದಲ್ಲಿ ಶ್ರೀಮಾತೆ ಲಲಿತೆದುರ್ಗೆ
ಚಂದ್ರಚಲುವೆ ಶ್ರೀಲಕ್ಷ್ಮಿ ತಾನಿಹಳು ಗಾಯತ್ರಿ ದುರ್ಗೆ ॥11॥

ಯಜ್ಞವದು ಸತ್ಯಸಂಯುಕ್ತ ನಿತ್ಯಕರ್ತವ್ಯ
ಆಹುತಿಯು ಕಾಯಕವು ಯಜ್ಞಾಗ್ನಿಗಿಲ್ಲಿ
ಪೂತಕಾಯಕದ ಫಲವಾಗಿ ಶ್ರೀಲಕ್ಷ್ಮಿಯನ್ನು
ಕರೆತರಲಿ ಯಜ್ಞಾಗ್ನಿ ಜಗದ ವಿಕಸನಕೆ ॥12॥

ಆನಂದ-ಕರ್ದಮ-ಚಿಕ್ಲೀತರೆಂಬ ಋಷಿಗಳಿಗೆ
ಸುಪ್ರಸನ್ನತೆಯಿಂದ ವರವ ಕೊಟ್ಟವಳು ಅವಳು
ಅದೇ ರೀತಿ ನಮಗೊಲಿದು ಬರುವಳಾ ಲಕ್ಷ್ಮೀ
ಧನ-ಧಾನ್ಯ-ವಾಹನ-ಪುತ್ರ-ಪೌತ್ರಾಯುಷ್ಯರೂಪದಲಿ ॥13॥

ಪದ್ಮಪ್ರಿಯಳು ಪದ್ಮರೂಪಳು ಪದ್ಮನಿಯು ಲಕ್ಷ್ಮೀ
ಸುಕೃತಫಲಪುಣ್ಯಗಂಧವನನುಸರಿಸಿ ಬರುವವಳು
ಸಂಪತ್ಸಮೃದ್ಧಿಸಹಿತಾರೋಗ್ಯವರ್ಧಕಳು ಲಕ್ಷ್ಮೀ
ಸರ್ವೇಶ್ವರಿಯು ಸರ್ವಜಯಶೀಲೆ ನಿತ್ಯಾನಂದವರ್ಧಕಳು ॥14॥

ಚಂದ್ರಸೂರ್ಯಾಗ್ನಿಪ್ರಭೆಯ ತ್ರಿಗುಣಾತೀತಳವಳು
ರಾಜರಾಜೇಶ್ವರಿಯು ಶ್ರೀಮಾತೆ ಲಲಿತೆ ಲಕ್ಷ್ಮೀ
ಅರಿಷಡ್ವರ್ಗವನು ಬಹುದೂರವಿಟ್ಟು
ಭಜಿಸಿದರೆ ನೀಡುವಳು ದಿವ್ಯತೆಯರೂಪಧನವ ॥15॥

ಗುರುಪಾದಪದ್ಮಮುಖಜಶ್ರೀಸೂಕ್ತವಿದನು
ಆದರದಿ ನಿತ್ಯ ಪಠಿಸಿದರೆ ಸರ್ವಸಮೃದ್ಧಿ
ಇಹದಲ್ಲಿ ಧನಧಾನ್ಯವಾರೋಗ್ಯ ಪರದಲ್ಲಿ ಮುಕ್ತಿ
ಪುಣ್ಯಕರ್ತವ್ಯಪಥಲಭ್ಯ ಶ್ರೀದೇವಿಕೃಪೆಯಿಂ ॥16॥

ಶ್ರೀಸೂಕ್ತವಿದು ಮಹಾಲಕ್ಷ್ಮಿದೇವಿಸಂಸ್ತುತಿಯು
ಸ್ಥಿತಿತತ್ತ್ವದಧಿದೇವಶಕ್ತಿಯೇ ಲಕ್ಷ್ಮೀ ॥ಪ॥

ಶ್ರೀಸೂಕ್ತದರ್ಶಿಕಾ

ಮಹಾಲಕ್ಷ್ಮಿಯು ಹಿರಣ್ಮಯಿ ; ಅಷ್ಟೇ ಅಲ್ಲ ಹಿರಣ್ಯವೇ ಅಂದರೆ, ಬಂಗಾರವೇ ಮಹಾಲಕ್ಷ್ಮಿ. ಅವಳ ಬಣ್ಣವೂ ಬಂಗಾರದ್ದು. ಅವಳನ್ನು ನಮಗೆ ಅನುಗ್ರಹಿಸಲು ಕರೆತರುವವನು ಅಗ್ನಿ, ಜಾತವೇದ. ಎಲ್ಲರನ್ನೂ ಎಲ್ಲವನ್ನೂ ಬಲ್ಲವನು ಜಾತವೇದ, ಸಾಕ್ಷಾತ್ ಪರಮಾತ್ಮ – ಪರಮಪುರುಷ. ಅಗ್ನಿಯೆಂದರೆ ತೇಜಸ್ಸು ; ತೇಜಸ್ಸಿದ್ದಲ್ಲಿ ಶೌರ್ಯ, ಉತ್ಸಾಹಗಳು. ಉತ್ಸಾಹ-ಶೌರ್ಯಗಳಿಲ್ಲದಿದ್ದಲ್ಲಿ ಲಕ್ಷ್ಮಿಯು ಎಂದಿಗೂ ಸುಳಿಯಳು. ಮನುಷ್ಯನು ಉತ್ಸಾಹದಿಂದ ಮುನ್ನುಗ್ಗಿ ಕಾರ್ಯತತ್ಪರನಾದರೆ ಮಾತ್ರ ಹಣದ ಗಳಿಕೆ, ಧನ-ಧಾನ್ಯಗಳ ಸಮೃದ್ಧಿ. ಅದಕ್ಕಾಗಿ 'ತಾಂ ಮ ಆವಹ ಜಾತವೇದ' ಎಂದು ಅಗ್ನಿಯನ್ನು ಪ್ರಾರ್ಥಿಸಿದ್ದು. ಲಕ್ಷ್ಮಿಯು ಅನುಕೂಲಳಾಗಬೇಕಿದ್ದರೆ ಪರಮಾತ್ಮನ ಅನುಗ್ರಹವೂ ಅಷ್ಟೇ ಮುಖ್ಯ. ಪರಮಾತ್ಮಾನುಗ್ರಹ ಮತ್ತು ಉತ್ಸಾಹಪೂರಿತಕಾರ್ಯತತ್ಪರತೆಗಳೆಂಬ ಎರಡೂ ಅರ್ಥಗಳಲ್ಲಿ ಇಲ್ಲಿ ಜಾತವೇದನನ್ನು ದರ್ಶಿಸಲಾಗಿದೆ.

ಹಿರಣ್ಯವು ಗುರುಗ್ರಹವನ್ನು ಸೂಚಿಸುವುದು. ಗುರುಗ್ರಹದ ಧಾತು ಹಿರಣ್ಯ ಅರ್ಥಾತ್ ಬಂಗಾರ. ಆದುದರಿಂದ ಬಂಗಾರವನ್ನು ಗುರುಗ್ರಹವನ್ನಾಗಿಯೂ ಭಾವಿಸಲಾಗುವುದು. ಜಾತಕದಲ್ಲಿ ಗುರುಗ್ರಹದ ಬಲವಿದ್ದಲ್ಲಿ ವಿವಾಹ – ಸಂತಾನಾದಿ ಸಮೃದ್ಧಿಗಳು. ಆ ಅರ್ಥದಲ್ಲಿಯೂ ಲಕ್ಷ್ಮಿಯನ್ನು ಹಿರಣ್ಮಯಳನ್ನಾಗಿ ಕಂಡದ್ದು. ಹಿರಣ್ಯ ಅನ್ನುವ ಶಬ್ದಕ್ಕೆ

ವೀರ್ಯ ಅನ್ನುವ ಅರ್ಥವೂ ಇದೆ. ಸಂತಾನಕಾರಕ ಧಾತು ವೀರ್ಯ ; ಮನೆತನವನ್ನು ಮುನ್ನಡೆಸುವುದು ಸಂತಾನ ; ಜಗತ್ತು ನಿರಂತರವಾಗಿ ಮುನ್ನಡೆಯಲು ಸಂತಾನಪರಂಪರೆ ಅತ್ಯವಶ್ಯ ; ಗಳಿಸಿದ ಸಂಪತ್ತಿಗೆ ಹಾಗೂ ಆ ಸಂಪತ್ತಿನ ಸದ್ವಿನಿಯೋಗಕ್ಕೆ ಮತ್ತು ದೇಹಾವಸಾನದ ನಂತರದ ಉತ್ತರಕ್ರಿಯಾದಿಗಳನ್ನು ಹಾಗೂ ವರುಷ–ವರುಷಗಳ ಹಿರಿಯರ ದಿನಾಚರಣೆಯನ್ನು ನಡೆಸಲು ಸಂತಾನವು ಬೇಕೇ ಬೇಕು. ಈ ಎಲ್ಲ ಅರ್ಥಗಳಲ್ಲಿ ಲಕ್ಷ್ಮಿಯನ್ನು ಋಷಿಯು ದರ್ಶಿಸಿದ್ದು. ಸ್ವರ್ಣಮಯ ಮಹಾಲಕ್ಷ್ಮಿಯೇ ಗುರುಗ್ರಹವೂ ಆಗಿ ಜೀವಾತ್ಮಕಾರಕಳಾಗಿರುತ್ತಾಳೆ.

ಈ ಸೂಕ್ತದ ಎರಡನೆಯ ಶಬ್ದ 'ಹರಿಣೀಂ'. 'ಹಿರಣ್ಯವರ್ಣಾಂ ಹರಿಣೀಂ' ಎಂದು ಮುಂತಾಗಿ ಲಕ್ಷ್ಮಿಯನ್ನು ಇಲ್ಲಿ ಸ್ತುತಿಸಲಾಗಿದೆ. 'ಹರಿಃ ನಿಯತೇ ಅನಯಾ ಇತಿ ಹರಿಣೀ' – ಹರಿಯನ್ನು, ಸ್ಥಿತಿತತ್ತ್ವಾಧಿದೇವನನ್ನು, ಅರ್ಥಾತ್ ಸ್ಥಿತಿತತ್ವವನ್ನು ಅಂದರೆ ಬದುಕನ್ನು ಮುನ್ನಡೆಸುವವಳು ಲಕ್ಷ್ಮೀ ಅರ್ಥಾತ್ ಸಂಪತ್ತು. ಧನ–ಧಾನ್ಯಾದಿಗಳಿಲ್ಲದೆ ಬದುಕಲು ಸಾಧ್ಯವಿಲ್ಲ ; ಆದುದರಿಂದ ಸ್ಥಿತಿತತ್ವಕ್ಕೆ ಮೂಲಸ್ರೋತವಾದ, ಸ್ಥಿತಿತತ್ವದ ಶಕ್ತಿಯಾದ ಸಂಪತ್ತನ್ನು ಲಕ್ಷ್ಮೀ ಎಂದು ಗುರುತಿಸಲಾಯಿತು. ಶಕ್ತಿ ಅನ್ನುವ ಶಬ್ದವು ಸ್ತ್ರೀಲಿಂಗದ್ದಾದುದರಿಂದ ಲಕ್ಷ್ಮಿಯನ್ನು ಸ್ತ್ರೀಯನ್ನಾಗಿ, ಸುಂದರಳನ್ನಾಗಿ ಚಿತ್ರಿಸಲಾಯಿತು ಹಾಗೂ ಅವಳನ್ನು ಸ್ಥಿತ್ಯ ಧಿದೇವನ, ಅಂದರೆ ವಿಷ್ಣುವಿನ ಹೆಂಡತಿಯನ್ನಾಗಿ ಕಲ್ಪಿಸಿ ಪುರಾಣಗಳಲ್ಲಿ–ವಿಷ್ಣು ಲಕ್ಷ್ಮಿಯರ ಮದುವೆಯನ್ನು ನೆರವೇರಿಸಿ ಪುರಾಣಕಾರರಾದ ಋಷಿ ಮುನಿಗಳು ಕೃತಾರ್ಥರಾದರು.

ಲಕ್ಷ್ಮಿಯನ್ನು ಮೊದಲನೆಯ ಮಂತ್ರದಲ್ಲಿಯೇ 'ಸುವರ್ಣ ರಜತಸ್ರಜಾಂ' ಎಂದೂ ಸ್ತುತಿಸಲಾಗಿದೆ. ಸುವರ್ಣವು, ಅಂದರೆ ಬಂಗಾರವು ಗುರುಗ್ರಹವಾದರೆ ಬೆಳ್ಳಿಯು ಶುಕ್ರಗ್ರಹವನ್ನು ಸೂಚಿಸುವುದು. ಪ್ರೀತಿ–ಪ್ರೇಮಗಳಿಗೆ ಅಧಿಪತಿ ಶುಕ್ರ. ರಜೋಗುಣ ಕಾರಕನಾದ ಶುಕ್ರನು ವೀರ್ಯಾಣು – ಅಂಡಾಣುಗಳ ಮಿಲನಕ್ಕೆ ಕಾರಣವಾಗುವ ಪತಿ–ಪತ್ನಿಯರ ಸಂಯೋಗಕ್ಕೆ ಪ್ರೇರಕನು. ವೀರ್ಯಾಣು–ಅಂಡಾಣುಗಳ ಸಂಯೋಗದಿಂದ ಪ್ರಜೋತ್ಪತ್ತಿ. ಈ ಅರ್ಥದಲ್ಲಿ ಶುಕ್ರಗ್ರಹವನ್ನಾಗಿಯೂ ಲಕ್ಷ್ಮಿಯನ್ನು ದರ್ಶಿಸಲಾಗುವುದು. ಗುರು–ಶುಕ್ರರೀರ್ವರೂ ಬದುಕಿಗೆ ಹಾಗೂ ಸಂತಾನದ ಮೂಲಕ ಕುಲವು ಮುಂದುವರಿಯಲಿಕ್ಕೆ ಆಧಾರವೆನಿಸುವುದರಿಂದ ಸುವರ್ಣ ಹಾಗೂ ಬೆಳ್ಳಿಯ ಹಾರಗಳಿಂದ ಶೋಭಿತಳು ಶ್ರೀ ಮಹಾಲಕ್ಷ್ಮಿ.

ಪೂರ್ವಕಾಲದಲ್ಲಿ ಆನೆ–ಕುದುರೆ–ರಥಗಳೂ ಗೋಸಂಪತ್ತೂ ಅಮಿತೈಶ್ವರ್ಯದ ಸಂಕೇತಗಳಾಗಿದ್ದವು. ಅವು ಈಗ ಕಾರು–ಬಂಗಲೆ–ಕೋಟಿಕೋಟಿ ಹಣದ ರೂಪದಲ್ಲಿ ಬದಲಾವಣೆಗೊಂಡಿವೆ. ಈ ಎಲ್ಲವೂ ಮಹಾಲಕ್ಷ್ಮಿಯ ಆವಾಸಸ್ಥಾನಗಳು. ಲಕ್ಷ್ಮಿಯಿಲ್ಲದಿದ್ದಲ್ಲಿ

ಅಲಕ್ಷ್ಮೀಪರಂಪರೆ, ಅರ್ಥಾತ್ ದಾರಿದ್ರ್ಯ ಪರಂಪರೆ ಹಾಗೂ ಲಕ್ಷ್ಮಿಯಿದ್ದಲ್ಲಿ ಅಲಕ್ಷ್ಮಿಗೆ ಆಸ್ಪದವೇ ಇಲ್ಲದಿರುವಿಕೆ. ಉತ್ತಮ ಒಡನಾಡ–ಕೀರ್ತಿಗಳೇ ಮುಂತಾದ ಎಲ್ಲವಕ್ಕೂ ಲಕ್ಷ್ಮಿಯೇ, ಐಶ್ವರ್ಯವೇ ಮೂಲ. ಅದಕ್ಕಾಗಿ ಯಜ್ಞ – ಯಾಗಾದಿಗಳು. ಬಂದ ಲಕ್ಷ್ಮಿಯು, ಗಳಿಸಿದ ಐಶ್ವರ್ಯವು ಕರಗಿ ಹೋಗಬಾರದು ; ಆದುದರಿಂದ ಲಕ್ಷ್ಮಿಯು 'ಅನಪಗಾಮಿನಿ'ಯಾಗಿ ಇರಬೇಕೆಂಬ ಅಪೇಕ್ಷೆ ಸ್ವಾಭಾವಿಕ. ಅನಪಗಾಮಿನಿಯಾದ ಲಕ್ಷ್ಮಿಗಾಗಿ, ಅಂದರೆ ಎಂದೂ ವ್ಯಯಿಸಲಾರದ ಲಕ್ಷ್ಮಿಗಾಗಿ ಅಗ್ನಿಯಲ್ಲಿ ಹೋಮ–ಹವನಗಳು. ವ್ಯಯಿಸಲಾರದ ಸಂಪತ್ತನ್ನು ಅನುಗ್ರಹಿಸೆಂದು ಜಾತವೇದನಲ್ಲಿ, ಪರಮಾತ್ಮನಲ್ಲಿ ಪ್ರಾರ್ಥನೆಯು ಪದೇ ಪದೇ ನಡೆಯುತ್ತದೆ.

ಶ್ರೀಃ ಅರ್ಥಾತ್ ಲಕ್ಷ್ಮಿಯಿದ್ದಲ್ಲಿ ಆನಂದ, ದಮನಾತೀತತ್ವ ಅರ್ಥಾತ್ ಅಪಾರಶಕ್ತಿ ಇವುಗಳು ನೆಲೆಸಿರುತ್ತವೆ. ಇವು ನೆಲೆಸಿರಬೇಕು ಅನ್ನುವ ಅರ್ಥದಲ್ಲಿ ಅನುಕ್ರಮವಾಗಿ ಆನಂದ, ಕರ್ದಮ, ಚಿಕ್ಲೀತರೆಂಬ ಋಷಿಗಳನ್ನು ಈ ಸೂಕ್ತದಲ್ಲಿ ಪ್ರಸ್ತಾಪಿಸಲಾಗಿದೆ. ಈ ಋಷಿಗಳು ಈ ಸೂಕ್ತದ ದರ್ಶನಗೈದವರೆಂದು ಸೂಚಿಸಲಾಗಿದೆ. 'ಕರ್ದಮೇನ ಪ್ರಜಾಭೂತಾ' ಎಂದು ಹೇಳುತ್ತ ಅಂದರೆ ಕರ್ದಮನಿಂದಾಗಿ ನೀನು ಆತನ ತಾಯಿಯೆನಿಸಿದೆ ಎಂದು ಹೇಳುತ್ತ ಈ ಮೂರೂ ಋಷಿಗಳೂ ಇಲ್ಲಿ ಪ್ರಮುಖವಾಗಿ ಬರುವಂತೆ ಯೋಜಿಸಲಾಗಿದೆ. ಈ ಶ್ರೀಸೂಕ್ತದಲ್ಲಿ ಬರುವ ಲಕ್ಷ್ಮಿಯ ವರ್ಣನೆಯಲ್ಲಿ ಎಲ್ಲಿಯೂ ಆಕೆ ಸಮುದ್ರರಾಜನ ಪುತ್ರಿಯೆಂದಾಗಲೀ ಅಥವಾ ಭೃಗುಮಹರ್ಷಿ – ಖ್ಯಾತಿದೇವಿಯರ ಪುತ್ರಿಯೆಂದಾಗಲೀ ಪ್ರಸ್ಥಾಪಿತವಾಗಿಲ್ಲ. ಈ ಪುತ್ರೀದ್ವಯತ್ವವು ವೇದಕಾಲಾನಂತರದ ಪುರಾಣಗಳಲ್ಲಿ ಬರುವಂಥಾದ್ದು. ಪುರಾಣಗಳ ಪ್ರಭಾವದಿಂದಾಗಿ ಮುಂದೆ 'ಲಕ್ಷ್ಮೀಂ ಕ್ಷೀರಸಮುದ್ರರಾಜತನಯಾಂ......' ಎಂದು ಮುಂತಾದ ಸ್ತೋತ್ರಗಳು ಹುಟ್ಟಿಕೊಂಡವು. ಶ್ರೀಸೂಕ್ತದಲ್ಲಿಯ 'ಶ್ರೀಂ' ಶಬ್ದವು ಓಂಕಾರಕ್ಕೆ ಪರ್ಯಾಯವಾದುದು ; ಓಂಕಾರದಷ್ಟೇ ಪ್ರಭಾವ ಹಾಗೂ ಶಕ್ತಿತರಂಗಯುಕ್ತವಾದುದು ಶ್ರೀಂಕಾರ. ಜಾತವೇದನೆನಿಸಿದ ಪರಾತ್ಪರನ, ಪರಮಾತ್ಮನ ಶಕ್ತಿಯನ್ನು ಶ್ರೀಂ ಎಂದು ಕರೆದು ಅದನ್ನು ಐಶ್ವರ್ಯದ ಅಧಿದೇವತೆಯನ್ನಾಗಿ ದರ್ಶಿಸಿ ಲಕ್ಷ್ಮೀಃ ಎಂದು ಹೇಳಲಾಯಿತು. ಪರಾತ್ಪರನೇ ಕೃಪೆಮಾಡಿ ತನ್ನ ಶಕ್ತಿಯು ನಮಗೆ ಅನುಗ್ರಹಿಸುವಂತೆ ಮಾಡಬೇಕಾಗಿರುವುದನ್ನು ಮನಗಂಡು 'ಜಾತವೇದೋ ಮ ಆವಹ ಲಕ್ಷ್ಮೀಂ' ಎಂದು ಆ ಪರಾತ್ಪರನನ್ನು ಬಿನ್ನವಿಸಲಾಯಿತು. ಆತನು ಕರೆತಂದಾಗ ನಮಗೆ ಅನುಗ್ರಹಿಸಿದ ಮಹಾಲಕ್ಷ್ಮಿಯ ಕೃಪೆಯಿಂದ ಲಭಿಸಿದ ಧನಸಂಪತ್ತು ಕೇವಲ ಸ್ವಾರ್ಥಕ್ಕಲ್ಲದೆ ಪರರ ಏಳಿಗೆಗಾಗಿ, ಸಂತೋಷಕ್ಕಾಗಿ ವಿನಿಯೋಗಿಸುವ ದಯಾರ್ದ್ರತೆಯಿರಬೇಕೆನ್ನುವುದನ್ನೂ ಇಲ್ಲಿ ಬರುವ ಮೂರು ಋಷಿಗಳು ಸೂಚಿಸುತ್ತಾರೆ.

* * * * *

೭. ಸರಸ್ವತೀ ಸೂಕ್ತ ದರ್ಶಿಕಾ

[**ಪೀಠಿಕೆ :** ಮುಖ್ಯವಾಗಿ ಋಗ್ವೇದದ ಆರನೆಯ ಮಂಡಲದಲ್ಲಿಯ ಅರವತ್ತೊಂದನೆಯ ಸೂಕ್ತದಲ್ಲಿ ಮತ್ತು ಏಳನೆಯ ಮಂಡಲದಲ್ಲಿಯ ತೊಂಬತ್ತೈದು–ತೊಂಬತ್ತಾರನೆಯ ಸೂಕ್ತಗಳಲ್ಲಿ ಸರಸ್ವತಿಯ ವರ್ಣನೆಯು ಬರುತ್ತದೆ. ಪ್ರಾಸಂಗಿಕವಾಗಿ ಇನ್ನೂ ಕೆಲವು ಕಡೆ, ಉದಾಹರಣೆಗೆ, ಋಗ್ವೇದದ ಎರಡನೆಯ ಮಂಡಲದ ನಲವತ್ತೊಂದನೆಯ ಸೂಕ್ತದಲ್ಲಿ, ಒಂದನೆಯ ಮಂಡಲದ ಮೂರನೆಯ ಸೂಕ್ತದಲ್ಲಿ, ಐದನೆಯ ಮಂಡಲದ ನಲವತ್ಮೂರನೆಯ ಸೂಕ್ತದಲ್ಲಿ ಮತ್ತು ಹತ್ತನೆಯ ಮಂಡಲದ ಹದಿನೇಳನೆಯ ಸೂಕ್ತದಲ್ಲಿಯೂ ಸರಸ್ವತಿಯ ಪ್ರಸ್ತಾಪವು ಬರುತ್ತದೆ. ಈ ಎಲ್ಲವನ್ನೂ ಸೇರಿಸಿ ಮೇಧಾಸೂಕ್ತವೆಂದು ಪಠಿಸುವ ಪದ್ಧತಿಯೂ ಇದೆ. ಇವುಗಳೆಲ್ಲವುಗಳ ಪ್ರಮುಖ ಭಾವಾರ್ಥಗಳೊಂದಿಗಿನ ಆಧ್ಯಾತ್ಮಿಕ ವಿವರಣೆಯು ಇಲ್ಲಿದೆ. ಮುಂದೆ ಪುರಾಣಗಳಲ್ಲಿ ಸರಸ್ವತಿಯು ವಾಗ್ದೇವಿಯೆಂದೇ ಖ್ಯಾತಳಾಗಿದ್ದಾಳೆ. ಸರಸ್ವತಿಯು ವಾಗ್ದೇವಿಯಾಗಿ ವಾಗ್ರೂಪದಲ್ಲಿ ಬರುವಾಗ ನಾಭಿಯಿಂದ ಮೇಲೆದ್ದು ನಾಲಿಗೆಗೆ ಬಂದು ತಲ್ಪುವಲ್ಲಿ ಪರಾ–ಪಶ್ಯಂತೀ–ಮಧ್ಯಮಾ–ವೈಖರಿಗಳೆಂಬ ನಾಲ್ಕು ಹಂತಗಳನ್ನು ಗುರುತಿಸಲಾಗುತ್ತದೆ. ಓಂಕಾರ ಹಾಗೂ ವಿದ್ಯಾಪ್ರತೀಕವಾಗಿ ಗಾನರೂಪದ ವೀಣೆಯನ್ನು ಸರಸ್ವತಿಯು ಧರಿಸಿರುತ್ತಾಳೆ. ಅವಳು ಬ್ರಹ್ಮನ ಪತ್ನಿಯಾಗಿಯೂ ಪುರಾಣಗಳಲ್ಲಿ ಚಿತ್ರಿತಳಾಗಿದ್ದಾಳೆ. ಬ್ರಹ್ಮ ಅಂದರೆ ಇಲ್ಲಿ ಶಬ್ದಬ್ರಹ್ಮ. ಶಬ್ದಗಳು ನಾಮಪದ–ಆಖ್ಯಾತ (=ಕ್ರಿಯಾಪದ)–ಉಪಸರ್ಗ–ನಿಪಾತ (ಅವ್ಯಯ)ಗಳೆಂದು ನಾಲ್ಕು ವಿಧಗಳಿರುವುದರಿಂದ ಬ್ರಹ್ಮನನ್ನು ಚತುರ್ಮುಖನೆಂದು ಚಿತ್ರಿಸಲಾಯಿತು. ಈ ಎಲ್ಲ ಅರ್ಥಗಳನ್ನು ಇಲ್ಲಿಯ 18ನೆಯ ನುಡಿಯು ತಿಳಿಸುತ್ತದೆ.]

ವಾಗ್ದೇವಿ ಸರಸ್ವತಿಯು ಋಗ್ವೇದದಲಿ ನದಿಯು
ಅಧ್ಯಾತ್ಮದಲಿ ಸರಸ್ವತಿಯು ತಾ ಸುಷುಮ್ನೆಯಾಗಿಹಳು ॥ಪ॥

ಸ್ವಾರ್ಥಲೋಭಗಳೆಂಬ ಅಸುರರನು ನಾಶಗೈವವಳು
ಅಜ್ಞಾನವೆಂಬ ವೃತ್ರಾಸುರನನ್ನು ಮಥಿಸುವವಳು
ವಧ್ರ್ಯಶ್ವಋಷಿಗೆ ದಿವೋದಾಸನೆಂಬ ಮಗನನ್ನು
ಕರುಣಿಸಿದ ಮಹಾಮಾತೆಯಾ ಸರಸ್ವತೀದೇವಿ ॥1॥

ರಸಸಹಿತ ನಾಲಿಗೆಯ ಮೇಲೆ ಸರಿದು ಬರುವವಳು
ಸರಸ್ವತಿಯಿಹಳು ತಚ್ಛಬ್ದದರ್ಥದಂತೆ
ಸರಸವೆಂದರೆ ಸುಗಮ ಸುಲಲಿತವು ಮುಂದೆ
ವಾಗ್ದೇವಿಯಿೇಕೆ ಸರಸದಲಿ ಸರಿದಾಡುವವಳು ॥2॥

ಸೃಷ್ಟಿವಿಮುಖತೆಗೆಳೆಸಿ ಜ್ಞಾನಮಾರ್ಗದಲಿ
ಹೊರಟ ಜೀವಾತ್ಮವೇ ವಧ್ರ್ಯಶ್ವ ಋಷಿಯು
ಆ ದಿಸೆಯ ಕರ್ಮೋಚಿತಫಲವು ದಿವ್ಯದರ್ಶನವು
ದಿವ್ಯತಾರಕತ್ತೆಯೆ ದಿವೋದಾಸತನವು ॥3॥

ತ್ವಷ್ಟ್ರನಾಮದಲಿರುವ ಸೃಷ್ಟಿಕರ್ತನ ಪುತ್ರ
ವೃತ್ರಾಸುರನವನತಿತಮೋಗುಣವು ನೋಡು
ಎಲ್ಲವಕ್ಕೂ ಮೂಲ ಸೃಷ್ಟಿಕರ್ತನೆಂಬರ್ಥದಲ್ಲಿ
ವೃತ್ರಾಸುರನವನು ತ್ವಷ್ಟೃಪುತ್ರನಾಗಿಹನು ॥4॥

ಅತಿತಮೋಗುಣವು ಮನವನಾವರಿಸುವುದೇ
ಇಂದ್ರನಿಗೆ ವೃತ್ರನಿಂದೊದಗುವಾಕ್ರಮಣ ನಿಜದಿ
ಇದರಿಂದ ಜೀವಾತ್ಮಕಧಃಪಯಣ ನಿಶ್ಚಿತವು
ಜ್ಞಾನದಳೀ ಸರಸ್ವತಿಯು ವೃತ್ರಾಸುರವಿಘಾತಕಳು ನೋಡು ॥5॥

ಸರಸ್ವತಿಯು ತನ್ನಯ ಸುತೀಕ್ಷ್ಣ ಪ್ರವಾಹದಿಂದ
ಗಿರಿಗಳನು ಭೇದಿಸುತ ವೃಕ್ಷಗಳನುರುಳಿಸುತ್ತ
ಮುಂದೆ ಮುಂದಕೆ ಸಾಗುವ ತತ್ತ್ವದಲ್ಲಿಹುದು
ಅಜ್ಞಾನಗಳ ವಿವಿಧತೆಗಳನು ವಿಭೇದಿಸುವ ತಥ್ಯ ॥6॥

ಅಸುರರಪಹರಿಸಿದ ಭೂಮಿಯನು ದೊರಕಿಸಿಕೊಟ್ಟು ಮನುಜರಿಗೆ
ಉಪಕರಿಸಿದತಿದೃಢಶಕ್ತಿಯುತಳೀಕೆ ಶ್ರೀ ಸರಸ್ವತಿಯು
ಭೂತತ್ತ್ವಾವರಿಸಿದ ತಮೋಗುಣದ ನಿವಾರಣೆಯು ಇಲ್ಲಿ
ಅನಾವೃಷ್ಟಿಯಿಂದಾದ ತೊಂದರೆಯ ದೂರೀಕರಣ ಮತ್ತೆ ॥7॥

ಅನ್ನವೇ ಬ್ರಹ್ಮವಾಗಿರಲನ್ನವನು ನೀಡುವ ದೇವಾತ್ಮಳವಳು
ಸ್ತುತಿಗೆ ತಾನೊಲಿದು ಬರುವವಳಾ ದೇವಿ ಸರಸ್ವತಿಯು
ಅಜ್ಞಾನದೊಂದಿಗೆ ಯುದ್ಧ ನಡೆದಾಗಲೆಲ್ಲ ಜೀವಾತ್ಮರಕ್ಷಕಳು ಅವಳು
ನದಿಯಾಗಿ ನಿಂತು ಬರಗಾಲವನು ಭೇದಿಸುತ್ತಿಹಳು ॥8॥

ಸರಸ್ವತಿಯು ತಾ ಭಗಿನಿಯರಲ್ಲೊಬ್ಬಳೆನ್ನುವುದು
ಗಂಗೆ–ಯಮುನೆಯರೊಂದಿಗೆ ಪ್ರಮುಖಳಿವಳೆನ್ನುವುದು
ಋಷಿಗಳಿವಳನೋಲೈಸುವುದು ಸ್ವರ್ಣರಥವಿವಳದೆನ್ನುವುದು
ಅಧ್ಯಾತ್ಮದಲ್ಲಿವಳ ಮಹತ್ವವನು ದೃಢಪಡಿಸುತಿಹವು ॥9॥

ಮೂರುಲೋಕಗಳಲ್ಲಿ ವ್ಯಾಪಕಳಾಗಿ ತ್ರಿಷಧಸ್ಥಳೆನಿಸಿದ್ದು
ಸಪ್ತಧಾತುಪ್ರಧಾನಳೆಂದಿವಳನ್ನು ವೇದ ಸ್ತುತಿಸುವುದು
ಪರ್ವತದ ತುದಿಯಿಂ ಸಮುದ್ರಪರ್ಯಂತ ವ್ಯಾಪ್ತಳೆನ್ನುವುದು
ಸುಷುಮ್ನಾನಾಡಿಯೇ ಸರಸ್ವತಿಯೆಂಬುದನು ಸ್ಥಿರಗೊಳಿಸುತಿಹವು ॥10॥

ಗಂಗೆಯೆಂದರೆ ಸೂರ್ಯಸಂಬಂಧಿ ಪಿಂಗಳಾ ನಾಡಿ
ಇಡಾನಾಡಿಯೇ ಯಮುನೆ ತಾ ಚಂದ್ರಸಂಬಂಧಿ
ಮಾನವನ ಸಪ್ತಪ್ರಮುಖನಾಡಿಗಳೆ ಸಪ್ತನದಿಗಳಾಗಿಹವು
ಸರಸ್ವತೀನದಿಯಧ್ಯಾತ್ಮದ ಸುಷುಮ್ನಾನಾಡಿ ದಿಟದಿ ॥11॥

ಸುಷುಮ್ನೆಯನು ಸೇವಿಪರು ಯೋಗಸಾಧಕರೆಲ್ಲ
ಸ್ವರ್ಣಗುರುಸೂಚಕವು ನಾಡಿಗಳಲ್ಲಿ ಗುರು ಸುಷುಮ್ನೆ
ಬ್ರಹ್ಮ–ವಿಷ್ಣು–ರುದ್ರಗ್ರಂಥಿಗಳನು ವ್ಯಾಪಿಸಿದ ತ್ರಿಷಧಸ್ಥಳೀಕೆ
ಗುಪ್ತಗಾಮಿನಿಯಾಗಿ ಸರಸ್ವತಿಯು ವ್ಯಾಪಿಸಿಹಳಿಹ
–ಪರ–ಮೋಕ್ಷಗಳೆಂಬ ಮೂರುಲೋಕಗಳ ॥12॥

ಸಹಸ್ರಾರದಿಂ ಜಲತತ್ತ್ವಕಾಧಾರ ಮೂಲಪರ್ಯಂತ
ವ್ಯಾಪಿಸಿದೆ ಸರಸ್ವತಿಯ ಹರಿವು ಸುಷುಮ್ನೆಯೆಂದೆನಿಸಿ
ಇದರಿಂ ಸಂಸ್ತುತಳು ಗಿರಿಯಿಂ ಸಮುದ್ರಮೂಲಪರ್ಯಂತ
ವ್ಯಾಪ್ತಳಿವಳೆನ್ನುವುದಧ್ಯಾತ್ಮದಲ್ಲಿ ತುಂಬ ದಿಟವು ॥13॥

ಸರಸ್ವತಿಯ ಕೃಪೆಯಿಂದ ಮಾನವರು ಜಗದಲ್ಲಿ
ದಿವ್ಯ–ಪಾರ್ಥಿವಲೋಕಗಳಗ್ನಿಯನು ಪಡೆವರೆಂಬ ಮಾತಿನಲಿ
ಪಾರ್ಥಿವಾಗ್ನಿಯದು ಲೋಕವಿದ್ಯೆಯಿರಲಧ್ಯಾತ್ಮ ಸಾಧಕವು ದಿವ್ಯಾಗ್ನಿ
ದ್ವಿವಿಧಾಗ್ನಿಪ್ರದಳೀ ಸರಸ್ವತಿಯು ನದಿಯಾಗಿ ಸುಷುಮ್ನೆಯಾಗಿ ॥14॥

ದೇವಗಣಸಖಿಯೆಂದು ಮರುತ್ಸಖಿಯೆಂದು ಸರಸ್ವತಿಯು
ಬಹುಖ್ಯಾತಳಿಹಳಿಲ್ಲಿ ಪ್ರಾಣಾಯಾಮಸಹಿತಳಾಗೀಕೆ
ದಿವ್ಯತ್ವವನು ಬೆಳಗಿಸುವ ತತ್ತ್ವವಡಗಿಹುದು
ದಿವ್ಯತ್ವದಿಂ ಜೀವಾತ್ಮನಿಗೆ ಪರಮಾತ್ಮಪದವು ॥15॥

ದೇವತೆಗಳೊಡನೀಕೆ ನಮಸ್ಕರಣಪ್ರಕ್ರಿಯೆಗೆ
ಪಿತೃಗಳೊಡನೀಕೆ ಸ್ವಧಾತ್ಮಕದ ಗೌರವಕೆ
ಪಾತ್ರಳಾಗೀರ್ವರಿಂ ಪ್ರಾರ್ಥಿಸಲ್ಪಡುವವಳು ವಾಣೀ
ಶ್ರೀವಿದ್ಯೆಯೆನಿಸಿದ ಶ್ರೀಮಾತೆ ಸರಸ್ವತಿಯು ದಿಟದಿ ॥16॥

ಜಲಶ್ರೇಷ್ಠ–ನದಿಶ್ರೇಷ್ಠ–ದೇವತಾಶ್ರೇಷ್ಠಳಾಗಿದ್ದು
ವಾಗಧಿದೇವಿ ತಾನೈಶ್ವರ್ಯ–ಶಕ್ತಿ–ಸಂಗಾತಿ–ಸಂತಾನಪ್ರದಳು
ಸರಸ್ವತಿಯಿಹಳು ಮುಂದೆ ತಾನೈಂಬೀಜಮೂಲಳಾಗಿ
ಬ್ರಹ್ಮಪತ್ನಿಯೂ ತಾನೆಂದೆನಿಸಿ ಬುದ್ಧಿಪ್ರಕಾಶಕಳು ತಾನಾಗಿ ॥17॥

ಶ್ವಾಸೋಚ್ಛ್ವಾಸಕ್ರಿಯಾಯುತಳಾಗಿ ಮರುತ್ಸಖಳೆನಿಸಿ ಮುಂದೆ
ಪರಾ–ಪಶ್ಯಂತೀ–ಮಧ್ಯಮಾ–ವೈಖರಿಗಳೆಂಬ
ಚತುರ್ಭುಜಳಾಗಿ ಓಂ–ವಿದ್ಯಾ–ಗಾನತಾನೆಂಬ ವೀಣಾಧರೆ ಸರಸ್ವತಿಯಿವಳು
ನಾಮಾಖ್ಯಾತೋಪಸರ್ಗನಿಪಾತಗಳೆಂಬ ಚತುರ್ಮುಖಬ್ರಹ್ಮಪತ್ನಿಯಾಗಿ ॥18॥

ಘೃತಸ್ರಾವಕಳು–ರಸಸ್ರಾವಕಳು–ಸರಸ್ವತಿಯು ಪರಮಮೇಧಾ
ಸಹಸ್ರಾರಸುವ್ಯಾಪ್ತಳಾಗೀಕೆ ಸ್ರವಿಸುವಳು ಪರಮಾನಂದರಸವ
ಸಾಧಕರ ಸರ್ವಸ್ವ ಪರಮಪುರುಷಾರ್ಥವದು
ಪರಮಗುರುಪಾದಕರುಣೆಯಿಂ ಸಿದ್ಧಿಸಲಿ ಪರಮಮೇಧಸ್ಸು ॥19॥

ವಾಗ್ದೇವಿ ಸರಸ್ವತಿಯು ಋಗ್ವೇದದಲಿ ನದಿಯು
ಅಧ್ಯಾತ್ಮದಲಿ ಸರಸ್ವತಿಯು ತಾ ಸುಷುಮ್ನೆಯಾಗಿಹಳು ॥ಪ॥

ಸರಸ್ವತೀಸೂಕ್ತದರ್ಶಿಕಾ

ಸರಸ್ವತಿಯು ಮುಖ್ಯವಾಗಿ ಬರುವುದು ನದಿಯ ರೂಪದಲ್ಲಿ. ವಧ್ರ್ಯಶ್ವ ಅನ್ನುವ ಋಷಿಗೆ ದಿವೋದಾಸನೆಂಬ ಮಗನನ್ನು ಕರುಣಿಸಿದ್ದು, ತ್ವಷ್ಟ್ರಪುತ್ರ ವೃತ್ರಾಸುರನನ್ನು ಕೊಂದದ್ದು ಮುಂತಾದವುಗಳು ಸರಸ್ವತೀ ದೇವಿಯ ವರ್ಣನೆಗಳಲ್ಲಿ ಪ್ರಮುಖವಾಗಿ ಬರುತ್ತವೆ. ಇವಳ ಆರಾಧನೆಯಿಂದ ಪಾರ್ಥಿವಾಗ್ನಿ – ದಿವ್ಯಾಗ್ನಿಗಳೂ ಲಭಿಸುತ್ತವೆ ಎಂದೂ ವರ್ಣಿಸಲಾಗುತ್ತದೆ. ಇವಳನ್ನು ಚತುರ್ಮುಖ ಬ್ರಹ್ಮನ ಮಡದಿಯನ್ನಾಗಿ ರೂಪಿಸಿ ಪುರಾಣಗಳು ಕಥೆಗಳನ್ನು ಹೆಣೆದಿವೆ. ಪರಮಮೇಧಸ್ಸನ್ನು ಕರುಣಿಸುವ ಸರಸ್ವತಿಯು ಅಧರದಲ್ಲಿ ರಸಸ್ರಾವತೆಯನ್ನು ಕರುಣಿಸುವವಳು. ಓ; ಶ್ರೀಂಗಳಿಗೆ ಸಮಾನವಾದ 'ಐಂ' ಅನ್ನುವುದು ಸರಸ್ವತಿಯ ಮೂಲಮಂತ್ರ.

ಆಧ್ಯಾತ್ಮಿಕವಾದ ಅನೇಕಾರ್ಥಗಳೊಂದಿಗೆ ಸರಸ್ವತಿಯು ಗಮನವನ್ನು ತನ್ನೆಡೆಗೆ ಸೆಳೆಯುವಳು. ಸರಸ್ವತೀನದಿಯಾಗಿ ಈ ಮಾತೆಯು ಗಂಗಾ–ಯಮುನೆಯರ ಮಧ್ಯದಲ್ಲಿ ಅದೃಶ್ಯರೂಪದಲ್ಲಿ ವಿರಾಜಿಸುತ್ತಾಳೆ. ಇಲ್ಲಿ ಆಧ್ಯಾತ್ಮಿಕ ಅರ್ಥಕ್ಕೆ ಹೋಗಲೇಬೇಕಾಗುತ್ತದೆ. ಏಕೆಂದರೆ ಸರಸ್ವತೀನದಿಯು ಗುಪ್ತಗಾಮಿನಿ. ತೀರ್ಥರಾಜವೆನಿಸಿದ ಪ್ರಯಾಗದಲ್ಲಿ ಗಂಗಾ–ಯಮುನಾನದಿಗಳೊಂದಿಗೆ ಸರಸ್ವತಿಯೂ ಸಂಗಮಿಸುವವಳು ಎಂದು ಹೇಳಲಾಗುತ್ತಿದ್ದರೂ ಆಕೆ ನದಿಯ ರೂಪದಲ್ಲಿ ಅಲ್ಲಿ ಕಂಡುಬರುವುದೇ ಇಲ್ಲ. ಅಲ್ಲಿ ಕಂಡುಬರುವುದು ಎರಡೇ ನದಿಗಳು, ಗಂಗೆ–ಯಮುನೆಯರು ಮಾತ್ರ. ಆದರೆ ಪರಂಪರಾಗತವಾಗಿ ಹೇಳುತ್ತ ಬಂದಿರುವುದು ಗುಪ್ತವಾಗಿ, ಯಾರಿಗೂ ಕಾಣದಂತೆ ಹರಿದು ಬಂದು ಸರಸ್ವತಿ ನದಿಯು ಅಲ್ಲಿ ಸೇರಿಕೊಳ್ಳುತ್ತದೆ ಎಂಬುದಾಗಿ. ಅಧ್ಯಾತ್ಮದಲ್ಲಿ ಗಂಗಾನದಿಯೆಂದರೆ ಸೂರ್ಯನಾಡಿಯಾದ ಪಿಂಗಳಾನಾಡಿ ಹಾಗೂ ಯಮುನೆಯೆಂದರೆ ಚಂದ್ರನಾಡಿಯಾದ ಇಡಾನಾಡಿ. ಶ್ವಾಸವನ್ನು ಜೀವಿಯು ಹೀರಿಕೊಂಡಾಗ ಮೂಗಿನ ಬಲಗಡೆಯ ಹೊಳ್ಳೆಯಿಂದ ಶ್ವಾಸವು ದೇಹದೊಳಗೆ ಹೋಗಿ ಬರುತ್ತಿದ್ದಲ್ಲಿ ಪಿಂಗಳಾನಾಡಿಯು ಕೆಲಸ ಮಾಡುತ್ತಿದೆ ಎಂದು ಅರ್ಥ. ಅದೇ ಶ್ವಾಸವು ಮೂಗಿನ ಎಡಗಡೆಯ ಹೊಳ್ಳೆಯಲ್ಲಿ ಪ್ರವೇಶಿಸುತ್ತಿದ್ದಲ್ಲಿ ಶ್ವಾಸವು ಇಡಾನಾಡಿಯ ಮೂಲಕ ಪ್ರವೇಶಿಸುತ್ತಿದೆ ಎಂದು ಅರ್ಥ. ಈ ಪಿಂಗಳಾ–ಇಡಾಗಳ ಮಧ್ಯದಲ್ಲಿ ಸುಷುಮ್ನಾನಾಡಿ ಅನ್ನುವ ನಾಡಿಯಿದೆ. ಅದು ಅನುಭವಕ್ಕೆ ಬರುವುದು ಮೂಗಿನ ಎರಡೂ ಹೊಳ್ಳೆಗಳಲ್ಲಿ ಸಮಪ್ರಮಾಣದಲ್ಲಿ ಶ್ವಾಸೋಚ್ಛ್ವಾಸವಾಗುತ್ತಿದ್ದಾಗ ಮಾತ್ರ. ಈ ಸುಷುಮ್ನೆಯನ್ನು ಸರಸ್ವತೀ ಎಂದೂ ಕರೆಯಲಾಗುವುದು.

ಯೋಗಮಾರ್ಗದಲ್ಲಿ ಪ್ರವರ್ತಿಸಬೇಕೆನ್ನುವವರು ಈ ಸುಷುಮ್ನೆಯನ್ನು ಪ್ರಧಾನವಾಗಿ ಭಾವಿಸುವರು ಏಕೆಂದರೆ ಸುಷುಮ್ನಾನಾಡಿಯಲ್ಲಿಯ ಶ್ವಾಸೋಚ್ಛ್ವಾಸವು ಮನಸ್ಸನ್ನು ಪ್ರಸನ್ನವಾಗಿಡುತ್ತದೆ. ಸಮಸ್ಥಿತಿಯಲ್ಲಿ ಇಡುತ್ತದೆ. ಲೌಕಿಕ ಸ್ಥಿತಿಯಿಂದ ಅಲೌಕಿಕ ಸ್ಥಿತಿಗೆ ಕೊಂಡೊಯ್ಯುತ್ತದೆ. ಶ್ವಾಸವು ಸುಷುಮ್ನೆಯಲ್ಲಿಯೇ ಚಲಿಸಬೇಕು ಎಂದು ಬಯಸುವವರು ಪ್ರಾಣಾಯಾಮಕ್ಕೆ ಶರಣಾಗಬೇಕಾಗುತ್ತದೆ. ಪ್ರಾಣಾಯಾಮ ದಿಂದ. ಅಂದರೆ ನಿಯಮಿತವಾದ ಶ್ವಾಸೋಚ್ಛ್ವಾಸದಿಂದ ಮನಸ್ಸು ನಿಯಂತ್ರಣಕ್ಕೆ ಬಂದು ಯೋಗಸಾಧಕನಿಗೆ ಧ್ಯಾನಕ್ಕೆ ಹಾಗೂ ಧ್ಯಾನದಲ್ಲಿ ಅಂತರಂಗಕ್ಕೆ ಧಾವಿಸಲಿಕ್ಕೆ ಅನುಕೂಲವಾಗುತ್ತದೆ. ಸಮಾಧಿಸ್ಥಿತಿಗೆ ಸುಷುಮ್ನೆಯಲ್ಲಿಯ ಶ್ವಾಸೋಚ್ಛ್ವಾಸವೇ ಪ್ರಮುಖವಾಗಿ ಅವಶ್ಯವಾದುದು. ಆಗ ಶ್ವಾಸವು ಭ್ರೂಮಧ್ಯದಲ್ಲಿಯ ಆಜ್ಞಾಚಕ್ರದವರೆಗೂ ಪ್ರವಹಿಸಿ ಮೂಲಾಧಾರದಿ ಆರೂ ಚಕ್ರಗಳನ್ನೂ ಜಾಗೃತಗೊಳಿಸುತ್ತದೆ ಹಾಗೂ ಆಜ್ಞಾಚಕ್ರದಲ್ಲಿ, ಅಂದರೆ ಭ್ರೂಮಧ್ಯದಲ್ಲಿ, ಎರಡು ಹುಬ್ಬುಗಳ ಮಧ್ಯದಲ್ಲಿ ಇಡಾ – ಪಿಂಗಳಾನಾಡಿಗಳೊಡನೆ ಸಮಾನವಾಗಿ ಚಲಿಸುತ್ತ ಆಧ್ಯಾತ್ಮಿಕವಾದ ದಿವ್ಯ ಅನುಭವಕ್ಕೆ ದಾರಿಮಾಡಿಕೊಡುತ್ತದೆ.

ಆ ಸಮಯದಲ್ಲಿ ಇಡಾ–ಪಿಂಗಳಾ–ಸುಷುಮ್ನಾನಾಡಿಗಳು ಅಲ್ಲಿ, ಭ್ರೂಮಧ್ಯದಲ್ಲಿ ಸಂಗಮಿಸುತ್ತವೆ. ಆ ಭ್ರೂಮಧ್ಯದಲ್ಲಿಯ ಆಜ್ಞಾಚಕ್ರದ ಸ್ಥಳವೇ ಆಧ್ಯಾತ್ಮಿಕವಾಗಿ ತೀರ್ಥರಾಜ ಪ್ರಯಾಗ, ದೇಹದ ರಚನೆಯಲ್ಲಿ ಸುಷುಮ್ನೆಗೆ ಸ್ವತಂತ್ರವಾಗಿ ಚಲಿಸಲು ಅನುಕೂಲತೆಯಿಲ್ಲದಿದ್ದುದರಿಂದ, ಮೂಗಿಗೆ ಎರಡೇ ಹೊಳ್ಳೆಗಳು ಇರುವುದರಿಂದ ಸುಷುಮ್ನಾಗತ ಶ್ವಾಸವಾಯುವು ಇಡಾ–ಪಿಂಗಳಾಗಳನ್ನು ಸಮವಾಗಿ ವ್ಯಾಪಿಸು ವುದರಿಂದಾಗಿ ಪ್ರಯಾಗದಲ್ಲಿ ಸರಸ್ವತೀ ನದಿಯು ಸ್ವತಂತ್ರವಾಗಿ ಕಂಡುಬರದಿರುವುದು.

ಲೌಕಿಕ ಮಾರ್ಗದಿಂದ ವಿಮುಖರಾಗಿ ಪ್ರಾಣಾಯಾಮದ ಮೂಲಕ ಯೋಗಮಾರ್ಗದಲ್ಲಿ ಪ್ರವರ್ತಿಸುವ ಯೋಗಸಾಧಕನನ್ನು ವೇದದಲ್ಲಿ ವಧ್ರ್ಯಶ್ವ ಋಷಿಯನ್ನಾಗಿ ಚಿತ್ರಿಸಲಾಗಿದೆ. ದಿವ್ಯತ್ವದೆಡೆಗೆ ಆತನಿಗಿರುವ ಗಮನವನ್ನೇ ದಿವೋದಾಸನನ್ನಾಗಿ ರೂಪಕಕ್ಕೆ ತರಲಾಗಿದೆ. 'ಆತ್ಮಾವೈಪುತ್ರನಾಮಾಸಿ' ಎಂದು ಹೇಳುತ್ತ ವೇದಗಳು ತಂದೆ ಹಾಗೂ ಮಗನನ್ನು ಏಕೋಭಾವದಲ್ಲಿ ಕಾಣುವವು. ಈ ಅರ್ಥದಲ್ಲಿ ವಧ್ರ್ಯಶ್ವನ ಯೋಗಸಾಧನೆಯ ಮುಂದುವರಿಯುವಿಕೆಯೇ ದಿವೋದಾಸ.

ಸರಸ್ವತಿಯು ತ್ವಷ್ಟ್ರನ ಮಗನಾದ ವೃತ್ರಾಸುರನನ್ನು ಕೊಂದ ವರ್ಣನೆ ವೇದದಲ್ಲಿದೆ. ತ್ವಷ್ಟ್ರನೆಂದರೆ ಎಲ್ಲವಕ್ಕೂ ಮೂಲನಾದ ಸೃಷ್ಟಿಕರ್ತ ಪರಮಾತ್ಮ. ವೃತ್ರಾಸುರನೆಂದರೆ ಆ ಪರಮಾತ್ಮನ ತ್ವಷ್ಟ್ರಭಾವದಿಂದ ಮೂಡಿ ಬಂದ ತಮೋಗುಣ. ವೇದರಾಮಾಯಣಾದಿ ಗಳಲ್ಲಿ ತಮೋಗುಣವನ್ನು ರಾಕ್ಷಸರೆಂಬ ರೂಪಕಕ್ಕೆ ಅಳವಡಿಸಲಾಗಿದೆ. ನದಿಯ

ಹರಿಯುವಿಕೆಗೆ ಅಡ್ಡಿಪಡಿಸುವ, ಅರ್ಥಾತ್ ಸುಷುಮ್ನಾನಾಡಿಯಲ್ಲಿ ಪ್ರವಹಿಸುವ ಶ್ವಾಸವಾಯುವಿಗೆ ಅಡ್ಡಪಡಿಸುವ ತಮಸ್ತತ್ತ್ವವೇ ವೃತಾಸುರ. ಆ ತಮಸ್ಸನ್ನು ನಿಗ್ರಹಿಸಿ ಶ್ವಾಸವಾಯುವು ನಿರಾಯಾಸವಾಗಿ ಚಲಿಸುವಂತೆ ಮಾಡುವ ಸುಷುಮ್ನೆಯ ಕಾರ್ಯವೇ ಸರಸ್ವತಿಯು ನಡೆಸುವ ವೃತ್ರಾಸುರವಧೆ.

ಸುಷುಮ್ನೆಯಲ್ಲಿಯ ವಾಯುಚಾಲನೆಯು ಕ್ರಮೇಣ ಅಧ್ಯಾತ್ಮಗ್ರಂಥಿಗಳಾದ ಮೂಲಾಧಾರ–ಸ್ವಾದಿಷ್ಠಾನ – ಮಣಿಪೂರ – ಅನಾಹತ–ವಿಶುದ್ಧಿ – ಆಜ್ಞಾಚಕ್ರಗಳನ್ನು ಭೇದಿಸುತ್ತ ಸಹಸ್ರಾರಕ್ಕೆ ಹೋಗಲು ಆತ್ಮಕ್ಕೆ ಅನುವುಮಾಡಿಕೊಡುತ್ತದೆ. ಆತ್ಮವು ಒಂದೊಂದೇ ಚಕ್ರವನ್ನು ಭೇದಿಸುತ್ತ ಮೇಲೇರುತ್ತಿದ್ದಂತೆ ದಿವ್ಯವಾದ ಅನುಭವಗಳು ಸಾಧಕನಿಗೆ ಲಭಿಸುತ್ತವೆ.

ಮೂಲಾಧಾರದಲ್ಲಿ, ಅದು ಪೃಥ್ವೀತತ್ತ್ವದ್ದಾದುದರಿಂದ, ಅಲ್ಲಿಯ ದಿವ್ಯಾನುಭೂತಿ ಯನ್ನು ಪಾರ್ಥಿವಾಗ್ನಿ ಎಂದು ಕರೆಯಲಾಯಿತು. ಅನಾಹತಚಕ್ರದ ಅಥವಾ ಗ್ರಂಥಿಯ ಭೇದನದಿಂದ ದಿವ್ಯವಾದ ನಾದದ ಓಂಕಾರದ ಅನುಭವವು ಅನಾಹತವಾಗಿ, ಅಂದರೆ ತಾನೇತಾನಾಗಿ ಉಂಟಾಗುವುದರಿಂದ ಹಾಗೂ ಆಜ್ಞಾಚಕ್ರಕ್ಕೆ ಹೋದಾಗ ಅಲ್ಲಿ ದಿವ್ಯ ಜ್ಯೋತಿಯ ಅನುಭವವು ಆಗುವುದರಿಂದ ಈ ಎಲ್ಲವನ್ನೂ ದಿವ್ಯಾಗ್ನಿ ಅನ್ನುವ ರೂಪಕಕ್ಕೆ ತರಲಾಯಿತು.

ಇಲ್ಲಿ ಬ್ರಹ್ಮ ಅಂದರೆ ಮೊದಲು ಸೃಷ್ಟಿಕರ್ತ ಬ್ರಹ್ಮ. ಸೃಷ್ಟಿಕ್ರಿಯೆಯಲ್ಲಿ ವೀರ್ಯಾಣುವಾಹಕ ರಸವಾಗಿ ಪ್ರವರ್ತಿಸುವ ತತ್ತ್ವವನ್ನು ಸೃಷ್ಠಿಕ್ರಿಯೆಯ ಬ್ರಹ್ಮನ ಪತ್ನಿಯೆಂದು ರೂಪಿಸಲಾಯಿತು. ಸರಸಯುಕ್ತವಾದುದು ಸರಸ್ವತೀ. ಬ್ರಹ್ಮ ಅಂದರೆ ಚತುರ್ಮುಖಬ್ರಹ್ಮನೂ ಹೌದು. ಈ ಚತುರ್ಮುಖಬ್ರಹ್ಮನು ಶಬ್ದದ ಅಧಿದೇವನು. ಶಬ್ದವು ನಾಮ (=ನಾಮಪದ). ಆಖ್ಯಾತ (=ಕ್ರಿಯಾಪದ). ಉಪಸರ್ಗ ಮತ್ತು ನಿಪಾತ (=ಅವ್ಯಯ) ಎಂದು ನಾಲ್ಕು ವಿಧ. ಈ ಅರ್ಥದಲ್ಲಿ ಶಬ್ದಬ್ರಹ್ಮನನ್ನು ಚತುರ್ಮುಖನೆಂದು ಗುರುತಿಸಲಾಯಿತು. ಶಬ್ದದಲ್ಲಿಯ ಅರ್ಥಶಕ್ತಿಯೇ ಸರಸ್ವತಿ ; ಶಕ್ತಿಯನ್ನು ಪತ್ನಿಯನ್ನಾಗಿ ಭಾವಿಸುವುದು ವೇದಪುರಾಣಗಳ ಪದ್ಧತಿ. ಆದುದರಿಂದ ಶಬ್ದಶಕ್ತಿಯು, ಅಂದರೆ, ಸರಸ್ವತಿಯು ಚತುರ್ಮುಖ ಬ್ರಹ್ಮನ ಪತ್ನಿಯೆನಿಸಿದಳು. ರಸ ಅಂದರೆ ಸತ್ವ ಅನ್ನುವ ಅರ್ಥವೂ ಇದ್ದು ಸತ್ತಯುತವಾದ ಶಬ್ದಾರ್ಥವೇ ಬ್ರಹ್ಮ – ಸರಸ್ವತಿಯರ ಜೋಡಿಯೆನಿಸುವುದು.

ಆಧ್ಯಾತ್ಮಿಕವಾಗಿ ರಸ ಅಂದರೆ ಯೋಗಸಾಧಕನ ತೀವ್ರಸಾಧನಾಕ್ರಮದಲ್ಲಿ ಕಂಡು ಬರುವ ಸಹಸಾರಪದ್ಮದಲ್ಲಿಯ ರಸಾನುಭೂತಿ. ಭ್ರೂಮಧ್ಯದ ಆಜ್ಞಾಚಕ್ರದಲ್ಲಿಯ ದಿವ್ಯಜ್ಯೋತಿಯೊಡನೆ ಆನಂದವನ್ನು ಅನುಭವಿಸುತ್ತ ಕೂರದೆ ಯೋಗಿಯು ಆ

ದಿವ್ಯಾನುಭವವನ್ನು ನಿರ್ಲಕ್ಷಿಸಿ ಇನ್ನೂ ಸಾಧನೆಯನ್ನು ಮುಂದುವರಿಸಿದಾಗ ಸಹಸ್ರಾರಕ್ಕೆ ಆತ್ಮದ ಪ್ರವೇಶವಾಗುತ್ತದೆ. ಸಹಸ್ರಾರವು ಶಿರಸ್ಸಿನಲ್ಲಿ ಇರುವ ಆಧ್ಯಾತ್ಮಿಕ ಕಮಲ. ಇದನ್ನು ಸಹಸ್ರಾರಪದ್ಮವೆಂದೂ ಕರೆಯಲಾಗುವುದು.

ಸಹಸ್ರಾರಪದ್ಮದ ಮಧ್ಯದಲ್ಲಿರುವ ಕರ್ಣಿಕೆಯಲ್ಲಿ ಆನಂದರಸವು ಉದ್ಭೂತಗೊಂಡು ಯೋಗಿಗೆ ಅತಿದಿವ್ಯ ಅನುಭವವನ್ನು ನೀಡಲು ತೊಡಗುವುದು. ಇದೇ ಯೋಗಿಯ ಪರಮಮೇಧಾನುಭೂತಿ.

ಈ ಆನಂದರಸವನ್ನು ಸ್ರವಿಸುವ ಶಕ್ತಿಯನ್ನು ಮಹಾಸರಸ್ವತೀ ಎಂದು ಗುರುತಿಸಲಾಗುವುದು. ಉಪನಿಷತ್ತುಗಳು ಹೇಳುವ ಸಾ ಪರಾಕಾಷ್ಠಾ' ಅನ್ನುವ ಉಕ್ತಿಯು ಈ ಮಹಾಸರಸ್ವತಿಗೆ ಅನ್ವಯಿಸುವುದು. ಈ ರಸಸ್ರಾವದೊಂದಿಗೆ ಮೊದಲು ಮೂಲಾಧಾರದಲ್ಲಿದ್ದ ಕುಂಡಲಿನೀ ಶಕ್ತಿಯು ಅಲ್ಲಿಂದ ಮೇಲೆದ್ದು ಸಹಸ್ರಾರವನ್ನು ತಲುಪಿ ಅಲ್ಲಿ ಮಹಾಸರಸ್ವತಿಯಾಗಿ, ಪರಾಶಕ್ತಿಯಾಗಿ ಪರಾತ್ಪರನೊಂದಿಗೆ ನೆಲಸುವುದು. ಹೀಗೆ ಶಕ್ತಿಯು ಶಿವನೊಂದಿಗೆ ಸೇರಿದಾಗ ಆತ್ಮವು ಪರಮಾತ್ಮನಲ್ಲಿ ಲೀನವಾಗುವುದು; ಈಶಾವಾಸ್ಯೋಪನಿಷತ್ತು ಹೇಳುವ ಪೂಷನ್ ಅರ್ಥಾತ್ ಮಹಾಸೂರ್ಯನ ಕಿರಣ ರೂಪದ ಆತ್ಮವು ತನಗೆ ಗಂಟು ಬಿದ್ದ ಜೀವಭಾವದಿಂದ ಬೇರ್ಪಟ್ಟು, ಅಂದರೆ ಜೀವಾತ್ಮಭಾವದಿಂದ ಹೊರಗೆ ಬಂದು ಪರಮಾತ್ಮನಲ್ಲಿ ಐಕ್ಯವಾಗುವುದು. ಇವೆಲ್ಲ ಸಾಧ್ಯವಾಗುವುದು ಸರಸ್ವತಿಯ ಆರಾಧನೆಯಿಂದ, ಅರ್ಥಾತ್ ಸುಷುಮ್ನಾನಾಡಿಯಲ್ಲಿ ಶ್ವಾಸೋಚ್ಛ್ವಾಸದ ವಾಯುವನ್ನು ಚಾಲನೆಗೊಳಿಸಿದಾಗ. ಇದಕ್ಕೆಲ್ಲ ಪ್ರಾಣಾಯಾಮದ ಅಭ್ಯಾಸ – ಸಾಧನೆಗಳು ಅತ್ಯವಶ್ಯ. ಈ ಸಾಧನೆಗೆ ಮಾರ್ಗದರ್ಶಕನಾಗಿ ಬರುವ ಗುರುವು ಪ್ರಥಮವಂದ್ಯ.

* * * * *

೮. ದುರ್ಗಾಸೂಕ್ತ ದರ್ಶಿಕಾ

ಪೀಠಿಕೆ : ಸಾಮಾನ್ಯವಾಗಿ ಸನಾತನ ಪದ್ಧತಿಯ ದೇವಪೂಜೆಯಲ್ಲಿ ನಿತ್ಯವೂ ಪಠಿಸಬೇಕಾದ ಮಂತ್ರ ದುರ್ಗಾಸೂಕ್ತ. ವೇದಮಂತ್ರಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದ ದುರ್ಗಾಸೂಕ್ತವು ಯಜುರ್ವೇದಕ್ಕೆ ಸಂಬಂಧಿಸಿದ್ದು. ತ್ರಿಷ್ಟುಪ್ ಛಂದಸ್ಸಿನಲ್ಲಿರುವ ಏಳು ಮಂತ್ರಗಳ ಈ ಸೂಕ್ತದ ಋಷಿ ಮರೀಚಿಕಾಶ್ಯಪ. ಕಶ್ಯಪ ಅಂದರೆ ನಾದತತ್ತ್ವಸಂರಕ್ಷಕನಾದ ಪರಬ್ರಹ್ಮ. ನಾದತತ್ವವೇ ಕಾಶ್ಯಪ.

'ಕಶ್–ಕಶತಿ ಇತಿ' – ಅಂದರೆ ನಾದಗೈಯುವವ ಎಂದು ಅರ್ಥ. ತನ್ನ ಮೂಲ ಹೆಸರು ಯಾವುದೇ ಇದ್ದರೂ ಸಮಾಧಿಸ್ಥಿತಿಯಲ್ಲಿ ನಾದತತ್ತ್ವವನ್ನು ಸಂದರ್ಶಿಸಿದವನು ಅಥವಾ ನಾದತತ್ತ್ವದ ವಿರಾಟ್ ಸ್ವರೂಪವೇ ಆದವನು ಕಾಶ್ಯಪನೆಂದೆನಿಸಿದ ಅನ್ನುವ ಅರ್ಥಕ್ಕನುಗುಣವಾಗಿ ತಂದೆಯೇ ಮಗನೆಂದೆನಿಸುವುದರಿಂದ ಕಾಶ್ಯಪನೆಂದರೆ ಧ್ವನಿತತ್ತ್ವವೇ ಸರಿ. ಮರೀಚಿ ಅಂದರೆ ಕಿರಣ. ಧ್ವನಿತತ್ತ್ವರೂಪದ ಪರಬ್ರಹ್ಮನ ಕಿರಣವೇ ಆಗಿ ಏಕೀಭವಿಸಿದವನು ಮರೀಚಿಕಾಶ್ಯಪನೆನಿಸಿದ ಹಾಗೂ ಅಂಥವರೆಲ್ಲ ಮರೀಚಿ ಕಾಶ್ಯಪರೆನಿಸುವರು.

ಈ ಸೂಕ್ತಕ್ಕೆ ದುರ್ಗಾಸೂಕ್ತ ಎಂಬ ಹೆಸರಿದ್ದರೂ ವಾಸ್ತವವಾಗಿ ದುರ್ಗಾ ಸ್ತುತಿಯಿರುವುದು ಎರಡನೆಯ ಮಂತ್ರದಲ್ಲಿ ಮಾತ್ರ. ಉಳಿದ ಆರೂ ಮಂತ್ರಗಳಲ್ಲಿ ಸ್ತುತಿಸಿದ್ದು ಅಗ್ನಿಯನ್ನು, ಅಗ್ನಿಯೆಂದರೆ ಇಲ್ಲಿ ಜ್ಞಾನಾಗ್ನಿ, ಭಗವದ್ಗೀತೆಯಲ್ಲಿ ಕೃಷ್ಣನು ಹೇಳಿದ್ದೆನ್ನಲಾದ "ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇSರ್ಜುನ" ಎಂಬ ಉಕ್ತಿಯಲ್ಲಿ ಬಂದ ಸರ್ವಕರ್ಮ ಫಲಗಳನ್ನು ನಿಷ್ಕ್ರಿಯಗೊಳಿಸಿ ಪರಮಾತ್ಮನಲ್ಲಿ ಪ್ರತ್ಯಗಾತ್ಮನನ್ನು ಐಕ್ಯಗೊಳಿಸಿವ ಜ್ಞಾನಾಗ್ನಿಯೇ ಇಲ್ಲಿಯ ಅಗ್ನಿ. ಈ ಅಗ್ನಿಯನ್ನು ಸ್ತ್ರೀ ಲಿಂಗದಲ್ಲಿ ಭಾವಿಸಿದಾಗ ಅದು ದುರ್ಗೆ; ಸರ್ವದುರ್ಗತಿನಾಶಿನಿಯಾದ ಮಹಾದುರ್ಗೆ. ಸಮಸ್ತ ದೇವ–ದೇವಿಯರೆಲ್ಲ 'ದಿವ್' ಎಂಬ ಧಾತ್ವರ್ಥದ ಜ್ಯೋತಿಃಸ್ವರೂಪರು ; ಕೇವಲ ಪ್ರಕಾಶವೇ ಆಗಿರುವವರು. ಅವರನ್ನು ಪುಲ್ಲಿಂಗದಲ್ಲಾದರೂ ಭಾವಿಸಬಹುದು. ಸ್ತ್ರೀಲಿಂಗದಲ್ಲೂ ಭಾವಿಸಬಹುದು. ಆ ಅರ್ಥದಲ್ಲಿಯೂ ಹಾಗೂ ಈ ಮಂತ್ರಗಳಲ್ಲಿ 'ದುರ್ಗಾಣಿ' ಹಾಗೂ 'ದುರ್ಗಹಾ' ಎಂಬ ಶಬ್ದಗಳು ಬಂದದ್ದರಿಂದಲೂ ಈ ಸೂಕ್ತವನ್ನು 'ದುರ್ಗಾಸೂಕ್ತ' ಎಂದೇ ಕರೆಯಲಾಯಿತು. ಇಲ್ಲಿರುವ ಅಗ್ನಿ–ದುರ್ಗೆಯರಲ್ಲಿ ಎಂದಿಗೂ ಭೇದವೆಣಿಸಲಾಗದು.

ಯೋಗಸಾಧನೆಯಿಂದ ಮೂಲಾಧಾರದಲ್ಲಿ ಜಾಗೃತಗೊಂಡ ಕುಂಡಲಿನೀಶಕ್ತಿಯೇ ಇಲ್ಲಿಯ ಅಗ್ನಿ ಅಥವಾ ದುರ್ಗೆ. ಕುಂಡಲಿನಿಯು ಅಗ್ನಿವರ್ಣದಲ್ಲಿದ್ದು ಅಗ್ನಿಯಂತೆಯೇ ಕಾಣುವುದರಿಂದಾಗಿ ಅದು ಅಗ್ನಿ ಹಾಗೂ ಕುಂಡಲಿನಿಯು ದುರ್ಗಮವಾದ ಸುಷುಮ್ನಾನಾಡಿಯ ಮೂಲಕ ಮೇಲೇರುವುದರಿಂದಾಗಿ ಅದು ದುರ್ಗೆ. ಭವನಾಶನವೇ ದುರ್ಗತಿನಾಶನ.

ಈ ಸೂಕ್ತದಲ್ಲಿಯ ಎರಡನೇ ಮಂತ್ರಕ್ಕೆ ವಿಶೇಷವಾದ ಶಕ್ತಿಯಿದೆ. ದುರ್ಗಾ ಬೀಜಮಂತ್ರವೆನಿಸಿದ 'ದುಂ' ಎಂಬ ಏಕಾಕ್ಷರಮಂತ್ರದೊಂದಿಗೆ ಶಕ್ತಿಬೀಜವಾದ 'ಹ್ರೀಂ' ಕಾರಪೂರ್ವಕವಾಗಿ ವಿಶೇಷವಾಗಿ ಧ್ಯಾನಿಸಿದಲ್ಲಿ ಇದರಲ್ಲಿಯ 'ತಾಮಗ್ನಿವರ್ಣಾಂ' ಎಂದು ಆರಂಭವಾಗುವ ಎರಡನೆಯ ಮಂತ್ರವು ಮೋಕ್ಷವನ್ನು ಕರುಣಿಸಬಲ್ಲದು. ಅಂತ್ಯಕಾಲದಲ್ಲಿ ಪ್ರಾಣವು ಶಿರಸ್ಸಿನಲ್ಲಿಯ ಬ್ರಹ್ಮರಂಧ್ರದ ಮೂಲಕ ನಿರ್ಗಮಿಸಬಹುದಾದ ಶಕ್ತಿಯನ್ನು ಇದು ಕರುಣಿಸಬಲ್ಲದು. ಇಡೀ ಸೂಕ್ತದ ಋಷಿಸಹಿತವಾದ ಹಾಗೂ ಛಂದಸ್ಸಹಿತವಾದ ಮಂತ್ರಗಳ ನಿತ್ಯಾನುಷ್ಠಾನದಿಂದ ಲೌಕಿಕ ಜೀವನದಲ್ಲಿ ಬರಬಹುದಾದ ಸಾಮಾನ್ಯ ಹಾಗೂ ಆಭಿಚಾರಿಕ ದುರ್ಗತಿಗಳೆಲ್ಲ ದೂರವಾಗುವವು, ಭಸ್ಮಗೊಳ್ಳುವವು ಹಾಗೂ ಅಧ್ಯಾತ್ಮದ ಅರ್ಥದಲ್ಲಿ ಜೀವಾತ್ಮಕ್ಕೆ ನಿತ್ಯವೈರಿಗಳಾದ ಕಾಮ–ಕ್ರೋಧ–ಲೋಭ–ಮೋಹ–ಮದ–ಮಾತ್ಸರ್ಯಗಳು ನಿಷ್ಕ್ರಿಯಗೊಳ್ಳುವವು. ಇದರಿಂದಾಗಿ ಪ್ರತ್ಯಗಾತ್ಮವು ಜೀವಭಾವದಿಂದ ಮುಕ್ತವಾಗಿ ಪರಮಾತ್ಮನಲ್ಲಿ ಒಂದಾಗುವುದು.

ದುರ್ಗಾಸ್ತುತಿಯಲ್ಲಿ ಜಾತವೇದನಿಗೆ ಮೊದಲು ನಮನ
ಜಾತಿವೇದನಿಹನಗ್ನಿ ಜ್ಞಾನಾಗ್ನಿ ಪರಮಪುರುಷ ॥ಪ॥
ಜಾತವೇದನೆಂಬಭಿಧಾನದಿಂದ ಸುಶೋಭಿಪ ಪರಮಪುರುಷ
ಸೋಮರಸಪಾನದಿಂ ಸಂಪ್ರೀತನಾದ ಪರಮಾತ್ಮ
ದುರ್ದಮ್ಯ ಕಷ್ಟ–ಕೋಟಲೆಗಳಿಂದ ಸಾಧಕರೆಲ್ಲರನ್ನು
ಪಾರುಮಾಡುವನವನು ನಾವೆ ತಾ ನದಿಯಿಂದಲೆಂಬ ತೆರದಿ ॥1॥
ಸೋಮರಸವೇ ಇಲ್ಲಿ ದುರ್ಗೆ ತಾನಾಗಿಹಳು
ಮೂಲದಿಂ ಮೇಲೆದ್ದು ಸಹಸ್ರಾರಕ್ಕೆ ಕುಂಡಲಿನಿ ಬರಲು
ಅಲ್ಲಿ ಅವಳಾಗುವಳು ಕರ್ಣಿಕೆಯಿಂದೊಸರಿಬರುವ
ಆನಂದರಸವದುವೆ ಪರಬ್ರಹ್ಮನಿಗೆ ಪರಮಪ್ರಿಯವು ॥2॥
ಸೋಮನೆಂದರೆ ಚಂದ್ರ ಚಂದ್ರನೆಂದರೆ ಕುಂಡಲಿನಿ ದುರ್ಗೆ
ಮೂಲಾಧಾರದಿಂ ಮೇಲೆದ್ದು ಸಹಸ್ರಾಪರ್ಯಂತ
ಪಸರಿಪ ಸುಷುಮ್ನಾನಾಡಿಯದು ದುರ್ಗಮವಾದ ಗುಹೆಯು
ಆತ್ಮಷಡ್ವೈರಿಗಳ ಅಡ್ಡಿಯನು ಹಿಮ್ಮೆಟ್ಟಿ ಸಹಸ್ರಾರಕ್ಕೆ ಬಂದಾಗಲಾಕೆ ದುರ್ಗೆ ॥3॥
ಕುಂಡಲಿನಿಯೇ ದುರ್ಗೆಯವಳಗ್ನಿವರ್ಣದಲ್ಲಿ
ಶೋಭಿಪಳು ಮೂಲದಲಿ ಮತ್ತೆ ಮೇಲೆಲ್ಲ ಬಹುವರ್ಣದವಳು
ಸಾಧಕನ ತಪವೆನಿಪ ಪ್ರಾಣಾಯಾಮ–ಧ್ಯಾನ–ಸಮಾಧಿಗಳೆಂಬ
ಕರ್ಮಫಲದಿಂ ಸಶಕ್ತ ಸುತ–ರಸಿತ–ರಸಳಾಕೆ ದುರ್ಗೆ ॥4॥

ಅಗ್ನಿಯೆಂದರೆ ಜ್ಞಾನ ಬಾಳಿ ಬದುಕಲು ಜಗದಿ
ಮತ್ತದೋ ಯೋಗ–ಮಾರ್ಗದಲಿ ಬೆಳಕಾಗಿ ಬರುವ
ಜ್ಞಾನವಿದು ಲೋಕದಲಿ ಸಂತಾನವರ್ಧಕವು
ಸಂಕಷ್ಟಹರ ಮೋಕ್ಷದನು ಪರಮಾತ್ಮನಗ್ನಿ ॥5॥
ಸತ್ವ–ರಜ–ತಮವೆಂಬ ಮೂರು ಗುಣಗಳ ಮೀರಿ
ನಿಂತಿರುವ ಯೋಗಿಯವನತ್ರಿ ತಾನಾದ
ಗುಣರಹಿತನಾರೀತಿ ನಿತ್ಯಕರ್ಮದಲ್ಲಿರುವ
ಮನುಜನಲ್ಲಿಗೆ ದುರ್ಗೆಯನು ಕರೆತರುವ ತಾನಗ್ನಿದೇವ ॥6॥
ಜ್ಞಾನವೆಂಬಗ್ನಿಗೆ ನಿತ್ಯದ ಕರ್ಮವೆಂಬಾಹುತಿಯು
ನಡೆಯುತ್ತಿರುವಾಗ ಯೋಗಿ ತಾನಿತ್ಯವಿಜಯಶಾಲಿ
ಜಾಗೃತ ಕುಂಡಲಿನೀ ರೂಪದ ದುರ್ಗೆ ತಾನಾಗ
ಕಷ್ಟಗಳ ಪರಿಹರಿಪ ಬಗೆಯು ಅದ್ಭುತವು ॥7॥
ಸಾಧಕಗೆ ಸಂತತಿಯ ಸೌಖ್ಯದ ಗೊಡವೆ ಬೇಕಿಲ್ಲ
ತನಗರ್ಪಿತ ಸರ್ವಕರ್ಮಗಳಿಂದ ಸಂಪ್ರೀತನಗ್ನಿದೇವ
ಕರ್ಮಗಳಿಗನುಗುಣದ ಫಲವನ್ನು ನೀಡುತ್ತ ನಿತ್ಯ
ಸಲಹುವನು ದುರ್ಗೆಯ ಸುಪ್ರಸನ್ನತೆಯ ಜೊತೆಗೆ ॥8॥
ಜ್ಞಾನದ ವಿವಿಧ ಹಂತಗಳೆಂಬ ಗೋವುಗಳನಿಲ್ಲಿ
ವಿಶೇಷವಾಗೆಲ್ಲರಲಿ ನೆಲಸಿರುವ ಪರಮಾತ್ಮ ವಿಷ್ಣು
ನೀಡುವನವುಗಳನು ದಿನದಿನಕು ವರ್ಧಿಸುವ ತೆರದಿ
ಆಗಲೀ ಕುಂಡಲಿನಿದುರ್ಗೆ ನೀಡುವಳು ನಾಕಮೀರಿದ ಮೋಕ್ಷವ ॥9॥
ದುರ್ಗಾಸ್ತುತಿಯಲ್ಲಿ ಜಾತವೇದನಿಗೆ ಮೊದಲು ನಮನ
ಜಾತವೇದನಿಹನಗ್ನಿ ಜ್ಞಾನಾಗ್ನಿ ಪರಮಪುರುಷ ॥ಸ॥

ದುರ್ಗಾಸೂಕ್ತ ದರ್ಶಿಕಾ

ಜಾತಾನಿ ವೇದ–ಜಾತವೇದ ; ಜನ್ಮಕ್ಕೆ ಬರುವ ಪ್ರತಿಜೀವಿಯನ್ನು ಬಲ್ಲವನು ಜಾತವೇದ, ಇಲ್ಲಿ ಜಾತವೇದನೆಂದರೆ ಕೇವಲ ಅಗ್ನಿ ಎಂದು ಭಾವಿಸಲಾಗದು ; ಜ್ಞಾನನಿಧಿಯೇ ಆದ ಪರಮಾತ್ಮನೇ ಇಲ್ಲಿಯ ಜಾತವೇದ. ಆ ಜಾತವೇದನ ಶಕ್ತಿಯೇ ದುರ್ಗಾಮಾತೆ. ಆದುದರಿಂದ ಆ ಪರಮಾತ್ಮನಿಗೆ ಪ್ರಥಮ ಗೌರವ ಎಂಬ ಅರ್ಥದಲ್ಲಿ 'ಜಾತವೇದ' ಶಬ್ದವನ್ನು ಮೊದಲು ತರಲಾಗಿದೆ.

ಈ ಸೂಕ್ತಕ್ಕೆ ದುರ್ಗಾಸೂಕ್ತ ಎಂದು ಹೆಸರಿದ್ದರೂ ಎರಡನೆಯ ಮಂತ್ರದಲ್ಲಿ,

ಅರ್ಥಾತ್ ಶ್ಲೋಕದಲ್ಲಿ 'ತಾಮಗ್ನಿವರ್ಣಾಂ' ಎಂದು ಮುಂತಾಗಿ ದುರ್ಗೆಯನ್ನು ಸ್ತುತಿಸಲಾಗಿದೆಯೇ ಹೊರತು ಮತ್ತೆ ಉಳಿದ ಆರೂ ಮಂತ್ರಗಳಲ್ಲಿ ದುರ್ಗೆಯನ್ನು ನೇರವಾಗಿ ಸ್ತುತಿಸಿದ್ದು ಕಂಡುಬರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಜಾತವೇದನನ್ನು ಸ್ತುತಿಸಿದಾಗ ಆತನ ಶಕ್ತಿ ತಾನಾಗಿ ಒಲಿದು ಬರುವಳು ಅನ್ನುವುದೇ ಆಗಿದೆ.

ಮೊದಲನೆಯ ಮಂತ್ರದಲ್ಲಿಯ ಸೋಮರಸ ಹಾಗೂ ಎರಡನೆಯ ಮಂತ್ರದಲ್ಲಿಯ ಸುತ–ರಸಿತ–ರಸ ಎರಡೂ ದುರ್ಗಾಮಾತೆಗೆ ನೇರವಾಗಿ ಅನ್ವಯಿಸುವ ರೀತಿಯಲ್ಲಿ ಈ ಸೂಕ್ತವನ್ನು ದರ್ಶಿಸಿದ ಋಷಿಯ ಮಸ್ತಕದಲ್ಲಿ ಮೂಡಿದ್ದು ಗಮನಾರ್ಹವಾಗಿದೆ. ಸಾಮಾನ್ಯವಾದ ಅರ್ಥದಲ್ಲಿ ಸೋಮರಸವೆಂದರೆ ಸೋಮವೆಂಬ ಬಳ್ಳಿಯನ್ನು ಜಜ್ಜಿ ತೆಗೆದ ರಸ. ಆದರೆ ಆಧ್ಯಾತ್ಮಿಕ ಅರ್ಥದಲ್ಲಿ ಸೋಮ ಅಂದರೆ ಚಂದ್ರ ಎಂಬ ಅರ್ಥವು ಮೊದಲು ಬರುತ್ತದೆ. ಚಂದ್ರನು ಅರ್ಥೈಸುವುದು ಪರಾಶಕ್ತಿಯನ್ನು, ಶ್ರೀಮಾತೆ ಲಲಿತೆಯನ್ನು. ಸೂರ್ಯನು ಆತ್ಮ, ಪರಮಾತ್ಮ ಪ್ರತೀಕನಾದರೆ ಸೂರ್ಯನ ಶಕ್ತಿಯೆನಿಸಿದ ತೇಜಸ್ಸಿನಿಂದ ಪ್ರಕಾಶಿಸುವ ಚಂದ್ರನು ಪರಾಶಕ್ತಿಪ್ರತೀಕನು. ಪರಾಶಕ್ತಿಯು ಪ್ರತಿಯೊಂದು ವ್ಯಕ್ತಿಯಲ್ಲಿಯೂ ಕುಂಡಲಿನಿಯ ರೂಪದಲ್ಲಿ ಗುದಜನನೇಂದ್ರಿಯಗಳ ಮಧ್ಯದ ಸ್ಥಾನದಲ್ಲಿ ಇರುವ ಮೂಲಾಧಾರವೆಂಬ ಆಧ್ಯಾತ್ಮಿಕ ಚಕ್ರದ (ಗ್ರಂಥಿಯ) ಬುಡದಲ್ಲಿ ಆಸೀನಳಾಗಿರುತ್ತಾಳೆ ಎಂದು ಹೇಳಲಾಗುತ್ತದೆ. ಯೋಗಿಗಳ ಯೋಗಸಾಧನೆಯಲ್ಲಿ ಅನುಭವಕ್ಕೆ ಬರುವ ಈ ಕುಂಡಲಿನಿಯು ಮೂಲಾಧಾರದ ಕಂದದಲ್ಲಿ ಸರ್ಪದ ಆಕೃತಿಯಲ್ಲಿ ನಿದ್ರಾಸ್ಥಿತಿಯಲ್ಲಿ ನೆಲೆಸಿರುತ್ತದೆ.

ಪ್ರಾಣಾಯಾಮಾದಿ ಅಧ್ಯಾತ್ಮ ಸಾಧನೆಯ ಮೂಲಕ ಈ ಕುಂಡಲಿನಿಯನ್ನು ಎಚ್ಚರಿಸಿ ಅದನ್ನು ಮೂಲಾಧಾರದಿಂದ ಮೇಲೆ ತಂದು ಸ್ವಾಧಿಷ್ಠಾನ – ಮಣಿಪೂರ – ಅನಾಹತ–ವಿಶುದ್ಧಿ–ಆಜ್ಞಾಚಕ್ರಗಳೆಂಬ ಗ್ರಂಥಿಗಳ ಮೂಲಕ, ಆ ಗ್ರಂಥಿಗಳನ್ನು ಭೇದಿಸಿ ಮೇಲೆ ತಂದು ಶಿರಸ್ಸಿನಲ್ಲಿರುವ ಸಹಸ್ರಾರಪದ್ಮದ ಕರ್ಣಿಕೆಗೆ ತಲುಪಿಸಿದೊಡನೆ ಆ ಕುಂಡಲಿನಿಯು ಆ ಕರ್ಣಿಕೆಯಲ್ಲಿ ಸದಾಕಾಲ ನೆಲಸಿರುವ ಪರಮಾತ್ಮನ ಸಾನ್ನಿಧ್ಯದಿಂದಾಗಿ ರಸದ ರೂಪದಲ್ಲಿ ಮಾರ್ಪಡುತ್ತದೆ. ಆ ರಸವು ಸಾಮಾನ್ಯರಸವಾಗಿರದೆ ಪರಮಾನಂದವೇ ಆಗಿರುತ್ತದೆ ; ಆ ರಸವನ್ನು ಸವಿದ ಪರಮಾತ್ಮನು ಯೋಗಸಾಧಕನ ಭವಬಂಧನವನ್ನು, ಅರ್ಥಾತ್ ಜನ್ಮ–ಪುನರ್ಜನ್ಮಗಳ ಕಷ್ಟಕೋಟಲೆಗಳನ್ನು ದೂರಮಾಡಿ ಸಾಧಕನಿಗೆ ಮೋಕ್ಷವನ್ನೇ ನೀಡುವನು ; ಪ್ರಸ್ತುತದಲ್ಲಿ ಋಷಿಯು ಉಪಮೆಗಾಗಿ ನಾವೆಯನ್ನು ತಂದಿರುವನು. ನದಿಯನ್ನು ನಾವೆಯು ಹೇಗೆ ಪಾರುಗಾಣಿಸುವುದೋ ಹಾಗೆ ಪರಮಾತ್ಮನು ಆನಂದರಸರೂಪದ ದುರ್ಗಾಮಾತೆಯೆಂಬ ನಾವೆಯ ಮೂಲಕ ಸಂಸಾರಸಾಗರದಿಂದ ಸಾಧಕನನ್ನು ಪಾರುಗಾಣಿಸುವನು.

ಮೂಲಾಧಾರದಲ್ಲಿ ಕುಂಡಲಿನಿಯು ಅಗ್ನಿಯ ಬಣ್ಣದಲ್ಲಿ ಇರುವುದು ಅನ್ನುವುದು ಯೋಗಿಗಳ ಅನುಭವಕ್ಕೆ ನಿಲುಕಿದ್ದು. ಆ ಕುಂಡಲಿನಿಯು ಮೇಲೆದ್ದು ಬಂದಂತೆ ಮಣಿಪೂರದಲ್ಲಿ ಕೇಸರಿವರ್ಣಕ್ಕೆ ತಿರುಗಿ ಅನಾಹತದಲ್ಲಿ ನೀಲವರ್ಣಕ್ಕೆ ಬಂದು ವಿಶುದ್ಧಿಯಲ್ಲಿ ಮೇಘವರ್ಣಕ್ಕೆ ತಿರುಗಿ ಆಜ್ಞಾಚಕ್ರದಲ್ಲಿ ನವಿಲುಗರಿಯ ಬಣ್ಣಕ್ಕೆ ಬಂದು ಸಹಸ್ರಾರದಲ್ಲಿ ಶ್ವೇತವರ್ಣದವಳಾಗುವಳು ಅನ್ನುವುದು ಯೋಗಿಗಳ ಅನುಭವ. ಇಲ್ಲಿ ಕೆಲವು ಅಭಿಪ್ರಾಯಭೇದಗಳೂ ಇವೆ. ಸಹಸ್ರಾರದಲ್ಲಿ ಏಳೂ ಬಣ್ಣಗಳು ಗೋಚರಕ್ಕೆ ಬರುವವು ಎಂದೂ ಹೇಳಲಾಗುವುದು. ಯಾವವೇ ಇರಲಿ ಅವು ಅನುಭವಕ್ಕೆ ಬರುವಾಗ ಕುಂಡಲಿನಿಯು ತನ್ನ ಜಾಗೃತಸ್ಥಿತಿಯಲ್ಲಿ ಮೇಲೆ ಏರುತ್ತ ಇರಬೇಕಾಗುತ್ತದೆ ಅನ್ನುವುದು ಮುಖ್ಯ. ಕುಂಡಲಿನಿಯ ಅನುಭವವಾಗುವುದೂ ಈ ಬಣ್ಣಗಳ ಮೂಲಕ ಅನ್ನುವುದು ಅಷ್ಟೇ ಮಹತ್ವದ್ದು. ಇದಕ್ಕೆಲ್ಲ ಯೋಗಿಯ, ಅರ್ಥಾತ್ ಸಾಧಕನ ತಪಸ್ಸೇ ಕಾರಣ. ಯೋಗಿಯು ತನ್ನ ಧ್ಯಾನವನ್ನು ನಿಷ್ಠೆಯಿಂದ ನಡೆಸಿಕೊಂಡು ಹೋಗಬೇಕಾಗುತ್ತದೆ ; ನಿರ್ವಿಕಲ್ಪ ಧ್ಯಾನವೇ ಇಲ್ಲಿಯ ತಪಸ್ಸು. ತಾನು ನಡೆಸುವ ಕರ್ತವ್ಯಗಳ ಫಲಾಫಲಗಳ ಬಗ್ಗೆ ಸಾಧನೆಯಲ್ಲಿ ನಿರತನಾದ ಯೋಗಿಗೆ ಯಾವುದೇ ಅಪೇಕ್ಷೆ ಇರಬಾರದು ; ಫಲಾಸಕ್ತಿಯಿದ್ದಲ್ಲಿ ಧ್ಯಾನವು ಅಸಾಧ್ಯವಾಗುವುದು. ಆದ್ದರಿಂದ ಕರ್ಮಗಳ ಫಲಾಫಲಗಳನ್ನು ದುರ್ಗೆಗೇ ಅರ್ಪಿಸಬೇಕು, ಅಂದರೆ ದುರ್ಗೆಯ ಮೂಲನಾದ ಜಾತವೇದನಿಗೇ ಅರ್ಪಿಸಬೇಕು.

ದುರ್ಗೆಯು ಸುತರಸಿತರಸಳು. ಸುತ (ಅಂದರೆ ಹಿಂಡಿತೆಗೆದ) ರಸದ ಸ್ವರೂಪಳು. ಇಲ್ಲಿಯ ಸೋಮಲತೆಯೆಂದರೆ ಸುಷುಮ್ನಾನಾಡಿ. ಸಾಧಕನು ತನ್ನ ತಪಸ್ಸಿನಲ್ಲಿ ಅರ್ಥಾತ್ ತೀವ್ರತರವಾದ ಧ್ಯಾನಸ್ಥಿತಿಯಲ್ಲಿ ಒಂದು ಬಿಲದ ರೀತಿಯಲ್ಲಿರುವ ಸುಷುಮ್ನೆಯ ಮಾರ್ಗದಲ್ಲಿ ಕುಂಡಲಿನಿಯನ್ನು ಕೊಂಡೊಯ್ಯುವುದೇ ಸೋಮಲತೆಯನ್ನು ಹಿಂಡುವ ಪ್ರಕ್ರಿಯೆಯಾಗಿದೆ. ಅಂಕುಡೊಂಕಾಗಿ ಇರುವ ಸುಷುಮ್ನೆಯನ್ನು ನೇರಗೊಳಿಸುವ ಕ್ರಿಯೆ ಧ್ಯಾನದಲ್ಲಿ ತಾನಾಗಿ ಘಟಿಸುತ್ತದೆ. ಸುಷುಮ್ನಾನಾಡಿಮಾರ್ಗದಲ್ಲಿ ಬರುವ ಮೂಲಾಧಾರಾದಿ ಷಟ್‌ಚಕ್ರಗಳನ್ನು ಭೇದಿಸಿ ಕುಂಡಲಿನಿಯು ಹೋಗುವಾಗ ಒಂದು ರೀತಿಯ ಹಿಂಡಿದ ಅನುಭವವಾಗಬಹುದು. ಆದರೆ ಆರೂ ಚಕ್ರಗಳನ್ನು ಭೇದಿಸಿ ಸಹಸ್ರಾರಕ್ಕೆ ಹೋದ ಕುಂಡಲಿನೀಶಕ್ತಿಯು ದ್ರವರೂಪಕ್ಕೆ ತಿರುಗುವುದೇ, ಆನಂದರಸವಾಗಿ ಮಾರ್ಪಡುವುದೇ ಆ ಶಕ್ತಿಯ ಸುತ–ರಸಿತ–ರಸಸ್ಥಿತಿಯು. ಹೀಗೆ ದುರ್ಗಮವಾದ ಗುಹಾಮಾರ್ಗವಾದ ಸುಷುಮ್ನಾನಾಡಿಯಲ್ಲಿ ಚಲಿಸುವ ಕುಂಡಲಿನಿಯು ತನ್ನ ಆ ಸಾಮರ್ಥ್ಯದಿಂದಾಗಿ ದುರ್ಗೆಯೆನಿಸಿದಳು.

ವೇದದ ಋಷಿಗಳು ಸನ್ಯಾಸಿಗಳಲ್ಲ ; ಸಂಸಾರಿಗಳು. ವಿವಾಹಿತರಾಗಿ ಮಕ್ಕಳು ಮೊಮ್ಮಕ್ಕಳಾದಿ ಸಂತಾನಸಹಿತರು. ಅವರು ಕೇವಲ ಮೋಕ್ಷಗಾಮಿಗಳಾಗಿ ಧ್ಯಾನತಪಸ್ಸು

ಗಳಲ್ಲಿ ನಿರತರಾಗಿ ಸಂಸಾರವನ್ನು ನಿರ್ಲಕ್ಷಿಸುವಂತಿಲ್ಲ. ಇಷ್ಟೇ ಅಲ್ಲ ಅವರು ಗುರುಕುಲಗಳನ್ನು ಸ್ಥಾಪಿಸಿ ತಮ್ಮ ಬಳಿ ಬಂದ ಮಕ್ಕಳಿಗೆ ವೇದಾದಿ ಸಮಸ್ತವಿದ್ಯೆಗಳನ್ನು ಕಲಿಸುವವರು ; ಆ ಶಿಷ್ಯಕೋಟಿಯ ಅಶನ – ವಸನಾದಿಗಳೂ ನಡೆಯಬೇಕು. ಇವನ್ನೆಲ್ಲ ಅಗ್ನಿಯು ನಡೆಸಿಕೊಡಬೇಕು ಹಾಗೂ ನಡೆಸಿಕೊಡುತ್ತಾನೆ ಅನ್ನುವ ಭಾವವೂ ಇಲ್ಲಿದೆ. ಯಾವ ತೊಂದರೆಯೂ ಇಲ್ಲದೆ ಅವರ ಸಂಸಾರನಿರ್ವಹಣೆ ಮತ್ತು ಗುರುಕುಲಗಳೆರಡೂ ಆ ಅಗ್ನಿಯ, ಜಾತವೇದನ ಕೃಪೆಯಿಂದ ಹಾಗೂ ಆ ಜಾತವೇದನ ಶಕ್ತಿಯಾದ ದಿವ್ಯ ಪ್ರಭೆಯ, ಅರ್ಥಾತ್ ದುರ್ಗೆಯ ಪ್ರಭಾವದಿಂದ ಸರಿಯಾದ ರೀತಿಯಲ್ಲಿ ಸಾಗುತ್ತ ಇರುತ್ತವೆ.

ಆಗಿನ ಕಾಲದಲ್ಲಿ ಗೋಸಂಪತ್ತೇ ನಿಜವಾದ ಸಂಪತ್ತು. ಋಷಿಗಳ ಆಶ್ರಮಗಳಲ್ಲಿ ಇರುವ ಗೋವುಗಳ ಸಂಖ್ಯೆಯ ಮೂಲಕ ಆ ಆಶ್ರಮಗಳ ಸ್ಥಿತಿ–ಗತಿಗಳನ್ನು ಆಗ ಅಳೆಯಲಾಗುತ್ತಿತ್ತು. ಆದುದರಿಂದ ಆ ಸಂಪತ್ತು ವರ್ಧಿಸಬೇಕು ಮತ್ತು ಗೋ ಅಂದರೆ ಜ್ಞಾನ ಅನ್ನುವ ಅರ್ಥದಲ್ಲಿ ಜ್ಞಾನವೂ ವರ್ಧಿಸಬೇಕು ಅನ್ನುವ ಆಶಯವೂ ಇಲ್ಲಿದೆ.

ಋಷಿಗಳ ಪರಮಗುರಿ ಮೋಕ್ಷ, ಪರಮಾತ್ಮನಲ್ಲಿ ಒಂದಾಗುವಿಕೆ. ಕುಂಡಲಿನಿಯು ದುರ್ಗಮವಾದ ಸುಷುಮ್ನೆಯ ಮಾರ್ಗದಲ್ಲಿ ಮೇಲೇರಿ ಮೋಕ್ಷವನ್ನು ಅವಶ್ಯವಾಗಿ ದೊರಕಿಸಿಕೊಡುವವಳೂ ಹೌದು. ನಾಕ ಅಂದರೆ ಸ್ವರ್ಗ. ಸ್ವರ್ಗ ಸುಖಕ್ಕಿಂತಲೂ ಮಿಗಿಲಾದುದು ಮೋಕ್ಷ ಹಾಗೂ ಮೋಕ್ಷದಲ್ಲಿಯ ಪರಮಾನಂದಸ್ಥಿತಿ. ಸ್ವರ್ಗಸುಖವು ಕ್ರಮೇಣ ಪುಣ್ಯದ ಫಲಗಳು ವ್ಯಯಿಸುತ್ತಿದ್ದಂತೆ ಕರಗಿ ಹೋಗುತ್ತದೆ. ಪುಣ್ಯೇ ಕ್ಷೀಣೇ ಮರ್ತ್ಯಲೋಕಂ ವಿಶಂತಿ' ಎಂಬ ಉಕ್ತಿಯ ಪ್ರಕಾರ ಪುಣ್ಯಕ್ಷೀಣಿಸಿದ ಮೇಲೆ ಸ್ವರ್ಗದಿಂದ ಭೂಮಿಗೆ ಮತ್ತೆ ಬರಬೇಕಾಗುತ್ತದೆ ; ಅಂದರೆ ಸುಖದ ಸಮಯ ಕಳೆದ ಮೇಲೆ ಕಷ್ಟದ ಅನುಭವಕ್ಕೆ ಬರಬೇಕಾಗುತ್ತದೆ. ಆದರೆ ಈ ಜಾತವೇದ ಹಾಗೂ ಜಾತವೇದನೆನಿಸಿದ ಪರಮಾತ್ಮನ ಶಕ್ತಿಯಾದ ದುರ್ಗೆ ಇವರ ಅನುಗ್ರಹವು ಮತ್ತೆ ಕೆಳಗೆ ಇಳಿದು ಬರಬೇಕಾದ ಪ್ರಮೇಯವೇ ಇಲ್ಲದ ಪರಮಾತ್ಮ–ಪರಾಶಕ್ತಿಯಲ್ಲಿ ವಿಲೀನಗೊಳ್ಳುವ ಅನುಕೂಲವನ್ನು ಕಲ್ಪಿಸುವುದು. ಕುಂಡಲಿನಿಯು ದುರ್ಗೆಯಾಗಿ ಕರುಣಿಸುವ ಆತ್ಮರಸಾನುಭೂತಿಯೇ ಮೋಕ್ಷ ; ಅದೇ ಸಮಾಧಿಸ್ಥಿತಿ. ಈ ಸಮಾಧಿಸ್ಥಿತಿಯು ಕ್ರಮೇಣ ಧ್ಯಾನಕ್ಕೆ ಕುಳಿತಿರದ ಜಾಗೃತ ಅವಸ್ಥೆಯಲ್ಲಿಯೂ ಅನುಭವಗಮ್ಯವಾಗುತ್ತದೆ. ಹಾಗೆ ಆದ ಮೇಲೆ ದೇಹಬಿಡುವ, ಅಂದರೆ ಮರಣಿಸುವ ಸಮಯದಲ್ಲಿ ಅಂತಹ ಯೋಗಿಯ ಆತ್ಮವು ಶಿರಸ್ಸಿನಲ್ಲಿರುವ ಬ್ರಹ್ಮರಂಧ್ರದ ಮೂಲಕ ದೇಹದಿಂದ ಹೊರಗೆ ಹೋಗುವುದು ; ನೆತ್ತಿಯಲ್ಲಿಯ ಬ್ರಹ್ಮರಂಧ್ರದ ಸ್ಥಳವು ಬಿರುಕು ಬಿಟ್ಟು, ಅಥವಾ ಸ್ಫೋಟಗೊಂಡು ಆ ಮೂಲಕ ಕೊನೆಯ ಶ್ವಾಸ ಮತ್ತು ಆತ್ಮ ದೇಹದಿಂದ ಹೊರಟು ಪರಮಾತ್ಮನಲ್ಲಿ ಒಂದಾಗುವುದೇ ಮೋಕ್ಷ.

* * * * *

೯. ಕಃಪ್ರಜಾಪತಿಸೂಕ್ತ ದರ್ಶಿಕಾ

[**ಪೀಠಿಕೆ :** ಋಗ್ವೇದದ ಹತ್ತನೆಯ ಮಂಡಲದ 121ನೆಯ ಸೂಕ್ತವು ಕಃಪ್ರಜಾಪತಿ ಸೂಕ್ತವಾಗಿದೆ. ಹತ್ತು ಮಂತ್ರಗಳ ಈ ಸೂಕ್ತದ ಋಷಿಯು ಹಿರಣ್ಯಗರ್ಭ ಪ್ರಾಜಾಪತ್ಯನಾಗಿದ್ದು ದೇವತೆಯನ್ನು ಕಃ ಎಂದೇ ಇಲ್ಲಿ ಕರೆಯಲಾಗಿದೆ. ಆದ್ಯಂತವಾಗಿ ಆಧ್ಯಾತ್ಮಿಕ ಅರ್ಥವನ್ನು ಹೊರಹೊಮ್ಮಿಸುವ ಈ ಸೂಕ್ತವು ಮುಂದಿನ ಉಪನಿಷತ್ತುಗಳಿಗೆ ಬೀಜರೂಪವಾದುದು ಎಂದು ಹೇಳಬಹುದು. ಈ ಸೂಕ್ತದ ಭಾವಾರ್ಥವನ್ನು ಆಧ್ಯಾತ್ಮಿಕ ಅರ್ಥಗಳೊಂದಿಗೆ ಇಲ್ಲಿ ಪದ್ಯರೂಪದಲ್ಲಿ ತರಲಾಗಿದೆ.]

ಕಃ ಪ್ರಜಾಪತಿಯಾತ ಪರಮಪುರುಷ
ಹಿರಣ್ಯಗರ್ಭಕವ ಮೂಲಪುರುಷ ॥ಪ॥

ಕಮ್ಮೆಂದರದು ಸುಖವು ಪರಮಾನಂದಘನವು
ಕಮ್ಮೆಂದರದು ಪ್ರೀತಿ ಸರ್ವಸಮಪ್ರೇಮ
ಕಃ ಎಂದರದು ಕ್ರಮಣ ಸರ್ವತ್ರ ಕ್ರಮಿತ ಪುರುಷ
ಕಃ ಎಂದರಾ ಪರಮಾತ್ಮ ಪರಂಬ್ರಹ್ಮ ಸರ್ವಸಮವ್ಯಾಪಿ ॥1॥

ಕಮ್ಮೆಂದರದು ಜಲವು ಜಲದಿಂದ ಪೃಥ್ವಿ
ಪೃಥ್ವಿ–ಜಲಗಳಿಂದನ್ನ ಜೀವರುಗಳದರಿಂ
ಜೀವರುಗಳೆಲ್ಲವಾ ಪರಮಾತ್ಮನಂಶ
ಅಂಶವೂ ಪೂರ್ಣವೇ ಪೂರ್ಣನವ ಕಃಪ್ರಜಾಪತಿಯು ॥2॥

ಕಃಶಬ್ದದರ್ಥವದು ಯಾವನವನೆಂದು
ಉತ್ತರವನದೇ ನೀಡುವುದು ಪರಮಾತ್ಮನೆಂದು
ಏಕಾರವನು ಹಿಂದೆ ತಂದರೀ ಶಬ್ದದಿಂದ
ದೇವನೊಬ್ಬನೆ ಒಬ್ಬ ಜಗದಲೆಂಬರ್ಥವಿಲ್ಲಿ ॥3॥

ಆ ಒಂದರಿಂದುದಿತ ಬಹುಸಂತತಿಯಿಲ್ಲಿ ಪ್ರಜೆಯು
ಪ್ರಜಾಪತಿಯಾತನಿಹನದ್ವಿತೀಯ
ಹಿರಣ್ಯಗರ್ಭನೆಂದವನ ಗುರುತಿಸಿದ ಋಷಿಯು
ಹಿರಣ್ಯಗರ್ಭನೇ ತಾನಾದ ಯೋಗಸಮಾಧಿಯಲ್ಲಿ ॥4॥

ಗೃಭವೆಂದರಾವಾಸಸ್ಥಳವೆಂಬುದರ್ಥ
ಚರಾಚರಗಳಾವಾಸವಿಶ್ವವಿದೇ ಹಿರಣ್ಯಗರ್ಭ
ತನ್ನಲ್ಲಿ ವಸ್ತುವನು ಧಾರಣೆಮಾಡುವುದು ಗರ್ಭ
ಚರಾಚರಾತ್ಮಕವಸುಧಾಧಾರಕ ಹಿರಣ್ಯಗರ್ಭ ॥5॥

ಹೇಮಕಾಂತಿಯ ಮೊಟ್ಟೆಯಂತೆಸೆವುದೀ ಪೃಥ್ವಿ
ಬಹುದೂರದಿಂದಿದನು ನೋಡಿದರೆ ಒಡನೆ
ದೂರದೂರದ ಚಂದ್ರ–ನಕ್ಷತ್ರಗಳು ಹೊಳೆಯುವಂತೆ
ಹೊಳೆವ ಪೃಥ್ವಿಯನು ತಾನೊಳಗೊಂಡವನು ಹಿರಣ್ಯಗರ್ಭ ॥6॥

ಪ್ರಶಂಸಾರ್ಥವೂ ಗೃಭ್ ಧಾತುಗಿಹುದು
ಹಿರಣ್ಯವೆಂದರೆ ಗುರು; ಜೀವಾತ್ಮ ಗುರುವು
ಜೀವಾತ್ಮರೆಲ್ಲರಲಿ ನಾನು–ನಾನೆನಿಸಿಕೊಂಡ
ಸೋಽಹಂ ತತ್ತ್ವಕೆ ಮೂಲನೀ ಹಿರಣ್ಯಗರ್ಭ ।7॥

ಬೇಕುಬೇಡದ್ದನ್ನು ಕೆಳಗೆ ನೂಕುವುದು ಸಾಮಾನ್ಯಗರ್ಭ
ಚರಾಚರಗಳನು ಕೆಳಗೆ ನೂಕುವುದು ಹಿರಣ್ಯಗರ್ಭ
ಪೃಥ್ವ್ಯಂತರಿಕ್ಷಗಳನೊಡಲೊಳಗೆ ಧರಿಸಿದಂಥ
ಹಿರಣ್ಯಗರ್ಭನನು ತಾ ದರ್ಶಿಸಿದ ಋಷಿಯು ॥8॥

ತನ್ನಿಂದಲೇ ಮೂಡಿ ಬಂದಿಹ ಲೋಕಲೋಕಗಳಿಗೆ
ಆತ್ಮವನು ಬಲವನ್ನು ಕೊಟ್ಟವನು ಅವನು
ಮೃತ್ಯುವೂ ತಾನಾಗಿ ಅಮೃತವೂ ತಾನೆ ತಾನಾಗಿ
ಪ್ರಶಾಸನವನೆಲ್ಲೆಡೆಗೆ ವಿಸ್ತರಿಸಿ ನಿಂತ ॥9॥

ನಿಜಮಹಿಮೆಯಿಂದಾತ ಸರ್ವಜೀವಿಗಳ
ಒಡೆತನದಲೊಪ್ಪುವನು ನಿತ್ಯವೆಡೆಬಿಡದೆ
ಹಿಮವಂತ ಸುಸ್ಥಿರನು ನದಿಗಳಾಗರವಾಗಿ ಸಾಗರವು
ರಾರಾಜಿಸುವುದಿಷ್ಟೆಲ್ಲ ಮಹಿಮೆಯಾತನದು ॥10॥

ದಿಕ್ಕುದಿಕ್ಕುಗಳೆಲ್ಲ ನಿತ್ಯನೂತನನಾದ
ಪರಮಪುರುಷನ ದಿವ್ಯ ಬಾಹುಗಳು ದಿಟದಿ
ಅವನಿಂದಲಾಕಾಶ ಗಹನತೆಯಪಡೆದಿಹುದು
ಧರಣಿಯಸ್ತಿತ್ವವೂ ಚಿರದಿ ನಿಂತಿಹುದು ॥11॥

ಅಂತರಿಕ್ಷದಲಿ ಸೂರ್ಯನಿಗಾಧಾರನೆನಿಸಿ
ಮೋಡಗಳನೆಬ್ಬಿಸಿ ನೀರನ್ನು ಸುರಿಸುವವನಾತ
ಭೂಮ್ಯಂತರಿಕ್ಷಗಳು ಋಣಿಗಳವನಿಗೆ ದಿಟದಿ
ಆತನನು ಗೌರವದಿ ಸತತ ಕಾಣುವವು ॥12॥

ಸರ್ವಜೀವಸ್ಥಿತಿಯ ತತ್ತ್ವದಗ್ನಿಯನು ತಾನು
ಗರ್ಭದಲಿ ಧರಿಸಿಕೊಂಡಿಹ ಜಲತತ್ತ್ವವನ್ನು
ಕಂಡು ತಾನದ ತಂದು ಲೋಕಕ್ಕೆ ಕರುಣಿಸಿದ
ಪ್ರಜಾಪತಿಯೆಂದೆನಿಸಿ ತಾನುದಿತಗೊಂಡ ॥13॥

ನಿತ್ಯಕರ್ಮಗಳಲ್ಲಿ ಸತ್ಯಧರ್ಮಗಳನ್ನು
ನೆಲೆಗೊಳಿಸಲವುಗಳನು ತಾ ಹುಟ್ಟುಹಾಕಿ
ನಿಂತು ನಡೆಸುತ್ತಿರುವ ನಿತ್ಯ ಸುಖರೂಪನವ
ಅವನಿಗರ್ಪಿತ ಸತತ ಕಾಯಕದ ಹವನ ॥14॥

ನಮಗಾತ ಹಿಂಸೆಯನು ನೀಡದಿರುವಂತೆ
ನಮ್ಮ ನಡೆನುಡಿಯಿರಲಿ ಸರ್ವಶುಭವಿರಲಿ
ಅವನೊಬ್ಬನೇ ಒಬ್ಬ ಸರ್ವಕರ್ತನು ನಿಜದಿ
ಕರ್ಮರೂಪದ ಯಜ್ಞವವನಿಗರ್ಪಿತವು ॥15॥

ಪ್ರಸ್ಥಾಪಿತಾಗ್ನಿಯಲಿ ನಡೆವ ಯಜ್ಞವು ಮತ್ತು
ಕಾಯಕವೆ ಯಜ್ಞವಾಗಿರುವುದೂ ಒಡನೆ
ಸಲ್ಲಲಾ ಗುರುಪಾದಪದ್ಮಭೂಷಣಗೆ
ನಿಜೈಶ್ವರ್ಯವನು ನೀಡಲೆಮಗಾ ಹಿರಣ್ಯಗರ್ಭ ॥16॥

ಕಃ ಪ್ರಜಾಪತಿಯಾತ ಪರಮಪುರುಷ
ಹಿರಣ್ಯಗರ್ಭಕವ ಮೂಲಪುರುಷ ॥ಪ॥

ಕಃಪ್ರಜಾಪತಿ–ದರ್ಶಿಕಾ

ಋಷಿಯೊಬ್ಬನು ತನ್ನ ಸಮಾಧಿಸ್ಥಿತಿಯಲ್ಲಿ ಸಾಕ್ಷಾತ್ ಹಿರಣ್ಯಗರ್ಭ ಪ್ರಜಾಪತಿಯೇ ಆದಾಗ, ಅಂದರೆ ಪರಮಾತ್ಮಭಾವದಲ್ಲಿ ಸ್ಥಿತನಾದಾಗ ಈ ಕಃಪ್ರಜಾಪತಿ ಸೂಕ್ತವು ಆತನಿಗೆ ದರ್ಶಿತವಾಯಿತು. ಋಷಿಗಳ ಮೂಲ ಹೆಸರು ಯಾವುದೇ ಇದ್ದರೂ ಆ ಮೂಲ ಹೆಸರಿನಲ್ಲಿ ಮಂತ್ರವು ಪ್ರಚಾರಗೊಳ್ಳದೆ ಸಮಾಧಿಸ್ಥಿತಿಯಲ್ಲಿ ಅವರು ಏನಾಗಿದ್ದರು ಅನ್ನುವುದರ ಮೇಲೆ ಹಾಗೂ ಅವರು ದರ್ಶಿಸಿದ ಮಂತ್ರದಲ್ಲಿ ಬರುವ ದೈವೀಭಾವದ ಮೇಲೆ ಅವರ ಋಷಿನಾಮವು 'ಕಂ' ಎಂದು(ಅಥವಾ ಕಾವ್ಯನಾಮವು) ಅವಲಂಬಿತವಾಗಿರುತ್ತದೆ.

'ಕಃ' ಅಂದರೆ ಯಾರು ಯಾವನು ಅನ್ನುವುದು ಅರ್ಥ. ಸ್ತ್ರೀಲಿಂಗದಲ್ಲಿ ಏಕಾಕ್ಷರಶಬ್ದವು 'ಕಾ' ಎಂದು ಆಗುತ್ತದೆ. ಇದೇ ಏಕಾಕ್ಷರಶಬ್ದವು 'ಕಂ' ಎಂದು ನಪುಂಸಕ ಲಿಂಗದಲ್ಲಿ 'ಸುಖ' ಅನ್ನುವ ಅರ್ಥವನ್ನು ಕೊಡುತ್ತದೆ. ಪ್ರೀತಿ ಅನ್ನುವ ಅರ್ಥವನ್ನೂ ಕೊಡುತ್ತದೆ. ಪರಬ್ರಹ್ಮವು ಪರಮಸುಖಸ್ವರೂಪವೇ ಆದುದರಿಂದ, ಅರ್ಥಾತ್ ಪರಮಾನಂದಘನವೇ ಆದುದರಿಂದ ಪುಲ್ಲಿಂಗದಲ್ಲಿ 'ಕಃ' ಅಂದಾಗ ಪರಬ್ರಹ್ಮ ಎಂದೂ ಆಗುತ್ತದೆ. ಈ ಪರಬ್ರಹ್ಮಾರ್ಥವನ್ನೇ ಪ್ರಧಾನವಾಗಿ ಇಟ್ಟುಕೊಂಡು ಈ ಸೂಕ್ತವು ಅಸ್ತಿತ್ವಕ್ಕೆ ಬಂದಿದೆ.

ಕಂ ಅಂದರೆ ಜಲ ಎಂಬ ಅರ್ಥವೂ ಇದ್ದು ಜಲದಿಂದ ರೂಪುಗೊಂಡ ಪೃಥ್ವಿಯೂ ಆಗಿ ಪೃಥ್ವಿ – ಜಲಗಳಿಂದ ಉಂಟಾಗುವ ಅನ್ನ (ಯಾವುದೇ ತಿನ್ನಬಲ್ಲ ಆಹಾರ)ವೂ ಆಗಿ ಅನ್ನದಿಂದ ಉಂಟಾಗುವ ರಸ–ರಕ್ತ–ಮಾಂಸ – ಮೇದಸ್ಸು – ಅಸ್ತಿ–ವೀರ್ಯಾದಿಗಳೂ ಆಗಿ ವೀರ್ಯ–ಶೋಣಿತಗಳಿಗೆ ಆಶ್ರಯ ಕೊಡುವ ಗರ್ಭಕೋಶವೂ ಆಗಿ ಇದು ಮಗು ಜನನಕ್ಕೂ ಕಾರಣವಾಗುವುದರಿಂದ ಕಂ ಅಂದರೆ ಇಡೀ ಪ್ರಪಂಚವೇ ಆಗಿಬಿಡುವುದು. ಹಿರಣ್ಯಗರ್ಭ ಅಂದರೆ ಪ್ರಪಂಚ ಎಂಬ ಅರ್ಥವೂ ಇದೆ.

'ಕ' ದ ಹಿಂದೆ 'ಏ' ಅನ್ನುವ ಸ್ವರವನ್ನು ತಂದರೆ 'ಏಕಃ' ಎಂದಾಗಿ ಆ ಹಿರಣ್ಯಗರ್ಭನೆನಿಸಿದ ಪರಮಾತ್ಮನು ಏಕಮೇವಾದ್ವಿತೀಯನು ಎಂಬ ಅರ್ಥವೂ ಬರುತ್ತದೆ. ಜಗತ್ತಿನಲ್ಲಿ ಒಂದೇ ಒಂದಾಗಿರುವ ಆ ಒಂದರಿಂದ, ಏಕದಿಂದ ಅನೇಕ ಪ್ರಜೆಗಳ ಉತ್ಪತ್ತಿ ಅನ್ನುವ ಕಾರಣದಿಂದ ಆ ಹಿರಣ್ಯಗರ್ಭನು ಪ್ರಜಾಪತಿಯೂ ಆಗಿರುವನು.

'ಗೃಭ್' ಅಂದರೆ ನೆಲಸು, ನೆಲಸಿರು, ಈ ಗೃಭ್ ಶಬ್ದದಿಂದ 'ಗರ್ಭ' ಅನ್ನುವ ಶಬ್ದವು ಬಂದಿದೆ. ಯಾವುದೇ ಒಂದು ಜೀವಾತ್ಮವು ಪ್ರಾರಂಭದಲ್ಲಿ ನೆಲಸುವ ಸ್ಥಳ

ಗರ್ಭ, ಸಾಮಾನ್ಯಗರ್ಭ. ಆದರೆ ಕೋಟಿಗಟ್ಟಲೆ ಜೀವಾತ್ಮಗಳು ನೆಲಸುವ ಸ್ಥಳ ಹಿರಣ್ಯಗರ್ಭ. ಚರಾತ್ಮಕ ಸಮಸ್ತ ಜೀವರಾಶಿಗಳಿಗೆ ಆಧಾರ ಹಿರಣ್ಯಗರ್ಭಬ್ರಹ್ಮ, ಅರ್ಥಾತ್, ಪರಮಾತ್ಮ. ಪೃಥ್ವಿಯನ್ನು ಆಕಾಶದಲ್ಲಿ, ಅಂತರಿಕ್ಷದಲ್ಲಿ ನಿಂತು ನೋಡಿದಾಗ ಒಂದು ಬಂಗಾರದ ಮೊಟ್ಟೆ ಯಂತೆ ಅದು ಕಂಡುಬರುವುದು. ಆದುದರಿಂದ ಈ ಪೃಥ್ವಿಯೂ ಹಿರಣ್ಯಗರ್ಭವೇ ಸರಿ.

ಪೃಥ್ವಿಯಂತಹ ಎಷ್ಟೋ ಗ್ರಹಗಳನ್ನು ಒಳಗೊಂಡ, ಅಷ್ಟೇ ಅಲ್ಲ ಆಕಾಶದಲ್ಲಿ ಕಾಣುವ ನಮ್ಮ ಸೂರ್ಯನಂತಹ ಕೋಟಿಗಟ್ಟಲೆ ಸೂರ್ಯರನ್ನೂ ಸೌರಸಂಸಾರ ಗಳನ್ನೂ ಒಳಗೊಂಡ ಪರಬ್ರಹ್ಮನು ನಿಜವಾಗಿಯೂ ಹಿರಣ್ಯಗರ್ಭನೇ ಸರಿ. ಗುರುಗ್ರಹದ ಧಾತು ಬಂಗಾರ–ಹಿರಣ್ಯ. ಗುರು ಅಂದರೆ ದೊಡ್ಡದು, ಬಹುದೊಡ್ಡದು ಎಂಬ ಅರ್ಥವೂ ಇದೆ. ಈ ಅರ್ಥದಲ್ಲಿ ಹಿರಣ್ಯಗರ್ಭನು ಅದ್ವಿತೀಯನಾದ ಗುರುವಾಗಿರುವನು. ಪರಮಾತ್ಮನು ಶ್ರೇಷ್ಠವಾದ ಬಂಗಾರದ ಮೊಟ್ಟೆಯೇ ಆಗಿರುವನು ಅನ್ನುವುದನ್ನು ಋಷಿಯು ತನ್ನ ಸಮಾಧಿಸ್ಥಿತಿಯಲ್ಲಿ ಕಂಡನು. ಚರಾಚರ ಗಳೆಲ್ಲವುಗಳಲ್ಲಿಯೂ, ಅವೆಲ್ಲವುಗಳ ಕಾರ್ಯಚಟುವಟಿಕೆಗಳಲ್ಲಿಯೂ ಆ ಪರಾತ್ಪರನಾದ ಪರಬ್ರಹ್ಮನ ಅಸ್ತಿತ್ವ ಕಂಡು ಬರುವುದರಿಂದಾಗಿ ಸಮಸ್ತವೂ ಹಿರಣ್ಯಗರ್ಭ ಅನ್ನುವುದು ಋಷಿಯ ದರ್ಶನ.

ಜಗತ್ತು ನಿರಂತರವಾಗಿ ಚಲಿಸುತ್ತ ಇರಬೇಕೆನ್ನುವ ಅಪೇಕ್ಷೆಯಿಂದ ಸತ್ಯ–ಧರ್ಮಗಳನ್ನು ಆತ ಚಿರಸ್ಥಾಯಿಗೊಳಿಸಿದ. ಈಶಾವಾಸ್ಯೋಪನಿಷತ್ತು 'ಸತ್ಯ–ಧರ್ಮಾಯ' ಎಂಬುದನ್ನು ಒಳಗೊಂಡಿದೆ. ಸತ್ಯ–ಧರ್ಮಗಳನ್ನು ಎಲ್ಲ ಜೀವಿಗಳೂ ನಡೆಸಿಕೊಂಡು ಹೋಗಬೇಕೆನ್ನುವುದು ಋಷಿಯ ಅಂತರಂಗದ ಅನಿಸಿಕೆ. ಮನುಷ್ಯನ ಕರ್ಮಗಳೆಲ್ಲ, ಕಾರ್ಯಚಟುವಟಿಕೆಗಳೆಲ್ಲ ಯಜ್ಞಾರ್ಥವಾಗಿದ್ದಲ್ಲಿ, ಪರೋಪಕಾರಾರ್ಥವಾಗಿದ್ದಲ್ಲಿ ಜಗತ್ತು ಸ್ವಾರ್ಥರಹಿತವಾಗಿ ಸರ್ವಸುಂದರವಾಗಿ ಆನಂದಮಯವಾಗಿ ಇರುವಂತಾಗುವುದು. ಆ ರೀತಿ ಎಲ್ಲರೂ ಪ್ರವರ್ತಿಸಲಿ ಎಂಬ ಆಶಯದೊಂದಿಗೆ ಈ ಸೂಕ್ತವು ಕೊನೆಗೊಳ್ಳುವುದು – 'ವಯಂ ಸ್ಯಾಮ ಪತಯೋ ರಯೀಣಾಮ್'–ನಾವೆಲ್ಲರೂ ಸರ್ವಸಂಪತ್ತಿಗೆ ಒಡೆಯರಾಗೋಣ ಅನ್ನುವುದೇ ಇಲ್ಲಿಯ ಲೌಕಿಕದ ಮಹದಾಸೆ.

* * * * *

೧೦. ವಾಗಾಂಭೃಣೀ ದರ್ಶಿಕಾ

[**ಪೀಠಿಕೆ:** ಋಗ್ವೇದದ 10ನೆಯ ಮಂಡಲದಲ್ಲಿ 125ನೆಯ ಸೂಕ್ತವಾಗಿ ವಾಗಾಂಭೃಣೀಸೂಕ್ತವು ಬರುತ್ತದೆ. ಇಲ್ಲಿರುವ ಮಂತ್ರಗಳ ಸಂಖ್ಯೆ ಎಂಟು. ಋಷಿ–ದೇವತೆಗಳಿರ್ವರೂ ವಾಗಾಂಭೃಣಿಯೇ ಆಗಿರುವುದು ಇಲ್ಲಿಯ ವಿಶೇಷ. ಈ ಸೂಕ್ತದಲ್ಲಿ ತನ್ನ ತಪಸ್ಸಾಧನೆಯಿಂದ ಗೃಹಿಣಿಯೊಬ್ಬಳು ಸಾಕ್ಷಾತ್ ಸರಸ್ವತಿಯೇ ಆಗಿರುವುದನ್ನು ಕಾಣಲಾಗುವುದು.]

ವಾಗಾಂಭೃಣಿಯೆಂದರತಿ ಮಹಾವಾಣೀ
ಮಹಾಸರಸ್ವತಿಯಿಲ್ಲಿ ವಾಗಾಂಭೃಣೀ ॥ಪ॥

ಪರಮಪುರುಷನಸಂಖ್ಯ ಕಾರ್ಯ–ಸಾಮರ್ಥ್ಯಗಳು
ವಿಧವಿಧದ ದೇವ–ದೇವಿಯರಾಗಿ ರೂಪು ತಳೆದಿಹವು
ವೇದದಲ್ಲವುಗಳನು ದರ್ಶಿಸಿದ ಋಷಿಯು
ಆ ದೇವದೇವಿಯರೆ ತಾನಾಗಿ ನಲಿದು ಉಲಿವ ॥1॥

ವಾಗಾಂಭೃಣಿಯೆಂಬ ದೇವಿಯನು ದರ್ಶಿಸಲು
ಅದೇ ಹೆಸರನ್ನು ತಾ ಧರಿಸಿಕೊಂಡು
ರಾರಾಜಿಸುತ್ತಿಹಳು ಋಷಿಕೆಯೆನಿಸಿದೀ
ಕವಯಿತ್ರಿ ತನ್ನ ನಿಜನಾಮವನು ಮರೆತುಬಿಟ್ಟು ॥2॥

ವಾಗಾಂಭೃಣಿಯೆಂದರತಿ ಮಹತ್ತಮವಾಣಿ
ಸಾಕ್ಷಾತ್ ಸರಸ್ವತಿಯಿಲ್ಲಿ ಕಂಡುಬರುವವಳು
ಬಹುರೂಪದಲ್ಲಿರುವ ಬ್ರಹ್ಮಶಕ್ತಿಯು ಅವಳು
ಬ್ರಹ್ಮನಿವ ಬ್ರಹ್ಮಾಂಡವ್ಯಾಪಿ ಪರಮಾತ್ಮ ॥3॥

ಅಂಭೃಣಶಬ್ದವಿಲ್ಲಿಹುದು ಬೃಹದರ್ಥದಲ್ಲಿ
ಸೃಷ್ಟಿಪೂರ್ವದಲಿ ಮತ್ತು ಸೃಷ್ಟ್ಯಂತ್ಯದಲ್ಲೂ
ತಾನಿದ್ದು ಸರ್ವವನು ನಡೆಸುವುದು ಅಂಭೃಣವು ನೋಡು
ಅಂಭೃಣದಲ್ಲಿ ಮೂಡಿದ ವಾಕ್ಕದುವೆ ವಾಗಾಂಭೃಣೀ ॥4॥

ಏಕಾದಶರುದ್ರರೂ ತಾನಾದ ವಾಗಾಂಭೃಣಿಯು
ದ್ವಾದಶಾದಿತ್ಯರೆಂದೆನಿಸಿಕೊಂಡವಳು
ವಸುಗಳೆಂಟಿಹವವಳು ವಸುಗಳೂ ಹೌದು
ಕೃತುವಿನಿಂದಾರಬ್ಧ ದಶ ವಿಶ್ವೇದೇವತೆಗಳವಳು ॥5॥

ವೇದವೇದಗಳಲ್ಲಿ ರಾರಾಜಿಸುತ್ತಿರುವ
ಸರ್ವದೇವೀದೇವರೂಪಸಂಸ್ಥಿತಿಗಳಲ್ಲಿ
ತಾನೆತಾನಾಗಿ ತಾ ನಿಂತು ನಲಿಯುತ್ತಲಿರುವ
ವಾಗ್ದೇವಿಯಿವಳಿಹಳು ಸರ್ವಧನದಾತೆ ॥6॥

ಜಗದ ಸ್ವಾಮಿನಿಯಾಗಿ ರಾಷ್ಟ್ರಿಯೆಂದೆನಿಸಿ
ಚಿಕಿತುಷಿಯೆನಿಸಿದಳು ಎಲ್ಲ ಬಲ್ಲವಳು
ಐಶ್ವರ್ಯಗಳಿಗೊಡತಿ ಯಜ್ಞದೇವಪ್ರಮುಖೆ
ವ್ಯಾಪಿತಳು ಬಹುಭಾವದಿಂದೆಲ್ಲ ಕಡೆಗೂ ॥7॥

ಉಣ್ಣಲುಸುರಾಡಲೂ ನೋಡಲೂ ಮತ್ತು
ಕೇಳಲೂ ಸಹ ನಮ್ಮೆಲ್ಲಕಾಧಾರವವಳು
ವಾಗ್ದೇವಿಯಿಹಳೀಕೆ ಸರ್ವಸ್ವಾಮಿನಿಯು
ಇದನರಿತು ನಡೆದಾಗ ಮಾತ್ರ ಧನ್ಯತೆಯು ॥8॥

ದೇವತೆಗಳನು ದೇವತ್ವಕ್ಕೇರಿಸುವುದೇ ವಾಣಿ
ಮನುಜರನು ಬುದ್ಧಿವಂತರನ್ನಾಗಿ ಮಾಡಿ
ಋಷಿಪದವಿ–ಬ್ರಹ್ಮಪದವಿಗಳನ್ನು ತಾನೊಲಿದು ನೀಡುತ್ತ
ಸಾಯುಜ್ಯವೀಯುವಳು ವಾಗಾಂಭೃಣೀ ದೇವೀ ॥9॥

ವಿಕಸನಾರ್ಥಕ ಬ್ರಹ್ಮವೈರಿಯವನಸುರ
ಅಂಧಕನು ಕ್ರೂರನಜ್ಞಾನವನು ಬೆಳೆಸುವವನು
ಅವನ ನಾಶಕೆ ರುದ್ರಬಿಲ್ಲು ತಾನಾಗಿಹಳು
ವಾಗಾಂಭೃಣಿಯಿಲ್ಲಿ ಯುದ್ಧಚೋದಕಳು ॥10॥

ದ್ಯಾವಾಪೃಥಿಗಳನಾವರಿಸಿರುವವಳು ಈಕೆ
ದೇವಲೋಕವನು ಬ್ರಹ್ಮಶಿರದಲ್ಲಿ ರಚಿಸಿದವಳು
ಸೃಷ್ಟಿಕಾರ್ಯಾಸಕ್ತ ಪರಮಾತ್ಮಬುದ್ಧಿ ತಾನಾಗಿ ನಿಂತು
ನೆಲಸಿಹಳು ವಾಕ್ಕಿವಳು ಜೀವರುಗಳಾತ್ಮದಲ್ಲಿ ॥11॥

ಪ್ರೇರಣೆಯ ಗೊಡವೆಯಿಲ್ಲದೆಯೆ ವಾಯುವಾತನು ತಾನೇ
ಪ್ರವಹಿಸುತ್ತಿರುವಂತೆ ಸ್ವತಃ ತಾನಾಗಿ ವಾಣೀ
ಸರ್ವರುತ್ಪತ್ತಿಯಲಿ ತನ್ನ ತೊಡಗಿಸಿಕೊಂಡು
ಭೂಮ್ಯಂತರಿಕ್ಷನಭಗಳನು ಮೀರಿ ನಿಂತಿಹಳು ॥12॥

ಸಮುದ್ರದಾಳದಿಂ ಸ್ವರ್ಗಪರ್ಯಂತವವಳ
ಅಸ್ತಿತ್ವವಿರುವಲ್ಲಿ ಭೂಮದರ್ಥವದು
ಸುಸ್ಪಷ್ಟವಾಗುವುದು ಧ್ಯಾನಲೋಕದಲಿ
ವ್ಯಕ್ತಿ ತಾನಾಗುವುದು ವಿಶ್ವಚೈತನ್ಯ ॥13॥

ಶಕ್ತಿಯಾಗಿಯೂ ಬ್ರಹ್ಮತಾನವತರಿಸಿ ತನ್ನಿಚ್ಛೆಯಿಂದ
ಆ ಶಕ್ತಿಯಿಂಸೃಷ್ಟಿ–ಸ್ಥಿತಿ–ಲಯಕಾರ್ಯಗಳಲಾಸಕ್ತನಾಗಿ
ವಿವಿಧ ಹೆಸರುಗಳಿಂದ ಬಹುಖ್ಯಾತತಾನಾಗಿ
ವಾಗಾಂಭೃಣಿಯಾದನಾ ಗುರುಪಾದಪದ್ಮಯುತಬ್ರಹ್ಮ ॥14॥

ವಾಗಾಂಭೃಣಿಯೆಂದರತಿ ಮಹಾವಾಣೀ
ಮಹಾಸರಸ್ವತಿಯಿಲ್ಲಿ ವಾಗಾಂಭೃಣೀ ॥ಪ॥

ವಾಗಾಂಭೃಣೀದರ್ಶಿಕಾ

ಅಂಭೃಣವೆಂದರೆ ಬೃಹತ್ತು. ಬೃಹತ್ತನ್ನು ದರ್ಶಿಸಿದ ಋಷಿ ಅಂಭೃಣನೆನಿಸಿದ. ಅವನಿಗೆ ಒಬ್ಬಳು ಮಗಳು ; ಅವಳ ಹೆಸರು ವಾಕ್. ಅವಳೂ ತಪಸ್ಸಿನಿಯೇ ಆಗಿದ್ದು ಅಂಭೃಣನ ಪುತ್ರಿಯಾದುದರಿಂದ ವಾಗಾಂಭೃಣಿಯೆನಿಸಿದಳು, ಅದೇ ಹೆಸರಿನ ಋಷಿಕೆಯಾದಳು. ತಪಸ್ವಿನಿಯಾದ ಆಕೆಯು ಸಾಕ್ಷಾತ್ ಪರಬ್ರಹ್ಮಸ್ವರೂಪಳೇ ಆಗಿ ದರ್ಶಿಸಿದ ಸೂಕ್ತವಿದು ವಾಗಾಂಭೃಣೀಸೂಕ್ತ.

ವಾಗಾಂಭೃಣೀ ಅಂದರೆ ಸಾಕ್ಷಾತ್ ಸರಸ್ವತಿಯೂ ಆಗುತ್ತದೆ. ಈ ಋಷಿಕೆಯು ತನ್ನ ಸಮಾಧಿಸ್ಥಿತಿಯಲ್ಲಿ ಸಾಕ್ಷಾತ್ ಸರಸ್ವತಿಯೇ ಆಗಿ ತಾನೂ ಸರ್ವಗತ, ಸರ್ವಶಕ್ತ, ಸರ್ವಕಾರಣಿಕ ಪರಮಾತ್ಮನೇ ಆಗಿ ಈ ಮಂತ್ರದ ದೃಷ್ಟಾರಳೆನಿಸಿದಳು. ಆತ್ಮವು ಜೀವಭಾವವನ್ನು ತೊರೆದು ನಿಂತಾಗ ಅದು ಪರಮಾತ್ಮಸ್ವರೂಪಿಯೇ ಆಗುವುದು. ಆತ್ಮವನ್ನು ವ್ಯಕ್ತಿಯನ್ನಾಗಿಸುವುದೇ ಜೀವಭಾವ. ಜೀವದ ಜೊತೆಗಿನ ಜನ್ಮ – ಜನ್ಮಾಂತರಗಳ ಕರ್ಮಪರಿಣಾಮಗಳು ಮಸ್ತಿಷ್ಕದಲ್ಲಿ, ಮನಸ್ಸಿನ ಆಳದಲ್ಲಿ ನೆಲೆಸಿದ್ದು ಅವು ಆತ್ಮವನ್ನು ಪರಮಾತ್ಮಭಾವದಿಂದ ಕುಬ್ಜಗೊಳಿಸುತ್ತವೆ ; ಮನಸ್ಸು ರೂಪುಗೊಳ್ಳುವುದೇ ಕರ್ಮಫಲಗಳ ಪರಿಣಾಮದಿಂದ.

ಕರ್ಮಫಲಗಳ ಒಟ್ಟು ಮೊತ್ತವೇ ಮನಸ್ಸು. ಸಮಾಧಿಸ್ಥಿತಿಯಲ್ಲಿ ಮನಸ್ಸು ತಟಸ್ಥವಾಗುವುದರಿಂದ, ಅಂದರೆ ಸಂಪೂರ್ಣ ಮರೆಗೆ ಸರಿಯುವುದರಿಂದ ಕರ್ಮಫಲಬಂಧದಿಂದ ಮುಕ್ತವಾದ ಆತ್ಮವು ತನ್ನನ್ನು ಸರ್ವಾವ್ಯಾಪಿಯಾಗಿ ಕಾಣುವುದು. ಅಂತಹ ದಿವ್ಯಸ್ಥಿತಿಯಲ್ಲಿ ಈ ಋಷಿಕೆಯ ಆತ್ಮವು ತಾನೇ ರುದ್ರಾದಿಯಾಗಿ ಎಲ್ಲ ದೇವತೆಗಳು ಅನ್ನುವುದನ್ನು ದರ್ಶಿಸಿದಳು. ತಾನೇ ಯಜ್ಞಕರ್ತನಿಗೆ, ಅಂದರೆ ಯಾವುದೇ ಕರ್ಮಗೈದವಗೆ ಫಲಕೊಡುವವಳೂ ತಾನೇ, ಅಷ್ಟೇ ಅಲ್ಲ ವಾಕ್‌ಗೆ ಅಧಿಪಳಾದ ಸರಸ್ವತಿಯೂ ತಾನೇ ಎಂಬುದಾಗಿ ಅವಳು ದರ್ಶಿಸಿದಳು. ಜಗತ್ತಿನ ಸ್ವಾಮಿಗೆ ರಾಷ್ಟ್ರೀ ಎಂದು ಕರೆಯಲಾಗುವುದು. ಪರಬ್ರಹ್ಮನನ್ನು ದರ್ಶಿಸಿದವಳು ಚಿಕಿತುಷಿಯಾಗುವಳು ; ಈ ಎಲ್ಲವೂ ತಾನೇ ಎಂಬುದಾಗಿ ಈ ಋಷಿಕೆ ದರ್ಶಿಸಿದ್ದು.

ಯಾರೇ ಉಣ್ಣಲಿ, ಉಸಿರಾಡಲಿ, ದೇವತ್ವಕ್ಕೇರಲಿ ಅವೆಲ್ಲವೂ ಪರಮಾತ್ಮನದೇ ಇಚ್ಛೆ ಅನ್ನುವುದನ್ನು ಸಮಾಧಿಯಲ್ಲಿ ಮನಗಂಡ ಈಕೆ ಪರಮಾತ್ಮಭಾವದಲ್ಲಿ ಬಂದು ನಿಂತು ತಾನೇ ಆ ಎಲ್ಲಕಾರಣಕರ್ತಳು ಎಂದು ಹೇಳಿಕೊಳ್ಳುತ್ತಾಳೆ. ದುಷ್ಟರ ವಿನಾಶಕ್ಕಾಗಿ ತಾನು ರುದ್ರನ ಧನುಸ್ಸಾಗಿ ನಿಲ್ಲುವವಳು ಎಂದು ಮುಂತಾಗಿ ಅವಳ ದರ್ಶನವು ಸಾರುತ್ತದೆ. ಒಟ್ಟಿನಲ್ಲಿ ಪರಮಾತ್ಮ – ಪರಾಶಕ್ತಿಯರೇ ದೇವತೆಗಳಾಗಿ ಪ್ರಕೃತಿಯೂ ಆಗಿ ಜಗತ್ತನ್ನೆಲ್ಲಾ ನಡೆಸುತ್ತ ಇರುವುದು ಅನ್ನುವುದು ಈ ಸೂಕ್ತದ ತಿರುಳು. ವ್ಯಕ್ತಿಯು ತನ್ನ ಅಸ್ತಿತ್ವವನ್ನು ಬದಿಗಿಟ್ಟು ಅಂದರೆ ತನ್ನ ಯಾವುದೇ ಕರ್ಮಫಲಗಳಿಗೆ ಅಂಟಿಕೊಳ್ಳದೆ ಇದ್ದು ಸಾಧನೆಯನ್ನು ನಡೆಸಿದಾಗ ಎಲ್ಲವೂ ತಾನೇ ಆಗಬಲ್ಲ, ಪರಮಾತ್ಮನೇ ಆಗಬಲ್ಲ, ಸರಸ್ವತಿಯೇ ಆಗಬಲ್ಲ ಅನ್ನುವುದು ಈ ಸೂಕ್ತದ ಆಶಯ.

* * * * *

೧೧. ಅನ್ನಸೂಕ್ತ ದರ್ಶಿಕಾ

[**ಪೀಠಿಕೆ:** ಅನ್ನಸೂಕ್ತವು ಯಜುರ್ವೇದದ ತೈತ್ತರೀಯ ಸಂಹಿತೆಯ ಏಳನೆಯ ಕಾಂಡದ ಐದನೆಯ ಪ್ರಶ್ನೆಯ ಹದಿನೆಂಟನೆಯ ಮಂತ್ರವಾಗಿದೆ. ತೈತ್ತರೀಯ ಉಪನಿಷತ್ತಿನಲ್ಲಿಯೂ ಸಹ ಅನ್ನದ ಮಹಿಮೆಯು ವರ್ಣಿಸಲ್ಪಟ್ಟಿದೆ. ಮಹಾನಾರಾಯಣೋಪನಿಷತ್ತೇ ಮುಂತಾದ ಅನೇಕ ಉಪನಿಷತ್ತುಗಳೂ ಅನ್ನವನ್ನು ಸ್ತುತಿಸುತ್ತವೆ. ಪರಮಾತ್ಮನೇ ಅನ್ನ; ಅನ್ನವೇ ಪರಮಾತ್ಮ ಹಾಗೂ ಪರಮಾತ್ಮನ ಶಕ್ತಿ, ಪರಾಶಕ್ತಿ. ಪರಬ್ರಹ್ಮನು ಅನ್ನವೂ ಆಗಿ, ಅನ್ನಾದನೂ(ಅನ್ನವನ್ನು ಭಕ್ಷಿಸುವವನೂ)ಆಗಿ ಅನ್ನದನೂ (ಅನ್ನವನ್ನು ಕೊಡುವವನೂ) ಆಗಿದ್ದಾನೆ. ಅಂದರೆ ತಾನೇ ಆದ ಅನ್ನದಿಂದ ತನ್ನ ಸುಸ್ಥಿತಿ ಹಾಗೂ ತಾನೇ ಆದ ಅನ್ನವನ್ನು ಸರ್ವಜೀವಿಗಳಿಗೊದಗಿಸಿ ಜಗತ್ತು ನಿರಂತರವಾಗಿ ಮುಂದುವರಿಯುವಂತೆ ನೋಡಿಕೊಳ್ಳುತ್ತ ಜಗತ್ತಿನ ಸುಸ್ಥಿತಿಯನ್ನೂ ಆತ ನಡೆಸುತ್ತಿರುತ್ತಾನೆ. ಅನ್ನದಿಂದಲೇ ಜನ್ಮ–ಬದುಕುಗಳು, ಸೃಷ್ಟಿ–ಸ್ಥಿತಿಗಳು ಅನ್ನುವ ಮಹಾತತ್ತ್ವವು ಈ ಅನ್ನಸೂಕ್ತದಲ್ಲಿದೆ. ಇಲ್ಲಿಯ ವಿಚಾರಗಳನ್ನು ಆಧ್ಯಾತ್ಮಿಕ ಅರ್ಥಸಹಿತವಾಗಿ ಪದ್ಯಾತ್ಮವಾಗಿ ಇಲ್ಲಿ ತರಲಾಗಿದೆ.]

ಅನ್ನವೂ ತಾನನ್ನ ಮೂಲವೂ ತಾ ಪರಮೇಷ್ಟಿ ಪುರುಷ
ಅನ್ನದಿಂ ವಿಕಸನವು ಸತತ ವಿಕಸನವದುವೆ ಪರಂಬ್ರಹ್ಮ ॥ಪ॥

ಇಷ್ಟಿಯೆಂದರೆ ಅನ್ನ–ಬಯಕೆ–ಯಜ್ಞಗಳು
ಅನ್ನವಿರಲೆಂದಪೇಕ್ಷೆಪಟ್ಟು ತಾನನ್ನವೇ ಆದ ಪರಮಾತ್ಮ
ಅನ್ನವಾಗಿ ತಾನನ್ನಾದನೂ ಆದನಾ ಪರಬ್ರಹ್ಮ ಪುರುಷ
ಪರಮೇಷ್ಟಿಯವ ಯಜ್ಞ; ಯಜ್ಞವೇ ವಿಕಸನವೆಂಬ ಬ್ರಹ್ಮ ॥1॥

ಒಂದೇ ಒಂದಾಗಿದ್ದ ಪರಮಾತ್ಮನನೇಕನಾಗಲು ಸಂಕಲ್ಪಿಸಿದಾಗ ಸ್ಪಂದ
ಮೂಡಿತದುವೆ ಪರಾಶಕ್ತಿಯದುವೆ ಪ್ರಕೃತಿಯಾಗಿ ನಿಂತು
ಅನ್ನವೇ ತಾನಾಗಿ ಜಗವನ್ನು ಸೃಷ್ಟಿ–ಸ್ಥಿತಿಯಲಿಟ್ಟಿಹುದು
ಅನ್ನದಿಂ ಶಕ್ತಿ ಶಕ್ತಿಯೇ ಪ್ರಕೃತಿ ಅನ್ನಮೂಲ ಜಗವು ॥2॥

ಅನ್ನಬ್ರಹ್ಮದಿಂ ಭೂಮಿಗವತರಿಸಿ ಬಂದು
ಭೋಕ್ತ್ಯಾನ್ನ–ಜ್ಞಾನಾನ್ನಗಳ ಬೆಳೆದು ಬಿತ್ತರಿಸುತಿದ್ದು
ನಿತ್ಯಾನ್ನದಿಂ ಸತತ ವರ್ಧಿಸುತ ತಾನಿದ್ದು
ಜೀವಿತಾ ಬ್ರಹ್ಮಾನ್ನದಲಿ ಕೊನೆಗೈಕ್ಯಗೊಳ್ಳುವುದು ॥3॥

ಅನ್ನವೇ ಶ್ರೀಯಿಹುದು ಶ್ರೀಯಿಂದ ಪರಮೇಷ್ಟಿತತ್ತ್ವಾನುಭೂತಿ
ಶ್ರೀಯೆಂದರದು ಲಕ್ಷ್ಮಿ ಕೂಡಲೇ ಲಕ್ಷ್ಯಕ್ಕೆ ಬರುವ ತತ್ತ್ವ
ಶ್ರೀಯೆ ತಾ ಜೀವಸಂಕುಲಪೋಷಕ ಜಲತತ್ತ್ವವಾಗಿಹುದು
ಜಲತತ್ತ್ವದ ಸಾಕಾರವೇ ಸಮುದ್ರವದರಿಂ–
ಮಳೆಯದರಿಂದ ವನಸ್ಪತಿಯದರಿಂದಲನ್ನ ॥4॥

ಅನ್ನವೆಂದರೆ ಸಮಸ್ತ ಭಕ್ಷ್ಯ–ಪಾನೀಯಗಳು
ಅನ್ನರಸದಿಂ ಜೀವಿಗಳಲಿ ವೀರ್ಯಾಣು ಮತ್ತು ಅಂಡಾಣು
ಶುಕ್ಲಶೋಣಿತಗಳಿಂ ವಿದ್ಯೆ–ರಾಷ್ಟ್ರ–ವಾಣಿಜ್ಯ–ಕೃಷಿ–ಸೇವೆಗಳನು
ಮುನ್ನಡೆಸುವವರುದಯವದರಿಂದ ಜಗದ ಸುಸ್ಥಿತಿಯು ॥5॥

ವೈಶ್ವಾನರಾಗ್ನಿಯದು ಪಿತ್ತರಸದಲ್ಲಿ
ದೇಹದಲ್ಲವತರಿಸಲಿಕೆ ಪರಮ ಮೂಲವು ಅನ್ನ
ಅನ್ನದಿಂ ತೇಜಸ್ಸು ಓಜಸ್ಸು–ಬಲವೃದ್ಧಿ
ಜೀವಯಾತ್ರೆಯ ರಥಕಿಂಧನವು ಅನ್ನ ॥6॥

ಹವಿರ್ಭಾಗಗಳೆಲ್ಲ ಯಜ್ಞದಲಿ ಯಜ್ಞಾಗ್ನಿಗನ್ನ
ಯಜ್ಞವಿರಲಧ್ವರ್ಯು–ಹೋತೃ–ಉದ್ಗಾತೃ–ಬ್ರಹ್ಮ
ಯಜಮಾನ ತತ್ಪತ್ನಿ ಮತ್ತಿವರೆಲ್ಲರೂ ನಿಜದಿ
ಅನ್ನದಿಂ ಬಂದವರು ಅನ್ನಮೂಲವು ಯಜ್ಞ ಯಜ್ಞಭಾಗಗಳು ॥7॥

ಈಗಿದ್ದು ಮುಂದೆ ತಾನದೇ ಸ್ಥಿತಿಯಲ್ಲಿರದಿರುವುದಶ್ವ
ಅನ್ನವದು ಮುಂದೆ ರಸ–ರಕ್ತಾದಿರೂಪಪಡೆಯುವುದರಿಂದಲದು ಅಶ್ವ
ಅಶ್ವಮೇಧವೆಂದರನ್ನವನೇ ಅನ್ನಕ್ಕರ್ಪಿಸುವ ತತ್ತ್ವ
ಜೀವಾಣುಗಳನ್ನವವಕಿಂತ ಬಲಿಪ ಜೀವಾಣುಗಳು–
ಭಕ್ಷಿಸುವ ತತ್ತ್ವವಿಲ್ಲಿಹುದು ॥8॥

ಪ್ರಜಾಪತಿಬ್ರಹ್ಮ ತಾನನ್ನವಾಗಿ ನಿಂತು ಮೊದಲು
ಕೋಟಿಗಟ್ಟಲೆ ಸೂರ್ಯರನು ಸೃಷ್ಟಿಸಿದನೊಡನೆ
ಆ ಸೂರ್ಯರುದಯಕ್ಕೆ ತನ್ನನ್ನೇ ಅನ್ನವಾಗಿಸಿ ತೇಜಸ್ಸಾಗಿ ಬೆಳಗಿ
ಮುಂದೆ ಆ ಸೂರ್ಯರನೇ ಅನ್ನವಾಗಿಸಿದನಾ ಆ ಸೌರಸಂಸಾರಗಳಿಗೆಲ್ಲ ॥9॥

ಋತದ ಸಂತಾನ ಸತ್ಯ; ಸತ್ಯವೇ ಜಗದನ್ನವಾಗಿಹುದು
ಋತದಿಂದಲೇ ಪಂಚಭೂತಗಳು ಆ ಪಂಚಭೂತಗಳಿಗನ್ನ ಋತವು
ಪೃಥಿವ್ಯಪ್ತೇಜೋವಾಯ್ವಾಕಾಶಕಾಲದಿಙ್ಮನಾತ್ಮಗಳೆಲ್ಲವೂ
ಸೃಷ್ಟಿಯಲಿ ಒಂದು ಮತ್ತೊಂದಕ್ಕೆ ಕ್ರಮದಲನ್ನವಾಗಿ ನಿಂತಿಹವು ॥10॥

ಅನ್ನದಿಂದಲೆ ಪ್ರಜೆಯು ಸಂತಾನದುತ್ಪತ್ತಿ
ಅನ್ನದಿಂದಲೆ ಬದುಕು–ಭಾಗ್ಯವೈಶ್ವರ್ಯ
ಜಗದಲ್ಲಿ ಹಿರಿಯಣ್ಣನೆನಿಸಿದ್ದು ಅನ್ನ
ಗತ–ಜಾತ–ಜಾಯಮಾನಗಳಿಗೆಲ್ಲ ದಿಟದಿ ॥11॥

ಅನ್ನದಿಂ ರಸ–ರಕ್ತ–ಮಾಂಸ–ಮಜ್ಜಾ–ಎಲುಬು–ಚರ್ಮ–ವೀರ್ಯಗಳು
ವೀರ್ಯಾಣ್ವಂಡಾಣುಗಳವುಗಳಿಂ ಮುಂದುಮುಂದಿನ ಪ್ರಜೆಗಳುತ್ಪತ್ತಿ
ಅನ್ನವೇ ತಂದೆ–ತಾಯಿ–ಹಿರಿಯ–ಗುರುಸರ್ವಜೀವಿಗಳು
ಅನ್ನವೇ ಪ್ರಾಣಾದಿಪಂಚಕಗಳನ್ನವೇ ದೇವ–ದೇವತೆಗಳೆಲ್ಲ ॥12॥

ಪಂಚಭೂತಗಳಿಗನ್ನ ಪ್ರಕೃತಿ;ಪ್ರಕೃತಿಗನ್ನ ಪಂಚಭೂತಗಳು
ಅನ್ನವಾಗಿ ತಾ ನಿಂತ ಮೂಲಪ್ರಕೃತಿಯೇ ದೇವ್ಯನ್ನಪೂರ್ಣೇಶ್ವರೀ
ಅನ್ನಕ್ಕಾಗಿ ಸರ್ವಕರ್ಮಗಳು ನಿರಂತರದಲ್ಲಿ ಜಗದಿ
ಅನ್ನವನು–ಬಹುಬೆಳೆಸಿ ನೀಡಿದರದುವೇ ವಿಶ್ವವಿಕಾಸಯಜ್ಞ ॥13॥

ಜ್ಞಾನವೇ ಜ್ಞಾನರತಗನ್ನ ವಿದ್ಯಾರತನಿಗನ್ನ ವಿದ್ಯೆ
ಬುಭುಕ್ಷಿತನಿಗನ್ನವಾಹಾರ ಪಿಪಾಸಿತನಿಗನ್ನ ಪಾನೀಯ
ಪ್ರೇಮ–ಕಾಮಾದಿಗಳಿಗನ್ನ ಜಗದ ಸರ್ವವಸ್ತುಗಳು
ಮೋಕ್ಷಮಾರ್ಗದಲಿ ನಡೆವವಗೆ ನಿರ್ವಿಕಲ್ಪಧ್ಯಾನವೇ ಅನ್ನ ॥14॥

ಅನ್ನದಾರಾಧನೆಯು ಸತತ ನಡೆದಿಹುದು
ಪ್ರಾಣಾಪಾನಾದಿಗಳಿಗೆ ನೈವೇದ್ಯವೆಲ್ಲ ಅನ್ನ
ದೇವೀ–ದೇವರುಗಳಿಗೆಲ್ಲವರ್ಪಿಸಿದ ನೈವೇದ್ಯವುಂಡು
ಪ್ರಾಣಪಂಚಕವು ರಮಿಸಬಯಸುವುದು ಯೋಗಾನ್ನದಲ್ಲಿ ॥15॥

ಪ್ರಾಣಾದಿಪಂಚಕವೇ ಜೀವಾತ್ಮಕ್ಕೆ ಅನ್ನವಾಗಿಹುದು
ಜೀವಾತ್ಮವೇ ಅನ್ನವಾಗಿಹುದು ಪ್ರಾಣಪಂಚಕಕೆ
ಜೀವಾತ್ಮಗಳವತರಣವದು ಜಗದನ್ನವಾಗಿಹುದು
ಅನ್ನವಾಗಿಹುದೆಲ್ಲವೂ ಸರ್ವಭಕ್ಷಕ ಕಾಲಪುರುಷನಿಗೆ ॥16॥

ಸ್ಪರ್ಶ ಚರ್ಮಕೆ ಅನ್ನ ಶಬ್ದ ಕಿವಿಗನ್ನ
ನಾಲಿಗೆಗೆ ರುಚಿಯನ್ನ ಮೂಗಿಗೆ ವಾಸನೆಯು ಅನ್ನ
ರೂಪ ಕಣ್ಣಿಗೆ ಅನ್ನ ಹಸ್ತಕ್ಕೆ ಕಾಯಕವು ಅನ್ನ
ನಡೆಯು ಪಾದಕೆ ಅನ್ನ ಪ್ರಕೃತಿಗೆ ಅನ್ನ ಪರಮಾತ್ಮ ॥17॥

ಸಸ್ಯವೃಕ್ಷಗಳಿಂದ ಜೀವಿಗಳು ನಿತ್ಯದಲಿ ಪಡೆಯಲನ್ನವನು
ಸಸ್ಯಾದಿಗಳು ಪಡೆಯಲನ್ನವನು ಸುವೃಷ್ಟಿಮೂಲದಿಂದ
ವೃಷ್ಟಿ–ಭೂ–ಜಲಾಗ್ನಿ–ವಾಯ್ವ್ಯಾಕಾಶಗಳು ಕ್ರಮದಿಂದ
ಪಡೆಯನ್ನವನು ಮುಂದುಮುಂದಿನ ತತ್ತ್ವಗಳಿಂ ಬಹುಭೂರಿಯಾಗಿ ॥18॥

ಜಗದ ಪ್ರತಿವಸ್ತುವೂ ಯಾವುದೋ ಒಂದಕ್ಕೆ ಅನ್ನವಾಗಿಹುದು
ಯಾವುದನು ನಿಂದಿಸಿದರೂ ಅದು ಅನ್ನದ ನಿಂದೆಯಾಗುವುದು
ಅನ್ನದ ನಿಂದನೆಯೆ ದೇವೀ ದೇವ ಗುರು ಪಿತೃನಿಂದನೆಯು
ಅನ್ನಕ್ಕೆ ನಮನವೆಂದರದು ನಮನ ಸರ್ವಜಗಕೆ ॥19॥

ಅನ್ನಮಯ ಪ್ರಾಣವೆನ್ನುವುದು ಕಲಿಯುಗದ ಮರ್ಮ
ಭೋಕ್ತ್ರ್ಯನ್ನ ಜ್ಞಾನಾನ್ನವರ್ಧನೆಗಳತಿ ಶ್ರೇಷ್ಠಧರ್ಮ
ನಿಷ್ಕಾಮದಿಂದೀ ದ್ವಿವಿಧಾನ್ನದಾನವು ಮೋಕ್ಷಕ್ಕೆಳೆವ ಕರ್ಮ
ಪರಮಗುರುಪಾದಕರುಣೆಯಿಂ ಸಂತತವಿರಲೀ ದ್ವಿವಿಧಾನ್ನವರ್ಧನೆಯು ॥20॥

ಅನ್ನವೂ ತಾನನ್ನ ಮೂಲವೂ ತಾ ಪರಮೇಷ್ಠಿ ಪುರುಷ
ಅನ್ನದಿಂ ವಿಕಸನವು ಸತತ ವಿಕಸನವದುವೆ ಪರಂಬ್ರಹ್ಮ ॥ಪ॥

ಅನ್ನಸೂಕ್ತ – ದರ್ಶಿಕಾ

ಯಜುರ್ವೇದ ಹಾಗೂ ಉಪನಿಷತ್ತುಗಳಲ್ಲಿ 'ಅನ್ನ'ದ ವರ್ಣನೆಯು ಮನೋಜ್ಞವಾಗಿ ಬಂದಿದೆ. ಇಲ್ಲಿ ಅನ್ನ ಅಂದರೆ ಯಾವುದೇ ಆಹಾರವಸ್ತು. ತಿನ್ನಲ್ಪಡುವ, ಉಣ್ಣಲ್ಪಡುವ ಹಾಗೂ ಕುಡಿಯಲ್ಪಡುವ ಯಾವುದೇ ವಸ್ತುವಿರಲಿ ಅದೆಲ್ಲವೂ 'ಅನ್ನ' ಶಬ್ದದಲ್ಲಿ ಸಮಾವೇಶಗೊಂಡಿದೆ. ಇಷ್ಟೇ ಅಲ್ಲ ಪಂಚಜ್ಞಾನೇಂದ್ರಿಯಗಳಿಂದ ಸವಿಯಲ್ಪಡುವ ಅರ್ಥಾತ್ ಕಣ್ಣು – ಮೂಗು–ಕಿವಿ–ನಾಲಗೆ – ಚರ್ಮಗಳಿಂದ ಜೀವಿಯ ಅನುಭವಕ್ಕೆ ಬರುವ ಸಮಸ್ತವೂ 'ಅನ್ನ' ದಲ್ಲಿ ಸಮಾವೇಶಿತಗೊಳ್ಳುತ್ತವೆ. ಅನ್ನವನ್ನು ನಿಂದಿಸಬಾರದು. 'ಅನ್ನಂ ನ ನಿಂದ್ಯಾತ್' ಅಂದರೆ, ಆಹಾರದ ಯಾವ ವಸ್ತುವನ್ನೂ ಅಂದರೆ ಇಷ್ಟೇ ಅಲ್ಲ ಅಮೇಧ್ಯವನ್ನೂ ಸಹ ನಿಂದಿಸಬಾರದು ಎಂದು ಅರ್ಥ. ಏಕೆಂದರೆ ಅಮೇಧ್ಯವು ಯಾವುದೇ ಒಂದು ಪ್ರಾಣಿಗೆ ಅಥವಾ ಸಸ್ಯಗಳ ಆಹಾರವಾಗಿರುತ್ತದೆ. ವೇದಗಳ ಪ್ರಕಾರ ಪರಮಾತ್ಮನಿಂದಲೇ ಅನ್ನದ ಅಸ್ತಿತ್ವವುಂಟಾಗುತ್ತದೆ. ಪರಬ್ರಹ್ಮನನ್ನೇ ಬ್ರಹ್ಮಾಂಡದ ಅನ್ನವೆಂದೂ ವರ್ಣಿಸಲಾಗುತ್ತದೆ. ಮೊದಲು ಆ ಪರಮಾತ್ಮನೇ ಅನ್ನವಾಗಿ ಜಗತ್ತಿಗೆ ಕಾರಣೀಭೂತನಾದನು. ಈ ಪರಮಾತ್ಮನೆಂಬ ಅನ್ನದಿಂದಲೇ ಇಡೀ ಜಗತ್ತಿನ ವಿಕಸನವು ಸ್ವರ್ಗ–ಮರ್ತ್ಯ–ಪಾತಾಳಗಳು, ಭೂಮಿಯೇ ಮುಂತಾದ ಎಲ್ಲ ಗ್ರಹಗಳೂ ಹಾಗೂ ಸೂರ್ಯನೇ ಮುಂತಾದ ಸರ್ವನಕ್ಷತ್ರಗಳು. ಅನ್ನವೇ ಪರಬ್ರಹ್ಮ ; ಅನ್ನವೇ ಜಗತ್ತು.

ಮೊದಲು ಯಜ್ಞದ ಪ್ರಸ್ತಾಪ. ಇಷ್ಟಿ ಅಂದರೆ ಯಜ್ಞವೂ ಹೌದು ; ಅನ್ನವೂ ಹೌದು ; ಬಯಕೆಗಳೂ ಹೌದು. ಇಷ್ಟಿಗೆ ಮೂಲವೇ ಅನ್ನ ; ಅನ್ನವು ಅಸ್ತಿತ್ವಕ್ಕೆ ಬರಲೆಂದು ಪರಮಾತ್ಮನು ಬಯಸಿದ, ಹಾಗೂ ತಾನೇ ಮೊದಲು ಅನ್ನವಾದ. ಆತನು 'ಏಕೋಽಹಂ ಬಹು ಸ್ಯಾಮ್' ತಾನು ಒಬ್ಬನೇ ಇರುವುದು ; ಆದರೆ ಬಹುವಾಗಬೇಕು ಎಂದು ಸಂಕಲ್ಪಿಸಿದ. ಆ ಸಂಕಲ್ಪವೇ ಅನೇಕತ್ವಕ್ಕೆ, ಜಗತ್ತಿಗೆ ಹಾಗೂ ಜಗತ್ತಿನ ವಿವಿಧತೆಗೆ ಅನ್ನವಾಯಿತು. ಆತನ ಸಂಕಲ್ಪದಿಂದ ಆತನಲ್ಲಿ ಸ್ಪಂದವು ಮೂಡಿತು. ಸ್ಪಂದಕ್ಕೆ ಪರಮಾತ್ಮನೇ ಮೂಲನಾದುದರಿಂದ ಆತನೇ ಅನ್ನವಾದಂತಾಯಿತು. ಯಾವುದೇ ಘಟನೆಯ ಮೂಲವು ಆ ಘಟನೆಗೆ ಅನ್ನವೆಂದು ಭಾವಿಸುವುದೇ ಹಾಗೂ ನಿಜದಲ್ಲಿಯೂ ಅನ್ನವೆಂದು ಆಗುವುದೇ ಇದಕ್ಕೆ ಕಾರಣ. ಕಾರ್ಯಕಾರಣಸರಪಳಿಯಿಂದಾಗಿ ಎಲ್ಲವೂ ಅನ್ನವೇ ಆಗಿ ಪರಿಣಮಿಸಿಬಿಡುವುದು ಅನ್ನುವುದು ಅನ್ನದರ್ಶಕರಾದ ಋಷಿಗಳ ದರ್ಶನ.

ಪರಬ್ರಹ್ಮದ ಅಥವಾ ಪರಮಾತ್ಮನ ಸ್ಪಂದವೇ ಪರಾಶಕ್ತಿ ಹಾಗೂ ಈ ಪರಾಶಕ್ತಿಯೇ ಜಗತ್ತಿನ ಮೂಲವಾದ ಪ್ರಕೃತಿ, ಮೂಲಪ್ರಕೃತಿ. ಇವೆಲ್ಲ ಒಂದಕ್ಕೆ ಮತ್ತೊಂದು ಆಹಾರವೇ ಸರಿ, ಅನ್ನವೇ ಸರಿ.

ಪರಮಾತ್ಮನೆಂಬ ಮಹಾಸೂರ್ಯನಿಂದ, ಅಥವಾ ಪರಂಜ್ಯೋತಿಯಿಂದ ಅದರ ಸ್ಪಂದದಿಂದಾಗಿ ಹೊರಗೆ ಬಂದ ಆತ್ಮಗಳು, ಪ್ರತ್ಯಗಾತ್ಮಗಳು, ಲೆಕ್ಕಕ್ಕೆ ನಿಲುಕದ ಸಂಖ್ಯಾತೀತ ಆತ್ಮಗಳು ಜೀವತತ್ತ್ವಕ್ಕೆ ಅರ್ಥಾತ್ ಪ್ರಾಣತತ್ತ್ವಕ್ಕೆ ಆಹಾರವಾಗಿ ಪರಿಣಮಿಸುವವು ; ಅರ್ಥಾತ್ ಜೀವಭಾವವು ಅವುಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವವು ; ಇವೆಲ್ಲವೂ ನಡೆಯುವುದು ಪರಮಾತ್ಮನ ಸ್ಪಂದವೇ ಆದ ಪ್ರಕೃತಿಯ ಮೂಲಕ. ಜೀವಕ್ಕೆ ಆತ್ಮ ಅನ್ನ ; ತತ್ಫಲವಾಗಿ ಜೀವಾತ್ಮ, ಆತ್ಮನಲ್ಲಿ ಜೀವಾತ್ಮಭಾವ. ಜೀವಾತ್ಮವು ದೇಹವನ್ನು ಪಡೆಯಬೇಕಿದ್ದರೆ ಅವಲಂಬಿಸುವುದು ಅನ್ನವನ್ನೇ. ಅನ್ನದಿಂದ ರಸ – ರಕ್ತ–ಮಾಂಸ –ಮಜ್ಜಾ – ಎಲುಬು–ಚರ್ಮ–ವೀರ್ಯಾಣು ಅಂಡಾಣುಗಳು ಹಾಗೂ ವೀರ್ಯಾಣು ಅಂಡಾಣುಗಳಿಂದ ದೇಹದ ಅಸ್ತಿತ್ವ. ದೇಹದಲ್ಲಿ ವಾಸಿಸುವ ಜೀವಾತ್ಮವು ಅನ್ನದಿಂದಲೇ ತನ್ನ ದೇಹವನ್ನು ಪೋಷಿಸುವುದು. ಅದಕ್ಕಾಗಿ ಜೀವಾತ್ಮವು ಉಂಡು–ತಿಂದು–ಕುಡಿದು ಅನುಭವಿಸುವ ಅನ್ನವನ್ನು ಉತ್ಪಾದಿಸುವುದರ ಜೊತೆ ಜೊತೆಗೆ ಇವನ್ನೆಲ್ಲ ನಡೆಸಲು ಬೇಕಾದ ತಿಳುವಳಿಕೆಗಳೆಂಬ, ಜ್ಞಾನವೆಂಬ ಅನ್ನವನ್ನೂ ಉತ್ಪಾದಿಸುವುದು. ಈ ಜ್ಞಾನಕ್ಕೆ ತೃಪ್ತವಾಗದೆ ಜೀವಾತ್ಮವು ತಾನು ಪರಬ್ರಹ್ಮನ ಒಂದು ಅಂಶವೆನ್ನುವುದನ್ನು ಅರಿತು ಆತ್ಮ ಸಾಧನೆಗಾಗಿ ಆ ಪರಮಾತ್ಮನಲ್ಲಿ ವಿಲೀನಗೊಳ್ಳುವ, ಅರ್ಥಾತ್, ಮೋಕ್ಷವನ್ನು ಪಡೆಯುವ ಜ್ಞಾನವನ್ನು ಕಂಡು ಹಿಡಿಯಿತು. ಆ ಪರಮಾತ್ಮನೆಂಬ, ಬ್ರಹ್ಮನೆಂಬ, ಪರಬ್ರಹ್ಮನೆಂಬ ಅನ್ನವನ್ನು ಅನುಭವಿಸುವ ಆ ಪ್ರತ್ಯಗಾತ್ಮವು ಅದೇ ಸಮಯದಲ್ಲಿ ತಾನೂ ಆ ಪರಮಾತ್ಮನಿಗೆ ಅನ್ನವಾಗಿ ಪರಿಣಮಿಸಿದ್ದು ಅತ್ಯಂತ ರೋಚಕ ವಿಶೇಷ.

ಸೂರ್ಯ–ಸಮುದ್ರ–ಮೋಡ–ಮಳೆ–ಭೂಮಿ–ಬೀಜ–ಬೆಳೆ–ಅನ್ನ–ವೀರ್ಯ–ದೇಹ ಜೀವಿ–ರಾಷ್ಟ್ರ–ವಾಣಿಜ್ಯ–ಕೃಷಿ ಮುಂತಾದ ಎಲ್ಲವೂ ಕ್ರಮವಾಗಿ ಒಂದು ಮತ್ತೊಂದಕ್ಕೆ ಅನ್ನವೇ ಆಗಿರುವುದನ್ನು ಅದ್ಭುತವಾದ ರೀತಿಯಲ್ಲಿ ಗ್ರಹಿಸಿದ, ದರ್ಶಿಸಿದ ಋಷಿಗಳು ಧನ್ಯರೇ ಸರಿ. ಜೀವನಯಾತ್ರೆಯೆಂಬ ರಥಕ್ಕೆ ಆಹಾರವೇ ಈ ಎಲ್ಲವೂ ಎಂಬ ಅದ್ಭುತ ಕಥನ ಋಷಿಗಳದ್ದು.

ಅಧ್ಯಾತ್ಮಕ್ಕೆ ಹೋದಾಗ ಪರಬ್ರಹ್ಮದಿಂದ ಋತ, ಋತದಿಂದ ಸತ್ಯ, ಸತ್ಯದಿಂದ ಪಂಚಭೂತಗಳು – ಬದುಕು–ಭಾಗ್ಯ ಎಂದೆಲ್ಲ ಪರಂಪರೆಗೆ ಕಾರಣವು ಕೇವಲ ಅನ್ನವೆಂಬುದು ಅರಿವಾಗದಿರದು.

ಜ್ಞಾನದಲ್ಲಿ ನಿರತನಾದವನಿಗೆ ಜ್ಞಾನವೇ ಅನ್ನ ; ಪುಸ್ತಕವನ್ನು ಓದುವಾಗ ಓದುಗನಿಗೆ ಅನ್ನ ಆ ಪುಸ್ತಕ ; ವಿದ್ಯಾರತನಿಗೆ ಅನ್ನ ವಿದ್ಯೆ ; ಪ್ರೇಮ–ಕಾಮಾದಿಗಳಿಗೆ ಪ್ರೇಮಕ್ಕೆ, ಕಾಮಕ್ಕೆ ಒದಗಿ ಬರುವ ಗಂಡು ಅಥವಾ ಹೆಣ್ಣು ಅನ್ನವಾಗಿ ಪರಿಣಮಿಸುವುದು. ಹಾಗೂ ಮೋಕ್ಷಗಾಮಿಗೆ ನಿರ್ವಿಕಲ್ಪಧ್ಯಾನವೇ ಅನ್ನ. ಧ್ಯಾನದಲ್ಲಿ ಶೂನ್ಯಭಾವವಿದ್ದಲ್ಲಿ, ಅಂದರೆ ನಿರ್ವಿಕಲ್ಪವಿದ್ದಲ್ಲಿ ಆ ಧ್ಯಾನವು ಮೋಕ್ಷಕ್ಕೆ ಕೊಂಡೊಯ್ಯುವುದು ; ಅದೇ ಸವಿಕಲ್ಪವಿದ್ದಲ್ಲಿ, ಅಂದರೆ ಧ್ಯಾನದಲ್ಲಿ ಯಾವುದೇ ಇಷ್ಟದೇವತೆಯೇ ಮುಂತಾದ ಯಾವುದೇ ಇದ್ದಲ್ಲಿ ಅದೆಲ್ಲವೂ ಪ್ರಕೃತಿಯದಾದುದರಿಂದ, ಕಲ್ಪಿತವಾದ ಹಾಗೂ ಕರ್ಮದಿಂದ ಉದ್ಭೂತವಾದ ಯಾವುದೇ ಇದ್ದರೂ ಅದು ಪ್ರಕೃತಿಯದೇ ಅಂಗವಾಗುವುದರಿಂದ ಅದು ಪರಬ್ರಹ್ಮ ವಿಲೀನತೆಗೆ ಕೊಂಡೊಯ್ಯಲು ಅಸಮರ್ಥವಾಗುವುದು. ಪ್ರಕೃತಿಯನ್ನು ಮೀರಿದ ಧ್ಯಾನವಿದ್ದಾಗ ಮಾತ್ರ, ಅಂದರೆ ನಿರ್ವಿಕಲ್ಪಧ್ಯಾನವಿದ್ದಲ್ಲಿ ಮಾತ್ರ ನಿರ್ವಿಕಲ್ಪನಾದ ಪರಮಾತ್ಮನೆಂಬ ಪುರುಷನಲ್ಲಿ ಆತ್ಮವೆಂಬ ಪುರುಷನ ವಿಲೀನತೆ.

ಹೀಗೆ ಅನ್ನದ ಮಹಿಮೆ ಅಪಾರವಾದುದು. ಈ ಅನ್ನದ ಸೆಳೆವಿನಿಂದ ಪಾರಾಗಲು ನಿರ್ವಿಕಲ್ಪಧ್ಯಾನವೇ ಯೋಗಿಗೆ ಅವಶ್ಯವಾದುದು. ಸಾಮಾನ್ಯನೂ ಕೂಡ ತನ್ನ ಸರ್ವಕರ್ಮಫಲಗಳನ್ನೂ ಪರಮಾತ್ಮನಿಗೆ ಅರ್ಪಣೆ ಎಂಬ ನೈಜಭಾವದಲ್ಲಿದ್ದು ಕರ್ಮವನ್ನು ನಡೆಸುತ್ತಿದ್ದರೆ ಆಗ ಕರ್ಮಫಲೇಪನವಿಲ್ಲದಂತಾಗಿ, ಅನ್ನದ ಸರಪಳಿಯಿಂದ ಮುಕ್ತನಾಗುವನು, ಅಂದರೆ ಪರಮಾತ್ಮನಲ್ಲಿ ಲೀನನಾಗುವನು. ಭಗವದ್ಗೀತೆಯಲ್ಲಿ ಈ ತತ್ತ್ವವನ್ನು ಕರ್ಮಯೋಗವೆಂದು ಬಣ್ಣಿಸಲಾಗಿದೆ.

* * * * *

೧೨. ಸೋಮರಸ ದರ್ಶಿಕಾ

[**ಪೀಠಿಕೆ:** ಅಲೌಕಿಕಾನಂದವನ್ನೇ ಸೋಮರಸವೆಂದು ಋಗ್ವೇದದಲ್ಲಿ ಕರೆಯಲಾಗಿದೆ. ಋಗ್ವೇದದಲ್ಲಿ ಅಲ್ಲಲ್ಲಿ ಸೋಮರಸದ ಪ್ರಸ್ತಾಪ ಬರುವುದಾದರೂ ಒಂಬತ್ತನೆಯ ಮಂಡಲವು ಬಹುಶಃ ಸೋಮರಸದ ವರ್ಣನೆಗೇ ಮೀಸಲಾಗಿದೆ ಅಂದರೆ ತಪ್ಪೇನೂ ಆಗಲಾರದು. ಋಗ್ವೇದದಲ್ಲಿಯ ಬಹುಚರ್ಚಿತ ವಿಷಯಗಳಲ್ಲಿ ಸೋಮರಸವೂ ಒಂದು. ಆದುದರಿಂದ ಸೋಮರಸವನ್ನು ಕುರಿತು ಅದರ ವಿಶೇಷವಾದ ಆಧ್ಯಾತ್ಮಿಕ ಅರ್ಥಸಹಿತವಾಗಿ ಕನ್ನಡ ಪದ್ಯಾತ್ಮಕ ವಿವರಣೆಯನ್ನು ಇಲ್ಲಿ ತರಲಾಗಿದೆ.]

ಅಲೌಕಿಕಾನಂದದನುಭೂತಿ ಸೋಮರಸವು
ಪರಮಾನಂದಲೀನತೆಯೆ ಸೋಮರಸಪಾನ ॥ಪ॥

ಸೋಮರಸವರ್ಣನೆಯು ಋಗ್ವೇದದಲ್ಲಿ
ಬಹುಮುಖ್ಯವಾಗಿಹುದು ವಿವಿಧಾರ್ಥಸಹಿತ
ಸೋಮ ಬರುವುದು ದೇವಪ್ರಿಯಪಾನವಾಗಿ
ಚಂದ್ರನೂ ಆಗಿ ಮತ್ತದೋ ಬ್ರಹ್ಮಾನಂದವಾಗಿ ॥1॥

ಮೌಜಪರ್ವತವಿಹುದು ಸೋಮದಾವಾಸ
ಮುಂಜ ಬೆಳೆಯುವ ಗಿರಿಯು ಮೌಜಪರ್ವತವು
ಮುಂಜವೆಂದರೆ ದರ್ಭೆಯದು ಪಾವಿತ್ರ್ಯಸಂಕೇತ
ಪಾವಿತ್ರ್ಯವಿರುವಲ್ಲಿ ಮಾತ್ರ ಸೋಮಲತೆ ॥2॥

ಸೋಮಲತೆ ಬೆಳೆಯುವ ಮತ್ತೊಂದು ಸ್ಥಳವು
ಶರ್ಯಣಾವತವೆಂಬ ಕೆರೆಯ ದಡವದು ನೋಡು
ಶರ್ಯವೆಂದರೆ ಶರವು ಶರ್ಯವೆಂದರೆ ಬೆತ್ತ
ಬೆತ್ತ ಬೆಳೆಯುವ ಕೆರೆಯೆ ಶರ್ಯಣಾವತವು ॥3॥

ಶರವು ಬುಧಸಂಬಂಧಿ ಬುಧನು ಜ್ಞಾನಕ್ಕಧಿಪ
ಮತ್ತದೋ ಬೆತ್ತವದು ವೇಣುಸಂಕೇತ
ಸುಷುಮ್ನಾನಾಡಿಯದು ಶರ ಮತ್ತು ಬೆತ್ತ
ಸುಷುಮ್ನೆಯಿಹುದುದಧ್ಯಾತ್ಮನಾಡಿ ತಾ ದಿಟದಿ ॥4॥

ಸುಷೋಮಾ ನದಿಗುಂಟ ಸೋಮವದು ಬೆಳೆದು
ಸಮೃದ್ಧ ರಸದಿಂದ ತುಂಬಿರುವುದೆಂಬ
ಉಕ್ತಿಗನುಗುಣವಾಗಿ ನೋಡಿದರೆ ಮತ್ತೆ
ಸುಷುಮ್ನಾನಾಡಿಯೆಂದಾಗುವುದು ಸೋಮ ॥5॥

ಅರ್ಜೀಕ-ಕೃತ್ವದೇಶಗಳಲ್ಲಿ ಸೋಮಲತೆಯು
ಚೆನ್ನಾಗಿ ರಸಭರಿತವಿರುವುದೆನ್ನುವುದು
ಕರ್ತವ್ಯಪಥಕರ್ಮದರ್ಜನೆಯು ಮಾತ್ರ
ಬ್ರಹ್ಮಾನಂದಕೆಳಸುವುದ ಸೂಚಿಸುತ್ತಿಹುದು ॥6॥

ಪಸ್ತ್ಯವೆಂದರೆ ಸರಸ್ವತ್ಯಾದಿನದಿಗಳ ನಾಡು
ಅಲ್ಲಿಯೂ ರಸಭರಿತ ಸೋಮಲತೆಯು
ಇಡೆಯು ತಾ ಯಮುನೆ ಪಿಂಗಳಾನಾಡಿ ಗಂಗೆ
ಸರಸ್ವತಿಯು ತಾ ಸುಷುಮ್ನಾನಾಡಿಯಾಗಿಹುದು ॥7॥

ಆ ನದಿಗಳೆಡೆಗಳಲಿ ಪಂಚಜನವಾಸ
ಪಂಚಜ್ಞಾನೇಂದ್ರಿಯಗಳಿಲ್ಲಿ ಪಂಚಜನ ನೋಡು
ಲೌಕಿಕ ಜ್ಞಾನವನು ಲಕ್ಷಿಸುತ ಪರವು
ಇಹದ ಬದುಕೂ ಬೇಕು ಪರಮಪದಕೆ ॥8॥

ಶುದ್ಧಿಕಾರಕವಾಗಿ ಸೋಮ ಪವಮಾನ
ಸೋಮರಸಪಾನದಿಂ ದೇವತ್ವಸಿದ್ಧಿ
ದೇವತೆಗಳೀ ಸೋಮರಸವನ್ನು ಹೀರಿ
ರಾಕ್ಷಸರ ನಾಶಕ್ಕೆ ಶಕ್ತರಾಗುವರು ॥9॥

ಶ್ಯೇನಪಕ್ಷಿಯ ರೂಪದಿಂದ ಗಾಯತ್ರಿಛಂದಸ್ಸು
ಹಾರಿ ಸ್ವರ್ಗಕೆ ಸೋಮಲತೆಯನ್ನು ತಂದು
ಭೂಲೋಕದಲಿ ಬಿತ್ತರಿಸಿತೆನ್ನುವುದು ಕೂಡ
ಅಧ್ಯಾತ್ಮಲೋಕಗಮನಕ್ಕೆ ಕೈದೀಪವಾಗಿಹುದು ॥10॥

ಹುಟ್ಟುಸಾವುಗಳ ಬಹುದೀರ್ಘಮಾರ್ಗದಲ್ಲಿ
ನಿತ್ಯಗಮಿಸುತ್ತಿರುವ ಜೀವಾತ್ಮವನ್ನು
ರಕ್ಷಿಸುವ ದೈವೀತತ್ತ್ವ ಗಾಯತ್ರಿ ಛಂದಸ್ಸು
ಅದಕಿಹುದು ಬಯಸಿದ ಶಕ್ತಿರೂಪಗಳು ॥11॥

ವಿಷಮತ್ಪೀಡಕ ಶ್ಯೇನ ಪಕ್ಷಿಯಿದು ಗಿಡುಗ
ಬಹುದೊಡ್ಡರೆಕ್ಕೆಗಳ ಸುಪರ್ಣವೆನಿಸಿಹುದು
ಸಂಸಾರದಾಶಾವಿಷಸರ್ಪವನ್ನು ಮಣಿಸಿ
ಮನವನ್ನು ದಿವ್ಯತೆಗೆಳೆಯುವುದು ಗಾಯತ್ರಿಶ್ಯೇನ ॥12॥

ಶ್ಯೇನವಿದು ಮುಂದೆ ರಾಮಾಯಣದ ಕಥೆಯಲ್ಲಿ
ಜಟಾಯು–ಸಂಪಾತಿ–ಗರುಡರೂಪಗಳಲ್ಲಿ ಬಂದು
ಜೀವಾತ್ಮಮಾರ್ಗದಡೆತಡೆಗಳನ್ನು ಕಳೆದ
ಆದಿಮಧ್ಯಾಂತ್ಯ ಗುರುರೂಪಿಚೈತನ್ಯ ನಿಜದಿ ॥13॥

ಸೋಮವೆಂದರೆ ಹಿಂಡಿ ತೆಗೆದ ಮದರಸವು
ಸೋಮಲತೆಯನು ಹಿಂಡಿ ರಸವನ್ನು ತೆಗೆಯಲಾಗುವುದು
ಗುರುಕರುಣೆಯಿಂ ಜೀವಾತ್ಮ ತಾ ಸುಷುಮ್ನೆಯಲಿ ಸಾಗಿದಾಗ
ಸಹಸ್ರಾರದಿಂದೊಸರುವಾನಂದರಸ ಸೋಮರಸವು ॥14॥

ಕರ್ಮಜ್ಞಾನೇಂದ್ರಿಯಪ್ರಾಣಗಳು ವ್ಯಕ್ತಿಯನ್ನು
ಮುನ್ನಡೆಸುವವು ವ್ಯಕ್ತಿಯಲಿ ವಸುರುದ್ರಾದಿತ್ಯರಾಗಿ
ಇವರಿಗೆಲ್ಲರಿಗೊಡೆಯನಿಂದ್ರದೇವನೆ ಮನವು
ಪವಮಾನಸೋಮದಿಂ ಮನವು ಪಾವನವು ॥15॥

ಅಧ್ಯಾತ್ಮರಸಸೋಮಪಾನದಿಂ ಪೂತಮನ
ಸರ್ವದುರ್ಭಾವಗಳ ನಾಶಗೈಯುವುದು
ಅದುವೆ ರಾಕ್ಷಸ–ಸರ್ಪ–ವೃತ್ರಾದಿವಧೆಯು
ಆನಂದರಸವೃಷ್ಟಿಯಲಿ ನಿತ್ಯನಲಿದಾಟ ॥16॥

ಸೋಮವನು ಪುರುಷರೂಪದಲಿ ತಂದು
ಸೂರ್ಯಪುತ್ರಿಯ ಜೊತೆಗೆ ಮದುವೆಯನು ಮಾಡಿ
ನೋಡಿ ನಲಿದರು ಋಷಿಗಳಧ್ಯಾತ್ಮವಾದಿಗಳು
ಜೀವಾತ್ಮಗಳ ಮೂಲ ಪರಮಾತ್ಮ ಸೂರ್ಯ ॥17॥

ಸೋಮನೆಂದರೆ ಇಲ್ಲಿ ಚಂದ್ರನೆನ್ನುವುದರ್ಥ
ಚಂದ್ರನವನಮೃತಕಿರಣಸೂಸಕನು
ರವಿಯಿಂದ ಹೊರಸೂಸಿ ಬರುವ ಕಿರಣಗಳೇ
ಚಂದ್ರಪ್ರಭೆಗಾಧಾರವಾ ಕಿರಣಸ್ತೋಮವೇ ಚಂದ್ರಪತ್ನಿ ಸೂರ್ಯೆ ॥18॥

ಹುಣ್ಣಿಮೆಯು ಬಂದಂತೆ ಸೂರ್ಯಸುತೆ ಸೂರ್ಯೆ
ಸಂಪೂರ್ಣವೊಲಿದು ಬರುವಳಾ ಚಂದ್ರನೆಡೆಗೆ
ಪರಿಪೂರ್ಣ ಸೋಮನವನಿಂದ್ರಾದಿಗತಿಪ್ರಿಯನು
ಅವನಿಂದ ಹೀರುವರು ಮಧುವನ್ನು ಅವರು ॥19॥

ಸವಿತೃಶಕ್ತಿ ಗಾಯಿತ್ರಿ ತಾನೊಲಿದು ಕರುಣಿಸಿದ
ಸೋಮವದು ಬಹು ಮಧುರ–ಮಧುರವಾಗಿಹುದು
ಇಂದ್ರಾದಿಗಳೆಲ್ಲರೂ ತಮ್ಮ ಸತಿಯರೊಂದಿಗೆ ಬಂದು
ಹೀರುವರು ಸೋಮವನು ಬಹುಪ್ರೀತಿಯಿಂದ ॥20॥

ಆದಿತ್ಯ ರಕ್ಷಿಪನು ಸೋಮನನು ಸತತ
ಅನ್ನುವಲ್ಲಿರುವುದದು ರವಿರಶ್ಮಿಯಾಟ
ಆತ್ಮವದು ಪರಮಾತ್ಮನಂಶವಾಗಿದ್ದು
ಜನ್ಮಜನ್ಮದಲಿ ಚೈತನ್ಯ ಪಡೆವ ರೂಪಕವು ॥21॥

ಶಕ್ತಪರಮಾತ್ಮನಿಂ ಚೇತನವು ಬಂದು
ಜೀವಾತ್ಮದಲಿ ನೆಲಸಲಿಂದ್ರಿಯಗಳೆಲ್ಲ
ಸಂಭ್ರಮದಲದ ಪಡೆದು ಚಟುವಟಿಕೆಗಳನು
ನಡೆಸುತಿಹ ಜೀವನದ ಗತಿಯರ್ಥವಿಲ್ಲಿ ॥22॥

"ಅಮಾ" ಎಂದಾಗ ಭವ್ಯಮನೆಯಲ್ಲಿ
"ವಾಸ್ಯ"ವೆಂದರೆ ವಾಸವಂದು ಚಂದ್ರನದು
ಸೂರ್ಯನಲ್ಲಾವಾಸ ಶ್ವಶುರಗೃಹವಾಸ
ಸುಷುಪ್ತಿಯಲಿ ಜೀವಾತ್ಮ-ಪರಮಾತ್ಮಮಿಲನ ॥23॥

ವಾಯುವಿಗೆ ಮೊದಲಿನರ್ಹತೆಯು ಸೋಮಪಾನಕ್ಕೆ
ಅನಂತರದಲರ್ಹರಿಂದ್ರಾದಿಗಳೆಂಬ ಮಾತಿನಲ್ಲಿ
ಜೀವಾತ್ಮ ಜನ್ಮಪಡೆದೊಡನೆ ವಾಯುವಿನ ಚಲನ
ಅನಂತರದಲಿಂದ್ರಿಯಚಲನವೆಂಬ ತತ್ತ್ವವಿಹುದಿಲ್ಲಿ ॥24॥

ಋತನೀತನೆಂಬಲ್ಲಿ ನಿತ್ಯಸತ್ಯನು ಸೋಮ
ಪವಮಾನನೆಂಬಲ್ಲಿ ಪ್ರವಹಿಪ ಶುದ್ಧಿಕಾರಕನು
ಕವಿಯೀತನೆಂಬಲ್ಲಿ ಕ್ರಾಂತಿದರ್ಶಕ ಮತ್ತು ಸುಪ್ರಾಜ್ಞ
ಮದ್ಯವೆಂಬಲ್ಲೀತ ಪರಮಾನಂದಕಾರಕನು ॥25॥

ಇಂದುವೆಂದೂ ಸೋಮ ಪ್ರಖ್ಯಾತನಿಹನು
ಹನಿಗಳನು ಸುರಿಸುವುದರಿಂದಾತನಿಂದು
ಸಹಸ್ರಾರಪದ್ಮವದು ಸತತ ಸುರಿಸುವುದು
ಅಮೃತಬಿಂದುಗಳನು ಯೋಗಿಯಲಿ ಸೋಮನಾ ಪದ್ಮ ॥26॥

ವನಸ್ಪತಿಯಾಗಿಯೂ ಸೋಮನವ ಖ್ಯಾತ
ಈ ಅರ್ಥದಲ್ಲಾತ ತರುಲತೆಗಳೊಡೆಯ
ಜಲವೆಂಬ ಅರ್ಥವೂ ವನಶಬ್ದಕಿಹುದು
ಜಲವು ದ್ರವವಾಗಿದ್ದು ದ್ರವಕಧಿಪ ಸೋಮ ॥27॥

ರಾಜನೆಂದರೆ ದೀಪ್ತ ಸೋಮನವ ರಾಜ
ನಕ್ಷತ್ರಗಳ ರಾಜ ಸೋಮನಾಗಿಹನು
"ಕ್ಷತ್ರ"ವೆಂದರೆ ಹೊಳೆವ ಬಂಗಾರಬಣ್ಣ
"ನ" ಎಂದರಾ ರೀತಿ ಶೋಭಿಪನು ಸೋಮ ॥28॥

ಶೂನ್ಯದಾಕಾಶದಲಿ ನಕ್ಷತ್ರ ಬಿಂದು
ಧ್ಯಾನದಲಿ ಯೋಗಿಯೊಳಗಣ್ಣಿಗಾತ ಗಮ್ಯ
ನಕ್ಷತ್ರಸುವಿಕಾಸರೂಪವದು ಸೋಮ
ಸಹಸ್ರಸೂರ್ಯರಿಗೂ ಮಿಗಿಲೀತ ಸರ್ವಕಾಧಾರ ॥29॥

ಪ್ರಾಣದೊಂದಿಗೆ ಮೂಲಾಧಾರದಿಂ ಸ್ವಾಧಿಷ್ಠಾನಕ್ಕೆ ಬಂದು
ಬ್ರಹ್ಮಗ್ರಂಥಿಯನು ಸೀಳಿ ಮಣಿಪೂರವನು ಹಾಯ್ದು
ಅನಾಹತದಲ್ಲಿ ವಿಷ್ಣುಗ್ರಂಥಿಯನು ಮುರಿದು ಮೇಲೇರಿ
ವಿಶುಧ್ಧಾಜ್ಞೆಗಳ ದಾಟಿ ರುದ್ರಗ್ರಂಥಿಯನು ಸೀಳುವುದು ಸೋಮ ॥30॥

ಪ್ರಾಣಾಯಾಮಶಕ್ತಿಯಿಂ ಸೋಮನಿವ ಮಧುವು
ಆ ಮಧುವು ವ್ಯಾಪಿಸುವುದಗ್ನಿ-ಸೂರ್ಯರನು
ಸಪ್ತಚಕ್ರಗಳೆಂಬ ನಾಡಿ-ನದಿಗಳಲಿ
ಮಧುವಾಗಿ ಪ್ರವಹಿಸುವನಾಗಲೀ ಸೋಮ ॥31॥

ಉಪನಿಷತ್ತುಸುರುವ ರಸವದುವೆ ಸೋಮ
ಅಧ್ಯಾತ್ಮಮಧುವಿದ್ಯೆಗಾಧಾರ ಸೋಮ
ಪರಬ್ರಹ್ಮದಲಿ ಲೀನಗೊಳಿಸುವ ಪರಾಶಕ್ತಿ ಸೋಮ
ಪರಮಾತ್ಮ ಗುರುಪಾದಾಪ್ತಸಹಸ್ರಾರ ಬಿಂದುರಸ ಸೋಮ ॥32॥

ಅಲೌಕಿಕಾನಂದದನುಭೂತಿ ಸೋಮರಸವು
ಪರಮಾನಂದಲೀನತೆಯೆ ಸೋಮರಸಪಾನ ॥ಪ॥

ಸೋಮರಸ – ದರ್ಶಿಕಾ

ವೇದಗಳಲ್ಲಿ ಸೋಮರಸಕ್ಕೆ ಕೊಟ್ಟಿರುವ ಮಹತ್ವವನ್ನು ಇನ್ನಾವುದಕ್ಕೂ ಕೊಟ್ಟಿಲ್ಲವೆಂದೇ ಹೇಳಬೇಕು. ದೇವತೆಗಳಿಗೆ ಶಕ್ತಿಬರುವುದೇ ಸೋಮರಸಪಾನದಿಂದ ಎಂದೂ ಹೇಳಲಾಗುತ್ತದೆ. ದುರ್ಗಾಮಾತೆಯು ಸೋಮರಸವನ್ನು ಕುಡಿದು ರಾಕ್ಷಸರನ್ನು ಕೊಲ್ಲಲು ಸಮರ್ಥಳಾದಳು ಅನ್ನುವ ವರ್ಣನೆಯೂ ಪುರಾಣಗಳಲ್ಲಿ ಬರುವುದು. ಸಾಮಾನ್ಯರ ತಿಳುವಳಿಕೆಯ ಪ್ರಕಾರ ಸೋಮರಸವೆಂದರೆ ಒಂದು ರೀತಿಯ ಮದ್ಯ. ಋಗ್ವೇದದಲ್ಲಿ ಬರುವ ಸೋಮರಸದ ವರ್ಣನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದನ್ನು ದೇವತೆಗಳ ಮದ್ಯ ಅರ್ಥಾತ್ ಸುರೆ ಎಂದು ಭಾವಿಸುವುದು ಬಹುದೊಡ್ಡ ತಪ್ಪು ಅನ್ನುವುದು ಅರಿವಿಗೆ ಬರುವುದು. ದೇವತೆಗಳೆಂದರೆ ಆಧ್ಯಾತ್ಮದಲ್ಲಿ ಯಾರು ಅನ್ನುವುದು ಇಲ್ಲಿ ಬಹು ಮುಖ್ಯ.

ಸೋಮಲತೆ ಎಂಬ ಬಳ್ಳಿಯಿಂದ ತೆಗೆದ ರಸವೇ ಸೋಮರಸ. ಸೋಮಲತೆಯು ಮೌಜಪರ್ವತದಲ್ಲಿ ದೊರೆಯುವಂಥದ್ದು ಹಾಗೂ ಶರ್ಯಣಾವತವೆಂಬ ಸರೋವರದ ದಂಡೆಯ ಪ್ರದೇಶದಲ್ಲಿಯೂ ಸೋಮಲತೆ ದೊರೆಯುತ್ತದೆ ಎಂದೂ ಹೇಳಲಾಗುತ್ತದೆ. ಇಲ್ಲೆಲ್ಲ ಶಬ್ದಗಳ ಆಧ್ಯಾತ್ಮಿಕ ಅರ್ಥವು ಗ್ರಾಹ್ಯವೇ ಹೊರತು ಕೇವಲ ಶಬ್ದಾರ್ಥಮಾತ್ರವಲ್ಲ ಅನ್ನುವುದು ಗಮನಾರ್ಹ. ಏಕೆಂದರೆ ಸಾಮಾನ್ಯವಾಗಿ ಮುಂಜ ಅನ್ನುವ ಹುಲ್ಲು ಬೆಳೆಯುವ ಸ್ಥಳ ಮೌಜಪರ್ವತ. ಮುಂಜ ಅಂದರೆ ದರ್ಭೆ. ಆದುದರಿಂದ ದರ್ಭೆಗೂ ಸೋಮಲತೆಯೂ ಸಂಬಂಧವಿರಲೇಬೇಕು ಹಾಗೂ ಶರ್ಯವೆಂದರೆ ಬೆತ್ತ ; ಶರ್ಯಣಾವತವೆಂದಾಗ ಬೆತ್ತ ಬೆಳೆಯುವ ಪ್ರದೇಶ ಎಂದೂ ಆಗುತ್ತದೆ. ಇಲ್ಲೆಲ್ಲ ಬೆತ್ತ ಮತ್ತು ದರ್ಭೆ ಅನ್ನುತ್ತ ಕೂರದೆ ದರ್ಭೆಯ ಪ್ರಾವಿತ್ರ್ಯತೆ ಮತ್ತು ಬೆತ್ತದ ಆಕಾರ ಇವನ್ನು ಗಣನೆಗೆ ತೆಗೆದುಕೊಂಡು ಅರ್ಥೈಸುವುದು ಸೂಕ್ತ. ಸುಷೋಮಾನದಿಗುಂಟ ಇರುವ ಪ್ರದೇಶದಲ್ಲಿಯೂ ಸೋಮಲತೆ ದೊರೆಯುವುದು ಎಂದು ಹೇಳುವುದೂ ಇದೆ. ಈ ಸುಷೋಮಾ ಅನ್ನುವುದು ಸುಷುಮ್ನಾ ಎಂಬ ಶಬ್ದಕ್ಕೆ ಬಹು ಹತ್ತಿರದ್ದಾಗುವುದರಿಂದ ಮತ್ತು ನಾಡಿಯನ್ನು ನದಿಯೆಂದು ಕರೆಯುವ ಪದ್ಧತಿಯು ವೇದಕಾಲದಿಂದಲೂ ಬಳಕೆಯಲ್ಲಿ ಇದ್ದುದರಿಂದ ಅಧ್ಯಾತ್ಮಿಕವಾದ ಸುಷುಮ್ನಾನಾಡಿಯೇ ಈ ಸುಷೋಮಾ ಎಂಬ ಅರ್ಥಕ್ಕೆ ಬರಬೇಕಾಗುತ್ತದೆ. ಸುಷುಮ್ನೆಯನ್ನು ಸರಸ್ವತೀ ನದಿಯನ್ನಾಗಿ ಋಷಿಗಳು ತಂದದ್ದೂ ಇಲ್ಲಿ ಗಮನಾರ್ಹ. ಅಧ್ಯಾತ್ಮದಲ್ಲಿ ಗಂಗಾ ನದಿಯ ಅರ್ಥ ಪಿಂಗಳಾನಾಡಿ ಹಾಗೂ ಯಮುನಾನದಿಯ ಅರ್ಥ ಇಡಾನಾಡಿಯಾದರೆ ಸರಸ್ವತೀ ನದಿಯ ಅರ್ಥ ಸುಷುಮ್ನಾನಾಡಿ. ಈ ಸುಷುಮ್ನೆಯು ಆತ್ಮಸಾಧಕನಾದ ಯೋಗಿಗೆ ಬಹು ಮಹತ್ವದ್ದಾದುದರಿಂದ ಇದರಲ್ಲಿ ಬಹುಪಾವಿತ್ರ್ಯವನ್ನು ಕಾಣಲಾಯಿತು.

ಬಿದಿರಿನಲ್ಲಿ ಬೆತ್ತವು ಸಪೂರವಾದುದು ಹಾಗೂ ಪವಿತ್ರವಾದದ್ದು ಅನ್ನುವ ಕಾರಣದಿಂದ ಬೆತ್ತವನ್ನು ಸುಷುಮ್ನಾ ನಾಡಿಗೆ ಪರ್ಯಾಯವಾಗಿ ತಂದದ್ದು. ಬೆತ್ತದ ಗಣ್ಣುಗಳು ಸುಷುಮ್ನೆಯಲ್ಲಿ ಇರುವ ಮೂಲಾಧಾರ–ಸ್ವಾಧಿಷ್ಠಾನ–ಮಣಿಪೂರಕ–ಅನಾಹತ–ವಿಶುದ್ಧಿ–ಆಜ್ಞಾಚಕ್ರಗಳನ್ನು ಆಧ್ಯಾತ್ಮಿಕವಾಗಿ ಅರ್ಥೈಸುತ್ತವೆ. ಶರ್ಯಣಾವತದಲ್ಲಿ ಸೋಮಲತೆಯ ಆವಾಸ. ಸೋಮಲತೆಯೆಂದರೆ ಸುಷುಮ್ನಾ ನಾಡಿಯೇ ಆಗಿದೆ ; ಇಲ್ಲಿ ಬೆತ್ತವೆಂದರೂ ಸುಷುಮ್ನಾ ನಾಡಿಯೇ ಆಗಿದೆ. ಮುಂಜ ಅಥವಾ ದರ್ಭೆ ಅಂದರೂ ಸುಷುಮ್ನೆಯೇ ಸರಿ.

ಅರ್ಜೀಕ–ಕೃತ್ವಗಳೆಂಬ ದೇಶಗಳಲ್ಲಿಯೂ ಸೋಮಲತೆ ಬೆಳೆಯುವುದು ಅನ್ನುವುದೂ ಆಧ್ಯಾತ್ಮಿಕ ಅರ್ಥದಲ್ಲಿ ಮಾತ್ರ ಔಚಿತ್ಯಪೂರ್ಣವಾಗುವುದು. ಅರ್ಜೀಕ–ಕೃತ್ವಗಳೆಂದರೆ ಯೋಗಮಾರ್ಗದಲ್ಲಿ ನಡೆಸಿದ ಕೃತ್ಯಗಳ, ಕರ್ಮಗಳ ಅರ್ಜಿತ ಫಲ ಎಂಬ ಅರ್ಥವು ಇಲ್ಲಿ ಗ್ರಾಹ್ಯವೆನ್ನುವುದು ಗಮನಾರ್ಹ. ಯೋಗಮಾರ್ಗದಲ್ಲಿ ಸತ್ಕರ್ಮಗಳಿಗೆ ಮಾತ್ರ ಅವಕಾಶವೇ ಹೊರತು ಪರರಿಗೆ ಯಾವುದೇ ನೋವನ್ನುಂಟು ಮಾಡುವ ದುಷ್ಕರ್ಮಗಳಿಗೆ ಅವಕಾಶವೇ ಇಲ್ಲ.

ಪಸ್ತ್ಯವೆಂಬ ಪ್ರದೇಶದಲ್ಲಿಯೂ ಸೋಮಲತೆ ದೊರೆಯುವುದು ಅನ್ನುವಲ್ಲಿಯೂ ಸಹ ವಿಶೇಷಾರ್ಥವಿದ್ದೇ ಇದೆ. ಪ್ರಾಚೀನಕಾಲದಲ್ಲಿ ಗಂಗಾ–ಯಮುನಾ–ಸರಸ್ವತೀ ನದಿಗಳ ಪ್ರವಹಿಸುವಿಕೆಯು ಎಲ್ಲೆಲ್ಲಿದ್ದವೋ ಆ ಪ್ರದೇಶಗಳನ್ನೆಲ್ಲ ಪಸ್ತ್ಯವೆಂಬ ನಾಡನ್ನಾಗಿ ಗುರುತಿಸಲಾಗುತ್ತದೆ. ಅಧ್ಯಾತ್ಮದಲ್ಲಿ ಗಂಗಾನದಿಯು 'ಗಾಂ ಗಮಯತಿ ಇತಿ ಗಂಗಾ' ಸ್ವರ್ಗಕ್ಕೆ ಕರೆದೊಯ್ಯುವುದು ಗಂಗಾ ಎಂಬ ಅರ್ಥದಲ್ಲಿ ಸೂರ್ಯನಾಡಿಯಾದ ಪಿಂಗಳಾ ಅನ್ನುವುದು ಗ್ರಾಹ್ಯವಾಗುವುದು. ಹಾಗೂ 'ಸಂಯಮ್ಯ ನೀಯತೇ ಅನಯಾ ಇತಿ ಯಮುನಾ' ಎಂಬ ವ್ಯುತ್ಪತ್ತಿಯಂತೆ ಯಮುನಾನದಿಯು ಕರ್ಮಬಂಧನಕ್ಕೆ ಒಳಪಡಿಸುವ ಚಂದ್ರನಾಡಿಯಾದ ಇಡಾನಾಡಿ ಎಂದಾಗುವುದು ; ಮೋಕ್ಷಕ್ಕೆ ಕೊಂಡೊಯ್ಯುವ ಸರಸ್ವತೀನದಿಯು ಸುಷುಮ್ನಾನಾಡಿಯಾಗಿಹುದು.

ಸೋಮಮಂತ್ರಗಳಲ್ಲಿ ಬರುವ ವರ್ಣನೆಯ ಪ್ರಕಾರ ಸೋಮಲತೆಯು ಸಿಗುವ ನದಿಗಳೆಡೆಗಳಲ್ಲಿ ಪಂಚಜನರು ವಾಸಿಸುತ್ತಿದ್ದರು ; ಪಂಚಜನರೆಂದರೆ ಚರ್ಮ–ಚಕ್ಷು–ನಾಸಿಕಾ–ನಾಲಿಗೆ–ಕಿವಿಗಳೆಂಬ ಪಂಚಜ್ಞಾನೇಂದ್ರಿಯಗಳೇ ಆಗಿವೆ. ಇವು ಬಾಹ್ಯವಾಗಿ ಲೌಕಿಕ ಬದುಕನ್ನು ಸವಿಯುವ ಇಂದ್ರಿಯಗಳಾಗಿದ್ದು ಆಂತರಂಗಿಕವಾಗಿಯೂ ಕಾರ್ಯ ವೆಸಗುತ್ತ ಪರಾನಂದಪ್ರೇರಕವಾಗಬಲ್ಲವು ; ಆಗಬೇಕು ಅನ್ನುವುದು ಋಷಿಗಳ ಆಶಯ.

ಸೋಮವನ್ನು ಆತ್ಮಶುದ್ಧೀಕಾರಕ ಪವಮಾನವೆಂದೂ ಕರೆಯಲಾಗಿದೆ. 'ಪವ್' ಅಂದರೆ ಹೋಗು, ಸಂಚರಿಸು ಎಂದು ಅರ್ಥ. ನಿರಾಯಾಸವಾಗಿ ಸಂಚರಿಸಬಲ್ಲದ್ದು ಪವಮಾನ; ವಾಯುದೇವ, ಹನುಮಂತ ಅನ್ನುವುದು ಪವಮಾನ ಶಬ್ದದ ಸಾಮಾನ್ಯ ಅರ್ಥ. ಆದರೆ ಸೋಮರಸವು ಅಂದರೆ ಯೋಗಿಯಲ್ಲಿಯ ಪರಮಾನಂದರಸವು ಸುಷುಮ್ನೆಯ ಮೂಲಕ ಸರಾಗವಾಗಿ ಚಲಿಸಿ ಸಹಸ್ರಾರದ ಕರ್ಣಿಕೆಯಲ್ಲಿ ಸ್ರವಿಸಲು ತೊಡಗಿ ಪರಾತ್ಮರನನ್ನು ಸುಪ್ರೀತಗೊಳಿಸುವುದರಿಂದಾಗಿ ಅದನ್ನು ಪವಮಾನ ಎಂದು ಸ್ತುತಿಸಲಾಗಿದೆ. ಆತ್ಮಾನಂದರಸವು ಉತ್ಪತ್ತಿಯಾದೊಡನೆ ಇಂದ್ರಿಯಗಳಲ್ಲಿಯ ಜಡತ್ವವು, ತಮಸ್ತತ್ವವು ನಿರ್ಮೂಲವಾಗುವುದು ; ಇದರಿಂದಾಗಿಯೇ ಅಂದರೆ ಇಂದ್ರಿಯಗಳಲ್ಲಿ ಶ್ರೇಷ್ಠವೆನಿಸಿದ ಮನಸ್ಸು ತಮಸ್ತತ್ವವನ್ನು ನಿರ್ಮೂಲನಗೊಳಿಸುವುದರಿಂದಾಗಿಯೇ ಅಸ್ಯ ಮದೇನ ಇಂದ್ರೋ ಅಹಿಂ ಜಘಾನ' ಎಂಬ ವರ್ಣನೆಯು ವೇದದಲ್ಲಿ ಬರುತ್ತದೆ. ಮನಸ್ಸನ್ನು ಇಂದ್ರ ಅನ್ನುವ ರೂಪಕಕ್ಕೆ ತಂದು ವೇದಪುರಾಣಗಳಲ್ಲಿ ಬಣ್ಣಿಸಲಾಗಿದೆ. 'ಅಹಿ' ಅಂದರೆ ಸರ್ಪರೂಪದ ವೃತ್ರಾಸುರ ; ತಮಸ್ಸಿನ ಸಾಕಾರವೇ ವೃತ್ರಾಸುರ, ಈ ವೃತ್ರಾಸುರನು ಸುಷುಮ್ನೆಯಲ್ಲಿ ಜ್ಞಾನರಸವಾಹಿನಿಗೆ ಅಡ್ಡವಾಗಿದ್ದವನು ; ಮದ ಅಂದರೆ ಶಕ್ತಿ ಅನ್ನುವುದು ಇಲ್ಲಿಯ ಪರ್ಯಾಯ ಅರ್ಥ. ಇದನ್ನು ಕುಡಿದಾಗ ಬಂದ ಮದದಿಂದಾಗಿ ಇಂದ್ರನು ಅಹಿಯನ್ನು ಕೊಲ್ಲಲು ಸಮರ್ಥನಾದನು ; ಅಂದರೆ ಆನಂದರಸವು ಶಿರಸ್ಸಿನಲ್ಲಿಯ ಸಹಸ್ರಾರಕ್ಕೆ ತಲುಪಿತು ಎಂದು ಅರ್ಥ. ಅಹಿ ಅಂದರೆ ಸರ್ಪ ಹಾಗೂ ಅಧ್ಯಾತ್ಮದಲ್ಲಿ ತಾಮಸಪ್ರವೃತ್ತಿ'

ಗಾಯತ್ರಿಯು ಶ್ಯೇನ (ಗಿಡುಗ) ಪಕ್ಷಿಯ ರೂಪದಲ್ಲಿ ಸ್ವರ್ಗಕ್ಕೆ ಹಾರಿ ಸೋಮಲತೆಯನ್ನು ಸ್ವರ್ಗದಿಂದ ಮರ್ತ್ಯಕ್ಕೆ ತಂದುದಾಗಿ ವೇದಗಳಲ್ಲಿ ವರ್ಣನೆ ಬರುತ್ತದೆ. ಇದೇ ಗ್ರಂಥದಲ್ಲಿ ಗಾಯತ್ರಿಯ ಬಗ್ಗೆ ಬರೆದುದನ್ನು ಓದಿದಾಗ ಗಾಯತ್ರಿಯ ಬಗ್ಗೆ ಸಾಕಷ್ಟು ತಿಳುವಳಿಕೆ ಬರಲು ಸಾಧ್ಯ. ಗಾಯತ್ರಿಯು ಜೀವಾತ್ಮದ ಹುಟ್ಟು – ಬದುಕು–ಸಾವುಗಳ ಧೀರ್ಘಯಾತ್ರೆಯಲ್ಲಿ ನಿರಂತರವಾಗಿ ಅದನ್ನು ರಕ್ಷಿಸುವ ಒಂದು ದಿವ್ಯಶಕ್ತಿ. ವಿಷಯುಕ್ತವಾದುದನ್ನು ಪೀಡಿಸುವ, ಅರ್ಥಾತ್, ಸರ್ಪವನ್ನು, ತಮಸ್ಸನ್ನು, ಅಜ್ಞಾನವನ್ನು ಪೀಡಿಸುವ ಶ್ಯೇನಪಕ್ಷಿಯ ರೂಪದಲ್ಲಿ ಗಾಯತ್ರಿಯನ್ನು ವೇದದಲ್ಲಿ ತಂದರೆ ರಾಮಾಯಣದಲ್ಲಿ ವಾಲ್ಮೀಕಿಯು ಜಟಾಯು–ಸಂಪಾತಿ–ಗರುಡರ ರೂಪದಲ್ಲಿ ತಂದಿರುವನು. ಸೋಮವೇ ಗಾಯತ್ರಿಯಾಗಿ ಅನಂತರ ಪಕ್ಷಿರಾಜನಾಗಿ ಬಂದದ್ದು. ಶ್ಯೇನ–ಗರುಡರು ಪಕ್ಷಿರಾಜರುಗಳು. ಆ ಪಕ್ಷಿಗಳ ರೆಕ್ಕೆಗಳೇ ಅಜ್ಞಾನವನ್ನು ನಿವಾರಿಸುವ ಜ್ಞಾನತಂತುಗಳು. ಅಧ್ಯಾತ್ಮ ಗುರುಶ್ರೇಷ್ಠರನ್ನು ಶ್ಯೇನಾದಿ ಪಕ್ಷಿಗಳ ರೂಪಕ್ಕೆ ಅಳವಡಿಸಲಾಗಿದೆ. ದೂರ ಗಮನಸಾಮರ್ಥ್ಯದ ಗರುಡನು ಸರ್ವರಲ್ಲಿಯೂ ನೆಲೆಸಿದ ತತ್ತ್ವವಾದ ಮಹಾವಿಷ್ಣುವಿನ ವಾಹನವೂ ಹೌದು. ಪರಮಾತ್ಮನು ಜ್ಞಾನಾರೂಢನು. ಜ್ಞಾನಘನನಾದ ಗುರುವೇ ಗರುಡನು. ಗುರುವಿಲ್ಲದೆ ಜ್ಞಾನವಿಲ್ಲ ; ಆ ಗುರುಶ್ರೇಷ್ಠ ಗರುಡ ವೇದದಲ್ಲಿ ಶ್ಯೇನ. ರಾಮಾಯಣದಲ್ಲಿ ಬರುವ ಮೊದಲ ಪಕ್ಷಿ ಜಟಾಯು ಪ್ರಾರಂಭಿಕ ಗುರು ; ಈತ ಆತ್ಮದ ಶಕ್ತಿಯು ರಜೋಗುಣದಿಂದ ಅಪಹೃತವಾಗಿದೆ ಅನ್ನುವುದನ್ನು ದರ್ಶಿಸುವ ಗುರುವು. ಶ್ರೀ ರಾಮನಿಗೆ ಅರ್ಥಾತ್ ಪ್ರತ್ಯಗಾತ್ಮಕ್ಕೆ ರಜೋಗುಣದ ಸಾಕಾರನಾದ ರಾವಣನು ರಾಮನ ಶಕ್ತಿಯನ್ನು, ಇಲ್ಲಿ ಸೀತೆಯನ್ನು, ಅಂದರೆ ಆತ್ಮಶಕ್ತಿಯನ್ನು ಅಪಹರಿಸಿರುವುದನ್ನು ಸೂಚಿಸುವವನು ಜಟಾಯು ರೂಪದಲ್ಲಿರುವ ಪ್ರಾರಂಭಿಕ ಗುರು; ಅವನ ಶಕ್ತಿ ಅಷ್ಟಕ್ಕೆ ಸೀಮಿತ.

ರಜೋಗುಣವನ್ನು ಪೂರ್ಣವಾಗಿ ಎದುರಿಸುವ ಶಕ್ತಿ ಜಟಾಯುರೂಪದ ಪ್ರಾರಂಭಿಕ ಗುರುವಿಗೆ ಇಲ್ಲ. ಮುಂದೆ ಜಾಂಬುವಂತ–ಹನುಮಂತಾದಿಗಳಿಗೆ ಭೇಟಿಯಾಗುವ ಸಂಪಾತಿಯು ಈ ಜಟಾಯುವಿನ ಅಣ್ಣ. ಸಂಪಾತಿಯಲ್ಲಿ ರಜೋಗುಣವು ಅಪಹರಿಸಿದ ಸತ್ವಶಕ್ತಿಯು ಇರುವುದು ಎಲ್ಲಿ ಅನ್ನುವ ಪೂರ್ತಿ ತಿಳುವಳಿಕೆಯಿದ್ದು ಪೃಥ್ವೀತತ್ತ್ವದ ಲಂಕೆ (ಲಂ ಅಂದರೆ ಪೃಥ್ವಿ; ಪೃಥ್ವೀತ್ವಂ ಕಾರಯತಿ ಇತಿ, ಅರ್ಥಾತ್ ಲಂ ಕಾರಯತಿ ಇತಿ ಲಂಕಾ) ಯಲ್ಲಿ ಆತ್ಮಶಕ್ತಿಯು ಇರುವುದು ಆತನ ಅರಿವಿಗೆ ಬಂದಿದೆ. ಪ್ರಾಣಾಯಾಮತತ್ತ್ವದ ಹನುಮಂತನು ಪೃಥ್ವೀತತ್ತ್ವದ ಲಂಕೆಗೆ (ಆ ಲಂಕೆಯೇ ಷಟ್‌ಚಕ್ರಗಳಲ್ಲಿ ಪೃಥ್ವೀತತ್ತ್ವದ ಮೂಲಾಧಾರಚಕ್ರ), ಅರ್ಥಾತ್ ಮೂಲಾಧಾರಕ್ಕೆ ಹೇಗೆ ಹೋಗಬೇಕೆನ್ನುವುದನ್ನು ಆ ಸಂಪಾತಿಯು ತಿಳಿಸಿಕೊಡುವನು ; ಅಂದರೆ ಈತ ಮಧ್ಯಮ ಮಟ್ಟದ ಗುರು. ಮುಂದೆ ರಾಮಾಯಣದ ಯುದ್ಧಕಾಂಡದಲ್ಲಿ ಬರುವ ಗರುಡನು ಮೂರ್ಛಿತರಾದ ಶ್ರೀರಾಮ – ಲಕ್ಷ್ಮಣರನ್ನು ಸರ್ಪಾಸ್ತ್ರದಿಂದ ಬಿಡಿಸಿ, ಎಚ್ಚರಗೊಳಿಸಿ ರಜೋಗುಣದ ಸಾಕಾರನಾದ ರಾವಣನನ್ನು ಅವರು ಸಂಹರಿಸಲು ಸಹಕರಿಸಿದವನು. ಅಂದರೆ ಗರುಡನು ಗುರುಶ್ರೇಷ್ಠ.

ಈ ಗರುಡನೇ ವೇದದಲ್ಲಿ ಬರುವ ಶ್ಯೇನ ಹಾಗೂ ಶ್ಯೇನರೂಪದಲ್ಲಿ ಬರುವ ಗಾಯತ್ರಿ; ಈ ಗಾಯತ್ರಿಯೇ ಸೋಮ–ಸೋಮಲತಾ–ರಸಗಳು.

ವೇದಗಳಲ್ಲಿ ಸೋಮನನ್ನು ಪುರುಷರೂಪದಲ್ಲಿಯೂ ತರಲಾಗಿದೆ. ಸೂರ್ಯನ ಪುತ್ರಿಯಾದ ಸೂರ್ಯೆಯನ್ನು ಸೋಮನಿಗೆ ಕೊಟ್ಟು ಮದುವೆಯನ್ನು ಮಾಡಲಾಗಿದೆ. ಇಲ್ಲೆಲ್ಲ ಸೋಮ ಅಂದರೆ ಚಂದ್ರ ; ಸೂರ್ಯನ ಪ್ರಭೆಯಿಂದಲೇ ಚಂದ್ರ ಬೆಳಗುವುದು. ಅನ್ನುವುದನ್ನು ಕಾವ್ಯಮಯವಾಗಿ ಋಷಿಗಳು ವರ್ಣಿಸಲು ತೊಡಗಿ ಸೂರ್ಯನ ಕರಗಳನ್ನು ಸೂರ್ಯಪುತ್ರಿಯಾಗಿ ಕಲ್ಪಿಸಿದರು. ಅಷ್ಟೇ ಅಲ್ಲ ಅಮಾವಾಸ್ಯೆಯಂದು ಚಂದ್ರನು ಸೂರ್ಯನ ಮನೆಯಲ್ಲಿಯೇ ಅಂದರೆ ಮಾವನ ಮನೆಯಲ್ಲಿಯೇ ಉಳಿಯುವನು ಎಂದೂ ಬಣ್ಣಿಸಿದರು. 'ಅಮಾ' ಅಂದರೆ ಮನೆ, 'ವಾಸ್ಯ' ಅಂದರೆ ವಾಸಗೈಯುವಿಕೆ. ಸೂರ್ಯನೊಡನೆ ಸಮರೇಖೆಯಲ್ಲಿ, ಏಕಾಂಶದಲ್ಲಿ ಚಂದ್ರನು ಚಲಿಸುವುದಿಂದಾಗಿ ಘಟಿಸುವ ಅಮವಾಸ್ಯೆಯನ್ನು ಈ ರೀತಿ ಕಾವ್ಯಮಯವಾಗಿ ಬಣ್ಣಿಸಿ ಸೋಮನನ್ನು, ಆತನು ಆ ದಿನ ಮಾವನ ಮನೆಯಲ್ಲಿರುವುದರಿಂದ ಬಹು ಸುಖವಾಗಿರುವವನು ಅನ್ನುವುದನ್ನು ಇಲ್ಲಿ ಸೂಚಿಸಲಾಗಿದೆ. ಸೋಮನನ್ನು ಜೀವಾತ್ಮನನ್ನಾಗಿ ರೂಪಿಸಿ ಪರಮಾತ್ಮನಲ್ಲಿ ಆತನು ಲಯಗೊಳ್ಳುವ ಪ್ರಕ್ರಿಯೆಯನ್ನು ಅಮಾವಾಸ್ಯೆಯನ್ನು ವಿಶೇಷವಾಗಿ ತಂದು ವರ್ಣಿಸುವ ಮನೋಜ್ಞತೆಯೂ ಅನೇಕ ಕಡೆಗಳಲ್ಲಿ ಕಂಡುಬರುತ್ತದೆ.

ಸೋಮನನ್ನು 'ಇಂದು' ಎಂದೂ ಗುರುತಿಸಲಾಗುವುದು ; ಚಂದ್ರನಿಂದ ಬರುವ ಆರ್ದ್ರತೆಯಿಂದಾಗಿ ಚಂದ್ರನು ಸೋಮನಾಗುವನು ಹಾಗೂ ಇಂದುವಾಗುವನು. ಯೋಗಿಯು ಕುಂಡಲಿನಿಯನ್ನು ಸಹಸ್ರಾರಕ್ಕೆ ಕೊಂಡೊಯ್ದ ಮೇಲೆ ಸಹಸ್ರಾರವು ಅಮೃತಬಿಂದುಗಳನ್ನು ಸ್ರವಿಸಲಾರಂಭಿಸುವುದು ; ಆಗ ಅದು 'ಆರ್ದ್ರಾ, ಎಂದು ಆಗುವುದು. ಸಹಸ್ರಾರದ ಆ ಸ್ಥಿತಿಯನ್ನು ಇಂದುವೆಂದಾಗಿ ಬಣ್ಣಿಸಲಾಯಿತು. ಹೀಗೆ ಅಧ್ಯಾತ್ಮದ ತುತ್ತ – ತುದಿಯನ್ನು ಕಲ್ಪಿಸಲಾಯಿತು. ಯೋಗಿಯ ಸಹಸ್ರಾರಪದ್ಮದಲ್ಲಿ ಒಸರುವ ಅಮೃತಸಮಾನ, ಅಮೃತವೇ ಆದ ರಸವೇ, ರಸರೂಪದ ಮಾಶಕ್ತಿಯೇ ಸೋಮರಸ. ಈ ಸೋಮವನ್ನು ಪಾನ ಮಾಡುವ ಇಂದ್ರನೇ ಇಲ್ಲಿ ಪರಮಾತ್ಮ. ಋಗ್ವೇದದಲ್ಲಿ ಇಂದ್ರನು ಸಾಮಾನ್ಯವಾಗಿ ಪರಮಾತ್ಮನನ್ನೇ ಸಂಕೇತಿಸುವನು. ಪುರಾಣಗಳಲ್ಲಿ ಇಂದ್ರನು ಸಂಕೇತಿಸುವುದು ಚಂಚಲ ಮನಸ್ಸನ್ನು. ಋಗ್ವೇದದ ಇಂದ್ರನನ್ನು ಮಹಾಭಾರತದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನಾಗಿ ನಿರೂಪಿಸಲಾಗಿದೆ ;ಇಂದ್ರನ ವಿಶೇಷ ಅರ್ಥಗಳಿಗಾಗಿ ನೋಡಿ ಇದೇ ಲೇಖಕರ 'ಸನಾತನಶಬ್ದಾರ್ಥಚಿಂತಾಮಣಿ'ಯಲ್ಲಿ ಬರುವ ಇಂದ್ರ, ಕೃಷ್ಣ ಶಬ್ದಗಳನ್ನು ಹಾಗೂ ವಾಸಿಷ್ಠ ಗಣಪತಿಮುನಿಗಳು ಬರೆದ 'ಭಾರತಚರಿತ್ರಪರೀಕ್ಷಾ' ಅನ್ನುವ ಪುಟ್ಟದಾದ ಸಂಸ್ಕೃತಗ್ರಂಥವನ್ನು). ಸೋಮನನ್ನು ತನ್ನೊಳಗೆ ಐಕ್ಯಗೊಳಿಸಿಕೊಳ್ಳುವ ಅಮವಾಸ್ಯೆಯ ಸೂರ್ಯನೂ ಪರಮಾತ್ಮನನ್ನು ಸಂಕೇತಿಸುವನು.

* * * * *

೧೩. ಸರಮಾ ದರ್ಶಿಕಾ

[**ಪೀಠಿಕೆ :** ಋಗ್ವೇದದ ಹತ್ತನೆಯ ಮಂಡಲದ 108ನೆಯ ಸೂಕ್ತವು ಪಣಿ–ಸರಮಾ ಸಂವಾದಸೂಕ್ತವಾಗಿದೆ.ಸೂಕ್ತವು ಪಣಿಗಳು 'ಕಿಮಿಚ್ಛಂತೀ' ಎಂದು ಕೇಳುವ ಪ್ರಶ್ನೆಯಿಂದಾರಂಭವಾಗುವುದರಿಂದಾಗಿ ಈ ಸೂಕ್ತವನ್ನು ಕಿಮೀಚ್ಛಂತೀಸೂಕ್ತ ಎಂದೂ ಕರೆಯಲಾಗುವುದು. ಸರಮಾ ಅನ್ನುವುದು ಇಂದ್ರನ ಸೇವೆಯಲ್ಲಿರುವ ಒಂದು ಹೆಣ್ಣು ಶ್ವಾನದ ಹೆಸರಾಗಿದ್ದು ಇದಕ್ಕೆ ಎರಡು ಮರಿಗಳಿವೆ ಹಾಗೂ ಅವನ್ನು ಸಾರಮೇಯಗಳೆಂದೇ ಕರೆಯಲಾಗುವುದು ಅನ್ನುವುದು ಋಗ್ವೇದದಲ್ಲಿ 10ನೆಯ ಮಂಡಲದ ಹದಿನಾಲ್ಕನೆಯ ಸೂಕ್ತದಲ್ಲಿ ಬರುತ್ತದೆ.ಆ ಮರಿಗಳಿಗೆ ಶ್ಯಾಮ ಮತ್ತು ಶಬಲ ಅನ್ನುವ ಪ್ರತ್ಯೇಕ ಹೆಸರುಗಳೂ ಇದ್ದು ಅವಕ್ಕೆ ನಾಲ್ಕು ನಾಲ್ಕು ಕಣ್ಣುಗಳಿದ್ದು ಅವು ಯಮಧರ್ಮನ ಸೇವೆಯಲ್ಲಿರುವವು ಎಂದೂ ವೇದಾದಿಗಳಲ್ಲಿ ಬರುತ್ತದೆ.ಈ ನಾಯಿಯ ಮತ್ತು ಮರಿಗಳ ಮಾಹಿತಿಯು ಅವುಗಳ ಆಧ್ಯಾತ್ಮಿಕ ಅರ್ಥಗಳೊಂದಿಗೆ ಇಲ್ಲಿ ಬರುತ್ತದೆ.]

ಶುದ್ಧ ಸಾತ್ವಿಕಗುಣವೇ ದೇವಶುನಿ ಸರಮೆ
ಮನದ ಮೂಲಕ ಜೀವಾತ್ಮಕಾನಂದದಾಯಕವು ಸರಮೆ ॥ಪ॥

ಹೆಣ್ಣುಶ್ವಾನವು ಸರಮೆ ಋಗ್ವೇದದಲಿ ತನ್ನ
ಸ್ಥಾನವೊಂದನು ಚಿರಸ್ಥಾಯಿಯಾಗಿಸಿದೆ
ಸರಮೆಯರಿವನು ಕಂಡ ಋಷಿಯವನು ತಾನೂ
ಸರಮೆಯೆಂದೆನಿಸಿದ್ದು ಯೋಗಸಮಾಧಿಯದ್ಭುತವು ॥1॥

ಇಂದ್ರನಾಣತಿಯಂತೆ ತಡೆರಹಿತನಡಿಗೆಯಲಿ
ಪಣಿಗಳನು ಕಂಡು ಹಿಡಿಯುವುದು ಸರಮೆ
ಬೃಹಸ್ಪತಿಯ ಗೋವುಗಳು ಕಾಣದಾಗಿರಲು
ಅವುಗಳನು ಕದ್ದಡಗಿಸಿದ ಕಳ್ಳರವರು ॥2॥

ಪಣಿಗಳವರನುಚರರು ವಲನೆಂಬ ರಾಕ್ಷಸನ
ರಸಾನದಿಯಿಂದಾಚೆ ಪಣಿಗಳಾವಾಸ
ದುಃಸಾಧ್ಯವೆನಿಸಿದಾ ರಸಾನದಿಯನ್ನು ದಾಟಿ
ಪಣಿಗಳಾವಾಸವನು ಕಂಡು ಹಿಡಿಯುವುದು ಸರಮೆ ॥3॥

ಸುಖದಿ ತಮ್ಮೊಂದಿಗಿರೆಂಬ ಪಣಿಗಳಾಮಿಷಕೆ
ಒಪ್ಪದಾ ಸರಮೆ ಇಂದ್ರನಲ್ಲಿಗೆ ತಾ ತಿರುಗಿ ಬಂದು
ವಿಷಯವನು ತಿಳಿಸಲಿಂದ್ರನಾಂಗಿರಸರೊಡನೆ
ಹೋಗಿ ಯುದ್ಧದಲಿ ಪಣಿಗಳನು ಕೊಂದು ಗೋವುಗಳನು ತಂದ ॥4॥

ದೇವಶುನಿಗೆರಡು ಮರಿಗಳು ಸಾರಮೇಯಗಳು
ಕಣ್ಣುಗಳು ನಾಲ್ಕು–ನಾಲ್ಕವಕೆ ಬಹುಸತ್ವವಂತವವು
ಯಮನಿಗತಿಪ್ರೀತಿಯಿಂ ಸೇವೆಗೈಯುವವು
ಇಂದ್ರನಿಂದಾರೈಕೆ ಪಡೆದು ಬೆಳೆದಿಹವು ॥5॥

ರಮೆಯ ಸಂಗಡ ಬಂದವಳೆನ್ನುವುದು ಸರಮಾಶಬ್ದದರ್ಥ
ವಿಷ್ಣುಪತ್ನಿಯು ರಮೆಯು ತಾ ಶುದ್ಧ ರಜೋಗುಣದ ಸಾಕಾರ
ಶುದ್ಧ ರಜೋಗುಣದ ಜೊತೆ ಜೊತೆಗೆ ಬಂದ ಗುಣ ಸತ್ವ
ದೇವಶುನಿ ಸರಮೆಯರ್ಥವದು ಶುದ್ಧ ಸತ್ವಗುಣ ॥6॥

ಅತಿನಿಷ್ಟೆಗತಿಹೆಸರು ನಾಯಿಗಿದೆಯೆಂಬ ಕಾರಣದಿ
ಸರಮೆಯನು ಶುನಿಯ ರೂಪದಲಿ ಕಂಡನಾ ಋಷಿಯು
ಇಂದ್ರಿಯಗಳಿಗೊಡೆಯ ಮನವದೇ ಇಂದ್ರನಾಗಿಹುದು
ಬೃಹಸ್ಪತಿಯಾತ ಗುರು ; ಗುರುಗ್ರಹವು ಜೀವಾತ್ಮ ॥7॥

ಬೃಹಸ್ಪತಿಯ ಗೋವುಗಳು ಕೇವಲ ಜ್ಞಾನತಂತುಗಳು
ಹೃತವಾದವವು ಜೀವದ ಜನನಮರಣಮಾರ್ಗದಲಿ
ಪರಮಾತ್ಮನಿಂ ಜೀವಾತ್ಮ ಬೇರ್ಪಡುವ ಮೊದಲು
ಜ್ಞಾನಾಮೃತಪಾನದಿಂದದು ನಿತ್ಯತೃಪ್ತಿಯಲ್ಲಿತ್ತು ॥8॥

ಯಾವುದೇ ಕಾರ್ಯಸಾಧನೆಗೆ ಮನವೇ ಮೂಲವಾಗಿಹುದು
ಜೀವಾತ್ಮ ಮನಕೆ ಮೊರೆಯಿಟ್ಟಿತು ಜ್ಞಾನತಂತುಗಳಿಗಾಗಿ
ಶುದ್ಧಸತ್ವಗುಣ ಮಾತ್ರ ಹುಡುಕಬಲ್ಲದು ಕೇವಲಜ್ಞಾನವನ್ನು
ಸರಮೆ ಹೊರಟಿತು ಪಣಿಗಳಿರುವಾ ದೂರದ ಪಯಣಕಾಗಿ ॥9॥

ರಸಾನದಿಯೆಂದರದು ಸಂಸಾರಸುಖದುಃಖದಾಗರವು
ಆಶೆಮೋಸಗಳೆಂಬ ಮೊಸಳೆಗಳ ವಾಸಸ್ಥಾನವಾಗಿಹುದು
ಜ್ಞಾನಿಗಳ ಊಹೆಗೂ ಮೀರಿದ್ದದರ ಆಳ–ಅಗಲಗಳು
ಆದರೂ ದಾಟಿತಾ ನದಿಯನ್ನು ಶುದ್ಧಸತ್ವಗುಣವು ॥10॥

ಪಣಿಗಳನು ದರ್ಶಿಸಿದ ಋಷಿಯು ವೇದದಲಿ
ತಾನೇ ಪಣಿಯಾದನವ ಭಾವಸಮಾಧಿಯಲ್ಲಿ
ಯಾವುದೇ ಆಮಿಷಕೆ ಬಗ್ಗದ ಶುದ್ಧಸತ್ವಗುಣವು
ಪಣಿಗಳೆಂಬ ಮಲಿನರಜೋಗುಣದ ಮೋಸವನು–
ಮನಕೆ ತಿಳಿಸುವುದು ॥11॥

ಪ್ರಾಣಪಂಚಕವಿಲ್ಲಿ ಋಷಿಗಳಾಂಗಿರಸರಾಗಿಹರು
ಪ್ರಾಣಾಯಾಮಾದ್ಯನೇಕ ವಿಧಸಾಧನೆಗಳಿಂದ
ಕೊಬ್ಬಿದ ರಜಸ್ತಮೋಗುಣಗಳನು ಮಣಿಸಿ
ಜೀವಾತ್ಮಕ್ಕೆ ಜ್ಞಾನವನ್ನೊದಗಿಸುವ ಮನವು ಇಂದ್ರ ॥12॥

ಚತುರ್ದಿಕ್ಕುಗಳ ವ್ಯಾಪಿಸಿದ ಶುದ್ಧಸತ್ವಪ್ರಭೆಯು
ಯಮನ ಸೇವಾನಿರತವೆರಡು ಸಾರಮೇಯಗಳು
ಸರ್ವನಿಯಂತ್ರಕ–ನಿಯಾಮಕತತ್ತ್ವ ಯಮದೇವ
ಶುದ್ಧಸತ್ವದ ಶಕ್ತಿಗಾಧಾರವಾಗಿ ನಿಂತಿಹನು ॥13॥

ಶ್ಯಾಮ–ಶಬಲರು ಸರಮಾಪತ್ಯ ಸಾರಮೇಯಗಳು
ಇವುಗಳಿಗರ್ಪಿತ ಹವಿಯು ಸಲ್ಲುವುದು ಸೂರ್ಯಚಂದ್ರರಿಗೆ
ನಾಲ್ಕು ದಿಕ್ಕುಗಳನವರತವೀಕ್ಷಿಸುವ ದಿನನಕ್ತನಾಥರಿವರು
ಇವರೇ ಸಾರಮೇಯರೆನಿಸಿ ಪರಮಸತ್ಯದನ್ವೇಷತತ್ತ್ವವಾಗಿಹರು ॥14॥

ವೇದಗಳ ನಂತರದ ರಾಮಾಯಣದಲ್ಲಿ ಮುಂದೆ
ರಾವಣಕುಂಭಕರ್ಣರು ಮಲಿನರಜಸ್ತಮೋಗುಣಗಳಾಗಿರಲು
ಮಲಿನ ಸತ್ವದ ಸಾಕಾರವಿಭೀಷಣನ ಪತ್ನಿ ಸರಮಾ
ಶಕ್ತಿಯೇ ಪತ್ನಿ ವೇದಪುರಾಣಗಳಲ್ಲಿ ಸತ್ವಗುಣಶಕ್ತಿ ಸರಮಾ ॥15॥

ಸೂಕ್ಷ್ಮಾತಿಸೂಕ್ಷ್ಮದಧ್ಯಾತ್ಮತತ್ತ್ವವನ್ನೂ
ಸರಮಾದಿಕಥೆಗಳಲಿ ಹೆಣೆದು ತಂದಿರುವ
ಋಷಿವರರ ಪೂಜ್ಯಗುರುಪಾದಪದ್ಮಗಳಿಗೆ
ನಮಿಸುತ್ತ ನಡೆಯಿರಲಿ ಕೈವಲ್ಯದೆಡೆಗೆ ॥16॥

ಶುದ್ಧ ಸಾತ್ವಿಕಗುಣವೇ ದೇವಶುನಿ ಸರಮೆ
ಮನದ ಮೂಲಕ ಜೀವಾತ್ಮಕಾನಂದದಾಯಕವು ಸರಮೆ ॥ಪ॥

ಸರಮಾದರ್ಶಿಕಾ

ರಮಾ ಅಂದರೆ ಲಕ್ಷ್ಮೀ, ವಿಷ್ಣುಪತ್ನಿ. 'ರಮಯಾ ಸಹಿತಾ ಯಾ ಸಾ ಸರಮಾ' – ರಮೆಯೊಂದಿಗೆ ಹುಟ್ಟಿಬಂದವಳು ಸರಮೆ. ಲಕ್ಷ್ಮಿಯು ಬದುಕಿಗೆ ಬೇಕಾದ ಧನ–ಕನಕಾದಿಗಳನ್ನು ಅರ್ಥೈಸುವ ರಜೋಗುಣದ ಸಾಕಾರ ಸ್ವರೂಪಳಾದರೆ ಸರಮೆಯು ಶುದ್ಧ ಸತ್ವಗುಣದ ಸಾಕಾರ. ಶ್ವಾನವು, ಅರ್ಥಾತ್ ನಾಯಿಯು ಸ್ವಾಮಿನಿಷ್ಠೆಗೆ ಸುಪ್ರಸಿದ್ಧವಾದುದರಿಂದ ಸಾತ್ವಿಕ ಗುಣವನ್ನು ಶ್ವಾನರೂಪದಲ್ಲಿ ಸಮಾಧಿಸ್ಥಿತಿಯಲ್ಲಿ ದರ್ಶಿಸಲಾಯಿತು. ಈ ಸರಮಾ ಸೂಕ್ತದ ಋಷಿಯ ವಿಷಯದಲ್ಲಿಯೂ ಕೌತುಕವುಂಟಾಗುವಂತಿದೆ – ಏಕೆಂದರೆ ಈ ಸೂಕ್ತದಲ್ಲಿಯ ಮಂತ್ರಗಳಲ್ಲಿ 1, 3, 5, 7, ನೇ ಮಂತ್ರಗಳ ಋಷಿಯು ಒಬ್ಬನಾಗಿರದೆ ಪಣಿಗಳೆಂಬ ಅಸುರರಾಗಿರುವರು ಹಾಗೂ 2,4,6,8,10,11ನೇ ಮಂತ್ರಗಳ ಋಷಿಯು ಸರಮಾ ಅನ್ನುವ ದೇವಶುನಿಯಾಗಿದೆ. ಒಟ್ಟಿನಲ್ಲಿ ಈ ಸೂಕ್ತದ ದೃಷ್ಟಾರನಾದ ಋಷಿಯು ತನ್ನ ಸಮಾಧಿಸ್ಥಿತಿಯಲ್ಲಿ ಪಣಿಗಳೆಂಬ ಅಸುರರೂ ಆಗಿದ್ದಾನೆ ಹಾಗೂ ಸರಮಾ ಎಂಬ ದೇವಶುನಿಯೂ ಆಗಿದ್ದಾನೆ ಎಂದು ಹೇಳಬೇಕಾಗುತ್ತದೆ. ಈ ಸೂಕ್ತಕ್ಕೆ ಮತ್ತೊಂದು ಹೆಸರು ಕಿಮಿಚ್ಛಂತೀಸೂಕ್ತ. ಏಕೆಂದರೆ ಈ ಸೂಕ್ತವು ಪ್ರಾರಂಭವಾಗುವುದೇ 'ಕಿಮಿಚ್ಛಂತೀ' ಎಂಬ ಶಬ್ದದೊಡನೆ. 'ಕಿಮಿಚ್ಛಂತೀ' ಅಂದರೆ ಏನನ್ನು ಅಪೇಕ್ಷಿಸುವೆ ಎಂದು ಅರ್ಥ. ತಾವಿದ್ದಲ್ಲಿಗೆ ತಮ್ಮನ್ನು ಹುಡುಕಿಕೊಂಡು ಬಂದ ಸರಮಾ ಅನ್ನುವ ಹೆಣ್ಣು ನಾಯಿಯನ್ನು ನೋಡಿ ಪಣಿಗಳು ಪ್ರಶ್ನಿಸುವುದಿದು.

ಇಂದ್ರಾದಿ ದೇವತೆಗಳನ್ನು ಹೊಗಳುವುದೇ ವೇದದ ನಡವಳಿಕೆಯೆಂದು ಭಾವಿಸಲಾಗದು. ಇಲ್ಲಿ ಸರಮಾ ಅನ್ನುವ ಹೆಣ್ಣು ನಾಯಿಯ ವರ್ಣನೆಯನ್ನೂ ತಂದು ಋಗ್ವೇದದ ಋಷಿಗಳು ದೇವಮಾನವಪ್ರಾಣಿಗಳೆಲ್ಲವುಗಳ ಸಮಾನತೆಯನ್ನು ಸಾಧಿಸಿರುವರು. ಈ ಸೂಕ್ತದ ಕಥಾಚೌಕಟ್ಟು ಅತಿ ಚಿಕ್ಕದಾದುದು. ದೇವಗುರು ಬೃಹಸ್ಪತಿಯ ಗೋವುಗಳನ್ನು ಯಾರೋ ಕದ್ದು ಒಯ್ದಿರುವರು ಅನ್ನುವುದು ತಿಳಿದುಬರಲು ಇಂದ್ರನು ಆ ಗೋವುಗಳನ್ನು

ಹುಡುಕಲು ದೇವಲೋಕದ ಶ್ವಾನವಾದ ಸರಮೆಯನ್ನು ನಿಯೋಜಿಸುವನು. ದಾಟಲಸಾಧ್ಯವೆಂದೆನಿಸಿದ ರಸಾನದಿಯ ಆಚೆಯ ದಡದಲ್ಲಿರುವ ವಲನೆಂಬ ರಾಕ್ಷಸನ ಸೇವಕರಾದ ಪಣಿಗಳು ಆ ಗೋವುಗಳನ್ನು ಕದ್ದವರು ಅನ್ನುವುದನ್ನು ಸರಮೆಯು ಕಂಡುಹಿಡಿಯುವುದು ಆ ರಾಕ್ಷಸರಿಗೆ ದೇವಶುನಿಯು ತಮ್ಮನ್ನು ಹುಡುಕಿಕೊಂಡು ಬಂದುದನ್ನು ನೋಡಿ ಆಶ್ಚರ್ಯವಾಗುವುದು. ಅವರು ಆ ನಾಯಿಗೆ ಆಮಿಷಗಳನ್ನು ಒಡ್ಡುವರು. ಸರಮೆಯು ಆಮಿಷಗಳಿಗೆ ಬಲಿಯಾಗದೆ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸುವುದು. ಇಂದ್ರನಲ್ಲಿಗೆ ಹಿಂದಿರುಗಿ ಬಂದು ವಿಷಯವನ್ನು ಸರಮೆಯು ತಿಳಿಸಿದಾಗ ಇಂದ್ರನು ಅಂಗಿರಸಗೋತ್ರದ ಋಷಿಗಳೊಂದಿಗೆ ಪಯಣಿಸಿ ಪಣಿಗಳನ್ನು ಸಂಹರಿಸಿ ಬೃಹಸ್ಪತಿಯ ಗೋವುಗಳನ್ನು ಆತನಿಗೆ ಹಿಂದಿರುಗಿಸುವನು.

ಆಧ್ಯಾತ್ಮಿಕವಾದ ಅರ್ಥಸರಣಿಯೊಂದನ್ನು ಕಥಾರೂಪದಲ್ಲಿ ಮನೋಜ್ಞವಾಗಿ ಈ ಸೂಕ್ತದಲ್ಲಿ ತರಲಾಗಿದೆ. ಬೃಹಸ್ಪತಿಯೆಂದರೆ ಜ್ಞಾನ, ಶುದ್ಧ ಜ್ಞಾನ, ಆತ್ಮದರ್ಶಕಜ್ಞಾನ. 'ಗೋ' ಅನ್ನುವ ಶಬ್ದಕ್ಕೆ ಜ್ಞಾನ ಎಂಬ ಅರ್ಥವೂ ಇದ್ದು ಆ ಅರ್ಥವೇ ಇಲ್ಲಿ ಪ್ರಮುಖವಾದುದು. ಬೃಹಸ್ಪತಿಯ ಗೋವುಗಳೆಂದರೆ ಜ್ಞಾನತಂತುಗಳು ; ಆತ್ಮಜ್ಞಾನವಿಚಾರಗಳು. ಜೀವಸಹಿತವಾದ ಆತ್ಮವು, ಅರ್ಥಾತ್ ಜೀವಾತ್ಮವು ಜ್ಞಾನವಿಚಾರಗಳನ್ನು ಮೆಲುಕು ಹಾಕುತ್ತ ವಿಮರ್ಶಿಸುತ್ತ ನೆಮ್ಮದಿಯಲ್ಲಿದ್ದುದು ಜನ್ಮ–ಮರಣಗಳ ಜಂಜಾಟದಲ್ಲಿ ಅವನ್ನು ಮರೆತು ಬಿಡುತ್ತದೆ. ಜನ್ಮ–ಜನ್ಮಾಂತರಗಳು ಗತಿಸಿದ ಮೇಲೆ ಹೇಗೋ ಆತ್ಮದ ಮೂಲದ ವಿಚಾರಗಳು, ಜ್ಞಾನತಂತುಗಳು ಅರಿವಿಗೆ ಬರಲು ತಾನೂ ಅವುಗಳನ್ನು ಮನನ ಮಾಡಬೇಕೆಂದು ಆ ಜೀವಾತ್ಮಕ್ಕೆ ಅನಿಸುತ್ತದೆ. ಬೃಹಸ್ಪತಿಯು ಜೀವಾತ್ಮವನ್ನು ಅರ್ಥೈಸುವನು. ಗ್ರಹಗಳಲ್ಲಿ ಗುರುಗ್ರಹವು ಬೃಹಸ್ಪತಿಯೆನಿಸಿದೆ. ಗುರುಗ್ರಹವು ಜೀವಾತ್ಮವನ್ನು ಪ್ರತಿನಿಧಿಸುವುದರಿಂದಾಗಿ ಜೀವನದ ವಿವಾಹ, ಸಂತಾನ ಮುಂತಾದ ಆಗುಹೋಗುಗಳ ಸಂದರ್ಭದಲ್ಲಿ ಜಾತಕದಲ್ಲಿ ಗುರುಬಲವನ್ನು ಗಣಿಸಲಾಗುವುದು. ಜೀವಾತ್ಮವು ತಾನು ಸ್ವತಃ ಏನನ್ನೂ ಮಾಡಲಾರದು ; ಏನಿದ್ದರೂ ಮನಸ್ಸಿನ ಮೂಲಕ ತನ್ನ ಕೆಲಸವನ್ನು ಸಾಧಿಸಿಕೊಳ್ಳುವುದು. ಇಂದ್ರನು ಮನಸ್ಸಿನ ಪ್ರತೀಕ; ಆದುದರಿಂದ ಇಲ್ಲಿ, ಕಥೆಯಲ್ಲಿ ಬೃಹಸ್ಪತಿಯು ಇಂದ್ರನಿಗೆ ದೂರುಕೊಟ್ಟಿದ್ದು, ತನ್ನ ಗೋವುಗಳನ್ನು ಅಂದರೆ ಆತ್ಮಜ್ಞಾನತಂತುಗಳನ್ನು ಹುಡುಕಿಕೊಡಲು ವಿನಂತಿಸಿಕೊಂಡದ್ದು. ಶುದ್ಧಸತ್ವಗುಣವು ಮಾತ್ರ ಜ್ಞಾನತಂತುಗಳನ್ನು ಅನ್ವೇಷಿಸಬಲ್ಲದು ಅನ್ನುವ ಕಾರಣದಿಂದ ಆ ಶುದ್ಧಸತ್ವವನ್ನು ನಾಯಿಯ ರೂಪದಲ್ಲಿ ತಂದು ಆ ನಾಯಿಗೆ ಇಂದ್ರನು ಆಜ್ಞೆಯಿತ್ತಂತೆ ಚಿತ್ರಿಸಲಾಯಿತು.

ಜನ್ಮ–ಜನ್ಮಾಂತರಗಳ ಹಿಂದಿನ ವಾಸನೆಯನ್ನು ಗ್ರಹಿಸಬಲ್ಲ ಸತ್ವಗುಣವು ರಸಾನದಿಯಿಂದ ಆಚೆಯಿರುವ ಪಣಿಗಳನ್ನು ಕಂಡು ಹಿಡಿಯಿತು. ಸಾಮಾನ್ಯವಾಗಿ ತಮೋಗುಣವನ್ನು ರಾಕ್ಷಸರನ್ನಾಗಿ ನಿರೂಪಿಸಲಾಗುವುದು. ರಸಾನದಿಯೆಂದರೆ ಜನ್ಮ–ಜನ್ಮಾಂತರಗಳೆಂದು ಅರ್ಥ. ಗರುಡ ಪುರಾಣದಲ್ಲಿ ಇದನ್ನು ವೈತರಣೀ ನದಿಯೆಂದು ಚಿತ್ರಿಸಲಾಗಿದೆ. ಅಲ್ಲಿಯ ವೈತರಣಿಯೆಂದರೂ ಜನ್ಮ–ಜನ್ಮಾಂತರಗಳೆಂದೇ ಅರ್ಥ. ತಮೋಗುಣವು ಜೀವಾತ್ಮದ ಜನ್ಮ–ಜನ್ಮಾಂತರಗಳ ಸರಣಿಯಲ್ಲಿ ಪರಮಾತ್ಮನಿಂದ ಅದು ಹೊರಟು ಬರುವಾಗ ಜೀವಾತ್ಮವೆನಿಸಿದ ಆ ಪ್ರತ್ಯಗಾತ್ಮದಲ್ಲಿದ್ದ ಜ್ಞಾನ, ವಿಶೇಷ ಜ್ಞಾನವನ್ನು ಮರೆವಿಗೆ ಸರಿಸಿ ಬಿಡುತ್ತದೆ. 'ವಲತೇ ಅಧೋಮುಖಂ' ಇತಿ ವಲಃ' – ಜ್ಞಾನದಿಂದ ಇನ್ನೂ ಕೆಳಗೆ, ರಸಾತಲಕ್ಕೆ ಕೊಂಡೊಯ್ಯುವ ತಮೋ ವಿಶೇಷವೇ ವಲ ಅನ್ನುವ ರಾಕ್ಷಸ. ಪಣಿ ಅಂದರೆ ಕಂಜೂಷಿ ; ತನಗಾಗಿಯೂ ಕೂಡ ಏನನ್ನೂ ಖರ್ಚುಮಾಡದವ ಕಂಜೂಸಿ. ತಮೋಗುಣದ ವಿವಿಧಾವಸ್ಥೆಗಳೇ ಪಣಿಗಳು.

ತಮೋಗುಣವು ಸತ್ವಗುಣವನ್ನು ತಮ್ಮ ದಾರಿಗೆ ತರುವ ಪ್ರಯತ್ನ ಮಾಡುವುದೇ ಇಲ್ಲಿ ಪಣಿಗಳು ಸರಮೆಗೆ ವಿವಿಧ ಆಮಿಷಗಳನ್ನು ಒಡ್ಡುವುದಾಗಿದೆ. ಆಲಸ್ಯವು ತಮೋಗುಣದ ವಿಶೇಷತೆಗಳಲ್ಲಿ ಒಂದು; ಇದೂ ಸಹ ಇಲ್ಲಿ ಪಣಿಯೇ ಆಗಿದೆ. ಜ್ಞಾನದೆಡೆಗೆ, ಆತ್ಮಜ್ಞಾನದೆಡೆಗೆ ಹೋಗಬೇಕೆನ್ನುವ ಮನುಷ್ಯನಲ್ಲಿ ಆಲಸ್ಯ ತಲೆದೋರಿ ಆತನು ಆತ್ಮಸಾಧನೆಗೆ ತೊಡಗಲು ದಿನಗಳನ್ನು ಮುಂದೂಡುವುದು ಸಾಮಾನ್ಯವಾಗಿ ಕಂಡು ಬರುವ ವಿಶೇಷವಾಗಿದೆ ; ಕೆಲವು ಸುಖದ ಸಂದರ್ಭಗಳು ಕಳೆದ ಮೇಲೆ ಆತ್ಮಸಾಧನೆಗೆ ಹೊರಟರಾಯಿತು ಅನ್ನುವ ಮನಃಸ್ಥಿತಿಯನ್ನು ಉಂಟುಮಾಡುವ ತತ್ತ್ವಗಳೇ ಇಲ್ಲಿಯ ಪಣಿಗಳು. ಆದರೆ ದೃಢ ಮನಸ್ಕನಾದ ಸಾಧಕನು ಸಮಯ ಕಳೆಯದೆ ಜ್ಞಾನ ತಂತುಗಳಿಗಾಗಿ ತೀವ್ರತರಪ್ರಯತ್ನಗಳಿಗೆ ತೊಡಗಿಕೊಳ್ಳುವನು. ಹಾಗೆ ದೃಢ ಮನಸ್ಕನಾಗುವುದೇ ಸರಮೆಯು ಪಣಿಗಳ ಆಮಿಷಕ್ಕೆ ಪಕ್ಕಾಗದಿರುವುದು.

ಇಂದ್ರನು ಆಂಗೀರಸರೊಂದಿಗೆ ಸೇರಿ ಪಣಿಗಳನ್ನು ಗೆಲ್ಲುವನು. ಅಂಗಿರಸ ಅಂದರೆ ಅಗ್ನಿ; ಅಗ್ನಿಯೆಂದರೆ ಜ್ಞಾನ ; ವಿವೇಕಯುತ ತಿಳುವಳಿಕೆಯೇ ಆಂಗೀರಸರು, ಅಂಗೀರಸಗೋತ್ರೋತ್ಪನ್ನರು. ಜ್ಞಾನದ ವಿವಿಧ ವಿಚಾರಗಳ ಮೂಲಕ ಮನಸ್ಸು ಮತ್ತಷ್ಟು ಬಲಿಷ್ಠಗೊಂಡು ತಮೋಗುಣದ ವಿವಿಧ ತರಂಗಗಳನ್ನು ನಾಶಪಡಿಸಿ ಜ್ಞಾನತಂತುಗಳನ್ನು ಜೀವಾತ್ಮಕ್ಕೆ ಮರಳಿಸುವುದು ; ಅಂದರೆ, ಇಂದ್ರನು ಅಂಗಿರಸರ ಸಹಾಯದಿಂದ ಪಣಿಗಳನ್ನು ನಾಶಗೊಳಿಸಿ ಬೃಹಸ್ಪತಿಗೆ ಅವರ ಗೋವುಗಳನ್ನು ಹಿಂದಿರುಗಿಸಿದ. ಜೀವಾತ್ಮವು ಜ್ಞಾನತಂತುಗಳನ್ನು ಆಧರಿಸಿ ಯೋಗಸಾಧನೆಯಲ್ಲಿ ತೊಡಗಿದಾಗ ಪರಮಾತ್ಮನಲ್ಲಿ ವಿಲೀನಗೊಳ್ಳಲು ಶಕ್ತವಾಗುವುದು.

'ಅಂಗಾನಾಂ ರಸಃ ಅಂಗಿರಸಃ' – ಎಂಬ ವ್ಯುತ್ಪತ್ತಿಯ ಪ್ರಕಾರ ಅಂಗಗಳ ರಸ ಅರ್ಥಾತ್ ಸತ್ವವೇ ಅಂಗಿರಸ; ಈ ಅರ್ಥದಲ್ಲಿ ಪಂಚಪ್ರಾಣಗಳೂ ಅಂಗಿರಸರಾಗುವವು. ಪ್ರಾಣ–ಅಪಾನ–ಉದಾನ–ಸಮಾನ–ವ್ಯಾನಗಳೆಂಬ ಪಂಚಪ್ರಾಣಗಳು ಸರಿಯಾಗಿ ತಮ್ಮ ತಮ್ಮ ಕಾರ್ಯಗಳನ್ನು ದೇಹದಲ್ಲಿ ನಡೆಸಿದಾಗ ಅಂಗಾಂಗಗಳು ಶುದ್ಧಗೊಂಡು ಬಲಿಷ್ಠಗೊಂಡು ಆತ್ಮಸಾಧನೆಗೆ ನೆರವಾಗುವವು. ಇದಕ್ಕೆ ಅವಶ್ಯಕವಾದುದು ಪ್ರಾಣಾಯಾಮ. ಹೀಗೆ ಪ್ರಾಣಾಯಾಮದಿಂದ ಬಲವನ್ನು ಪಡೆದ ಜೀವಾತ್ಮವು ಸಾಧನೆಯ ಮಾರ್ಗದಿಂದಾಗಿ ಪರಮಪದವಿಗೆ ಅರ್ಹವಾಗುವುದು. ಆತ್ಮಕ್ಕೆ ಬಲವನ್ನು ತಂದು ಕೊಡುವ ಮನಸ್ಸೇ ಇಲ್ಲಿ ಇಂದ್ರ.

ಸರಮೆಗೆ ಶ್ಯಾಮ–ಶಬಲರೆಂಬ ಇಬ್ಬರು ಮಕ್ಕಳು, ಅರ್ಥಾತ್ ಸರಮೆಯೆಂಬ ಶ್ವಾನಕ್ಕೆ ಎರಡು ಮರಿಗಳು. ಈ ಮರಿಗಳು ಯಮನ ಸೇವೆಯಲ್ಲಿ ತೊಡಗಿಕೊಂಡವುಗಳು. ಯಮ ಅಂದರೆ ನಿಯಂತ್ರಣ ಶಕ್ತಿ. ಸರಮೆಯ ಮರಿಗಳಾದುದರಿಂದ ಶ್ಯಾಮ–ಶಬಲರನ್ನು ಸಾರಮೇಯಗಳೆಂದು ಕರೆಯಲಾಯಿತು. ಶುದ್ಧಸತ್ವದ ಪ್ರಭೆಗಳೇ ಶ್ಯಾಮ–ಶಬಲರು. ಸರ್ವನಿಯಂತ್ರಣಶಕ್ತಿಯ ಚೈತನ್ಯದಾಯಕ ತತ್ತ್ವಗಳು ಶುದ್ಧ ಸತ್ವದ ಪ್ರಭೆಗಳು.

ವೇದಗಳ ಕಾಲಾನಂತರದಲ್ಲಿ ಬಂದ ರಾಮಾಯಣದಲ್ಲಿ ಮಲಿನಸತ್ವದ ಸಾಕಾರಸ್ವರೂಪನನ್ನಾಗಿ ವಿಭೀಷಣನನ್ನು ಚಿತ್ರಿಸಲಾಗಿದೆ. ವಿಭೀಷಣನ ಪತ್ನಿಯ ಹೆಸರು ಸರಮೆ ; ಶಕ್ತಿಯನ್ನು ಪತ್ನಿಯನ್ನಾಗಿ ನಿರೂಪಿಸುವುದು ವೇದ–ಪುರಾಣಗಳ ಒಂದು ಪದ್ಧತಿ. ಆದುದರಿಂದ ಸರಮೆಯೆಂದರೆ ಆ ಮಲಿನಸತ್ವದ ಶಕ್ತಿಯೇ ಸರಿ. ಸೀತೆಗೆ ಸರಮೆಯು ಆಶ್ವಾಸನೆಯನ್ನು ಅಶೋಕವನದಲ್ಲಿ ನೀಡುವ ಸಂದರ್ಭಗಳು ಶುದ್ಧಸತ್ವಕ್ಕೆ ಮಲಿನಸತ್ವದ ಸಹಕಾರವೆಂದೆನಿಸುವುದು.

ಹೀಗೆಲ್ಲ ಉನ್ನತವಿಚಾರಗಳಿಗೆ ಕಥಾರೂಪವನ್ನು ಕೊಡುವುದು ವೇದ–ಪುರಾಣಗಳ ಒಂದು ಪದ್ಧತಿ.

* * * * *

೧೪. ದಾಶರಾಜ್ಞಯುದ್ಧ ದರ್ಶಿಕಾ

[**ಪೀಠಿಕೆ :** ಸುದಾಸನೆಂಬ ಒಬ್ಬ ರಾಜನು ಶಿಮ್ಯು–, ತುರ್ವಶ ಮುಂತಾದ ಹತ್ತು ಮಂದಿ ವೈರಿರಾಜರೊಡನೆ ನಡೆಸಿದ್ದನೆನ್ನಲಾದ ಯುದ್ಧವು ದಾಶರಾಜ್ಞಯುದ್ಧವೆಂದು ವೇದದಲ್ಲಿ ಖ್ಯಾತವಾಗಿದೆ. ಋಗ್ವೇದದ ಏಳನೆಯ ಮಂಡಲದ 18, 33 ಮತ್ತು 83ನೆಯ ಸೂಕ್ತಗಳಲ್ಲಿ ಮುಖ್ಯವಾಗಿ ಈ ದಾಶರಾಜ್ಞಯುದ್ಧದ ವರ್ಣನೆ ಬರುತ್ತದೆ.ಸಾಮಾನ್ಯವಾಗಿ ಈ ಯುದ್ಧವನ್ನು ಐತಿಹಾಸಿಕವೆಂದೇ ತಿಳಿಯಲಾಗುತ್ತದೆ. ಆದರೆ, ವೇದ ಪುರಾಣಗಳಲ್ಲೆಲ್ಲ ಬರುವ ಹೆಸರುಗಳು ಹಾಗೂ ಪ್ರಸಂಗಗಳು ಆಧ್ಯಾತ್ಮಿಕ ವಿಷಯ–ವಿಚಾರಗಳನ್ನು ಪ್ರಸ್ತುತ ಪಡಿಸುವುದನ್ನೇ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡಿವೆ ಅನ್ನುವುದು ಅವುಗಳ ಸೂಕ್ಷ್ಮಾರ್ಥಗಳಿಂದ ವೇದ್ಯವಾಗುತ್ತದೆ.ಅಂತಹ ಒಂದು ಸೂಕ್ಷ್ಮಾರ್ಥವಿವೇಚನೆಯು ಇಲ್ಲಿದೆ.]

ದಶೇಂದ್ರಿಯಗಳ ಸುಖಲೋಲುಪತೆಯೊಡನೆ ಯುದ್ಧ
ಜೀವಾತ್ಮದುನ್ನತಿಗಾಗಿ ನಡೆದದ್ದು ದಾಶರಾಜ್ಞಯುದ್ಧ ॥ಪ॥

ಸುದಾಸನೆಂಬ ನೃಪನೊಬ್ಬ ತಾ ದಶ ನೃಪಾಲರೊಡನೆ
ನಡೆಸಿದಾ ಯುದ್ಧವದು ಪ್ರಖ್ಯಾತ ದಾಶರಾಜ್ಞಯುದ್ಧ
ಇತಿಹಾಸವೆಂದು ವಿದ್ವಜ್ಜನರು ಭಾವಿಸುತ್ತಿರುವ
ಪ್ರಸಂಗದಲ್ಲಿರುವುದಧ್ಯಾತ್ಮತತ್ತ್ವ ನಿಜದಿ ॥1॥

ದೇವವಂತನ ಪೌತ್ರ ದಿವೋದಾಸನ ಪುತ್ರ
ಸುದಾಸನವನಾಗಿದ್ದ ಋಷಿ ವಸಿಷ್ಠನ ಶಿಷ್ಯ
ಶಿಮ್ಯು–ತುರ್ವಶ–ದ್ರುಹ್ಯು–ಕವಷ–ಯದು–ಪೂರು
ಅನು–ಭೇದ–ಶಂಬರ–ವೈಕರ್ಣರೊಡನೆ ಯುದ್ಧ ॥2॥

ಪರುಷ್ಣೀನದಿಯ ದಡಗಳೆರಡರ ಮೇಲೂ
ನಡೆದ ಘನಘೋರಯುದ್ಧವದು ದಾಶರಾಜ್ಞ
ವಸಿಷ್ಠನಾದೇಶವನು ಮನ್ನಿಸಿದ ಇಂದ್ರನವ
ಸುದಾಸನ ನೆರವಿಗೆ ತಾನೊಲಿದು ಬಂದ ॥3॥

ಋಷಿ ವಸಿಷ್ಠನ ಮಹಿಮೆಯಿಲ್ಲಿ ಸುವ್ಯಕ್ತ
ಪಾಶದ್ಯುಮ್ನನರ್ಪಿಸಿದ ಸೋಮವನು ತೊರೆದು
ಇಂದ್ರನಾತನ ಸ್ತುತಿಗೆ ಬಹು ಮೆಚ್ಚಿ ಬಂದು
ಸುದಾಸನನು ಗೆಲಿಸುವ ಸಂಭ್ರಮದಿ ನಿಂತ ||4||

ದಾಶರಾಜ್ಞಯುದ್ಧದಲಿ ಇಂದ್ರನವನಾದಿತ್ಯನಂತೆ
ಕಾಂತಿಯುತನಾಗಿ ಬೆಳಗಿದ್ದು ವಸಿಷ್ಠಮಹಿಮೆ
ಋಷಿಯ ಪ್ರಾರ್ಥನೆಗೊಲಿದು ವರುಣನೂ ಕೂಡ
ಸುದಾಸನಿಗನುಗ್ರಹಗೈದನಲ್ಲಿಗೈತಂದು ಒಡನೆ ||5||

ದಾಸನೆನ್ನುವ ಶಬ್ದಕರ್ಥಗಳು ಬಹಳ
ಶರಣನೆಂಬರ್ಥದಲೀ ಶಬ್ದವಿಲ್ಲಿ ಬಂದಿಹುದು
ಭಕ್ತಿಪಂಥಕು ಮಿಗಿಲು ಜ್ಞಾನಮಾರ್ಗವು ದಿಟದಿ
ಸುದಾಸನೆಂದರೆ ಜ್ಞಾನಪಥದಲ್ಲಿರುವ ಜೀವಾತ್ಮ ||6||

ದಿವ್ಯತ್ವದಸ್ತಿತ್ವದಲಿ ನಂಬಿಕೆಯು ಮೊದಲು
ಸುದಾಸನದಕಾಗಿ ದೇವವಂತನ ಪೌತ್ರ
ದಿವೋದಾಸನೆಂದರೆ ದಿವ್ಯತ್ವಕರ್ಪಣೆಯು
ಆತ್ಮಸಾಧಕನಡೆಯು ಅಲ್ಲಿಂದ ಮುಂದೆ ||7||

ಪಿಜವನನೆಂಬ ಹೆಸರಿನಲೂ ಸುದಾಸನ ತಂದೆಯಿದ್ದ
ಅದಕಾಗಿ ಪೈಜವನನೆನಿಸಿದ್ದ ಸುದಾಸನಿವನು
ಪಿಜವನನೆಂದರೆ ಸ್ಪರ್ಧಾತ್ಮಕವೇಗದವನು
ಲೌಕಿಕವ ಹಿಮ್ಮೆಟ್ಟಿಸಿದ ಜೀವಾತ್ಮವೆಂಬರ್ಥವಿಲ್ಲಿ ||8||

ಪುರೋಹಿತನಾದ ಋಷಿ ವಸಿಷ್ಠನು ಇಲ್ಲಿ
ಸೂಕ್ತಗಳ ದರ್ಶಕ ಪರಬ್ರಹ್ಮತತ್ತ್ವವಾಗಿಹನು
ಸಮಾಧಿಸ್ಥಿತಿಯನ್ನು ತಲ್ಪಿದ್ದ ಆ ಋಷಿಯು
ತನ್ನತನವನು ಮೀರಿ ಪರಮಾತ್ಮನಾದ ||9||

ವಸಿಷ್ಠನವನಧ್ಯಾತ್ಮಗುರು ಪರಮಗುರುವು
ಮಿತ್ರಾವರುಣರಾತನ ಜನನಕ್ಕೆ ಕಾರಣರು
ಸೂರ್ಯನಾಗಿ ಪರಮಾತ್ಮ ತಾ ಹಗಲಿಗೊಡೆಯ
ವರುಣನೆಂದೆನಿಸಿದವನಾತನೇ ರಾತ್ರಿಗೊಡೆಯ ||10||

ಶ್ರೇಷ್ಠವಸು ಶ್ರೇಷ್ಠಾತ್ಮ ವಸಿಷ್ಠಶಬ್ದದರ್ಥ
ಗುರುಕರುಣೆಯೇ ಮೂಲವಧ್ಯಾತ್ಮ ಸಾಧನೆಗೆ
ದೀಪ್ತಬಹುದೀಪ್ತಜೀವಾತ್ಮವಿಲ್ಲಿ
ಸುದಾಸರಾಜನವ ಗುರುಕರುಣೆ ಪಡೆದ ಜೀವಾತ್ಮ ||11||

ಜ್ಞಾನೇಂದ್ರಿಯಗಳೈದರ ಜೊತೆ ಕರ್ಮೇಂದ್ರಿಯಗಳೈದು
ಸೇರಿದ ದಶೇಂದ್ರಿಯಗಳೇ ದಶರಾಜರಿಲ್ಲಿ
ಇಂದ್ರಿಯಗಳೆಲ್ಲವಿವು ಸುಖಲೋಲುಪತೆಗೆಳಸಿ
ಅಧ್ಯಾತ್ಮಮಾರ್ಗದಲಿ ವಿಘ್ನವನ್ನುಂಟುಮಾಡುವವು ||12||

ಪರುಷತೆಯನೆಡೆಬಿಡದೆ ನಡೆಸಿಕೊಂಬರ್ಥದಲಿ
ಜನ್ಮಜನ್ಮಾಂತರಸರಣಿ ನದಿ ಪರುಷ್ಣೀ
ಬಹುಕಠೋರವಿಹುದೀ ಜನನಮರಣಸರಣಿ
ಸತತಾತ್ಮಸಾಧನೆಯೇ ಪರುಷ್ಣೀನದಿಗುಂಟ ನಡೆದ ಯುದ್ಧ ||13||

ಇಂದ್ರಿಯಂಗಳ ಸೂಕ್ಷ್ಮ ನರ–ನಾಡಿಗಳು ತಾವು
ದೇವತೆಗಳೆನಿಸಿದವು ದೇವರುಗಳೊಡೆಯನಿಂದ್ರ
ಇಂದ್ರನೆಂದರೆ ಮನವು ಮನದ ನಿರ್ದೇಶದಲಿ
ನರನಾಡಿಗಳಲ್ಲೆಲ್ಲ ಸರ್ವಕಾರ್ಯಚಟುವಟಿಕೆ ||14||

ವಸಿಷ್ಠಗುರುವಾದೇಶ ಪರಮಗುರುನಿರ್ದೇಶ
ಅದನೊಪ್ಪಿ ಮನರೂಪದಿಂದ್ರನವನಿಲ್ಲಿ
ಆತ್ಮಸಾಧನೆನಿರತ ಜೀವಾತ್ಮಕನುವಾಗಿ
ನಡೆಯುತ್ತ ಸಾಧನೆಗೆ ನೆರವಾಗಿ ನಿಂತ ||15||

ದ್ಯುಮ್ನವೆಂದರೆ ಬೆಳಗುವಿಕೆಯಧಿಕಾರ ಕೀರ್ತಿ
ಜನ್ಮ ಜನ್ಮಾಂತರಕೆಳೆಯುವ ಪಾಶವದು ದ್ಯುಮ್ನ
ಆ ಪಾಶಮೋಹದಿಂ ವಿಮುಖತೆಯೆ ಇಲ್ಲಿ
ಪಾಶದ್ಯುಮ್ನನರ್ಪಿಸಿದ ಸೋಮದಿಂ ವಿಮುಖನಾ ಇಂದ್ರ ||16||

ಸೋಮವೆಂದರೆ ಇಲ್ಲಿ ಲೌಕಿಕಾನಂದ
ಜಗದ ಸುವಿಕಾಸವೇ ನಿರಂತರದ ಯಜ್ಞವಿಲ್ಲಿ
ಸೂಕ್ಷ್ಮ ನಾಡೀಸಹಿತೇಂದ್ರಿಯಗಳೆಂಬ ದಿವಿಜರಿಗೆ
ಸೋಮಪಾನೀಯದಿಂ ಮದೋನ್ಮತ್ತ ಸಂಭ್ರಮವು ||17||

ಧನ–ಕನಕ–ಕೀರ್ತಿ–ಲೌಕಿಕ ವಿದ್ಯೆಗಳು ದೇಹಾಂತ್ಯಕಂತ್ಯ
ಜನ್ಮ–ಜನ್ಮಾಂತರಕೆ ಮುಂದುವರಿಯುವುದು ಅಧ್ಯಾತ್ಮವಿದ್ಯೆ
ಅದಕಾಗಿ ಗುರುಬೋಧೆಯಾತ್ಮವಿದ್ಯೆಯೆಡೆಗೆ
ಮನವೆಂಬ ಇಂದ್ರ ತಾ ಪಾಶದ್ಯುಮ್ನನಿಗೆ ವಿಮುಖನದಕೆ ||18||

ಸುದಾಸನಿಗೆ ಬಹುವಿಸ್ತೃತಾರ್ಥಕದ ತೃತ್ಸುರಾಜ
ಸಹಾಯವನ್ನಿತ್ತನೀ ದಾಶರಾಜ್ಞದ ಯುದ್ಧದಲ್ಲಿ
ಅಧ್ಯಾತ್ಮದಲಿ ಸಮಷ್ಟಿಜೊತೆಗೆ ಜೀವಾತ್ಮಗಮನ
ಸಂಕುಚಿತ ಭಾವವನು ತೊರೆವ ತತ್ತ್ವವೇ ತೃತ್ಸುರಾಜ ||19||

ಸೂರ್ಯನೆಂದರೆ ಸತ್ಯ ವರುಣನೆಂದರೆ ಋತವು
ವಿಕಸನಾಪರಸೂರ್ಯನವ ವಿಕ್ರಿಯಾತ್ಮಕನು
ಪರಮಪದದುದ್ಘಾಟಕ ಋತವಿಲ್ಲಿ ವರುಣನೆನಿಸಿ
ಸುದಾಸನೆಂಬ ಜೀವಕ್ಕೆ ಮೋಕ್ಷದ ಬಾಗಿಲನು ತೆರೆದ ||20||

ವಸುಶ್ರೇಷ್ಠಗುರುಪಾದಪದ್ಮನಿಷ್ಠ ಮನವು
ಆಧ್ಯಾತ್ಮವಿದ್ಯೆಯಿಂ ಪರಿಪೂರ್ಣಗೊಂಡು
ರವಿಯಂತೆ ಬೆಳಗಿ ತಾ ಬೆಳಕಿನಡಿಯಲ್ಲಿ
ಸುದಾಸನಿಗೆ ಪರಮಪದಮಾರ್ಗದರ್ಶನವು ||21||

ದಶೇಂದ್ರಿಯಗಳ ಸುಖಲೋಲುಪತೆಯೊಡನೆ ಯುದ್ಧ
ಜೀವಾತ್ಮದುನ್ನತಿಗಾಗಿ ನಡೆದದ್ದು ದಾಶರಾಜ್ಞಯುದ್ಧ ||ಪ||

ದಾಶರಾಜ್ಞಯುದ್ಧದರ್ಶಿಕಾ

ಹತ್ತು ಮಂದಿ ರಾಜರೊಡನೆ ನಡೆಸಿದ ಯುದ್ಧವು ದಾಶರಾಜ್ಞಯುದ್ಧ. ಸುದಾಸನೆಂಬ ರಾಜನು ಶಿಮ್ಯು, ತುರ್ವಶ ಮುಂತಾದ ಹತ್ತು ರಾಜರೊಡನೆ ನಡೆಸಿದ ಯುದ್ಧದ ವರ್ಣನೆಯು ಋಗ್ವೇದದಲ್ಲಿ ಬರುತ್ತದೆ. ದೇವತೆಗಳ ವರ್ಣನಾಪ್ರಮುಖವಾದ ವೇದದಲ್ಲಿ ಇಂತಹ ಯುದ್ಧದ ವರ್ಣನೆಯೊಂದು ಬಂದದ್ದು ಇತಿಹಾಸಕಾರರಿಗೆ ಬಹಳ ಮಹತ್ವದ್ದೆನಿಸಿ ವೇದಕಾಲದಲ್ಲಿ ನಡೆದ ಐತಿಹಾಸಿಕ ಘನಘೋರಯುದ್ಧವೆಂಬ ನಿರ್ಣಯಕ್ಕೆ ಅವರು ಬಂದಿದ್ದಿದೆ. ಆದರೆ ವೇದಸಾಹಿತ್ಯವು ಗೋಚರಿಸಿದ್ದು ಯೋಗಿಗಳಾದ ಮಹರ್ಷಿಗಳ ಸಮಾಧಿಸ್ಥಿತಿಯಲ್ಲಿ ಅನ್ನುವುದನ್ನು ಗಮನಿಸಿದಾಗ ಇತಿಹಾಸದ ರೂಪದಲ್ಲಿ ಅಧ್ಯಾತ್ಮತತ್ತ್ವಗಳನ್ನೇ ಆ ಋಷಿಗಳು ದರ್ಶಿಸಿದ್ದು ಎಂದು ಹೇಳಲೇಬೇಕಾಗುತ್ತದೆ. ಯೋಗಸಮಾಧಿಯಲ್ಲಿ ಲೌಕಿಕ ಇತಿಹಾಸಕ್ಕೆ ಆಸ್ಪದವು ಹೇಗೆ ಸಾಧ್ಯ? ಅಲೌಕಿಕ ಇತಿಹಾಸ, 'ಇತಿ ಹ ಆಸ' – ಇರುವುದು ಹೀಗೆ ಎಂಬ ತತ್ತ್ವವೇ ಇಲ್ಲಿ ಪ್ರಧಾನ. ಇಲ್ಲೆಲ್ಲ ಸುದಾಸ ಹಾಗೂ ಅವನ ಗುರು ವಸಿಷ್ಠ ಮತ್ತು ಇಂದ್ರ–ವರುಣಾದಿ ದೇವತೆಗಳ ಹೆಸರುಗಳಲ್ಲಿಯು ಆಧ್ಯಾತ್ಮಿಕ ಅರ್ಥವೇ ಪ್ರಧಾನ ಅನ್ನುವ ಸಾಮಾನ್ಯ ತಿಳುವಳಿಕೆ ಅತ್ಯವಶ್ಯ.

ವಾಕ್–ಪಾದ–ಪಾಣಿ–ಪಾಯು (ಗುದ)–ಉಪಸ್ಥಾನ (ಜನನೇಂದ್ರಿಯ)ಗಳೆಂಬ ಐದು ಕರ್ಮೇಂದ್ರಿಯಗಳು ಹಾಗೂ ತ್ವಕ್ (ಚರ್ಮ) – ಚಕ್ಷು–ಶ್ರೋತ್ರ (ಕಿವಿ) – ರಸನಾ (ನಾಲಿಗೆ) ನಾಸಿಕಾ (ಮೂಗು) ಗಳೆಂಬ ಪಂಚಜ್ಞಾನೇಂದ್ರಿಯಗಳೂ ಸೇರಿ ಒಟ್ಟು ಹತ್ತು ಇಂದ್ರಿಯಗಳಾಗುತ್ತವೆ. ಇವೆಲ್ಲ ಸುಖಲೋಲುಪತೆಯಲ್ಲಿ ತೊಡಗಿದಾಗ ಅಧ್ಯಾತ್ಮಸಾಧನೆ ಶೂನ್ಯವಾಗುವುದು; ಇಷ್ಟೇ ಅಲ್ಲ ಕಣ್ಣಿಗೆ ಕಾಣದ ಆತ್ಮ–ಪರಮಾತ್ಮರನ್ನು ಕಟ್ಟಿಕೊಂಡು ಮಾಡಬೇಕಾದುದೇನು ಎಂಬ ಭಾವನೆಯೂ ಬಲಿತು ಅಧ್ಯಾತ್ಮವಾದಿ – ಸಾಧಕರೊಂದಿಗೆ ತರ್ಕಕ್ಕೆ ತೊಡಗುವುದೂ ಇದೆ. ಅಂತಹ ಪ್ರವೃತ್ತಿ ಯವರು ಅಧ್ಯಾತ್ಮದೆಡೆಗೆ, ಯೋಗಸಾಧನೆಯೆಡೆಗೆ ಪ್ರಾಣಾಯಾಮವೇ ಮುಂತಾದ ಕಾಠಿನ್ಯಕ್ಕೆ ಒಗ್ಗಿಕೊಳ್ಳುವ ಸಂದರ್ಭವು ಒಂದೊಮ್ಮೆ ಬಂದರೆ ಅದಕ್ಕಾಗಿ ಅವರು ಈ ದಶೇಂದ್ರಿಯಗಳೊಂದಿಗೆ ಯುದ್ಧವನ್ನೇ ಮಾಡಬೇಕಾಗುತ್ತದೆ. ಇದು ಶಸ್ತ್ರಾಸ್ತ್ರ ಸಹಿತವಾದ ಯುದ್ಧವಾಗಿರದೆ ಅಂತರಂಗದಲ್ಲಿ ನಡೆಯುವ ಘನಘೋರ ಯುದ್ಧವೇ ಸರಿ.

ಇಲ್ಲಿ ಬರುವ ಸುದಾಸನೆಂದರೆ ಅಧ್ಯಾತ್ಮಕ್ಕೆ ಒಗ್ಗಿ ಬರಬೇಕೆನ್ನುವ ಜೀವಾತ್ಮ. ಲೌಕಿಕಕ್ಕೆ ದಾಸನಾದವನು ಕೇವಲ ದಾಸ ಅಥವಾ ಕುದಾಸ. ಲೌಕಿಕದಿಂದ ಹೊರಗೆ ಬಂದು ಅಧ್ಯಾತ್ಮಸಾಧನೆಗೆಳಸಿದವನು ಸುದಾಸನೆನಿಸುವನು. ಶರಣವರೇಣ್ಯನೆನಿಸುವನು; ಅಧ್ಯಾತ್ಮ ಗುರುವಿಗೆ ಶರಣಾಗಿ ಗುರುವಿನ ಗುಲಾಮನೆನಿಸುವನು. 'ಗುರುವಿನ

ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ಹಾಡುವ ಭಕ್ತಶ್ರೇಷ್ಠನಾಗುವನು. ಈ ಸುದಾಸನ ಅಜ್ಜ ದೇವವಂತ ಹಾಗೂ ತಂದೆ ದೀವೋದಾಸ.

ಇವರೆಲ್ಲ ರಾಜರುಗಳು ಏಕೆಂದರೆ ಆತ್ಮವು ಜೀವಸಹಿತವಾಗಿ ಜೀವಾತ್ಮವಾದರೂ ತನ್ನ ಸಾಧನೆಗೆ ಹೊರಟಾಗ ದೇದೀಪ್ಯಗೊಳ್ಳುವುದು. ರಾಜ್ ಅಂದರೆ ಶೋಭಿಸು ; ಇಲ್ಲಿ ದೇದೀಪ್ಯತೆಯೇ ರಾಜತ್ವ. ದಿವ್ಯತ್ವದಲ್ಲಿ ನಂಬಿಕೆ ಬಂದರೆ ಮಾತ್ರ ಅಧ್ಯಾತ್ಮಸಾಧನೆ; ಆ ಅರ್ಥದಲ್ಲಿ ದೇವವಂತನು ಈ ಸುದಾಸನ ಅಜ್ಜ ; ಅನಂತರ ದಿವ್ಯತ್ವಕ್ಕೆ, ಆತ್ಮಸಾಧನೆಗೆ ತನ್ನನ್ನು ಅರ್ಪಿಸಿಕೊಳ್ಳುವ ತತ್ವವೇ ದಿವೋದಾಸ ; ಈ ಅರ್ಥದಲ್ಲಿ ಸುದಾಸನ ತಂದೆ ದಿವೋದಾಸ. ವೇದದ ಈ ವಿಚಾರಸರಣಿಯಲ್ಲಿ ಪ್ರತಿಯೊಬ್ಬ ಯೋಗಸಾಧಕನೂ ಸುದಾಸನೇ, ಅಂದರೆ ದಿವೋದಾಸನಪುತ್ರ ಹಾಗೂ ದೇವವಂತನ ಪೌತ್ರನೇ ಸರಿ.

ಯುದ್ಧಕ್ಕೆ ನೆರವಾದವನು ಇಂದ್ರ. ವೇದಪುರಾಣಗಳಲ್ಲಿ ಮನಸ್ಸನ್ನು, ಅದು ಸರ್ವಶಕ್ತವಾದುದರಿಂದ ಇಂದ್ರನನ್ನಾಗಿ ನಿರೂಪಿಸಲಾಗಿದೆ. ಆತ್ಮದರ್ಶನಕ್ಕೆ ಜೀವಾತ್ಮನಿಗೆ ನೆರವಾಗುವುದು ಮನಸ್ಸು. ಸೂಕ್ತನರನಾಡಿಗಳೆಲ್ಲ ದೇವತೆಗಳು. ಅವುಗಳಿಗೊಡೆಯ ಇಂದ್ರ, ಅವನ್ನೆಲ್ಲ ತನಗೆ ಬೇಕಾಗುವಂತೆ ನಡೆಸುವ ಮನಸ್ಸೆಂಬ ಇಂದ್ರ. ಸುದಾಸನ ಕುಲಗುರು ವಸಿಷ್ಠನು ಇಲ್ಲಿ ಅಧ್ಯಾತ್ಮಗುರುವು ; ವಸುಶ್ರೇಷ್ಠನೇ ವಸಿಷ್ಠ. ಆಧ್ಯಾತ್ಮ ಶಕ್ತಿಯಿಂದ ದೇದೀಪ್ಯಮಾನವಾಗಿ ಬೆಳಗುವ ಗುರುವೇ ವಸಿಷ್ಠ.

ಗುರುವಿನ ನಿರ್ದೇಶನವನ್ನು ಮನಸ್ಸು ನಡೆಸಿದರೆ ಮಾತ್ರ ದಶೇಂದ್ರಿಯಗಳೊಡನೆ ನಡೆಯುವ ಯುದ್ಧದಲ್ಲಿ ಆತ್ಮನಿಗೆ ಗೆಲುವು ಸಾಧ್ಯ. ದಾಶರಾಜ್ಞಯುದ್ಧವು ನಡೆದ ಸ್ಥಳವು ಪರುಷ್ಣೀನದಿಯ ದಂಡೆ. ಪರುಷದೆಡೆಗೆ ಅಂದರೆ ಕಠೋರತೆಯೆಡೆಗೆ ನಡೆಸಿಕೊಂಡು ಹೋಗುವ ಜೀವನವೆಂಬ ಪ್ರವಾಹವೇ ಪರುಷ್ಣೀನದಿ. ಜೀವಾತ್ಮದ ಜೀವನವು, ಬದುಕುವಿಕೆಯು ಒಂದೆರಡು ಜನ್ಮಗಳದ್ದಲ್ಲ ; ಸಾವಿರಾರು ಜನ್ಮಗಳನ್ನು ವಿವಿಧ ಪ್ರಾಣಿಯೋನಿಗಳಲ್ಲಿ ಪಡೆಯುವತ್ತ ಜೀವಾತ್ಮವು ಬಂದಿರುತ್ತದೆ. ಜನ್ಮ–ಪುನರ್ಜನ್ಮಾಂತರಗಳಲ್ಲಿ ಅನೇಕ ವಿಧ ಕಷ್ಟ–ಕೋಟಲೆಗಳಲ್ಲಿ ಜೀವಾತ್ಮವು ನೊಂದು–ಬೆಂದಿರುತ್ತದೆ. ಹೀಗೆ ಜನ್ಮ–ಪುನರ್ಜನ್ಮಸರಣಿಯೇ ಪರುಷ್ಣೀನದಿ.

ಪಾಶದ್ಯುಮ್ನನೆಂಬುವವನು ಅರ್ಪಿಸಿದ ಸೋಮವನ್ನು ತೊರೆದು, ಸೋಮಪ್ರಿಯನಾದರೂ ಇಂದ್ರನು ಸುದಾಸನ ನೆರವಿಗೆ ಧಾವಿಸುವನು. ಇಲ್ಲಿ ದ್ಯುಮ್ನ ಅಂದರೆ ಅಧಿಕಾರ–ಕೀರ್ತಿ–ಪ್ರತಿಷ್ಠೆಗಳು. ಅಧಿಕಾರ ಕೀರ್ತಿ–ಪ್ರತಿಷ್ಠೆಗಳು ಮನಸ್ಸಿಗೆ ಕೊಡುವ ಮುದವೇ, ಸಂತೋಷವೇ ಮನಸ್ಸಿಗೆ ಅನಂತರ ಪಾಶವಾಗಿ ಪರಿಣಮಿಸುವುದು. ಮನಸ್ಸನ್ನು ಆಕರ್ಷಿಸಿಬಿಡುವುದು ; ಕೀರ್ತಿಕಾಮನೆಯು ಎಲ್ಲ ಕಾಮನೆಗಳಿಗಿಂತ ಬಲಿಷ್ಠವಾದುದು. ಕೀರ್ತಿಕಾಮನೆಯೆಂಬ ಆಶಾಪಾಶವನ್ನು ಕಿತ್ತೆಸೆದು ಮನಸ್ಸು ಜೀವಾತ್ಮದ ಅಧ್ಯಾತ್ಮಸಾಧನೆಗೆ

ಧಾವಿಸಿದರೆ ಮಾತ್ರ ಆತ್ಮಸಾಧನೆ ಸಾಧ್ಯ. ಅಧಿಕಾರದ, ಕೀರ್ತಿಗಳ ಬಲೆಗೆ ಬಿದ್ದರೆ ಮತ್ತೆ ಸ್ವಾರ್ಥಪೂರಿತ ಕರ್ಮಗಳು–ಕರ್ಮಫಲಗಳು ; ಆ ಮೂಲಕ ಮತ್ತೆ ಪರುಷ್ಣೀನದಿಗುಂಟ ಜೀವನ. ಅಂದರೆ ಜನ್ಮ–ಪುನರ್ಜನ್ಮ. ಈ ಅರ್ಥದಲ್ಲಿ ಪಾಶವಾಗಿ ಪರಿಣಮಿಸುವ ಅಧಿಕಾರವನ್ನು ಹಾಗೂ ಕೀರ್ತಿಯನ್ನು ಪಾಶದ್ಯುಮ್ನನೆಂದು ಚಿತ್ರಿಸಲಾಗಿದೆ. ಇಲ್ಲಿ ಸೋಮ(ರಸ) ಎಂದರೆ ಕೀರ್ತಿಯಿಂದ ದೊರೆಯಬಹುದಾದ ಆನಂದ.

ಋಷಿ ವಸಿಷ್ಠನ ಇಚ್ಛೆಯಂತೆ ವರುಣನೂ ಕೂಡ ಇಲ್ಲಿ ಸುದಾಸನಿಗೆ ಅನುಗ್ರಹ ಗೈಯುವನು ; ಆತನ ಗೆಲುವಿಗೆ ಸಹಕರಿಸುವನು. ಸತ್ಯವನ್ನು ದಾಟಿ ಋತಕ್ಕೆ ಜಾರಿದ ಮೇಲೆಯೇ ಆತ್ಮದರ್ಶನ. ಸೂರ್ಯ ಹಾಗೂ ಸೌರಸಂಸಾರದ ಗ್ರಹಗಳೆಲ್ಲ ಸತ್ಯವನ್ನು ಅರ್ಥೈಸಿದರೆ, ಅಂದರೆ ಲೌಕಿಕ ಸರ್ವಸ್ವಗಳನ್ನು ಅರ್ಥೈಸಿದರೆ ಕಣ್ಣಿಗೆ ಕಾಣಿಸದ ವರುಣನು ಅರ್ಥೈಸುವುದು ಋತವನ್ನು. ಸತ್‌ಶಕ್ತಿಯನ್ನು ಮೀರಿದ ಚಿತ್ ಶಕ್ತಿಯನ್ನು. ಹೊರಗಿನ ಪ್ರಪಂಚದ ಸತ್ಯವನ್ನು ಮೀರಿ ಆತ್ಮಪ್ರಪಂಚದ ಅನಾಹತನಾದ, ಅರ್ಥಾತ್, ತಾನಾಗಿ ಅನುಭವಕ್ಕೆ ಬರುವ ಓಂಕಾರಾದಿ ನಿನಾದ ಹಾಗೂ ಭ್ರೂಮಧ್ಯದಲ್ಲಿ ಸಾಧನೆಯಲ್ಲಿ ಮೂಡಿಬರುವ ಬೆಳಕು ಮುಂತಾದವು ಚಿತ್ ಪ್ರಪಂಚಕ್ಕೆ ಸೇರಿದ್ದು ; ಇವನ್ನೆಲ್ಲ ವರುಣನೆಂದು ಗುರುತಿಸಲಾಗುವುದು. ಈ ಅಧ್ಯಾತ್ಮಾನುಭವದ ಮಾರ್ಗದರ್ಶನದಲ್ಲಿ ಜೀವಾತ್ಮನಿಗೆ ಆತ್ಮದರ್ಶನವಾಗುವುದು. ಇದಕ್ಕೆಲ್ಲ ಗುರುವಿನ ಮಾರ್ಗದರ್ಶನದ ಅವಶ್ಯಕತೆ ಇದ್ದೇ ಇದೆ. ಹೀಗೆ ಗುರುವಿನ ಮಾರ್ಗದರ್ಶನದಲ್ಲಿಯ ಚಿತ್ ಅನುಭವವೆಂಬ ವರುಣನೂ ಸುದಾಸನಿಗೆ ಅನುಗ್ರಹಿಸುವವನಾಗುವನು. ಸ್ವಾರ್ಥನಿರಪೇಕ್ಷಿತ ಅಧ್ಯಾತ್ಮಗುರುವಿನ ಗುಲಾಮನಾಗಿ ಆತ್ಮದರ್ಶನವೆಂಬ ಸಾಮ್ರಾಜ್ಯವನ್ನು ಸಾಧಿಸಲು ಹೊರಟ ಧನ್ಯ ಜೀವಾತ್ಮವೇ ಇಲ್ಲಿಯ ಸುದಾಸಮಹಾರಾಜ.

* * * * *

೧೫. ಸೂರ್ಯಸೂಕ್ತ ದರ್ಶಿಕಾ

[**ಪೀಠಿಕೆ :** ಋಗ್ವೇದದ 10ನೆಯ ಮಂಡಲದ 158ನೆಯ ಸೂಕ್ತವು ಸೂರ್ಯಸೂಕ್ತವೆನಿಸಿದೆ. ಇದರಲ್ಲಿ ಐದು ಮಂತ್ರಗಳಿವೆ. ಸೌರ್ಯ ಚಕ್ಷು ಎಂಬ ಹೆಸರಿನವನು ಈ ಸೂಕ್ತದ ಋಷಿ; ದೇವತೆ ಸೂರ್ಯ. ಗಾಯಿತ್ರೀ ಛಂದಸ್ಸಿನಲ್ಲಿರುವ ಈ ಸೂಕ್ತದ ಭಾವದೊಂದಿಗೆ ಆಧ್ಯಾತ್ಮಿಕ ಅರ್ಥವು ಇಲ್ಲಿಯ ಕನ್ನಡ ಪದ್ಯದಲ್ಲಿದೆ. ಉದಯಿಸಿದ ಒಂದು ತಾಸಿನೊಳಗೆ ಸೂರ್ಯನನ್ನು ಪ್ರತಿಬೆಳಗು 10–10 ಸೆಕೆಂಡುಗಳಂತೆ ಏರಿಕೆಯ ಪ್ರಮಾಣದಲ್ಲಿ ನೋಡುತ್ತ ಹೋದರೆ, ಮೂರುತಿಂಗಳಿಗೆ 15 ನಿಮಿಷಗಳಂತೆ ಸೂರ್ಯನನ್ನು ನೋಡಲು ಸಾಧ್ಯವಾಗುವುದು. ಈ ರೀತಿಯಲ್ಲಿ ನೋಡುತ್ತಿದ್ದರೆ ಉತ್ತಮೋತ್ತಮವಾದ ಆರೋಗ್ಯದ ಸ್ಥಿತಿಯಿರುತ್ತದೆ. ಹೀಗೆ ಸೂರ್ಯನನ್ನು ನೋಡುವುದು ಸೂರ್ಯಪಾನವೆನಿಸುತ್ತದೆ. ಈ ಲೇಖಕನು ಒಂದು ಮಂತ್ರವನ್ನು ಬರೆದಿದ್ದು ಆ ಮಂತ್ರವು ಇದೇ ಲೇಖಕನ 'ಅಧ್ಯಾತ್ಮಸ್ತೋತ್ರ–ಮಂತ್ರಗಳು' ಅನ್ನುವ ಗ್ರಂಥದಲ್ಲಿ ದೊರೆಯುತ್ತದೆ. ಆಸಕ್ತರು ಆ ಗ್ರಂಥವನ್ನು ನೋಡಬಹುದು.]

ಸೂರ್ಯನಿಂದಾರೋಗ್ಯ ಸೂರ್ಯನಿಂ ಜೀವನವು
ಸೂರ್ಯನೆಂದರೆ ಆತ್ಮ ಜಗದಾತ್ಮನವನು ॥ಪ॥

ಸೂರ್ಯನಿಂ ತೇಜಸ್ಸು ವಾಯುರೂಪಾಯುಷ್ಯ
ಸೂರ್ಯನಿಂದಲೆ ನೀರು ಜೀವರಾಶಿಗಳು
ಸೂರ್ಯನಿಂದಲೆ ಗ್ರಹಗಳಸ್ತಿತ್ವ ಭುವನದಲಿ
ಸೂರ್ಯನಿಂದಲೆ ಜಗದಲಾಕಾಶದರಿವು ॥1॥

ಸೂರ್ಯನವನಾಧಾರರಹಿತನಾಕಾಶದಲಿ
ಅದರಾಧಾರವವ ಸೌರ ಸಂಸಾರಕೆಲ್ಲ
ತನ್ನ ಕಿರಣಗಳನ್ನು ಅನವರತ ಪಸರಿಸುತ
ಇರುವನೆತ್ತರದಲ್ಲಿ ಜಗದ ಕಾರುಣಿಕ ॥2॥

ದಿವ್ಯದರ್ಶಕ ಚಕ್ಷು ತಾನಾಗಿ ಸೂರ್ಯನವ
ನಿವಾರಕನರಿವಿಂಗೆ ಬರದಪಾಯಗಳಿಂದ
ರಕ್ಷಕನು ದೇಹಮಧ್ಯದಲಂತರಿಕ್ಷವೆಂಬ
ಶ್ವಾಸಕೋಶದಲಿರುವ ವಾಯುವೂ ಅವನೇ ॥3॥

ಜಠರಾಗ್ನಿರೂಪದಲಿ ಸರ್ವರಲಿ ನೆಲಸಿ
ಭಕ್ಷಿಸಿದ ಭಕ್ಷ್ಯವನು ಜೀರ್ಣಗೊಳಿಸುತ್ತ
ಆ ಮೂಲದಿಂ ತನುಗಳಿಗೆ ಚೈತನ್ಯ ನೀಡಿ
ರೋಗದಿಂ ಜೀವಿಗಳ ರಕ್ಷಿಪನು ಸೂರ್ಯ ॥4॥

ನಿಜದಾರು ವೈರಿಗಳು ಮನದ ರೋಗಗಳಿಹವು
ದೇಹಕ್ಕೆ ರೋಗಗಳು ನೂರಾರು ವಿಧವು
ಅವುಗಳಿಂದೆಲ್ಲ ನಮ್ಮನ್ನು ರಕ್ಷಿಸುವ
ಪರಮಾತ್ಮನಿಹನಿಲ್ಲಿ ಸೂರ್ಯರೂಪದಲಿ ॥5॥

ವ್ಯಕ್ತಿತ್ವವಿಕಸನದ ಶತ್ರುಗಳ ಮತ್ತು
ದಿವ್ಯತೆಯ ಶತ್ರುಗಳ ಬಿಡದೆ ಗುರುತಿಸುವ
ಚಕ್ಷುರೂಪದಿ ಬಂದು ನಮಗವುಗಳಿಂದ
ರವಿಯು ರಕ್ಷಣೆಯನ್ನು ನೀಡುತ್ತಲಿರಲಿ ॥6॥

ಪ್ರತ್ಯಕ್ಷ ಸ್ಥಿತಿಯಲ್ಲಿ ನಭದಲ್ಲಿ ಹೊಳೆಯುತ್ತ
ಪರೋಕ್ಷತೆಯಲ್ಲಿ ಸರ್ವಾತ್ಮಗಳಲ್ಲಿ ನೆಲಸಿ
ನಿರೀಕ್ಷಿಸುತೆಲ್ಲವನು ಸರ್ವಸಮಯಗಳಲ್ಲಿ
ಇರುವ ಸೂರ್ಯನನು ನೋಡುವ ದೃಷ್ಟಿ ನಮಗಿರಲಿ ॥7॥

ಅಲ್ಪಾಲ್ಪಸಾಧನೆಯ ಮುಂದುವರಿಸುತ್ತ
ಪ್ರತಿಬೆಳಗು ಸೂರ್ಯನನು ಬರಿಗಣ್ಣಿನಲ್ಲಿ
ನೋಡುವಭ್ಯಾಸದಿಂದಾರೋಗ್ಯಲಾಭ
ಮತ್ತದೋ ನಮಗಿಹುದು ಪರಮಾತ್ಮಲಾಭ ॥8॥

ಸೂರ್ಯನೋಪಾಸನೆಯು ಋಷಿಯನ್ನು ಇಲ್ಲಿ
ಸೌರಚಕ್ಷುವನ್ನಾಗಿ ಮಾರ್ಪಡಿಸಿದಂತೆ
ಎಲ್ಲರನು ನಡೆಸಲದು ನಿತ್ಯದರ್ಶಿತವಾದ
ಆ ರವಿಯ ಗುರುಪಾದಪದ್ಮಕಿರಣ ॥9॥

ಸೂರ್ಯನಿಂದಾರೋಗ್ಯ ಸೂರ್ಯನಿಂ ಜೀವನವು
ಸೂರ್ಯನೆಂದರೆ ಆತ್ಮ ಜಗದಾತ್ಮನವನು ॥ಪ॥

ಸೂರ್ಯಸೂಕ್ತದರ್ಶಿಕಾ

ಮಂತ್ರದ ಅರ್ಥಕ್ಕೆ ಹಾಗೂ ಅಧಿದೇವನಿಗೆ ಹೊಂದಿಕೆಯಾಗಿ ಋಷಿಯ ಹೆಸರು ಬರುವುದು ವೇದಗಳ ವೈಶಿಷ್ಟ್ಯಗಳಲ್ಲೊಂದು. ಏಕೆಂದರೆ ಋಷಿಯು ತನ್ನ ತೀವ್ರ ಸಮಾಧಿಸ್ಥಿತಿಯಲ್ಲಿ ತಾನೂ ಆ ದೇವನೇ ಆಗುವುದರಿಂದ ಆ ಋಷಿಯ ದರ್ಶನವು ಹಾಗೂ ಆತನ ಕಾವ್ಯನಾಮವು ಆ ದೇವವೈಶಿಷ್ಟ್ಯದ್ದೇ ಆಗಿಬಿಡುವುದು. ಸತ್ಯದ ಪ್ರತಿಪಾದಕನು ಸೂರ್ಯ. ಸತ್ಯವನ್ನು ದರ್ಶಿಸುವ ಅಂಗ ಕಣ್ಣು; ಆದುದರಿಂದ ಈ ಸೂರ್ಯನನ್ನು ದರ್ಶಿಸಿದ ಋಷಿಯು ಸೌರ್ಯಚಕ್ಷುವೆಂದೆನಿಸಿದ.

ಸೂರ್ಯನನ್ನು ಜ್ಯೋತಿಷ್ಯದಲ್ಲಿ ಒಂದು ಗ್ರಹವೆಂದು ಭಾವಿಸುವುದು ಪ್ರಾಚೀನಕಾಲದಿಂದಲೂ ನಡೆದು ಬಂದಿದೆ. ಆದರೆ ಈ ನಮ್ಮ ಸೂರ್ಯನು ಖಗೋಳದಲ್ಲಿಯ ಕೋಟಿಗಟ್ಟಲೆ ನಕ್ಷತ್ರಗಳಲ್ಲಿ ಒಂದು ಅನ್ನುವುದು ಅಷ್ಟೇ ವಾಸ್ತವ. ಜ್ಯೋತಿಷ್ಯದಲ್ಲಿಯೂ ಸೂರ್ಯನು ಪ್ರಮುಖಸ್ಥಾನವನ್ನು ವಹಿಸುವನು. ಸೂರ್ಯನನ್ನು ಆತ್ಮವೆಂದು ಭಾವಿಸಲಾಗುವುದು. ಪಿತೃಕಾರಕನಾಗಿ ತಂದೆಯ ಸ್ಥಾನದಲ್ಲಿಯೂ ಸೂರ್ಯನಿರುವನು. ಚಂದ್ರ ಗುರು, ಶುಕ್ರ, ಭೂಮಿ ಮುಂತಾದ ಗ್ರಹಗಳೆಲ್ಲ ಈ ಸೂರ್ಯನ ಪರಿಭ್ರಮಣದಲ್ಲಿ ಮೂಡಿ ಬಂದವುಗಳಾಗಿದ್ದು ಇವೆಲ್ಲ ಸೌರಸಂಸಾರವೆಂದು ಭಾವಿತವಾಗಿವೆ.

ಆಕಾಶದಲ್ಲಿ ಜ್ವಲಿಸುವ ಸೂರ್ಯನಿಗೆ ಯಾವುದೇ ಆಧಾರವೂ ಇಲ್ಲವಾದರೂ ಸಂಸಾರವೆಂಬ ಜಗತ್ತಿಗೆ ಆಧಾರವಾಗಿ ಆತ ನಿಂತಿರುವನು. ಪಂಚಭೂತಗಳೂ ಅವನದೇ ಸೃಷ್ಟಿ ಹಾಗೂ ಜೀವರಾಶಿಗಳೆಲ್ಲ ಅವನದೇ ಸಂತಾನ. ವಾಯುವಿನ ರೂಪದಲ್ಲಿ ಆ ಸೂರ್ಯನೇ ಆತ್ಮಗಳ ಜೀವಭಾವವಾಗಿರುವನು; ಅಂದರೆ ಆತ್ಮಗಳನ್ನು ಜೀವಾತ್ಮಗಳನ್ನಾಗಿ ಪರಿವರ್ತಿಸುವವನು. ಉಸುರಿನ ರೂಪದಲ್ಲಿರುವನು. ದೇಹದಲ್ಲಿ ನೆಲಸಿ ಅವುಗಳನ್ನು ಜೀವಂತವಾಗಿ ಇಡುವವನೂ, ಅವರಿಗೆ ಸರ್ವವಿಧ ಆರೋಗ್ಯಾಧಿಗಳನ್ನು ನೀಡುವವನೂ ಸೂರ್ಯನೇ ಆಗಿರುವನು. ಈ ಅರ್ಥದಲ್ಲಿ ಸತ್ಯವಾಗಿ ಕಂಡು ಬರುವ ಸೂರ್ಯನೇ ಸತ್ಯಾರ್ಥದಲ್ಲಿ ಈ ಜಗತ್ತಿನ ಪರಮಾತ್ಮ. ಸತ್‌ಭಾವವನ್ನು ಮೀರಿದ ಚಿತ್ ಭಾವದಲ್ಲಿರುವ ಮಹಾಸೂರ್ಯನೆಂಬ ಪರಮಾತ್ಮನೆಡೆಗೆ ಜೀವಾತ್ಮಗಳನ್ನು ನಡೆಸಿ ಅವುಗಳಿಗೆ ಮೋಕ್ಷವನ್ನು ದೊರಕಿಸಿಕೊಡುವ ಗುರುಶ್ರೇಷ್ಠನೂ ಈ ಸತ್ಯಾರ್ಥದಲ್ಲಿಯ ಸೂರ್ಯನಾಗಿಹನು. ಆತನೇ ಈ ಭೌತಿಕ ಜಗತ್ತಿನ ತಂದೆ.

ಸೂರ್ಯನ ತೇಜಸ್ಸನ್ನೇ ಗಾಯತ್ರಿಯನ್ನಾಗಿ ಭಾವಿಸಿ ದರ್ಶಿಸಲಾಗಿದೆ. 'ಗಾಯಂತಂ ತ್ರಾಯತೇ ಇತಿ ಜನ್ಮ ಪುನರ್ಜನ್ಮಗಳೆಡೆಗೆ ಗಾಯತ್ರೀ, ಸತತವಾಗಿ ಚಲಿಸುತ್ತಿರುವ ಜೀವಾತ್ಮವನ್ನು ರಕ್ಷಿಸುವ ಪರಾಶಕ್ತಿತತ್ತ್ವವೇ ಗಾಯತ್ರೀ ಅರ್ಥಾತ್ ಸೌರ ಪ್ರಭೆ.

(ಗಾಯತ್ರೀದರ್ಶಿಕಾದಲ್ಲಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಗಾಯತ್ರಿಯ ಬಗ್ಗೆ ಪಡೆಯಬಹುದು).

ಭೌತಿಕದಲ್ಲಿ ಮುಖ್ಯವಾಗಿ ಸೂರ್ಯನು ಆರೋಗ್ಯಕಾರಕನು. ಪ್ರಾಚೀನ ಕಾಲದಲ್ಲಿ ಋಷಿಮುನಿಗಳು ಸೂರ್ಯನನ್ನು ದೃಷ್ಟಿಸಿ ನಿಯಮಿತವಾಗಿ ನೋಡುತ್ತ ಆ ಪರಿಣಾಮವಾಗಿ ಆರೋಗ್ಯವನ್ನು ಪಡೆಯುವುದರ ಜೊತೆಯಲ್ಲಿ ಆಹಾರದ ಪಾಶದಿಂದಲೂ ಮುಕ್ತರಾಗುತ್ತಿದ್ದರು. ನಿಯಮಿತವಾಗಿ ಸೂರ್ಯನನ್ನು ನೋಡುತ್ತ ಇದ್ದಾಗ ಅಪಾರವಾದ ಸೌರಶಕ್ತಿಯು ದೇಹದಲ್ಲಿ ಪ್ರವಹಿಸಿ ಹಸಿವೆ – ನೀರಡಿಕೆಗಳೂ ಇಲ್ಲದಂತೆ ಮಾಡುವವು ಅನ್ನುವುದನ್ನು ಋಷಿ–ಮುನಿಗಳು ಕಂಡುಕೊಂಡಿದ್ದರು. ಹಾಗೂ ಆಹಾರ ಪಾನೀಯಗಳಿಲ್ಲದೆಯೇ ವರುಷಗಟ್ಟಲೆ ಸಮಾಧಿಸ್ಥಿತಿಯಲ್ಲಿ ಇರಬಲ್ಲ ಸಾಧನೆಯನ್ನು ಅವರು ಸಾಧಿಸಿದ್ದರು.

ಗುಜರಾತ್ ಮೂಲದ ಇಂಜಿನಿಯರ್ ಹೀರಾರತನ್ ಮಾಣೇಕ್ ಶಾ ಅನ್ನುವವರು ಈ 20, 21ನೆಯ ಶತಮಾನಗಳ ಅದ್ಭುತ ಸಾಧಕರಾದುದು ತುಂಬ ವಿಶೇಷ. ಅವರು ಪ್ರಾಚೀನ ಕಾಲದ ಋಷಿಗಳು ಆಹಾರರಹಿತ ಸ್ಥಿತಿಯಲ್ಲಿ ಬದುಕುವ ಬಗೆಯನ್ನು ಅರಿಯಲು ಸಂಶೋಧಿಸಿ ಸೂರ್ಯೋಪಾನಪದ್ಧತಿಯನ್ನು ಕಂಡು ಹಿಡಿದರು. ದಿನವೂ 10 10ಸೆಕೆಂಡುಗಳ ಸೂರ್ಯದರ್ಶನದ ಸಮಯವರ್ಧನೆಯಂತೆ ಹೆಚ್ಚಿಸುತ್ತ ತಾಸುಗಟ್ಟಲೆ ಸೂರ್ಯನನ್ನು ನಿಟ್ಟಿಸಿ ನೋಡುತ್ತ ಅದ್ಭುತ ಶಕ್ತಿಯನ್ನು ಗಳಿಸಿದರು.

ಪ್ರತಿ ದಿನ ಬೆಳಿಗ್ಗೆ ದಿನಕ್ಕೆ 10 ಸೆಕೆಂಡುಗಳಂತೆ ಏರಿಸುತ್ತ ಸೂರ್ಯನನ್ನು ನಿಟ್ಟಿಸಿ ನೋಡುತ್ತ ಹೋದಾಗ ಒಂದು ವರ್ಷದ ಅವಧಿಯಲ್ಲಿ ಒಂದು ತಾಸು ನಿಟ್ಟಿಸಿ ನೋಡುವ ಸಾಮರ್ಥ್ಯ ಬರುವುದಾಗಿ ಅವರು ಕಂಡು ಹಿಡಿದರು. ಇದನ್ನು ಸೂರ್ಯಪಾನವೆಂದು ಹೆಸರಿಸಿದರು. ಸಾಯಂಕಾಲದಲ್ಲಿ ಸೂರ್ಯಾಸ್ತಕ್ಕೆ ಒಂದು ತಾಸು ಇರುವಾಗಿನ ನಂತರ ನೋಡಬೇಕೆಂಬುದು ಅವರ ಅನುಭವ. ಉಳಿದ ಸಮಯದಲ್ಲಿ ಸೂರ್ಯನನ್ನು ನಿಟ್ಟಿಸಿದರೆ ಆತನ ಅಲ್ಟ್ರಾ ವೈಲೆಟ್ ಕಿರಣಗಳಿಂದಾಗಿ ಕಣ್ಣೇ ಕುರುಡಾಗಬಹುದು. ಹೀಗೆ ನಿಯಮಿತ ಅವಧಿಯಲ್ಲಿ ನಿಯಮಿತವಾಗಿ ನೋಡುತ್ತ ಹೋದಾಗ ವರ್ಷಾನುಗಟ್ಟಲೆಯ ಸಾಧನೆಯ ಅನಂತರ ಆಹಾರವೇ ಮನುಷ್ಯನಿಗೆ ಬೇಕೆನಿಸುವುದಿಲ್ಲವೆನ್ನುವುದು ಅವರ ಶೋಧನೆ ಹಾಗೂ ಅನುಭವ. ನೇತ್ರರೋಗಾದಿ ಸರ್ವರೋಗಗಳು ನಿವಾರಣೆಗೊಳ್ಳುವವು ಅನ್ನುವುದೂ ಅವರ ಅನುಭವ. ಅವರು ದಿನವೂ ಕೇವಲ ಒಂದು ಲೋಟ ಟೀ ಮಾತ್ರ ಕುಡಿದು ಸಶಕ್ತರಾಗಿ ಬದುಕಿದ್ದೇ ಈ ಅಪಾರಶಕ್ತಿಗೆ ಉತ್ತಮ ಉದಾಹರಣೆ. ಈ ಕ್ರಮದಲ್ಲಿ ಋಷಿಗಳು ಆಹಾರವರ್ಜಿತರಾಗಿ ನೂರಾರು ವರುಷ ತಪಸ್ಸಾಧನೆಯಲ್ಲಿ ನಿರತರಾಗಿರುತ್ತಿದ್ದರು ಅನ್ನುವುದೇ ಅವರ ಅನ್ವೇಷಣೆ. ಇದನ್ನು ಸಾಧಿಸುವುದು ಸಾಧಕರಿಗೆ ಬಿಟ್ಟಿದ್ದು.

೧೬. ಈಶಾವಾಸ್ಯ ದರ್ಶಿಕಾ

[**ಪೀಠಿಕೆ :** ಉಪನಿಷತ್ತುಗಳಲ್ಲಿ ಅತಿ ಪ್ರಾಚೀನವಾದದ್ದು ಈಶಾವಾಸ್ಯೋಪನಿಷತ್ತು. ಈ ಉಪನಿಷತ್ತಿನಲ್ಲಿ ಬರುವ ಈಶನನ್ನೇ ಮುಂದಿನ ಉಪನಿಷತ್ಕಾರರು **'ತತ್'** ಎಂಬಶಬ್ದದಲ್ಲಿ ಅಳವಡಿಸಿದರು. ಇಲ್ಲಿ ಈಶ ಅಂದರೆ ಪರಬ್ರಹ್ಮ. ತತ್ ಅನ್ನುವುದು ರೂಪ-ಗುಣ-ಲಿಂಗಾತೀತವಾದ ಪರಬ್ರಹ್ಮವನ್ನು ಸಂಕೇತಿಸುತ್ತದೆ. ಈ ಪರಬ್ರಹ್ಮ ಸಾಧನೆಯೇ ಜೀವಾತ್ಮದ ಪರಮಗುರಿಯೆನ್ನುವುದು ಉಪನಿಷತ್ಕಾರರೆಲ್ಲರ ಉದ್ಘೋಷಣೆ ಯಾಗಿದೆ. ಮುಂದೆ ಬರುವ ಮಹಾಭಾರತದ ಭೀಷ್ಮಪರ್ವದಲ್ಲಿಯ ಭಗವದ್ಗೀತೆಯು ಈ ಈಶಾವಾಸ್ಯೋಪನಿಷತ್ತಿನ 18 ಶ್ಲೋಕಗಳ ವಿಸ್ತೃತ ರೂಪವೆಂದರೆ ತಪ್ಪಾಗಲಾರದು. ಅದಕ್ಕಾಗಿಯೇ ಭಗವದ್ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳು. ಈಶಾವಾಸ್ಯದ ಹದಿನೆಂಟೂ ಶ್ಲೋಕಗಳನ್ನು ಆಧ್ಯಾತ್ಮಿಕ ವಿವರಣೆಯೊಂದಿಗೆ ಇಲ್ಲಿ ತರಲಾಗಿದೆ.]

ಈಶನಾವಾಸವೆಲ್ಲೆಲ್ಲು ಜಗದಲ್ಲಿ
ಸ್ಥಾವರಜಂಗಮಗಳೆಲ್ಲವೂ ಈಶವಾಗಿಹವು ॥ಪ॥

ಪೂರ್ಣವದು ಪೂರ್ಣವಿದು ಪೂರ್ಣದಿಂದಲೆ ಪೂರ್ಣ
ಪೂರ್ಣದಿಂ ಪೂರ್ಣವನು ತೆಗೆದರೂ ಮತ್ತೆ
ಉಳಿಯುವುದು ಪೂರ್ಣವೇ ಪೂರ್ಣವಾಗಿಹುದು ॥ಅನುಪಲ್ಲವಿ॥

ಈಶನೆಂದರೆ ಇಲ್ಲಿ ಪರಂಬ್ರಹ್ಮಪುರುಷ
ಪುರವೆಂದು ದೇಹವನು ಕರೆಯಲಾಗುವುದು
ಸ್ತ್ರೀನಪುಂಸಕಪುರುಷ ದೇಹಗಳು ಲೋಕದಲ್ಲಿ
ದೇಹರೂಪೀಪುರದಲಿರುವಾತ್ಮನೇ ಪುರುಷನಾಗಿಹನು ॥1॥

ಆ ಪೂರ್ಣಪುರುಷನವ ಪ್ರತಿದೇಹದಲ್ಲಿ ಕೂಡ
ಪೂರ್ಣರೂಪದಲಿದ್ದು ಜೀವಾತ್ಮನೆನಿಸಿ
ಪ್ರತಿಯೊಬ್ಬರಲು ನಾನು ನಾನೆಂಬ ಭಾವದಲ್ಲಿ
ಸಮವಾಗಿ ನೆಲಸಿಹನು ತಾ ನಿತ್ಯವಾಗಿ ॥2॥

ಪರಮಪುರುಷನೆ ನಿಜದಲೆಲ್ಲೆಲ್ಲು ತುಂಬಿರಲು
ಆತನೆಲ್ಲೂ ಚಲಿಪ ಪ್ರಶ್ನೆಯೇ ಇಲ್ಲ
ಆದರೂ ಮನಕಿಂತ ವೇಗದಲ್ಲವನು

ದೇವದೇವತೆಗಳಿಗೂ ದೂರ ಬಹುದೂರ ॥3॥
ಬಹುದೂರ ಪರಮಾತ್ಮ ನೋಡಲಾರನು ಇಲ್ಲಿ
ಎಂದು ಭಾವಿಸುತ ಮನುಜ ತಾ ತಪ್ಪನೆಸಗಿದೊಡೆ
ಆತನಿಲ್ಲೇ ಇರುವನೆಲ್ಲರೊಳಹೊರಗೆ
ದೂರ-ಹತ್ತಿರವೆಂಬ ಯಾವುದೇ ಭಾವವವಗಿಲ್ಲ ॥4॥

ಗಮ್ಮೆಂಬ ಧಾತುಸಾಧಿತ ನಾಮಪದವಾಗಿ
ಜಗತ್ತೆಂಬ ಶಬ್ದವದು ರೂಪುಗೊಂಡಿಹುದು
ಗಮ್ಮೆಂದರೆ ಚಲಿಸುವುದೆಂಬರ್ಥದಂತೆ
ಜಗವಿಹುದು ಸರ್ವದಾ ಚಲನಶೀಲದಲಿ ॥5॥

ಜಗಪೂರ್ತಿ ಗತಿಶೀಲವಾಗಿದ್ದರೂ ಕೂಡ
ಬರಿಗಣ್ಣಿಗೆ ಕಲ್ಲು ಮುಂತಾದ ವಸ್ತು
ಅಚಲವಾಗಿದ್ದಂತೆ ಕಾಣುವುದು ದಿಟದಿ
ವಾಸ್ತವದಿ ಜಂಗಮವೆಲ್ಲ ; ಜಗವೆ ಜಂಗಮವು ॥6॥

ಪ್ರತಿಯೊಂದು ವ್ಯಕ್ತಿಗೂ ಎಷ್ಟೆಷ್ಟು ಎಂದು
ಪರಮಪುರುಷನು ನಿಗದಿಗೊಳಿಸಿಹನು ದಿಟವು
ಅದ ಮೀರಿ ಪರವಸ್ತು ಬೇಕೆಂಬ ಲೋಭ
ಶಿಕ್ಷೆಗೆಡೆಗೊಡುವುದದು ಪರಮೇಶನಿಚ್ಛೆ ॥7॥

ವಿಚಾರಸರಣಿಯನೆಲ್ಲ ತರ್ಕಕ್ಕೆ ತಂದು
ಯೋಗ್ಯವಾದದ್ದನ್ನು ಕಂಡು ಹಿಡಿಯುವ ಮನವ
ನೊಳಗೊಂಡವನು ಮನುವು; ಮನುಜರೆಂದೆನಿಸಿ
ನಡೆವವರು ನಿಜದಿ ಪರಮಪುರುಷನಲ್ಲೈಕ್ಯಗೊಳ್ಳುವರು ॥8॥

ಮನುಜ ತಾ ತನ್ನ ಸಾಮರ್ಥ್ಯಕೊಪ್ಪುವ
ಕರ್ತವ್ಯ-ಕರ್ಮಗಳ ಸತತ ನಡೆಸುತ್ತ
ನೂರಾರು ವರುಷ ಬದುಕಿ ನಿರ್ಲಿಪ್ತನಿರಲು

ಕರ್ಮಫಲಲೇಪರಹಿತನವ ಮೋಕ್ಷಕರ್ಹ ॥9॥
ನಿಯಮವನು ಮೀರಿದಾಶೆಯೆ ಅಸುರತನವಾಗಿಹುದು
ಕುರುಡು ಕತ್ತಲೆಯದುವೆ ಧೃತರಾಷ್ಟ್ರತನವು
ನೇರವಾಗೊಯ್ಯುವುದು ದುಃಖಕೂಪಕೆ ಮುಂದೆ
ಆತ್ಮಘಾತಕತನವು ದಿಟದಲಸುರತ್ವ ॥10॥

ಎಲ್ಲರಲಿ ಪರಮಾತ್ಮತತ್ತ್ವವನು ಗುರುತಿಸುವ
ಎಲ್ಲರೂ ತಾನೆಂದು ತನ್ನನೆಲ್ಲರಲೂ
ಗುರುತಿಸುವ ಮನುಜನಿಗೆ ಯಾರಲ್ಲು ಕೂಡ
ಅಸೂಯೆ–ದ್ವೇಷಗಳಿರಲು ಸಾಧ್ಯವೇ ಮನವೆ? ॥11॥

ಎಲ್ಲೆಲ್ಲಿ ನೋಡಿದರೂ ತಾನೆ ತಾನಾಗಿರಲು
ಮೋಹವೆಲ್ಲಿಯದಾತನಿಗೆ ಶೋಕವೆಲ್ಲಿಯದು?
ಮನದ ಮೇಲೊಡೆಯನವ ಕವಿ ಕ್ರಾಂತದರ್ಶೀ
ನಿಜದಿ ನೋಡಿದರಾತ ಸ್ವಯಂಭುವಾಗಿಹನು ॥12॥

ಅವಿದ್ಯೆಯೆಂದರೆ ಗೀತೆ ಉಪನಿಷತ್ತುಗಳಲ್ಲಿ
ಪರಮಾತ್ಮ ಪ್ರಾಪ್ತಿಗೊದಗಿಬರದಿರುವ ವಿದ್ಯೆ
ವೇದವೇದಾಂಗಗಳೆ ಮೊದಲಾಗಿ ಅಲ್ಲಿ
ಸರ್ವಶಾಸ್ತ್ರಾದಿಗಳೂ ಅವಿದ್ಯೆಯಾಗಿಹವು ॥13॥

ಅವಿದ್ಯಾಸಕ್ತ ತಾ ತಮೋಗಮನಶೀಲನೆಂಬಲ್ಲಿ
ಅವಿದ್ಯೆಯಲ್ಲಿಯೇ ತೊಡಗಿರಬಾರದೆಂಬರ್ಥ
ವೇದಾದಿಸರ್ವಶಾಸ್ತ್ರಕಲಾವಾಣಿಜ್ಯವಿದ್ಯೆಯೆಲ್ಲ
ನಿತ್ಯ ಜೀವನದ ಬದುಕಿಗವಶ್ಯವಾಗಿ ಬೇಕು ॥14॥

ಲೋಕವಿದ್ಯೆಯಿಂ–ಧನ–ಕನಕ–ಕೀರ್ತಿ–ಸರ್ವಸುಖವು
ಲಭ್ಯವೆನಿಸಿದರೂ ಇದು ಪರಮಪದವಿಯನ್ನು
ಗಳಿಸಿಕೊಡಲಸಮರ್ಥವೆನಿಸುವುದರಿಂದಾಗಿ

ಪುನರ್ಜನ್ಮವೆಂಬಂಧತಾಮಿಸ್ರ ಜೀವಕ್ಕೆ ನಿಶ್ಚಿತವು ॥15॥
ಕಲಿತವಿದ್ಯೆಗಳೆಲ್ಲ ಮರಣಕ್ಕೆ ಮುಗಿಯುವವು
ಮಾನವಜನುಮಸಾರ್ಥಕದ ಪರಮಪದವಿಯನ್ನು
ಗಳಿಸಿಕೊಡಲಸಮರ್ಥವೆನಿಸುವುದರಿಂದಾಗಿ
ಕಲಿತ ವಿದ್ಯೆಗಳೆಲ್ಲ ನಿಜದಲವಿದ್ಯೆಯೆನಿಸುವವು ॥16॥

ಆತ್ಮವಿದ್ಯೆಯು ಮಾತ್ರ ನಾಶಗೊಳ್ಳದಲೆ
ಮುಂದುಮುಂದಿನ ಜನ್ಮಕೂ ತಾನೊದಗಿ ಬಂದು
ಜೀವವನು ಮೋಕ್ಷಮಾರ್ಗದಲಿ ಮುಂದೆ ನಡೆಸುತ್ತ
ಪರಮಪದ ನೀಡುವುದು ಅದಕದು ನಿಜದ ವಿದ್ಯೆ ॥17॥

ಆತ್ಮವಿದ್ಯೆಯಲಿ ಮಾತ್ರ ತೊಡಗಿದರೆ ವ್ಯಕ್ತಿ
ಬದುಕುವುದೆ ದುಸ್ತರವು ಪರರ ಹಂಗಿನಲಿ
ಲೋಕವಿದ್ಯೆಯ ಜೊತೆಗೆ ಆತ್ಮವಿದ್ಯೆಯು ಇರಲು
ಇಹದಲ್ಲಿ ಸಾರ್ಥಕ ಬದುಕು ; ಪರದಲ್ಲಿ ಮುಕ್ತಿ ॥18॥

ಕೀರ್ತಿಯನು ಪಡೆದು ಮರಣಿಸಿದ ನಂತರವೂ
ಈ ಲೋಕದಲಿ ಶಾಶ್ವತದಿ ನೆಲಸನುದಿನವೂ
ಶಾಸ್ತ್ರಾದಿವಿದ್ಯೆಗಳು ಅವಿದ್ಯೆಯಾದರೂ ಕೂಡ
ಅವಶ್ಯದಲಿ ಬೇಕು ಪರಂತು ವಿದ್ಯೆಯಿಂ ಮಾತ್ರ ಮೋಕ್ಷ ॥19॥

ಲೌಕಿಕಾನಂದಸಂಭ್ರಮವಿಭ್ರಮಾದಿಗಳೇ
ಹಿರಣ್ಮಯ ಪಾತ್ರೆಗಳವು ಸತ್ಯದ ಸ್ವರೂಪವನ್ನು
ಮರೆಮಾಡಿಬಿಡುವವವು ನಿಜದಾತ್ಮದರ್ಶನಕೆ
ಸತತ ಮೊರೆಯಿದ್ದಿರಲಿ ಪರಮಸೂರ್ಯನಲಿ ॥20॥

ಸತ್ಯದ ನಿಜ ಸ್ವರೂಪವದು ಬಯಲಾದ ಮೇಲೆ
ಪಂಚಭೂತಗಳ ಒಕ್ಕೂಟವೆನಿಸಿದೀ ದೇಹ
ನಶ್ವರವು ಮತ್ತದರ ಕಾರ್ಯಫಲ ಲೌಕಿಕಾನಂದ

ಎಲ್ಲವೂ ನಿಸ್ಸಾರವೆನ್ನುವುದು ಮನನ ಮನುಜಮನಕೆ ॥21॥
ಮಹಾಸೂರ್ಯನವ ಸರ್ವನಿಯಂತಾ ಯಮನವನೆ ಪರಮಾತ್ಮ
ಪ್ರಜೆಗಳಾಗಿರುವ ಜೀವಿಗಳೆಲ್ಲವಾ ಸೂರ್ಯರಶ್ಮಿಗಳು
ಅದರಿಂದಲಾತ ಪ್ರಜಾಪತಿಯೆಂದು ವಿಖ್ಯಾತನಾದ
ಸೂರ್ಯನವ ತನ್ನೊಳಗೆ ಸೆಳೆದುಕೊಳ್ಳಲಿ ರಶ್ಮಿಗಳ ಬೇಗ ॥22॥

ಪರಮಾತ್ಮನಲಿ ಎಲ್ಲ ಲೀನಗೊಳ್ಳಲಿ ಎಂಬ
ಪ್ರಾರ್ಥನೆಯು ಸುವ್ಯಕ್ತವೀಶೋಪನಿಷತ್ತಿನಲ್ಲಿ
ಈ ಪ್ರಾರ್ಥನೆಯು ಬಹುಬೇಗ ನಿಜಗೊಳ್ಳಲೆಂಬ
ಹಾರೈಕೆಯತ್ನಗಳಿರಲಿ ಪ್ರತಿ ಮನುಜನಲ್ಲಿ ॥23॥

ಪರಮಪದಪ್ರಾಪ್ತಿಯೇ ಪರಮಾತ್ಮಲೀನತೆಯು
ಮಹಾಸೂರ್ಯನವನೀಶ ಪರಮಪುರುಷ
ಆತನೇ ಪರಮಗುರುವವನ ಪಾದಕೆ ನಮನ
ನಿಜಬೋಧೆಯವನಿಂದ ಪರಮ ಸುಖವು ॥24॥

ಈಶನಾವಾಸವೆಲ್ಲೆಲ್ಲು ಜಗದಲ್ಲಿ
ಸ್ಥಾವರಜಂಗಮಗಳೆಲ್ಲವೂ ಈಶವಾಗಿಹವು ॥ಪ॥

ಪೂರ್ಣವದು ಪೂರ್ಣವಿದು ಪೂರ್ಣದಿಂದಲೆ ಪೂರ್ಣ
ಪೂರ್ಣದಿಂ ಪೂರ್ಣವನು ತೆಗೆದರೂ ಮತ್ತೆ
ಉಳಿಯುವುದು ಪೂರ್ಣವೇ ಪೂರ್ಣವಾಗಿಹುದು ॥ಅನುಪಲ್ಲವಿ॥

ಈಶಾವಾಸ್ಯದರ್ಶಿಕಾ

ಈಶ ಅಂದರೆ ಒಡೆಯ. ಅಸಂಖ್ಯಾತ ಸೌರವ್ಯೂಹಗಳನ್ನು ಒಳಗೊಂಡ ಈ ಬ್ರಹ್ಮಾಂಡಕ್ಕೆ ಒಡೆಯನೇ ಈಶ; ಬ್ರಹ್ಮಾಂಡದಲ್ಲಿಯ ಪ್ರತಿಯೊಂದರಲ್ಲೂ ಅಸ್ತಿತ್ವವುಳ್ಳವನು ಈಶ ; ಅಣು – ಅಣುವೂ ಆಗಿ ಅನುಭವಗಮ್ಯವಾದ ಎಲ್ಲವೂ ತಾನೇ ತಾನಾದವನು ಈಶ. ಆದುದರಿಂದ ಆ ಈಶನನ್ನು ಪರಿಚಯಿಸುವಾಗ ತನ್ನ ಯೋಗಸಮಾಧಿಯಲ್ಲಿ ಆ ಈಶನ ದರ್ಶನದಿಂದ ಧನ್ಯನಾದ ಋಷಿಯು ಜಗತ್ತಿಗೆ ಮೊದಲು ತಿಳಿಸುವುದು "ಈಶಾವಾಸ್ಯಮ್ ಇದಂ ಸರ್ವಮ್" ಈ ಜಗತ್ತೆಲ್ಲ ಆ ಈಶನ ಆವಾಸಸ್ಥಾನವೇ ಆಗಿದೆ

ಅನ್ನುವುದನ್ನು. ಉಪನಿಷತ್ತುಗಳಲ್ಲಿಯೇ ಮೊದಲಿನದು ಎಂಬ ಖ್ಯಾತಿಯುಳ್ಳ ಈಶಾವಾಸ್ಯದ ಈ ಉಕ್ತಿಯ ಭಾವವನ್ನು ಮುಂದಿನ ಉಪನಿಷತ್ತುಗಳಲ್ಲಿಯ 'ಸರ್ವಂ ಖಲ್ವಿದಂ ಬ್ರಹ್ಮ' ಅನ್ನುವಲ್ಲಿ ಕಾಣಬಹುದು. ಸ್ಥಾವರ – ಜಂಗಮಗಳೆಲ್ಲವೂ, ಅರ್ಥಾತ್ ಚಲನಾರಹಿತ ಹಾಗೂ ಚಲಿಪಗಳೆಲ್ಲವೂ ಈಶನೇ ಸರಿ.

'ಜಗತ್ತು' ಅನ್ನುವ ಶಬ್ದವು ಬಂದದ್ದು 'ಗಮ್' ಧಾತುವಿನಿಂದ. ಹೋಗು ಅಥವಾ ಚಲಿಸು ಅನ್ನುವುದು ಇದರ ಅರ್ಥ. ನಿರಂತರವಾಗಿ ಚಲಿಸುತ್ತಿರುವುದು, ಗಮನಶೀಲವಾಗಿರುವುದು ಜಗತ್ತು.

ದೇಹವನ್ನು ಪುರವೆಂದು ಭಾವಿಸುವುದು ಪ್ರಾಚೀನಕಾಲದಿಂದಲೂ ಈ ಸನಾತನದೇಶದಲ್ಲಿಯ ಒಂದು ಆಧ್ಯಾತ್ಮಿಕ ಪದ್ಧತಿಯಾಗಿದೆ. ಕೇವಲ ಸ್ಥೂಲವಾದ ದೇಹವನ್ನು ಮಾತ್ರ ಪುರವೆಂದು ಭಾವಿಸುವುದು ಸೂಕ್ತವಲ್ಲ ; ಪ್ರತಿ ಅಣುವೂ ಸಹ ಪುರವೇ ಸರಿ. ವಾಸಕ್ಕೆ ಯೋಗ್ಯವಾದದ್ದು ಹಾಗೂ ವಾಸದಿಂದ ಪೂರ್ಣಗೊಳ್ಳುವುದು ಪುರ. ಪ್ರತ್ಯಣುವಿನಲ್ಲಿಯೂ ಪರಮಾತ್ಮನು, ಪರಬ್ರಹ್ಮನು, ಅರ್ಥಾತ್ ಈಶಾವಾಸ್ಯದ ಈಶನು ನೆಲೆಸಿರುವುದರಿಂದಾಗಿ ಆತನು ಪುರುಷನೆಂದೆನಿಸಿದನು ಹಾಗೂ ಅಣು– ಅಣುವೂ ಆತನ ಪುರವೆಂದೆನಿಸುವುದು. ಅಣುಮಾತ್ರದಲ್ಲಿ ವ್ಯಾಪಿಸಿದಾಗಿನ ಪುರುಷನು ಅಪೂರ್ಣಪುರುಷನೆಂದು ಭಾವಿಸಲಾಗದು. ಏಕೆಂದರೆ ಆಕಾರರಹಿತನಾದ ಪುರುಷನು ಯಾವುದೇ ಪ್ರಮಾಣಕ್ಕೆ ನಿಲುಕದವನು; ಪ್ರಮಾಣಾತೀತನು ; ಆದುದರಿಂದ ಪ್ರತ್ಯಣುವಿನಲ್ಲಿಯ ಪುರುಷನೂ ಪೂರ್ಣನೇ ಸರಿ. ಪ್ರತಿಯೊಂದು ಜೀವಿಯಲ್ಲಿಯೂ 'ಅಹಂ' – 'ನಾನು' ಅನ್ನುವ ಭಾವದಲ್ಲಿ ಆತ ನೆಲೆಸಿರುವನು. ಹಾಗೆ ನೆಲಸಿದವನು ಪರಮಾತ್ಮನ ಅಂಶ ಮಾತ್ರ ಎಂದು ಭಾವಿಸುವುದೂ ಇದೆ. ಆ ಪರಮಾತ್ಮನು ಅಂಶಮಾತ್ರದಲ್ಲಿ ನೆಲೆಸಿದ್ದರೂ ಪೂರ್ಣನಾಗಿಯೇ ಇರುತ್ತಾನೆ. ಪರಿಪೂರ್ಣನಾಗಿಯೇ ಇರುತ್ತಾನೆ ಅನ್ನುವುದನ್ನು "ಪೂರ್ಣಮ್ ಅದಃ, ಪೂರ್ಣ ಇದಮ್ ; ಪೂರ್ಣಾತ್ ಪೂರ್ಣಮ್ ಉದಚ್ಯತೇ ; ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮ್ ಏವ ಅವಶಿಷ್ಯತೇ" – 'ಅದು ಪೂರ್ಣ ಇದು ಪೂರ್ಣ ; ಪೂರ್ಣದಿಂದೆಲ್ಲ ಪೂರ್ಣವೇ ಮತ್ತೆ ; ಪೂರ್ಣದ ಪೂರ್ಣವನು ಬರಿದುಗೊಳಿಸಲುದ್ಯಮಿಸಿದರೂ ಪೂರ್ಣವೇ ಪೂರ್ಣವಾಗಿ ನಿಲ್ಲುವುದು' ಅನ್ನುವ ಮಾತನ್ನು ಇದೇ ಉಪನಿಷತ್ತಿನ ಕೊನೆಯಲ್ಲಿ ಆ ಮಹರ್ಷಿಯು, ಬ್ರಹ್ಮರ್ಷಿಯು ಉದ್ಘೋಷಿಸುತ್ತಾನೆ.

ಈಶನು, ಪರಮಾತ್ಮನು ಅಚಲನೆಂದೂ ಆತನು ಎಲ್ಲೆಡೆಗೂ ಹೇಗೆ ತಾನೇ ಗಮಿಸುವನು ಎಂದೂ ಮುಂತಾಗಿ ತರ್ಕಿಸುತ್ತ ನ್ಯಾಯಪಥದಿಂದ ಸರಿದು ಏನೇನೋ ಮಾಡುತ್ತ ಮನಸ್ಸಿನಲ್ಲಿ ಸಮಾಧಾನ ಪಡುವುದು ಶುದ್ಧ ಮೂರ್ಖತನವೆನ್ನುವುದನ್ನು ಈ ಉಪನಿಷತ್ತು ಸ್ಪಷ್ಟಪಡಿಸುತ್ತದೆ. ದೂರ–ಹತ್ತಿರವೆಂಬ ಭಾವಾತೀತನಾತನಿರುವುದರಿಂದ ಆತನಿಗೆ ವೇದ್ಯವಾಗದಿರುವುದು ಯಾವುದೂ ಇಲ್ಲ. ಅವರವರ ಕರ್ಮಗಳನ್ನು ಅಳೆದು

ತೂಗಿ ಆ ಆ ಕರ್ಮಫಲಗಳನ್ನು ಚಾಚೂ ತಪ್ಪದೆ ನಿರ್ದೇಶಿಸುವ ಆತ ಎಲ್ಲರಲ್ಲಿಯೂ ಯಮನಾಗಿ ನಿಂತಿರುವನು. ಯಮನೆನ್ನುವವನು ಬೇರೆ ಎಲ್ಲೋ ಇರುವವನು ಎಂದು ಭಾವಿಸುವುದು ತಪ್ಪು. ಅಂದರೆ ಸರ್ವನಿಯಂತ್ರಕನಾಗಿ ಎಲ್ಲರಲ್ಲೂ ಆತ ನೆಲೆಸಿರುವನು.

ಆ ಪುರುಷನೇ ಯಮನಾಗಿ ಎಲ್ಲರಲ್ಲೂ ನೆಲಸಿ ಕರ್ಮಫಲವಾಗಿ ಏನನ್ನು ಕೊಟ್ಟಿರುವನೋ ಅದರಲ್ಲಿ ತೃಪ್ತಿಪಟ್ಟು ನಿಷ್ಕಾಮನೆಯಿಂದ ಕರ್ತವ್ಯಗಳನ್ನು ನೆರವೇರಿಸುತ್ತಿದ್ದಲ್ಲಿ ಸಂಪ್ರೀತನಾಗಿ ತನ್ನಲ್ಲಿ ಆ ಆತ್ಮವನ್ನು, ಅದಕ್ಕೆ ಗಂಟುಬಿದ್ದ ಜೀವಭಾವವನ್ನು ಹೋಗಲಾಡಿಸಿ, ಐಕ್ಯಗೊಳಿಸಿಕೊಳ್ಳುವ ಉದಾರಿ ಆ ಪರಮಾತ್ಮ ಈಶ. ಆದರೆ ಲೋಭದಿಂದ 'ತೇನ ತ್ಯಕ್ತೇನ ಭುಂಜೀಥಾಃ' – ಅವನು ಕೊಟ್ಟಿದ್ದರಲ್ಲಿ ತೃಪ್ತಿಪಡಬೇಕು ಅನ್ನುವುದನ್ನು ಬಿಟ್ಟು 'ಕಸ್ಯ ಸ್ವಿದ್ಧನಮ್' ಬೇರೆಯವರಿಗೆ ಆತ ಕೊಟ್ಟದ್ದನ್ನೂ –ಧನಾದಿಗಳನ್ನು ಯಾವುದೋ ಕುಕರ್ಮದಿಂದ ತಾನು ಪಡೆಯಲು ಹೊರಟರೆ ಆ ವ್ಯಕ್ತಿಗೆ, ಅರ್ಥಾತ್ ಆ ಜೀವಾತ್ಮಕ್ಕೆ ಶಿಕ್ಷೆ ಕಟ್ಟಿಟ್ಟ ಬುತ್ತಿ ; ಆಗ ಆ ಜೀವಾತ್ಮವು ಮಹಾತ್ಮನ ಪದವಿಗೇರಿದರೂ ರೋಗಾದಿಗಳು ತಪ್ಪುವುದಿಲ್ಲ. ರಾಮಕೃಷ್ಣಪರಮಹಂಸರು – ರಮಣಮಹರ್ಷಿಗಳೇ ಮುಂತಾದವರು ಆದರ್ಶ ಮಹಾತ್ಮರಾದರೂ ಅವರ ಪೂರ್ವಾರ್ಜಿತ ಕರ್ಮಫಲವಾಗಿ ಬಂದ ರೋಗಾದಿಗಳಿಂದ ಅವರು ಬಳಲಿದ್ದು ಇದಕ್ಕೆ ನಿದರ್ಶನ.

ಯೋಗ್ಯಾಯೋಗ್ಯತೆಗಳನ್ನು ಮನನದಿಂದ, ವಿಮರ್ಶೆಯಿಂದ ಅರಿಯಬಲ್ಲ ಮನಶ್ಶಕ್ತಿಯುಳ್ಳವನನ್ನು ಮನು ಎಂದು ಕರೆಯಲಾಯಿತು ; ಮನವೂ ಇದ್ದು ಅದನ್ನು ಉಪಯೋಗಿಸುವ ಸಾಮರ್ಥ್ಯವೂ ವಿವೇಚನಾಶೀಲತೆಯೂ ಇರುವವನನ್ನು ಮನು ಎನ್ನಲಾಯಿತು. ಅಂತಹ ಮನುವಿನ ಕುಲಜರು ಮನುಜರೆನಿಸಿದರು. ಮನುವೆಂದರೆ ಯಾವುದೋ ರಾಜ ಎಂದು ಭಾವಿಸಲಾಗದು ; ಪ್ರತಿಯೊಬ್ಬ ಮಾನವನೂ, ಮಾನವಳೂ ಮನುವೇ, ಮನುಜನೇ/ಳೇ ಸರಿ. ವಿವೇಚನಾಶಕ್ತಿಯನ್ನು ಸತ್ಪಥದಲ್ಲಿ ನಡೆಸುತ್ತ ಈಶನ ಅನುಗ್ರಹಕ್ಕೆ ಪಾತ್ರರಾಗಬೇಕೆನ್ನುವುದು ಈ ಉಪನಿಷತ್ತಿನ ಋಷಿಯ ಸದಪೇಕ್ಷೆ. ತನ್ನ ಅಂತರಂಗದ ಅನಿಸುವಿಕೆಯನ್ನು ನಿರ್ಲಕ್ಷಿಸಿ ಪರರ ಸೊತ್ತನ್ನು ಬಯಸುವಿಕೆಯೇ ಅಸುರತನ ; ಅಸುರರೆಂದರೆ ಯಾರೋ ರಾಕ್ಷಸರು ಅನ್ನುವುದು ಖಂಡಿತವಾಗಿ ಅಲ್ಲ. ಮಹಾಭಾರತದಲ್ಲಿ ಬರುವ ಧೃತರಾಷ್ಟ್ರ ಹುಟ್ಟುಕುರುಡ ; ಆತನು ಕೇವಲ ಒಂದು ಪಾತ್ರ ಅಥವಾ ಒಬ್ಬ ಐತಿಹಾಸಿಕವ್ಯಕ್ತಿ ಎಂದು ಅವನನ್ನು ನಿರ್ಲಕ್ಷಿಸುವುದು ತಪ್ಪು. ಪರಸೊತ್ತನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿಯೂ ಆತ್ಮದರ್ಶನ–ವಿಮರ್ಶಗಳ ದೃಷ್ಟಿಹೀನನಾದ ಕುರುಡ ಹಾಗೂ ಧೃತರಾಷ್ಟ್ರ.

ಇವನ್ನೆಲ್ಲ ಮನನ ಮಾಡಿಕೊಳ್ಳಲು ಅನುವಾಗುವಂತೆ ಈಶಾವಾಸ್ಯೋಪನಿಷತ್ತು ಅವಿದ್ಯೆ–ವಿದ್ಯೆಗಳ ಪ್ರಸ್ತಾಪ ಮಾಡುತ್ತದೆ. ಲೌಕಿಕವಾದ ಜಾಣತನವೆಲ್ಲವೂ ಇಲ್ಲಿ ಹೇಳಲಾದ ಅವಿದ್ಯಾಫಲ ; ಅಜ್ಞಾನದ ಫಲ; ಕುರುಡುತನದ ಫಲ ; ಇಷ್ಟೇ ಅಲ್ಲ, ಲೌಕಿಕವಾದ ಸಮಸ್ತವಿದ್ಯೆಗಳನ್ನೂ ಉಪನಿಷತ್ತುಗಳು ಅವಿದ್ಯೆಯ ಪರಿಧಿಗೆ ತಂದು ಕೂರಿಸುತ್ತವೆ.

ಯಾವ ವಿದ್ಯೆಯು ಸ್ವಾರ್ಥಕ್ಕೆ, ಲೌಕಿಕವಾದ ಸ್ವಾರ್ಥಕ್ಕೆ ಉಪಯುಕ್ತವೋ ಅದು ಅವಿದ್ಯೆಯೆಂಬ ತೀರ್ಮಾನ ಉಪನಿಷತ್ತುಗಳದ್ದು. ಆದರೆ ಲೌಕಿಕದಲ್ಲಿ ನಿತ್ಯ ಬದುಕಲು ವೇದ–ವಾಣಿಜ್ಯ–ಕೃಷಿಯೇ ಮುಂತಾದ ಆತ್ಮರಕ್ಷಕಾದಿ ವಿದ್ಯೆಗಳೆಲ್ಲ ಅನಿವಾರ್ಯ. ಅಷ್ಟೇ ಅಲ್ಲ ; ಈ ನಿರಂತರವಾಗಿ ಚಲನಶೀಲವಾದ ಜಗತ್ತಿನಲ್ಲಿ, ಇಲ್ಲಿಯ ಇತಿಹಾಸದಲ್ಲಿ ಚಿರಸ್ಥಾಯಿಯಾಗಿರಬೇಕಾದರೆ ಲೌಕಿಕ ಎಲ್ಲ ವಿದ್ಯೆಗಳೂ, ಅಂದರೆ ಅವಿದ್ಯೆಯು ಅನಿವಾರ್ಯ. 'ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತಮಶ್ನುತೇ' – ಎಂದು ಹೇಳುತ್ತ ಅವಿದ್ಯೆಯಿಂದ ಮೃತ್ಯುವನ್ನು ಗೆದ್ದು ವಿದ್ಯೆಯಿಂದ ಅಮೃತವನ್ನು ಪಡೆಯಬೇಕೆನ್ನುತ್ತದೆ ಈ ಉಪನಿಷತ್ತು. ಮೃತ್ಯುವನ್ನು ಗೆಲ್ಲುವುದೆಂದರೆ ದೇಹಾವಸಾನದ ನಂತರವೂ ಬದುಕಿರುವುದು. ಇದಕ್ಕೆ ಅವಶ್ಯಕವಾದದ್ದು ಕೀರ್ತಿದಾಯಕ ಕರ್ಮ. ಯಾವುದೇ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದಾಗ ಬರುವ ಕೀರ್ತಿಯು ಮರಣದ ನಂತರವೂ ಅಂತಹ ಕೀರ್ತಿದಾಯಕ ಕಾರ್ಯವನ್ನು, ಕರ್ಮವನ್ನು ನಡೆಸಿದ ವ್ಯಕ್ತಿಯನ್ನು ಈ ಪ್ರಪಂಚವು ಸದಾ ನೆನಪಿಸಿಕೊಳ್ಳುತ್ತದೆ. ಅಂತಹ ಕರ್ಮವನ್ನು ಮಾಡಿದಾಗ ದೇಹವು ಅಳಿದರೂ ಆ ದೇಹಕ್ಕೆ ಇಟ್ಟಿರುವ ಹೆಸರು ಶಾಶ್ವತವಾಗುವುದು. ಇಂತಹ ಸಾಧನೆಗಳಿಗಾಗಿ ಲೌಕಿಕವಾದ ವಿದ್ಯೆಯನ್ನು, ಅದು ಅವಿದ್ಯೆಯೇ ಆದರೂ ಸಾಕಷ್ಟು ಸಂಪಾದಿಸಬೇಕೆನ್ನುತ್ತದೆ ಈ ಉಪನಿಷತ್ತು. ಲೌಕಿಕ ವಿದ್ಯೆಯೆಲ್ಲ ಅವಿದ್ಯೆ. ಏಕೆಂದರೆ ಆತ್ಮವು, ಜೀವಾತ್ಮವು ಈ ದೇಹವನ್ನು ತೊರೆದು ಮುಂದಿನ ಜನ್ಮಕ್ಕೆ ಹೋದ ಮೇಲೆ, ಯಾವುದೇ ವಿದ್ಯೆಯನ್ನು ಪೂರ್ವಜನ್ಮದಲ್ಲಿ ಪೂರ್ಣವಾಗಿ ಕಲಿತಿದ್ದರೂ, ಆ ವಿದ್ಯೆಯಲ್ಲಿ ಪರಿಪೂರ್ಣನಾಗಿದ್ದರೂ ಅದು ಆ ಮುಂದಿನ ಜನ್ಮದಲ್ಲಿ ಏನೂ ನೆನಪಿಲ್ಲದಂತಾಗಿ, ಮರೆಯಾಗಿ ಹೋಗುವುದು; ಮುಂದಿನ ಜನ್ಮದಲ್ಲಿ ಮತ್ತೆ ಯಾವುದೋ ವಿದ್ಯೆ ; ಯಾವುದೋ ವೃತ್ತಿ ; ಎಲ್ಲೋ ಹುಟ್ಟು; ಹಿಂದಿನದಾವುದೂ ಒದಗಿ ಬರುವುದಿಲ್ಲ. ಕೀರ್ತಿಯೂ ಕೂಡ ಪೂರ್ವಜನ್ಮದ ದೇಹದ ಆ ಹೆಸರಿನ ಜೊತೆಗೇ ಇದ್ದುಬಿಡುವುದಾದ್ದರಿಂದ ಅದೂ ಪ್ರಯೋಜನಕ್ಕೆ ಬರುವುದಿಲ್ಲ. ಕೆಲವರಿಗೆ ಇಳಿವಯಸ್ಸಿನಲ್ಲಿ ಮರೆವು ಶುರುವಾಗಿ ಕಲಿತ ವಿದ್ಯೆಯು ಅದೇ ಜನ್ಮದಲ್ಲಿ ಮರೆಯಾಗುವುದೂ ಉಂಟು. ಹೀಗಾಗಿ ಯಾವ ವಿದ್ಯೆ ಜನ್ಮ–ಜನ್ಮಾಂತರಕ್ಕೆ ಬರುವುದಿಲ್ಲವೋ ಆ ವಿದ್ಯೆಯು ಅವಿದ್ಯೆಯೆನಿಸುವುದು.

ಈ ಉಪನಿಷತ್ತು ಹೇಳುವ 'ವಿದ್ಯಯಾ ಅಮೃತಮ್ ಅಶ್ನುತೇ' ವಿದ್ಯೆಯಿಂದ ಅಮೃತತ್ವವನ್ನು ಆತ್ಮವು, ಜೀವಾತ್ಮವು ಪಡೆಯುತ್ತದೆ ಅನ್ನುವುದರಲ್ಲಿ ಬರುವ ವಿದ್ಯೆಯು ಆತ್ಮವಿದ್ಯೆಯನ್ನು, ಅಧ್ಯಾತ್ಮವಿದ್ಯೆಯನ್ನು ಅರ್ಥೈಸುತ್ತದೆ. ಆತ್ಮವಿದ್ಯೆಯು ಅವಿನಾಶಿ. ಇದು ಲೌಕಿಕಕೀರ್ತಿಗೆ ಸಂಬಂಧಿಸಿದ್ದಲ್ಲ. ಆತ್ಮವಿದ್ಯೆಯು ವ್ಯಕ್ತಿಯ ಪ್ರಸ್ತುತದ ಜನ್ಮದಲ್ಲಿ ಜೀವಿತಕಾಲದಲ್ಲಿ ಪರಮಪದವಿಯನ್ನು, ಮೋಕ್ಷವನ್ನು ದೊರಕಿಸಿ ಕೊಡದೇ ಇದ್ದರೂ ಅದು ಜೀವಾತ್ಮದ ಜೊತೆಗೇ ಮುಂದಿನ ಜನ್ಮದಲ್ಲಿಯೂ ಒದಗಿ ಬಂದು ಜೀವಾತ್ಮನನ್ನು ಮೋಕ್ಷಕ್ಕೆ

ಕೊಂಡೊಯ್ಯುವುದು. ಉದಾಹರಣೆಗೆ ಆದಿಶಂಕರಾಚಾರ್ಯರ ಹಾಗೂ ಇಂತಹ ಮಹಾತ್ಮರ ಎಳವೆಯಲ್ಲಿಯೇ ಅವರಲ್ಲಿ ಲೌಕಿಕ ಜಗತ್ತಿನ ಬಗ್ಗೆ ವೈರಾಗ್ಯವುಂಟಾದುದು ಹಿಂದಿನ ಜನ್ಮಗಳಲ್ಲಿ ಅವರು ನಡೆಸಿದ ಆತ್ಮವಿದ್ಯೆಯ ಪರಿಣಾಮವೇ ಆಗಿರುತ್ತದೆ.

ಆದ್ದರಿಂದ ಈ ಉಪನಿಷತ್ತಿನಲ್ಲಿ ಗುರುತಿಸಿದ ವಿದ್ಯೆ, ಅರ್ಥಾತ್ ಆತ್ಮವಿದ್ಯೆ ಅಮೃತತ್ವವನ್ನು, ಅಂದರೆ ಕೇವಲ ಅಮೃತವೇ ಆಗಿರುವ ಪರಮಾತ್ಮಪದವನ್ನು ಅವಶ್ಯವಾಗಿ ಪಡೆಯುವಂತೆ ಮಾಡುವುದು. ಇದಕ್ಕಾಗಿ ಈ ಉಪನಿಷತ್ತು ಅವಿದ್ಯೆಯೆನಿಸಿದ ಲೌಕಿಕ ವಿದ್ಯೆಯನ್ನು ಅಭ್ಯಸಿಸಿ ಅಷ್ಟಕ್ಕೇ ನಿಲ್ಲದೆ ಅಲೌಕಿಕವಾದ ಆತ್ಮವಿದ್ಯೆಯನ್ನು ಸಾಧಿಸಬೇಕೆನ್ನುತ್ತದೆ; ಅವಿದ್ಯೆ–ವಿದ್ಯೆಗಳ ಸಮತೋಲನಕ್ಕೆ ಒತ್ತು ಕೊಡುತ್ತದೆ.

ಹಿರಣ್ಮಯೇನ ಪಾತ್ರೇಣ ಸತ್ಯಸ್ಯ ಆಪಿಹಿತಂ ಮುಖಮ್..... ಎಂದು ಮುಂತಾಗಿ ಹೇಳುತ್ತ ಲೌಕಿಕ – ಸುಖ–ಸಂತೋಷ–ಕೀರ್ತಿ ಮುಂತಾದ ಬಂಗಾರದ ಅರ್ಥಾತ್ ಬಹುಮೌಲ್ಯದ ಆಕರ್ಷತೆಯನ್ನು ಹೊಂದಿದವರಲ್ಲಿ ಸತ್ಯದ, ಅರ್ಥಾತ್ ಪರಮಾತ್ಮಭಾವದ ಮರೆಯುವಿಕೆಯನ್ನು ಗುರುತಿಸಿ ಆ ಮರೆಯುವಿಕೆಯೆಂಬ ಪರದೆಯನ್ನು ಸರಿಸಿ ಆತ್ಮಕ್ಕೆ, ಜೀವಾತ್ಮಕ್ಕೆ ದಾರಿತೋರಿಸು ಎಂದು 'ತತ್ ತ್ವಮ್ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ' ಎಂದು ಇಲ್ಲಿ ಪ್ರಾರ್ಥಿಸಿಕೊಳ್ಳಲಾಗಿದೆ. ಇಲ್ಲಿ ಬರುವ 'ಪೂಷನ್' – ಸೂರ್ಯ ನಮ್ಮ ಚರ್ಮಚಕ್ಷುವಿಗೆ ಗೋಚರಿಸುವ ಈ ಸಂಸಾರದ ಸೂರ್ಯನಾಗಿರದೆ ಇಂತಹ ಕೋಟ್ಯನುಕೋಟಿ ಸೂರ್ಯರಿಗೆ ಕಾರಣೀಪುರುಷನಾದ ಆ ಮಹಾಸೂರ್ಯ. ಜೀವಾತ್ಮಗಳೆಂಬ ಕಿರಣಗಳನ್ನೆಲ್ಲ ಆತನು ತನ್ನಲ್ಲಿ ಸೆಳೆದುಕೊಂಡು, ಮತ್ತೆ ಏಕೀಕರಿಸಿಕೊಂಡು ಜೀವಾತ್ಮಗಳೆಲ್ಲವನ್ನೂ ಧನ್ಯಗೊಳಿಸಬೇಕೆಂದು ಇಲ್ಲಿ ಮೊರೆಯಿಡಲಾಗುತ್ತದೆ.

ಪರಮಾತ್ಮನು 'ಪೂಷನ್' ಎಂಬ, ಪರಮಪುರುಷನೆಂಬ ಭಾವದಲ್ಲಿ, ಮಹಾಸೂರ್ಯನೆಂಬ ಭಾವದಲ್ಲಿ ಜೀವಾತ್ಮಗಳೆಂಬ ತನ್ನದೇ ಆದ ಕಿರಣಗಳನ್ನು ತನ್ನಲ್ಲಿ ಸೆಳೆದುಕೊಳ್ಳಬೇಕೆನ್ನುವ, ಆಕರ್ಷಿಸಿಕೊಳ್ಳಬೇಕೆನ್ನುವ ತತ್ತ್ವವನ್ನು ಮಹಾಭಾರತ – ಭಾಗವತದ ಋಷಿಗಳು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿರುವುದು ತುಂಬ ಗಮನಾರ್ಹ. ಈಶಾವಾಸ್ಯದ 18 ಮಂತ್ರಗಳನ್ನು 18ಪರ್ವಗಳನ್ನಾಗಿ ತಂದು ಮಹಾಭಾರತವನ್ನು ಪ್ರಸ್ತುತಪಡಿಸಲಾಗಿದೆ ಹಾಗೂ ಹದಿನೆಂಟು ಮಂತ್ರಗಳ ಭಾವವನ್ನು ಭಗವದ್ಗೀತೆಯ 18 ಅಧ್ಯಾಯಗಳಲ್ಲಿ ಸುದೀರ್ಘವಾಗಿ ವಿವರಿಸಲಾಗಿದೆ. ಕಿರಣಗಳ ರೂಪದ ಜೀವಾತ್ಮಗಳನ್ನು ಆಕರ್ಷಿಸುವ ಪರಮಾತ್ಮನನ್ನು 'ಆಕೃಷ್' ಧಾತುವು ತಿಳಿಯಪಡಿಸುವ ಅರ್ಥವುಳ್ಳ ಕೃಷ್ಣನನ್ನಾಗಿ ರೂಪಿಸಲಾಗಿದೆ. ಜೀವಾತ್ಮಗಳನ್ನು ತನ್ನೆಡೆಗೆ ಆಕರ್ಷಿಸುವ ಅರ್ಥದಲ್ಲಿಯೇ ಬರುವವನು ಶ್ರೀಕೃಷ್ಣ ; ಕೃಷ್ಣಂ ವಂದೇ ಜಗದ್ಗುರುಮ್' ಎಂದು ಆತನಿಗೆ ವಂದಿಸಿದ್ದು ಅತ್ಯಂತ ಔಚಿತ್ಯಪೂರ್ಣವಾದುದು.

* * * * *

೧೭. ಭಾರತೀಯ ಹಬ್ಬಗಳಲ್ಲಿ ಅಧ್ಯಾತ್ಮ ದರ್ಶಿಕಾ

[**ಪೀಠಿಕೆ :** ಜಗತ್ತಿನ ಎಲ್ಲ ದೇಶಗಳ ಹಾಗೂ ಧರ್ಮಗಳ ಹಬ್ಬಗಳಿಗಿಂತ ಸನಾತನವಾಗಿ ಬಂದಿರುವ ಭಾರತೀಯ ಹಬ್ಬಗಳು ಬಹಳ ವಿಶಿಷ್ಟವಾಗಿವೆ. ಪರಮಾತ್ಮನ ತೇಜೋರಾಶಿಯಿಂದ ಸಿಡಿದು ಬಂದ ಜೀವಾತ್ಮಗಳ ಪ್ರಾದುರ್ಭಾವದಿಂದ ಮೊದಲುಗೊಂಡು ಮತ್ತೆ ಪರಮಾತ್ಮನಲ್ಲಿ ಅವೆಲ್ಲ ಸೇರುವ ಮೋಕ್ಷದವರೆಗಿನ ವಿವಿಧ ಹಂತಗಳನ್ನು ನಮ್ಮ ಸನಾತನ ಭಾರತೀಯ ಹಬ್ಬಗಳು ಅರ್ಥೈಸುತ್ತವೆ. ಈ ಅಧ್ಯಾತ್ಮಿಕ ತತ್ತ್ವವನ್ನು ಈ ಪದ್ಯವು ಪ್ರಸ್ತುತಪಡಿಸುತ್ತದೆ. ಈ ಪದ್ಯದಲ್ಲಿ ಮೂಡಿಬಂದ ಈ ವಿಮರ್ಶಾತ್ಮಕ ವಿಚಾರವನ್ನು ಮೊದಲು ಈ ಲೇಖಕನು ಲೇಖನರೂಪದಲ್ಲಿ ಬರೆದು "ಅಂತರಂಗ ದರ್ಶನ"ವೆಂಬ ತನ್ನ ಕೃತಿಯಲ್ಲಿ 2009ರಲ್ಲಿ ಪ್ರಕಟಿಸಿದ್ದಿದೆ. ಕುತೂಹಲವುಳ್ಳ ಓದುಗರು ಬೇಕಿದ್ದರೆ ಅದನ್ನೂ ಓದಿಕೊಳ್ಳಬಹುದು. ಆಸಕ್ತರಿಗೆ ನೆನಪಿನಲ್ಲಿ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಇಲ್ಲಿ ಹಬ್ಬಗಳ ಆಧ್ಯಾತ್ಮಿಕ ಅರ್ಥಗಳನ್ನು ಪದ್ಯರೂಪದಲ್ಲಿ ಕೊಡಲಾಗಿದೆ.]

ಭಾರತವೆಂದರೊಂದರ್ಥದಲಿ ಜ್ಞಾನರತ ದೇಶ
ಇನ್ನೊಂದರ್ಥದಲಿ ಜನನ–ಮರಣಗಳ ಭಾರತರಣ ॥ಪ॥

ಭಾವರ್ಣವೊಂದಕೇ ಜ್ಞಾನವೆಂದರ್ಥ
ರತವೆಂದರದರಲ್ಲಿ ತೊಡಗುವಿಕೆಯು
ಋಷಿಪರಂಪರೆಯದೀ ನಾಡು **ಭಾರತವು**
ಸನಾತನ ಭಾರತವು ಜ್ಞಾನರತದೇಶ ॥1॥

ಭಾರವೆಂದರೆ ಒಜ್ಜೆಯದು ಸಂಸಾರಭಾರ
ತಕಾರವೆಂದರೆ ತರಣ ಸಂಸಾರತರಣ
ಜನನಮರಣಜದುಃಖ–ಜಂಜಾಟವನ್ನು
ದಾಟುವುದೆ ತರಣವಿದು ಜೀವಾತ್ಮಗುರಿಯು ॥2॥

ಅನುದಿನದ ನೋವುಗಳ ಬದಿಗೊತ್ತಿ ಸಂಭ್ರಮದಿ
ನಲಿಯಬೇಕೆನ್ನುವುದು ಲೌಕಿಕದ ಗುರಿಯು
ಈ ಗುರಿಯನೂ ಮೀರಿದಧ್ಯಾತ್ಮವೊಂದಿಹುದು
ಸನಾತನ ಪರಂಪರೆಯದೆಲ್ಲ ಹಬ್ಬಗಳಲಿ ॥3॥

ಯುಗಾದಿಯಿಂದಾರಂಭವೆಂದರೂ ಹಬ್ಬಗಳು
ಆಶ್ವೀಜಮಾಸದಿಂದಧ್ಯಾತ್ಮದಲ್ಲಿ
ಪ್ರಾರಂಭಗೊಳ್ಳುವವು ಬಹು ಖಚಿತವಾಗಿ
ಕಂಡುಬರುವುದಿದು ಸಂದೇಹಕೆಡೆಯಿಲ್ಲದಂತೆ ॥4॥

ಆಶ್ವೀಜ ಶುದ್ಧ ಪ್ರತಿಪದೆಯು ಪ್ರಾಚೀನದಲ್ಲಿ
ಯುಗಾದಿಯಾಗಿತ್ತು ವೇದದಾರಂಭಕಾಲದಲ್ಲಿ
ಚಿತ್ರಾನಕ್ಷತ್ರದಲಿ ಸೂರ್ಯನಿದ್ದನು ಆಗ
ಅಶ್ವಿನೀ ನಕ್ಷತ್ರದಲಿ ಚಂದ್ರ ತಾನಿರಲು ॥5॥

ಹುಣ್ಣಿಮೆಯ ದಿನ ಚಂದ್ರನಿಹ ನಕ್ಷತ್ರನಾಮ ಮಾಸಕ್ಕೆ
ಅದಕಾಗಿ ತಿಳಿದರದನಾಶ್ವೀಜಮಾಸವೆಂದು
ಸೂರ್ಯನವನಕ್ಷದಲಿ ಹಿಂದೆ ಸರಿಯುತ ಬಂದ
ಎಪ್ಪತ್ತೆರಡು ವರುಷಗಳಿಗೊಂದು ಅಂಶದಂತೆ ॥6॥

ಹದಿಮೂರು ಸಾವಿರದ ಮುನ್ನೂರುಗಟ್ಟಲೆ
ವರುಷಗಳು ದಾಟಿದೀ ಸಮಯದಲ್ಲೀಗ
ಸೂರ್ಯನವನಿರುವನುತ್ತರಾಭಾದ್ರದಲ್ಲಿ
ನೂರೆಂಬತ್ತೈದು ಅಂಶಗಳ ಹಿಂದೆ ಸರಿದು ॥7॥

ಸೂರ್ಯನಿಹ ಚಿತ್ತಾನಕ್ಷತ್ರದಿಂದಲಾಗ
ಸೌರಮಾಸದಲಿ ಚೈತ್ರಮಾಸವೆಂಬ
ಹೆಸರು ಬಂದಿತ್ತೆಂದು ಯುಗಾದಿಯಂದು
ಚಾಂದ್ರಮಾನದಲಾಗಲಾಶ್ವೀಜಮಾಸ ॥8॥

ಅಕ್ಷದಲಿ ಬದಲಾದ ಸೌರಮಾನವನು
ಮುಂದೆ ಬಂದಂತೆ ಗಣನೆಗೆ ತಂದುಕೊಳ್ಳದಲೆ
ಹುಣ್ಣಿಮೆಯ ಚಂದ್ರನನು ಮಾತ್ರ ಗಣಿಸುತ್ತ
ಯುಗಾದಿಯಾಚರಣೆಯಿಂದು ನಡೆಯುತಿದೆ ॥9॥

ಚಿತ್ರಾ ನಕ್ಷತ್ರದಲಿ ಸೂರ್ಯನಿರುವಾಗ
ಯುಗಾದಿಯೆಂಬಲ್ಲಿಹುದು ಬಹುಗೂಢವಾದರ್ಥ
ಚಿತ್ರಾ ಮೂರನೆಯ ಪಾದದಲಿ ರವಿಯು ನೀಚಸ್ಥ
ಸೂರ್ಯನಂಶವೆ ಆದ ಜೀವಾತ್ಮ ಭುವಿಗೆ ॥10॥

ಭೂಮಿಯಲ್ಲಿ ಜೀವಿಯ ಮೊದಲಿನವತರಣ
ಆದಿಯದು ಪ್ರಾರಂಭ ಜೋಡಣೆಯ ಯುಗವು
ಪಂಚಭೂತಗಳೊಡನೆ ಜೀವಜೋಡಣೆಯು
ಸಂಭವಿಸಿದ್ದದು ಯುಗಾದಿಯಾಗಿಹುದು ॥11॥

ಚಂದ್ರನೆಂದರೆ ಮನವು; ಮನದಿಂದ ಕಾರ್ಯ
ಅಧ್ಯಾತ್ಮದಲ್ಲಿಯೂ ಚಂದ್ರನಿಗೆ ಒತ್ತು
ರವಿಚಂದ್ರಜೋಡಣೆಯು ಜೀವಾತ್ಮ–ಮನಯೋಗ
ಈ ಯೋಗವದು ನಿಜದಿ ಯುಗಾದಿಯಾಗಿಹುದು ॥12॥

ಅಧ್ಯಾತ್ಮದರ್ಥದಲಿ ಬಹುವಿಧಗಳಲ್ಲಿ
ಚಿತ್ರಾದಲ್ಲಿ ರವಿಯಶ್ವಿನಿಯಲ್ಲಿ ಚಂದ್ರತಾನಿರುವ
ಆಶ್ವೀಜಮಾಸದಾದಿಯೇ ಯುಗಾದಿ ಜೀವನಿಗೆ
ಜನನಮರಣಗಳಾದಿಯಿಲ್ಲಿಂದ ನಿಜದಿ ॥13॥

ಪರಮಾತ್ಮಶಕ್ತಿ ತಾ ತ್ರಿಗುಣಾತ್ಮಕಳಾಗಿ ನಿಂತು
ಮನದಲ್ಲಿ ನೆಲಸುವುದೆ ನವರಾತ್ರಿ ಹಬ್ಬ
ತಮೋಗುಣ–ರಜೋಗುಣ–ಸತ್ವಗುಣಗಳವು
ಜೀವಜೊತೆಗಾರರವು ಮನದೊಳಗೆ ನೆಲಸಿ ॥14॥

ಜೀವಸ್ಥಗರ್ಭವಿಕಸನದ ಮಾರ್ಗದಲ್ಲಿ ಬರುವ
ಎಡರು ತೊಡರುಗಳನ್ನು ದೂರ ಓಡಿಸುತ
ತನುವನ್ನು ಪೋಷಿಸುವ ಬೆಳೆಸುವಾ ತತ್ತ್ವ
ಇರುವುದೈ ರಾಕ್ಷಸಸಂಹಾರಕಾರ್ಯಗಳಲೆಲ್ಲ ॥15॥

‘ಕೊಡು’ಎಂಬ ಅರ್ಥದಲಿ‘ರಾ’ಎಂಬ ಧಾತು
‘ತ್ರಿ’ಅಂದರೆ‘ಮೂರು’ಮೂರುಗುಣಗಳವು
ತ್ರಿಗುಣದಾತ್ರ್ಯಾದಿಶಕ್ತಿಯೇ ‘ರಾತ್ರಿ’ಯೆನಿಸಿಹಳು
ಆದಿಶಕ್ತಿಯ ನವರೂಪಗಳೇ ‘ನವರಾತ್ರಿ’ಯಿಲ್ಲಿ ॥16॥

ನವಮಾಸದರ್ಥವಿಲ್ಲಿಹುದು ನವರಾತ್ರಿಯಲ್ಲಿ
ಮನುಜನಂಗಾಂಗಗಳು ಪರಿಪೂರ್ಣವಾಗಿ
ಬೆಳೆದು ಜೀವಸ್ಥದೇಹವದು ಗರ್ಭದಿಂದ
ಹೊರಬರಲು ನವಮಾಸವದಕೆ ನವರಾತ್ರಿ ॥17॥

ಪಾಡ್ಯದಿಂ ನವಮಿಗಳೂ ನವಮಾಸಸೂಚಿ
ಜೀವಿ ತಾ ಭುವಿಗೆ ಬಂದದ್ದನ್ನು ದಶಮಿ ತಿಳಿಸುವುದು
ಆದಿಶಕ್ತಿಯು ರಕ್ಷಿಪುದಿಲ್ಲೆಲ್ಲ ತಾ ಪ್ರಕೃತಿಯಾಗಿ
ಸಂಸಾರದ ಪ್ರವರ್ತನೆಯಾರಂಭವಾ ವಿಜಯದಶಮೀ ॥18॥

ಅತಿತಮೋಗುಣದ ನಿಗ್ರಹಕೆ ಪರಾಶಕ್ತಿ ತಾ ದುರ್ಗೆಯಾಗಿ
ಬದುಕಿಗನುಕೂಲಸ್ಥಿತಿಯನ್ನು ಕಲ್ಪಿಸಲು ತಾ ಲಕ್ಷ್ಮಿಯಾಗಿ
ಮಸ್ತಿಷ್ಕದಲಿ ವಿದ್ಯೆಯಾವಿಷ್ಕಾರವೇಳನೆಯ ತಿಂಗಳಿಂದ
ಈ ತೆರದಿ ಮಹಾದುರ್ಗೆ–ಮಹಾಲಕ್ಷ್ಮಿ–ಮಹಾಸರಸ್ವತಿಯರಿಲ್ಲಿ ॥19॥

ಜನನ ಮರಣಗಳ ಮಹಾಚಕ್ರದಲ್ಲಿ ಸಿಲುಕಿ
ಜೀವಾತ್ಮವದು ಮುಂದೆ ಮುಂದೆ ಸರಿದಂತೆ
ಶುದ್ಧಗುಣಗಳಿವು ಕೆಲವೊಮ್ಮೆ ಮಲಿನಗೊಂಡು
ಜೀವಕ್ಕೆ ಸುಖದುಃಖಕಾರಕಗಳಾಗುವವು ದಿಟದಿ ॥20॥

ಜೀವಾತ್ಮವದು ಗರ್ಭದಿಂ ಭೂಮಿಗೆ ಬಂದ ಮೇಲೆ
ಬೆಳೆದು ಜೀವನದಲ್ಲಿ ತಾ ಬಾಳಿ ಬದುಕಿ
ತನ್ನ ಮೂಲವ ಹುಡುಕಿ ಪರಮಾತ್ಮಭಾವಕ್ಕೆ
ಮರಳುವ ತತ್ತ್ವವಿದೆ ಮುಂದಿನ ಹಬ್ಬಗಳಲಿ ॥21॥

ಭೂಮೀಹುಣ್ಣಿಮೆ–ಗಂಗಾಷ್ಟಮಿ–ದೀಪಾವಳಿಗಳವು ಮುಂದೆ
ಭೂ–ಜಲ–ತೇಜಸ್ತತ್ತ್ವಗಳಾರಾಧನೆಯು ಲೌಕಿಕಾರ್ಥದಲಿ
ನವರಾತ್ರಿಯದು ಜೀವಕನುಕೂಲ ಪ್ರಕೃತಿವಿಕಾಸವೆನಿಸಿರಲು
ಭೂಜಲಾಗ್ನಿತತ್ತ್ವಸುವಿಕಾಸವದು ಜೀವಸಂಕುಲಕನುಕೂಲವಾಗಿ ॥22॥

ಸಂಭ್ರಮೋತ್ಸಾಹಗಳ ಈ ಮೂರು ಹಬ್ಬಗಳ
ಲೌಕಿಕಾರ್ಥದ ಪರದೆಯನು ಸರಿಸಿದಾಗ
ಆಧ್ಯಾತ್ಮಿಕಾರ್ಥಗಳ ಸುವಿಕಾಸವನ್ನು
ತೋರಿಸುವ ಪರಿಯಿಹುದು ಬೆರಗಾಗುವಂತೆ ॥23॥

ನಭದಿಂದ ವಾಯುವದರಿಂದ ತೇಜವದರಿಂದ ಜಲವು
ಜಲದಿಂದ ಪೃಥ್ವಿಯದರಿಂದ ವನಸ್ಪತಿಯದರಿಂದಲನ್ನಜೀವಿ
ಜಗದ ವಿಕಾಸವೀ ರೀತಿಯಾಗಿರಲು ಇಲ್ಲಿ ಅಧ್ಯಾತ್ಮದಲ್ಲಿ
ಪೃಥ್ವಿಯಿಂದ ಜಲವದರಿಂದ ತೇಜವದರಿಂದ ವಾತವಾಕಾಶ ॥24॥

ಅಧ್ಯಾತ್ಮಸಾಧನೆಗೆ ಪೃಥ್ವಿಯ ತತ್ತ್ವದೊಲುಮೆ ಮೊದಲು
ಪ್ರಾಣಾಯಾಮದಿಂ ಪ್ರಾಣವಾಯುವನು ಅಲ್ಲಿ ಕಳಿಸಿ
ಪೃಥ್ವೀತತ್ತ್ವವನು ಸಂಪ್ರೀತಗೊಳಿಸಿದಾ ಮೇಲೆ
ಜಲತತ್ತ್ವದೊಲುಮೆ ನಿಯತ ಪ್ರಾಣಾಯಾಮದಿಂದ ॥25॥

ಪೃಥ್ವೀತತ್ತ್ವದ ಮೂಲಾಧಾರಚಕ್ರವನು ಸಾಧಿಸುತ್ತ
ಮೇಲೇರಿ ಜಲದ ಸ್ವಾಧಿಷ್ಠಾನವನು ಸ್ವಾಧೀನಗೊಳಿಸಿ
ಸಾಧಕನು ತಾ ತೇಜಸ್ತತ್ತ್ವದ ಮಣಿಪೂರಚಕ್ರವನ್ನು
ಸಂಪ್ರೀತಗೊಳಿಸುವುದದೇ ದೀಪಾವಳಿಯ ಹಬ್ಬ ॥26॥

ಎಪ್ಪತ್ತೆರಡು ಸಾವಿರ ಸಂಖ್ಯೆಯ ನಾಡಿಗಳು ಮನುಜರಲ್ಲಿ
ಅವುಗಳಲಿ ಹದಿನಾರು ಸಾವಿರವು ಜ್ಞಾನನಾಡಿಗಳು
ನರಕಚತುರ್ದಶಿಯಂದು ಕೃಷ್ಣನಿಂ ಹತನಾದ
ನರಕಾಸುರನವನು ತಮೋಗುಣದ ಪೂರ್ಣ ಸಾಕಾರ ॥27॥

ಜ್ಞಾನನಾಡಿಗಳನ್ನು ಆವರಿಸಿ ನಿಂತಿದ್ದ
ತಮೋಗುಣದ ನಾಶದಿಂ ಜ್ಞಾನನಾಡಿಗಳು
ಜೀವಾತ್ಮದೊಲುಮೆಯ ಮಾರ್ಗದಲಿ ಸಾಗುವುದೇ
ಶ್ರೀಕೃಷ್ಣನೊಲುಮೆಯಲಿ ರಾಜಕುವರಿಯರು ॥28॥

'ಗೋ'ಎಂಬಶಬ್ದಕ್ಕೆಹಲವಾರು ಅರ್ಥಗಳು
ಅವುಗಳಲ್ಲೊಂದರ್ಥ ಜ್ಞಾನವೆನ್ನುವುದು
ಜ್ಞಾನದಾರಾಧನೆಯೆ ಗೋಪೂಜೆಯಾಗಿಹುದು
ತೇಜಸ್ತತ್ತ್ವದ ಸಾಧನೆಯೆ ದೀವಳಿಗೆಯದುವೇ ॥29॥

ಸೆಳೆಯುವ ತತ್ತ್ವವೆಂದರ್ಥವಿದೆ "ಕೃಷ್ಣ"ಶಬ್ದಕ್ಕೆ
ಜೀವಾತ್ಮವನು ತನ್ನಡೆಗೆ ಸೆಳೆವ ಪರಮಾತ್ಮ ಕೃಷ್ಣ
ಗೋಪಾಲಕೃಷ್ಣನವ ಜ್ಞಾನಪಾಲಕ ಕೃಷ್ಣ
ಜ್ಞಾನದಾರಾಧನೆಯೆ ಗೋಪೂಜೆ ಸುಪ್ರೀತ ಕೃಷ್ಣನಾಗ ॥30॥

ಬಲಿಯ ನಿಗ್ರಹವಿಲ್ಲಿ ರಜೋಗುಣದ ನಿಗ್ರಹವು
ಜೀವನಾವಶ್ಯಕ ರಜೋಗುಣವು ನಿಗ್ರಹೀತ ಬಲಿಯು
ನಿಗ್ರಹೀತ ರಜೋಗುಣವು ಬೇಕು ಬದುಕಲಿಕೆ
ಅದಕಾಗಿ ಬಲಿಪೂಜೆ ರೂಢಿಯಲಿ ಇಂದೂ ॥31॥

ಹುಣ್ಣಿಮೆಯ ಚಂದ್ರ ಕೃತ್ತಿಕೆಯಲ್ಲಿರೆ ಕಾರ್ತೀಕಮಾಸ
ಷಣ್ಮುಖನ ಸಲಹಿದ್ದು ಕೃತ್ತಿಕಾನಕ್ಷತ್ರಪುಂಜ
ಆರು ನಕ್ಷತ್ರಗಳ ಗುಂಪು ಕೃತ್ತಿಕೆಯು ತಾನಿರಲು
ಸುಬ್ರಹ್ಮಣ್ಯನವನದಕೆ ಷಣ್ಮುಖನು ದಿಟದಿ ॥32॥

ಚಂದ್ರನೆಂದರೆ ಮನವು ಚಿತ್ತ ಕೃತ್ತಿಕೆಯಲ್ಲಿ
ಅಂದರರ್ದರ್ಥ ಷಟ್ಚಕ್ರಲೀನ ಮನವು
ಮೂಲಾಧಾರದಿಂದಾಜ್ಞಾಚಕ್ರಪರ್ಯಂತವಾಗಿ
ಇರುವಾರು ಚಕ್ರಗಳೆ ಕೃತ್ತಿಕಾನಕ್ಷತ್ರಗುಚ್ಛ ॥33॥

ಮಾರ್ಗಶೀರ್ಷವಧ್ಯಾತ್ಮಸಾಧನೆಗತಿ ಮುಖ್ಯಮಾಸ
ಮಾರ್ಗಶೀರ್ಷತಾನೆಂದು ಕೃಷ್ಣ ಗೀತೆಯಲಿ ನುಡಿದನದಕೆ
ಸುಬ್ರಹ್ಮಣ್ಯಷಷ್ಠಿಯದು ಬರುವುದೈ ಮಾರ್ಗಶೀರ್ಷದಲಿ
ಷಟ್ಚಕ್ರಸಾಧನೆಯೆ ಸುಬ್ರಹ್ಮಣ್ಯಪೂಜೆ ನಿಜದಿ ॥34॥

ಶಿವಶಕ್ತಿಸುತನಾದ ಷಣ್ಮುಖನು ತಾನಿಹನು ಜ್ಞಾನಪ್ರತೀಕ
ತಪಸ್ಸು ಶಿವನಾಗಿರಲು ತಪಶ್ಶಕ್ತಿಯೇ ಗೌರಿಯಾಗಿಹಳು
ಅಗ್ನಿ–ಗಂಗೆಯರಿಂದಲಾರೈಕೆ ಪಡೆದಾತ ಸ್ಕಂದನೀತ
ಅಗ್ನಿ–ಗಂಗೆಯರು ಮೋಕ್ಷಕಾರಕತತ್ತ್ವಪ್ರತಿನಿಧಿಗಳಾಗಿಹರು ದಿಟದಿ ॥35॥

ಮಾಘಶುದ್ಧದಲಿ ಬರುವ ರಥಸಪ್ತಮಿಯು ರವಿಯ ಹಬ್ಬ
ಜ್ಞಾನದುತ್ತುಂಗಸ್ಥಿತಿಯ ಸಂಸೂಚಕನು ಸೂರ್ಯ
ಮೂಲಾಧಾರದಿಂ ಸಹಸ್ರಾರಚಕ್ರಪರ್ಯಂತವಿರುವ
ಸಪ್ತಪದ್ಮಗಳಿಲ್ಲಿ ಸಪ್ತತುರಗಗಳು ಸೂರ್ಯರಥದ ॥36॥

ಮಾಘಮಾಸದ ಹುಣ್ಣಿಮೆಯಂದು ಮಘಾಸ್ಥಿತ ಚಂದ್ರನಿರುವಾಗ
ಸಿಂಹದಲಿ ಚಂದ್ರ;ಸಿಂಹಕ್ಕಧಿಪ ಸೂರ್ಯ
ಸೂರ್ಯನಿಹನಾತ್ಮನೈ ಜಂಗಮಸ್ಥಾವರಂಗಳಿಗೆ
ಅದಕೆಂದೆ ರಥಸಪ್ತಮಿ ಮಹಾಶಿವರಾತ್ರಿಗಳು ಮಾಘಮಾಸದಲಿ ॥37॥

ಮೂರರ ಕೊಡುಗೆಯ ತತ್ತ್ವವೇ 'ರಾತ್ರಿ'ಯೆನ್ನುವುದು
'ನವರಾತ್ರಿ'ಸಂದರ್ಭದಲಿ ಮನವರಿಕೆಯಾಗಿಹುದು
ಪರಮಶಿವರಾತ್ರಿ ಶಿವರಾತ್ರಿಯಲಿ ಭಕ್ತಿ–ಜ್ಞಾನ–ವೈರಾಗ್ಯತ್ರಯದ ಕೊಡುಗೆ
ತ್ರಿಮೂರ್ತಿಗ್ರಂಥಿಗಳಿಗೆ ಬದಲಾಗಿ ಸೋಮಸೂರ್ಯಾಗ್ನಿ ॥38॥

ಉಪವಾಸದರ್ಥದಲ್ಲಿಹುದು ಪರಮಾತ್ಮಾನುಸಂಧಾನ
ಮತ್ತೆ ಕಾಮನೆಗಳಾವವೂ ಮುತ್ತಿ ಬರದಂತೆ
ಜಾಗೃತೆಯಿಂದಲಿರುವುದು ಜಾಗರಣೆಯಿಲ್ಲಿ
ಅದಕೆಂದೆ ಮುಂದೆ ಪೂರ್ಣಿಮೆಯಂದು ಕಾಮದಹನ ॥39॥

ಮುಂದೆ ವಸಂತನವರಾತ್ರಿಯಲಿ ಶ್ರೀರಾಮನವಮೀ
ಶುದ್ಧಸತ್ವಸ್ಥಜೀವಾತ್ಮ ತಾ ಸಾಧನೆಯ ಮಾರ್ಗದಲ್ಲಿ
ಸಹಸ್ರಾರವನೇರಿ ಪರಮಾತ್ಮತತ್ತ್ವವೇ ತಾನಾಗುವಂಥ
ವರ್ಣನೆಯ ತಥ್ಯವೇ ರಾಮಾಯಣದ ಕಥೆಯ ಸಾರ ॥40॥

ಅಯೋಧ್ಯೆಯದು ಸಹಸ್ರಾರ;ಲಂಕೆ ಮೂಲಾಧಾರ
ಜೀವಾತ್ಮವದು ಸಹಸ್ರಾರವನೇರುತಿರುವಾಗ
ಆಶೆಗಳ ಬಲೆಬೀಸಿ ರಜೋಗುಣವು ಸತ್ವಗುಣಶಕ್ತಿಯನ್ನು
ತನ್ನೆಡೆಗೆ ಸೆಳೆದುಕೊಳ್ಳಲುದ್ಯಮಿಸುವುದೇ ಸೀತಾಪಹರಣ ॥41॥

ಪ್ರಾಣಾಯಾಮಸಾಧನೆಯಿಂದ ರಜಸ್ತಮಗಳನು ಮಣಿಸಿ
ಜೀವಾತ್ಮವದು ಶುದ್ಧಸತ್ವಗುಣಶಕ್ತಿಯನ್ನು
ಮರಳಿ ಪಡೆದು ತಾ ಸಹಸ್ರಾರ ಪದ್ಮವನ್ನು
ಏರುವ ತಥ್ಯವದಯೋಧ್ಯೆಯಲಿ ಶ್ರೀರಾಮಪಟ್ಟಾಭಿಷೇಕ ॥42॥

ಲಕ್ಷ್ಮಣನು ಮನಸ್ತತ್ತ್ವವಾಗಿರೆ ಭರತ ತಾ ಜ್ಞಾನರತತತ್ತ್ವ
ಶತ್ರುಘ್ನನವ ವೈರಿಷಡ್ವರ್ಗನಾಶಕನು ನಿಜದಿ
ವಿಭೀಷಣನು ತಾ ಮಲಿನಸತ್ವಗುಣವಾಗಿರಲು
ವಾಯುಪುತ್ರ ಮಾರುತಿಯು ತಾ ಪ್ರಾಣಾಯಾಮತತ್ತ್ವ ॥43॥

ಶ್ರಾವಣದ ನಾಗಚೌತಿ–ಪಂಚಮಿಗಳಲ್ಲೂ
ರಾರಾಜಿಸುವುದಧ್ಯಾತ್ಮತತ್ತ್ವ ದಿಟದಿ
ಹುತ್ತರೂಪದ ಸುಷುಮ್ನೆಯ ಬುಡದಲ್ಲಿ ಸುಪ್ತವಿದ್ದ
ಸರ್ಪರೂಪದ ಕುಂಡಲಿನಿಯಾರಾಧನೆಯು ಇಲ್ಲಿ ॥44॥

ಕೃಷ್ಣಜನ್ಮಾಷ್ಟಮಿಯು ಮುಂದಿನ ಬಹುದೊಡ್ಡ ಹಬ್ಬ
ಕುಂಡಲಿನೀಶಕ್ತಿರೂಪದ ದುರ್ಗೆಯ ಮುಂದಿನ ರೂಪವೇ ಕೃಷ್ಣ
ಜೀವನದಿ ಯಮುನೆಯೆಂಬ ಮನಸ್ಸೂಚಕಚಂದ್ರನಾಡಿಯಲ್ಲಿ
ಅತ್ಯಾಶೆತತ್ತ್ವದ ಕಾಳಿಂಗಸರ್ಪವನು ಮಥಿಸಿದ ಗುರುವೆ ಶ್ರೀ ಕೃಷ್ಣ ॥45॥

ಕಂಸ–ಶಿಶುಪಾಲಾದಿರೂಪಿ ತಮೋಗುಣವನ್ನು ಮಥಿಸಿ
ದುರ್ಯೋಧನಾದಿರೂಪಿ ರಜೋಗುಣದಾವೇಶ ತಗ್ಗಿಸಲು
ಅರ್ಜುನರೂಪಿ ಜೀವಾತ್ಮಕನುಕೂಲಕರನಾಗಿ ನಿಂತ
ಸಹಸ್ರಾರದ ದ್ವಾರೋದ್ಘಾಟಕ ಪರಂಬ್ರಹ್ಮ ಪರಮಗುರು ಕೃಷ್ಣ ॥46॥

ಮಧ್ಯರಾತ್ರಿಯೆನ್ನುವುದಿಲ್ಲಿ ತಮೋಗುಣದ ಪರಮ ಘಟ್ಟ
ದೋಷಾತಮಸ್ವತ್ತ್ಯುಷೆಗಳನು ಸೂಚಿಪುದು 'ರಾತ್ರಿ'ಶಬ್ದವಿಲ್ಲಿ
ಸೂಚಿಸುತ ಮುಂಬರುವ ಸುಜ್ಞಾನಬೆಳಗನ್ನು ಕೃಷ್ಣ
ಪರಮಗುರು ತಾನುದಿಸಿದನಜ್ಞಾನತಾಂಡವದ ಮಧ್ಯೆ ॥47॥

ಮುಂದೆ ಬರುವುದು ಮಹಾಗಣಪತಿಯ ಹಬ್ಬ
ಪಾರ್ವತಿಯ ಬೆವರ ಮಣ್ಣಿನಿಂದ ಗಣಪತಿಯು ಬಂದ
ಶಿವನವನ ತಲೆಯನ್ನು ಕತ್ತರಿಸಿ ಕೆಡವಿ
ಉತ್ತರಕೆ ಮುಖಮಾಡಿ ಮಲಗಿದಾನೆಯ ತಲೆತಂದು ಜೋಡಿಸಿದ ॥48॥

ಪಾರ್ವತಿಯು ಪ್ರಕೃತಿ ಪೂರ್ವವಾಸನಾತತ್ತ್ವ ಮಣ್ಣು
ಪೂರ್ವಜನ್ಮಾರ್ಜಿತಸುಕೃತಫಲವಾಗಿ ಮನುಜಜನ್ಮ
ಮಣ್ಣಾಗುವೀ ದೇಹವೇ ತಾನೆಂಬ ತತ್ತ್ವದಲಿದ್ದ ಜೀವಿ
ಪ್ರಕೃತಿಯನು ಓಲೈಸುತ್ತ ತಾನಿರುವ ಬಗೆಯು ಇಲ್ಲಿ ॥49॥

ಪರಶಿವನೆ ಪರಮಗುರು ಕಠಿಣತರದಲಿ ನಿಂತು
ತರಿದನಜ್ಞಾನವದು ಮೂಲತಲೆ ನಾಶ
ಉತ್ತರದದಿಕ್ಕು ಸೂಚಿಸುವುದಧ್ಯಾತ್ಮವನ್ನು
ಗಜವು ಸೂಚಿಸುವುದಾಧ್ಯಾತ್ಮಿಕೋಂಕಾರನಾದವನ್ನು ॥50॥

ಗಜದರ್ಥ ಧ್ವನಿಯಿರಲು ಸೊಂಡಿಲು ಸುಷುಮ್ನಾನಾಡಿಯಾಗಿಹುದು
ಗುರುಬೋಧೆಯಾಲಿಸಲು ದೊಡ್ಡಕಿವಿಗಳವು
ಪರಮಾನಂದರಸವಿಲ್ಲಿ ಸುರಿವ ಮದರಸವು
ಅಧ್ಯಾತ್ಮಕುಪಯುಕ್ತ ವಿಷಯಸಂಗ್ರಹಕಿಲ್ಲಿ ಸೂಕ್ಷ್ಮನಯನಗಳು ॥51॥

ಬಿಲದೊಳಗೆ ಸಂಚರಿಪ ಮೂಷಕವು ಕುಂಡಲಿನೀ
ಕೇವಲಜ್ಞಾನದಾರಾಧನೆಯು ಗಣಪನುತ್ಸವವು
ಸಾಧಕ ಜೀವಾತ್ಮ ತಾನನಂತನಾಗುವಿಕೆಯಿಲ್ಲಿ
ಅನಂತ ಚತುರ್ದಶೀಹಬ್ಬದ ತತ್ತ್ವವಾಗಿಹುದು ॥52॥

ಉಮಾಮಹೇಶ್ವರಪೂರ್ಣಿಮೆಯು ಮುಂದಿನದ್ದು
ಪರಶಿವ–ಪರಾಶಕ್ತಿಯರೈಕ್ಯಸೂಚಕವು
ಸಹಸ್ರಾರಪದ್ಮದಲಿ ಸಾಧಕ ಪ್ರತ್ಯಗಾತ್ಮ ತಾನು
ಒಂದಾಗಿ ನೆಲಸುವುದೆ ಮಹಾಲಯವು ಕೊನೆಗೆ ॥53॥

ಹಬ್ಬಗಳದೀ ರೀತಿ ಕ್ರಮವಾಗಿ ಬಂದಿಹುದು
ಜೀವಾತ್ಮದುದಯದಿಂದಾರಂಭಗೊಂಡು
ಪರಮಾತ್ಮನಲ್ಲಾತ್ಮಲಯಗೊಂಬ ತಥ್ಯ
ಈ ಸಿದ್ಧಿಗಾವಶ್ಯಕವು ಪರಮ ಗುರುಪಾದಪದ್ಮಕೃಪೆಯು ॥54॥

ಭಾರತವೆಂದರೊಂದರ್ಥದಲಿ ಜ್ಞಾನರತ ದೇಶ
ಇನ್ನೊಂದರ್ಥದಲಿ ಜನನ–ಮರಣಗಳ ಭಾರತರಣ ॥ಪ॥

ಭಾರತೀಯ ಹಬ್ಬಗಳ ಅಧ್ಯಾತ್ಮದರ್ಶಿಕಾ

ಭಾರತೀಯ ಹಬ್ಬಗಳ ಬಗ್ಗೆ ತಿಳಿದುಕೊಳ್ಳುವುದಕ್ಕೆ ಮೊದಲು ಭಾರತವೆಂದರೆ ಏನು ಅನ್ನುವುದನ್ನು ತಿಳಿದುಕೊಳ್ಳುವುದು ಮುಖ್ಯ. 'ಭಾ' ಅಂದರೆ ಪ್ರಕಾಶ ; ಜ್ಞಾನವೆಂಬ ಪ್ರಕಾಶ; ಇದರಲ್ಲಿ, ಈ ಜ್ಞಾನ ಪ್ರಕಾಶದಲ್ಲಿ ರತದಾದವರ, ತೊಡಗಿಕೊಂಡವರ, ದೇಶ ಭಾರತ. ಇನ್ನೊಂದು ಅರ್ಥದಲ್ಲಿ 'ಭಾರ' ಅಂದರೆ ಒಜ್ಜೆ. 'ತ' ವು ತರಣಾರ್ಥದಲ್ಲಿ ಇಲ್ಲಿ ಬಂದದ್ದು. ಭಾರದ ತರಣವು ಯಾವ ದೇಶದಲ್ಲಿ ಸಾಧ್ಯವೋ ಅದು ಭಾರತ. ಜನ್ಮ–ಮರಣಗಳ ಚಕ್ರದಲ್ಲಿ ಸಿಕ್ಕಿ ಬಿದ್ದು ಸಂಸಾರದ ಭಾದೆಯಿಂದ, ಅರ್ಥಾತ್ ಭಾರದಿಂದ ಬಳಲಿ ಬೆಂಡಾದ ಜೀವಾತ್ಮಕ್ಕೆ ಅದರ ಈ ಸಂಸಾರಭಾರವನ್ನು ನೀಗಿಸುವ, ನಿವಾರಿಸುವ, ಅರ್ಥಾತ್ ಜೀವಾತ್ಮವು ಈ ಭಾರದಿಂದ ಪಾರಾಗುವಂತೆ ಮಾಡುವ ಮಾರ್ಗಬೋಧಕದೇಶ ಭಾರತದೇಶ. ಕ್ರಿ.ಪೂರ್ವಕ್ಕಿಂತಲೂ ಹತ್ತು–ಹನ್ನೆರಡು ಸಾವಿರ ವರ್ಷಗಳ ಹಿಂದೆಯೇ ಭಾರತದೇಶದಲ್ಲಿ ಯೋಗಸಾಧನೆಯು ನಡೆಯುತ್ತಿದ್ದು ಯೋಗ ಮಾರ್ಗದಲ್ಲಿ ಸಮಾಧಿಸ್ಥಿತಿಯಲ್ಲಿ ನಿರತ ಋಷಿ–ಮುನಿಗಳಿಗೆ ಅಪಾರವಾದ ಜ್ಞಾನದ ಖನಿಗಳೇ ಆದ ವೇದಗಳು ಗೋಚರಿಸಿದ್ದು. ಆಗ ಬಹುಶಃ ಜಗತ್ತಿನಲ್ಲಿಯ ಬೇರೆ ದೇಶಗಳಲ್ಲಿ ವಿದ್ಯೆಯ

ಗಂಧವೇ ಇಲ್ಲದ ಸ್ಥಿತಿ ; ಅನಾಗರಿಕ ಸ್ಥಿತಿ. ಅರ್ಥಾತ್ ಅನಾಯಕ ಸ್ಥಿತಿ. ಆದರೆ ಬಹು ಪ್ರಾಚೀನದೇಶವಾದುದರಿಂದ ಸನಾತನವೆನಿಸಿದ ಈ ದೇಶದಲ್ಲಿ ಲೌಕಿಕವಿದ್ಯೆಯ ಪಾರಮ್ಯವು ಬಹು ಎತ್ತರಕ್ಕೆ ತಲುಪಿ ಅದರಿಂದ ನಿಜವಾದ ಸುಖ ದೊರೆಯದೆ ಆ ದಶಸಹಸ್ರಗಟ್ಟಲೆ ವರುಷಗಳ ಪೂರ್ವದಲ್ಲಿಯೇ ಜನರು ಅಧ್ಯಾತ್ಮದೆಡೆಗೆ ಮುಖ ಮಾಡಿದ್ದರು. ಅನೇಕಾನೇಕರು ಜಾತಿ, ಮತ, ಪಂಥಗಳ ಗೊಡವೆಯಿಲ್ಲದೆ ಪ್ರಾಣಾಯಮಾದಿ ಯೋಗಸಾಧನೆಯಲ್ಲಿ ನಿರತರಾಗಿದ್ದು ಯೋಗಮಾರ್ಗದ ತುತ್ತ ತುದಿಯೆನಿಸಿದ ಧ್ಯಾನ, ಧಾರಣಾದಿಗಳ ಅನಂತರದ ಹಂತವಾದ ಸಮಾಧಿಸ್ಥಿತಿಯನ್ನು ತಲುಪಿದ್ದರು. ಅವರನ್ನು ಋಷಿಮುನಿಗಳೆಂದು ಪರಿಗಣಿಸಲಾಗುತ್ತಿತ್ತು. ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಸಹ ಯೋಗಮಾರ್ಗದಲ್ಲಿ ನಿರತರಾಗಿ ಋಷಿ ಮಾತ್ರವಲ್ಲದೆ ಬ್ರಹ್ಮಪದವಿಯನ್ನೂ ಗಳಿಸಿದ್ದರು. ಇದಕ್ಕೆ ವಿಶ್ವರಥನೆಂಬ ಕ್ಷತ್ರಿಯ ರಾಜನು ವಿಶ್ವಾಮಿತ್ರನೆಂಬ ಋಷಿಯಾಗಿ ಮಾರ್ಪಟ್ಟು ಜಗತ್ತೆಲ್ಲ ಗೌರವಿಸುವ ಗಾಯತ್ರೀ ಮಂತ್ರದ ದೃಷ್ಟಾರನಾದುದು ಹಾಗೂ ಹೀನಕುಲದವರೊಂದಿಗೆ ಜೀವಿಸುತ್ತ ಜನರನ್ನು ಹೆದರಿಸುತ್ತ, ಸಂದರ್ಭ ಬಂದರೆ ಜನರನ್ನು ಕೊಲ್ಲುತ್ತ ದರೋಡೆಯಲ್ಲಿ ನಿರತನಾದ ಹೀನಾತಿಹೀನನೊಬ್ಬನು ವಾಲ್ಮೀಕಿ ಮಹರ್ಷಿಯಾಗಿ ಮಾರ್ಪಟ್ಟು ಜಗತ್ತೇ ಬೆರಗಾಗುವಂತೆ ರಾಮಾಯಣವನ್ನು ಬರೆದು ಸರ್ವಗೌರವಪಾತ್ರನಾದುದು ಉತ್ತಮ ಉದಾಹರಣೆಗಳಾಗಬಲ್ಲವು.

ಈ ರೀತಿಯ ನಡವಳಿಕೆ ಜಗತ್ತಿನಲ್ಲಿ ಎಲ್ಲಿಯೂ ಇದ್ದುದು ಕಂಡುಬರುವುದಿಲ್ಲ. ಇವೆಲ್ಲ ಸಾಧ್ಯವಾಗುತ್ತಿದ್ದುದು ಹಿಮಾಲಯದಿಂದ ಮೊದಲುಗೊಂಡು ಈ ಕಡೆಗೆ ದಕ್ಷಿಣದ ಕನ್ಯಾಕುಮಾರಿಯ ವರೆಗಿನ ಹಾಗೂ ಪಶ್ಚಿಮದ ದ್ವಾರಕೆಯ ತುದಿಯವರೆಗಿನ ಪ್ರದೇಶದಲ್ಲಿ ಮಾತ್ರ. ಆರ್ಯರೆಂದರೆ ನಾಗರಿಕರು ಅನ್ನುವ ಅರ್ಥ. ನಾಗರಿಕತೆಯನ್ನು ಮೈಗೂಡಿಸಿಕೊಂಡವರು ಇರುವ ದೇಶವು ಇದಾದುದರಿಂದ ಇದನ್ನು ಆರ್ಯಾವರ್ತವೆಂದೂ ಕರೆಯಲಾಯಿತು ಹಾಗೂ ಆಧ್ಯಾತ್ಮಿಕ ಜ್ಞಾನಭೂಯಿಷ್ಠರ ಮತ್ತು ಜ್ಞಾನರತರ ದೇಶವಾದುದರಿಂದ ಈ ಆರ್ಯಾವರ್ತವು ಭಾರತವೆಂದು ಖ್ಯಾತವಾಯಿತು. 'ಭಾ' ಅಂದರೆ ಜ್ಞಾನ; ಜ್ಞಾನದಲ್ಲಿ ರತ ದೇಶ ಭಾರತ. ಬೌದ್ಧಧರ್ಮವು ಜಗತ್ತಿನ ಅನೇಕದೇಶಗಳಲ್ಲಿ ವ್ಯಾಪಿಸಿದರೂ ಅದರ ಮೂಲದ ಬುದ್ಧನು ಈ ಭಾರತದ ಪವಿತ್ರ ಭೂಮಿಯಲ್ಲಿ ಬಂದವನು ಅನ್ನುವುದು ಗಮನಾರ್ಹ.

ಇಂತಹ ಕಾರಣಗಳಿಂದಾಗಿ ಈ ಆರ್ಯಾವರ್ತವು 'ಭಾರತ' ಎಂಬ ಹೆಸರನ್ನು ಪಡೆದಿದೆಯೇ ಹೊರತು ಯಾವುದೋ ಭರತನೆಂಬ ರಾಜನು ಆಳಿದ್ದರಿಂದ ಖಂಡಿತವಾಗಿ ಅಲ್ಲ. ಯಾವುದೋ ಭರತ ಎಂದು ಇಲ್ಲಿ ಹೇಳಿದ್ದು ಏಕೆಂದರೆ ಜೈನರಲ್ಲಿ ಬರುವ ಭರತ ಚಕ್ರವರ್ತಿಯಿಂದಾಗಿ ಭಾರತವೋ ಅಥವಾ ಶ್ರೀರಾಮನ ತಮ್ಮ ಭರತನು ಆಳಿದ ದೇಶವಾದುದರಿಂದ ಭಾರತವೋ ಎಂಬ ಚರ್ಚೆ ನಡೆಯುತ್ತಿದ್ದು ಅವೆಲ್ಲ ಅನುಪಯುಕ್ತ ಚರ್ಚೆಗಳೇ ಸರಿ.

ಯೋಗಮಾರ್ಗದಲ್ಲಿ ನಿರತ ಋಷಿಮುನಿಗಳು ಜೀವಾತ್ಮವು ದೇಹಧಾರಿಯಾಗಿ ಬಂದು ಲೌಕಿಕದಲ್ಲಿ ಮುಳುಗಿ ಸ್ವಾರ್ಥಪೂರಿತ ಕರ್ಮಗಳನ್ನು ಆಚರಿಸುತ್ತ ಅವುಗಳ ಫಲವಾಗಿ ಬರುವ ಸುಖ–ದುಃಖಗಳಲ್ಲಿ ತನ್ನ ಆತ್ಮತ್ವವನ್ನೇ ಮರೆತು ಜನ್ಮ–ಪುನರ್ಜನ್ಮಗಳ ಭಾರದಿಂದ ನಲುಗುವುದನ್ನು ಮನಗಂಡು ಆ ಕರ್ಮಫಲಗಳ ಭಾರವನ್ನು ನಿವಾರಿಸಿ ಕೊಳ್ಳುವ ಮಾರ್ಗವನ್ನು ಬೋಧಿಸುತ್ತ ಬಂದರು ; ಕರ್ಮಫಲಗಳು ಆಣವಮಲ ಮಾಯಾಮಲ ಮತ್ತು ಕಾರ್ಮಿಕಮಲಗಳೆಂಬ ಮಲತ್ರಯವಾಗಿ ಪರಮಾತ್ಮನಿಂದ ಹೊರಬಂದ ಪ್ರತ್ಯಗಾತ್ಮಕ್ಕೆ, ಜೀವಾತ್ಮಭಾವದಲ್ಲಿರುವ ಪ್ರತ್ಯಗಾತ್ಮಕ್ಕೆ ಹೊರೆಯಾಗಿ ಪರಿಣಮಿಸಿದ್ದುದನ್ನು ನೋಡಿ ಯೋಗಿಗಳು ಪರಿತಪಿಸಿದರು. ಹಾಗೂ ಆ ಮಲತ್ರಯಗಳ ಭಾರವನ್ನು ಇಳಿಸಿಕೊಳ್ಳುವ ಮಾರ್ಗೋಪಾಯಗಳನ್ನು ಚಿಂತಿಸಿದರು. ಆಣವಮಲವೆಂದರೆ ಆತ್ಮವು ಪ್ರಕೃತಿಯ ಅಂಗವಾದ ಜೀವದ, ಪ್ರಾಣದ ಸೆಳವಿಗೆ ಸಿಕ್ಕು ಜೀವಾತ್ಮವಾಗಿ ವೀರ್ಯಾಣುಗಳಲ್ಲಿ ಸೇರುತ್ತ ಅಂಡಾಣುವಿನ ಸಂಯೋಗದೊಂದಿಗೆ ದೇಹ ಧಾರಣೆಗೈಯುತ್ತ ಮತ್ತೆ ಮತ್ತೆ ಹುಟ್ಟಿ ಬರುತ್ತ ಇರುವುದು. ಮಾಯಾಮಲವೆಂದರೆ ಪ್ರಕೃತಿಯ ಬಲೆಗೆ ಬಿದ್ದು ಸ್ವಾರ್ಥಪೂರಿತ ಕರ್ಮಗಳನ್ನು ಆಚರಿಸುತ್ತ ಆ ಕರ್ಮಫಲಗಳಿಂದಾಗಿ ಕೋಟಿಗಟ್ಟಲೆ ಪ್ರಾಣಿವಿಧಗಳಲ್ಲಿ ಯಾವುಯಾವುದರಲ್ಲಿಯೋ ಜನಿಸುತ್ತ ಅಂಧಕಾರದಲ್ಲಿ ಹೊರಳಾಡುತ್ತ ಇರುವಂತೆ ಜೀವಾತ್ಮವನ್ನು ನಡೆಸಿಕೊಳ್ಳುವ ತತ್ತ್ವ. ಕಾರ್ಮಿಕಮಲವೆಂದರೆ ಕರ್ಮ–ಕರ್ಮಫಲಗಳ ಸರಪಣಿ. ಈ ಎಲ್ಲ ಭಾರವನ್ನು ತರಣಗೈಯುವ ತತ್ತ್ವಭರಿತದೇಶ ಭಾರತ.

ಈ ತತ್ವಗಳಿಗನುಗುಣವಾಗಿ ಭಾರತದಲ್ಲಿ ಸನಾತನಪದ್ಧತಿಯ ಧಾರ್ಮಿಕ ಹಬ್ಬಗಳು ಅಸ್ತಿತ್ವಕ್ಕೆ ಬಂದವು. ಅನುದಿನಗಳ ನೋವನ್ನು ಬದಿಗೊತ್ತಿ ಸ್ವಲ್ಪಮಟ್ಟಿಗಾದರೂ ಸಂತೋಷ–ಸಂಭ್ರಮಗಳಿರಲೆಂಬುದು ಈ ಹಬ್ಬಗಳ ಲೌಕಿಕ ಹಾಗೂ ಸಾಮಾಜಿಕ ಪ್ರಯೋಜನಗಳಾಗಿವೆ. ಇವು ಧಾರ್ಮಿಕವೆನಿಸಿದ್ದರಿಂದ ಇವುಗಳ ಆಚರಣೆಯಿಂದ ಪುಣ್ಯಸಂಗ್ರಹವೂ ಆಗುತ್ತದೆ ಅನ್ನುವುದು ಒಂದು ಉದ್ದೇಶ. ಆದರೆ ಋಷಿ–ಮುನಿಗಳಿಂದ ರೂಪಿಸಿಲ್ಪಡುವಾಗ ನಿಜವಾದ ಆಂತರಂಗಿಕ ಅರ್ಥ ಲೌಕಿಕ ಮತ್ತು ಧಾರ್ಮಿಕ ಪ್ರಯೋಜನಗಳಿಗಿಂತ ಎತ್ತರದ ವಿಭಿನ್ನಾರ್ಥವೇ ಆಗಿದೆ ಎಂದು ಭಾವಿಸುವುದು ಸೂಕ್ತ ; ಅದು ಆಧ್ಯಾತ್ಮಿಕ ಅರ್ಥ. ಜೀವಾತ್ಮದ ಜೀವಭಾವವನ್ನು ಹೋಗಲಾಡಿಸಿ, ಜೀವಭಾವದ ಭಾರವನ್ನು ತರಣಗೊಳಿಸಿ ಅವುಗಳನ್ನು ಆತ್ಮಮಾತ್ರವಾಗಿಸಿ ಪರಮಾತ್ಮನಲ್ಲಿ ಅವು ಐಕ್ಯಗೊಳ್ಳಲು ಅನುವಾಗುವಂತೆ ಮಾಡುವ ಅರ್ಥವೇ, ಪ್ರಯೋಜನವೇ ಇಲ್ಲಿ ಸರ್ವಗ್ರಾಹ್ಯ ಅರ್ಥ.

ಹಬ್ಬಗಳಲ್ಲಿ ಮೊದಲನೆಯದು ಯುಗಾದಿ. ಹಬ್ಬಗಳ ಪದ್ಧತಿಯು ಆರಂಭಗೊಂಡಾಗ ಈ ಯುಗಾದಿಯು ಎಲ್ಲಿತ್ತೋ ಆ ಸ್ಥಳದಿಂದ ಈಗ ಅದು ದೂರವಾಗಿ ಇನ್ನೆಲ್ಲಿಂದಲೋ ಮೂಡಿ ಬರುತ್ತಿರುವುದು ಒಂದು ಕೌತುಕವೇ ಸರಿ.

ಮೇಷಾದಿ ದ್ವಾದಶ ರಾಶಿಗಳಲ್ಲಿ ಜಗತ್ತನ್ನು ವಿಭಾಗಿಸಲಾಗಿದೆ. ಮೇಷದಲ್ಲಿ, ಅಶ್ವಿನೀನಕ್ಷತ್ರದಲ್ಲಿ ಹುಣ್ಣಿಮೆಯ ಚಂದ್ರನಿರುವ ಆ ಚಾಂದ್ರಮಾನ ತಿಂಗಳನ್ನು ಆಶ್ವೀಜಮಾಸವೆಂದು ಆಚರಿಸಲಾಗುತ್ತದೆ. ಆಗ ಸೂರ್ಯನು 180 ಡಿಗ್ರಿಗಳ ಅಂತರದ ಚಿತ್ರಾ ಅಥವಾ ಚಿತ್ತಾ ನಕ್ಷತ್ರದ ಮೂರನೆಯ ಚರಣಕ್ಕೆ ಬರುವನು ; ಅಂದರೆ ತುಲಾರಾಶಿಯಲ್ಲಿರುವನು. ಅದಕ್ಕಾಗಿಯೇ 'ಚಿತ್ತಾ ನಕ್ಷತ್ರಂ ಭವತಿ'........ ಎಂದು ಮುಂತಾಗಿ ಧಾರ್ಮಿಕಸಮಾರಂಭಗಳಲ್ಲಿ ಚಿತ್ತಾನಕ್ಷತ್ರವನ್ನು ವಿಜೃಂಭಿಸಲಾಗುವುದು. ಇವೇ ಮುಂತಾದ ಕಾರಣಗಳಿಂದಾಗಿ ಆಶ್ವೀಜ ಶುದ್ಧ ಪ್ರತಿಪದೆಯು ಒಂದು ಕಾಲದಲ್ಲಿ ಪ್ರಾಚೀನದಲ್ಲಿ ಯುಗಾದಿ ಪರ್ವವಾಗಿತ್ತು. ಹಬ್ಬವಾಗಿತ್ತು. ಆದರೆ ವರುಷಗಳು ಕಳೆದಂತೆ ಅಂದಿನಿಂದ ಹದಿಮೂರು ಸಾವಿರ ಗಟ್ಟಲೆ ವರುಷಗಳು ಕ್ರಮಿಸುವಾಗ ತನ್ನ ಅಕ್ಷದಲ್ಲಿ ತಿರುಗುವ ರವಿಯು ಎಪ್ಪತ್ತೈದು ವರುಷಗಳಿಗೆ ಒಂದು ಅಂಶ ಅಥವಾ ಡಿಗ್ರಿಯಂತೆ ಹಿಂದೆ ಸರಿಯುತ್ತ ಈಗ ಒಂದು ನೂರಾ ಎಂಬತ್ತೈದು ಅಂಶಗಳಷ್ಟು ಹಿಂದೆ ಸರಿದು ಈಗಿನ ಯುಗಾದಿಯಂದು ಉತ್ತರಾಭಾದ್ರನಕ್ಷತ್ರಕ್ಕೆ ಬಂದು ತಲುಪಿರುವನು. ಆಗಿನ ಕಾಲದಲ್ಲಿ ಸೂರ್ಯನು ಚಿತ್ರಾ ನಕ್ಷತ್ರದಲ್ಲಿ ಇರುವ ಮಾಸವನ್ನು ಸೌರಮಾನದ ಪ್ರಕಾರದ ಚೈತ್ರಮಾಸದಾರಂಭವನ್ನು ಇಂದಿನ ಯುಗಾದಿಯಾಗಿ ಸಂಭ್ರಮಿಸಲಾಗುವುದು.

ಆಗಿನ ಆಶ್ವೀಜ ಮಾಸದಾರಂಭವೇ ಯುಗಾದಿಯೆನ್ನುವುದು ಆಧ್ಯಾತ್ಮಿಕ ಅರ್ಥಕ್ಕೆ ಪೂರ್ತಿಯಾಗಿ ಹೊಂದಿಕೊಳ್ಳುವುದು ಗಮನಾರ್ಹ. ಏಕೆಂದರೆ ಭಾದ್ರಪದದ ಕೊನೆಯ ದಿನದ ಅಮಾವಾಸ್ಯೆಯು ಮಹಾಲಯವೆಂದೆನಿಸಿದೆ. ಅಂದರೆ ಜೀವಾತ್ಮದ ಪೂರ್ಣ ಲಯವೇ, ಪರಮಾತ್ಮನಲ್ಲಿಯ ಏಕಾತ್ಮಭಾವವೇ ಮಹಾಲಯ; ಅಂದರೆ ಅಲ್ಲಿಗೆ ಹಬ್ಬಗಳು ಕೊನೆಗೊಳ್ಳಬೇಕು. ಮುಂದೆ ಪ್ರಾರಂಭವಾಗುವ ನವರಾತ್ರಿಯು ಪ್ರತ್ಯಗಾತ್ಮವು ಜೀವದೊಂದಿಗೆ ಸೇರಿ ಜೀವಾತ್ಮವಾಗಿ ಹುಟ್ಟಿ ಬರುತ್ತಿರುವುದನ್ನು ಸೂಚಿಸುವುದು. ಧನ್ಯ ಆತ್ಮಗಳು ಜೀವಭಾವವನ್ನು ನೀಗಿಕೊಂಡು ಪರಮಾತ್ಮಭಾವಕ್ಕೆ ಮರಳುವುದು. ಅಂದರೆ ಪರಮಾತ್ಮನಲ್ಲಿ ಮಹಾಲಯವನ್ನು ಹೊಂದುವುದು ನಡೆದರೆ ಪರಮಾತ್ಮನೆಂಬ ಮಹಾಸೂರ್ಯನಿಂದ ಹೊರಡುವ ಇತರ ಕಿರಣಗಳು ಪ್ರತ್ಯಗಾತ್ಮಗಳೆನಿಸಿ ಜೀವಾತ್ಮಗಳಾಗಿ ಹುಟ್ಟಿ ಬರುತ್ತ ಇರುತ್ತವೆ. ಹೀಗೆ ಪ್ರಕೃತಿಯು ಜಗತ್ತು ನಿರಂತರವಾಗಿ ನಡೆಯುತ್ತ ಇರುವಂತೆ ನೋಡಿಕೊಳ್ಳುವುದು. ಪ್ರಕೃತಿಯು ಪರಮಾತ್ಮನದೇ ಶಕ್ತಿಯಾದ, ಸ್ಪಂದದಲ್ಲಿ ಮೂಡಿದ ಶಕ್ತಿಯಾದ ಪರಾಶಕ್ತಿಯ ಸಗುಣರೂಪ. ಆ ಪರಾಶಕ್ತಿಯೇ ಸ್ವ ಇಚ್ಛೆಯಿಂದ ತ್ರಿಗುಣಾತ್ಮಕಳಾಗಿ ಪ್ರಕೃತಿಯಾಗಿ ಜಗತ್ತನ್ನು ನಡೆಸುತ್ತದೆ. ಪ್ರತ್ಯಗಾತ್ಮಗಳನ್ನು ಜೀವಾಭಾವದಿಂದ ಆವರಿಸಿ ಅವುಗಳನ್ನು ಜೀವಾತ್ಮಭಾವಕ್ಕೆ ತರುವುದೇ ಪ್ರಕೃತಿ.

ಈ ಪ್ರಕೃತಿಯು ತಮೋಗುಣ – ರಜೋಗುಣ – ಸತ್ವಗುಣಗಳಾಗಿ ಜೀವಾತ್ಮವನ್ನು ಆವರಿಸುವ ಪ್ರಕ್ರಿಯೆಯೇ ಆಶ್ವೀಜಮಾಸದಲ್ಲಿಬರುವ ನವರಾತ್ರಿ. ಮಾನವ ಗರ್ಭವು ತನ್ನಲ್ಲಿ ಮಗುವನ್ನು ಒಂಬತ್ತು ಮಾಸಗಳ ಅವಧಿಪೂರ್ತಿ ಧರಿಸುವುದರಿಂದಾಗಿ ಆ

ಒಂಬತ್ತು ತಿಂಗಳ ಅವಧಿಯಲ್ಲಿ ಈ ಮೂರೂ ಗುಣಗಳಾಗಿ, ಪ್ರಕೃತಿಯಾಗಿ ಪರಾಶಕ್ತಿಯು ಗರ್ಭಸ್ಥ ಜೀವಾತ್ಮವನ್ನು ಆವರಿಸುವ ಪ್ರಕ್ರಿಯೆಯು ಆಶ್ವೀಜದಾರಂಭದ ನವರಾತ್ರಿಯಲ್ಲಿ ನಡೆಯುವುದು, ರಾ ಅಂದರೆ ಕೊಡುವ ಕ್ರಿಯೆ. 'ರಾತಿ ದದಾತಿ ಅಂದರೆ ಕೊಡುವಿಕೆ, 'ತ್ರಿ ನವ' ಅಂದರೆ ಒಂಬತ್ತು. ಈ ಒಂಬತ್ತರಲ್ಲಿ ಜೀವಾತ್ಮವು ಮೊದಲಿನ ಮೂರುತಿಂಗಳು ತಮೋಯುಕ್ತ ವಾಗಿರುತ್ತದೆ. ಅನಂತರದಲ್ಲಿ ಮೂರು ತಿಂಗಳು ರಜೋಯುಕ್ತವಾಗಿದ್ದು ಮುಂದಿನ ಕೊನೆಯ ಹಂತದ ಮೂರು ತಿಂಗಳು ಸರ್ವಗುಣವಿಶಿಷ್ಟಗೊಳ್ಳುವುದು.

ಈ ಮೂರು ಮೂರು ತಿಂಗಳನ್ನು ಸಾಂಕೇತಿಕವಾಗಿ ಮೂರು ಮೂರು ಮೂರು ದಿನಗಳಿಗೆ ತಂದು ಪ್ರಥಮ ಮೂರರಲ್ಲಿ ಮಹಾದುರ್ಗೆ ಹಾಗೂ ದ್ವಿತೀಯ ಮೂರರಲ್ಲಿ ಮಹಾಲಕ್ಷ್ಮಿ ಮತ್ತು ತೃತೀಯ ಮೂರರಲ್ಲಿ ಮಹಾಸರಸ್ವತಿಯನ್ನಾಗಿ ಪರಾಶಕ್ತಿಯನ್ನು ದರ್ಶಿಸಲಾಯಿತು. ಗರ್ಭದಲ್ಲಿ ಜೀವಾತ್ಮದ ಬೆಳವಣಿಗೆಯ ಹಂತಗಳಲ್ಲಿ ಬರುವ ಬಾಧೆಗಳನ್ನು ಪ್ರಕೃತಿಯು ಈ ಮೂರು ಶಕ್ತಿಗಳಾಗಿ ನಿವಾರಿಸುವುದು. ಆ ನಿವಾರಣೆಯೇ ಪರಾಶಕ್ತಿಯು ದುರ್ಗೆಯಾಗಿ, ಮಹಾಲಕ್ಷ್ಮಿಯಾಗಿ, ಸರಸ್ವತಿಯಾಗಿ ರಾಕ್ಷಸರನ್ನು ಸಂಹರಿಸುವುದಾಗಿದೆ.

ರೋಗಾದಿ ಬಾಧೆಗಳೇ ರಾಕ್ಷಸರು. ಕಾವ್ಯಮಯವಾಗಿ, ರೂಪಕಾತ್ಮಕವಾಗಿ ಋಷಿಗಳು ರೋಗಾದಿಗಳನ್ನು ರಾಕ್ಷಸರನ್ನಾಗಿ ಚಿತ್ರಿಸಿದರು. ಹೀಗಾಗಿ ರಾತ್ರಿ ಅಂದರೆ ಹಗಲಿಗೆ ವಿರುದ್ಧವಾದ ರಾತ್ರಿ ಎಂದು ಇಲ್ಲಿ ಭಾವಿಸದೆ ತ್ರಿಗುಣಗಳನ್ನು ಕೊಡುವುದು ಅರ್ಥಾತ್ ಜೀವಾತ್ಮಗಳಿಗೆ ಅಳವಡಿಸುವ ರಾತ್ರಿ ಎಂದೇ ಅರ್ಥೈಸಬೇಕಾಗುತ್ತದೆ. ಈ ಅರ್ಥದಲ್ಲಿಯೇ ಶಿವರಾತ್ರಿ ಅನ್ನುವುದೂ ಬರುತ್ತದೆ.

ನವರಾತ್ರಿ ಹಬ್ಬವು ಕಳೆದ ಮೇಲೆ ಬರುವುದು ಭೂಮೀ ಹುಣ್ಣಿಮೆ – ಗಂಗಾಷ್ಟಮಿ ದೀಪಾವಳಿಗಳು. ಇಲ್ಲೆಲ್ಲ ಲೌಕಿಕಾರ್ಥದಲ್ಲಿ ಪಂಚಭೂತಗಳ ಆರಾಧನೆ ಅಂದರೆ ಭೂಮಿ, ನೀರು, ತೇಜಸ್ಸು ಇವುಗಳ ಆರಾಧನೆ. ಜೀವವಿಕಾಸಕ್ಕೆ ಹಾಗೂ ಜನಿಸಿದ ಜೀವಿಯು ಬದುಕಲಿಕ್ಕೆ ಪಂಚಭೂತಗಳ ಸಂಪೂರ್ಣ ಅನುಗ್ರಹ–ಸಹಕಾರಗಳು ಇರಲಿ ಅನ್ನುವ ಅರ್ಥದಲ್ಲಿ ಲೌಕಿಕವಾಗಿ ಹಾಗೂ ಧಾರ್ಮಿಕವಾಗಿ ಈ ಹಬ್ಬಗಳ ಆಚರಣೆ.

ಆಧ್ಯಾತ್ಮಿಕವಾಗಿ ಬರುವ ಅರ್ಥವು ಇಲ್ಲಿ ಬಹಳ ರೋಚಕವೆನಿಸುವುದು. ಜೀವಾತ್ಮವು ತನ್ನ ಬಂಧನವನ್ನು ಕಳಚಿಕೊಳ್ಳಲು, ಸಂಸಾರಭಾರವನ್ನು ನೀಗಿಕೊಳ್ಳಲು ಉದ್ಯುಕ್ತಗೊಂಡಾಗ ಯೋಗಮಾರ್ಗಕ್ಕೆ ಶರಣು ಹೋಗಲೇಬೇಕಾಗುವುದು. ಆಗ ಪ್ರಾಣಾಯಾಮಾದಿ ಸಾಧನೆಗಳ ಮುಖಾಂತರ ದೇಹದಲ್ಲಿ ಆರು ಗ್ರಂಥಿವಿಶೇಷಗಳನ್ನು ಗುರುತಿಸಲಾಗುವುದು. ಅವಕ್ಕೆ ಮೂಲಾಧಾರ–ಸ್ವಾಧಿಷ್ಠಾನ–ಮಣಿಪೂರ – ಅನಾಹತ –ವಿಶುದ್ಧಿ ಆಜ್ಞಾಚಕ್ರಗಳು ಎಂದೂ ಪದ್ಮಗಳು ಎಂದು ಹೆಸರಿಸಲಾಯಿತು. ಅವುಗಳಲ್ಲಿ ಮೂಲಾಧಾರವು ಪೃಥ್ವೀತತ್ತ್ವದ್ದು. ಯೋಗಿಯು ಗುರುವು ನಿರ್ದೇಶಿಸಿದ ಮಾರ್ಗದಲ್ಲಿ ಪ್ರವರ್ತಿಸಿ ಮೂಲಾಧಾರಕ್ಕೆ ಆಂತರಂಗಿಕ ವಾದ ಸುಷುಮ್ನಾನಾಡಿಯ ಮೂಲಕ ಪ್ರವೇಶಿಸಿ ಅದನ್ನು

ಸ್ವಾಧೀನಪಡಿಸಿಕೊಳ್ಳುವುದೇ ಭೂಮಿ ಹುಣ್ಣಿಮೆಯ ಆಧ್ಯಾತ್ಮಿಕ ಅರ್ಥ. ಭೂತತ್ತ್ವದ ಸ್ವಾಧೀನವಾದ ಮೇಲೆ ಜಲತತ್ತ್ವ; ಜಲತತ್ತ್ವಕ್ಕೆ ಸಂಬಂಧಿಸಿದ ಗ್ರಂಥಿ ಅಥವಾ ಚಕ್ರ ಅಥವಾ ಪದ್ಮ ಸ್ವಾಧಿಷ್ಠಾನ. ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದೇ ಗಂಗಾಷ್ಟಮೀ. ಅನಂತರದ್ದು ಮಣಿಪೂರ (ಕ) ಚಕ್ರ. ಇದು ತೇಜಸ್ತತ್ತ್ವದ್ದು. ಹೀಗೆ ಈ ತತ್ತ್ವಗಳನ್ನು ಸ್ವಾಧೀನಪಡೆಸಿಕೊಳ್ಳುವ ಪ್ರಕ್ರಿಯೆಗಳನ್ನು ಹಬ್ಬಗಳನ್ನಾಗಿ ರೂಡಿಸಿಕೊಂಡದ್ದು. ಭಾರತದ ವೈಶಿಷ್ಟ್ಯ. ಅನಂತರದ ಸರದಿ ವಾಯುತತ್ತ್ವದ ಅನಾಹತಚಕ್ರ ಹಾಗೂ ಆಕಾಶತತ್ತ್ವದ ವಿಶುದ್ಧಿಚಕ್ರ ಮತ್ತು ಸೋಮತತ್ತ್ವದ ಆಜ್ಞಾಚಕ್ರಗಳ ಸ್ವಾಧೀನತೆ.

ಮುಂದೆ ಮಾಘದಲ್ಲಿ ಬರುವುದು ರಥಸಪ್ತಮೀ. ಸೂರ್ಯನು ಸಪ್ತ ತುರಗಗಳ ರಥದಲ್ಲಿ ವಿರಾಜಿಸುವ ಪರ್ವವಿದು ರಥಸಪ್ತಮೀ. ಸೂರ್ಯನೆಂದರೆ ಆತ್ಮ ; ಸೂರ್ಯನೆಂದರೆ ಪರಮಾತ್ಮನೂ ಹೌದು. ಆತ್ಮವು ಮೂಲಾಧಾರಾದಿ ಆರು ಚಕ್ರಗಳೊಂದಿಗೆ ಸಹಸ್ರಾರಪದ್ಮವೆಂಬ ಏಳನೆಯದಾದ ಶಿರಸ್ಥಾನಸ್ಥ ಗ್ರಂಥಿವಿಶೇಷವನ್ನೂ ತನ್ನ ಸಾಧನಾಪಥದಲ್ಲಿ ಸಾಧಿಸಿ ಉತ್ತರಾಭಿಮುಖವಾಗುವುದೇ ರಥಸಪ್ತಮಿಯ ಆಧ್ಯಾತ್ಮಿಕಾರ್ಥ. ಅಧ್ಯಾತ್ಮದಲ್ಲಿ ದಕ್ಷಿಣಾಭಿಮುಖವೆಂದರೆ ಸಂಸಾರದಲ್ಲಿ ವಿಲೀನತೆ ; ಉತ್ತರಾಭಿಮುಖವೆಂದರೆ ಸಂಸಾರದಿಂದ ವಿಮುಖತೆ. ಅಂತೆಯೇ ದಕ್ಷಿಣಾಯನವೆಂದರೆ ಸಂಸಾರದಲ್ಲಿ ಹುಟ್ಟಿ ಬರುತ್ತಿರುವಿಕೆ ; ಉತ್ತರಾಯಣವೆಂದರೆ ಮೋಕ್ಷಮಾರ್ಗಗಮನ. ಈ ಆಧ್ಯಾತ್ಮಿಕ ಅರ್ಥದಲ್ಲಿಯೇ ಮಹಾಭಾರತದಲ್ಲಿ ಭೀಷ್ಮನು ಅರ್ಥಾತ್ ಪ್ರತ್ಯಗಾತ್ಮನು ಉತ್ತರಾಯಣವನ್ನು ನಿರೀಕ್ಷಿಸುತ್ತ ಶರಶಯ್ಯೆಯಲ್ಲಿದ್ದುದು.

ಮುಂದಿನ ಹಬ್ಬವು ಫಾಲ್ಗುಣದಲ್ಲಿ ಬರುವ ಕಾಮದಹನದ ಹುಣ್ಣಿಮೆ. ಯೋಗಿಯು ಯೋಗಮಾರ್ಗದಲ್ಲಿ ಷಟ್‌ಚಕ್ರಗಳನ್ನು ದಾಟಿ ಸಹಸ್ರಾರದಲ್ಲಿ ನೆಲೆನಿಂತಾಗ ಯೋಗಿಯಲ್ಲಿರುವ ಕಾಮನೆಗಳು ಭಸ್ಮಗೊಳ್ಳುವ ಶುಭಸಂದರ್ಭವೇ ಕಾಮದಹನ. ಮುಂದಿರುವ ಚೈತ್ರದಲ್ಲಿ ಶ್ರೀರಾಮನವಮೀ. ಜೀವಾತ್ಮನು ರಜೋಗುಣವನ್ನು ಸಂಪೂರ್ಣ ಹತೋಟಿಗೆ ತಂದು ತನ್ನ ನಿಜಶಕ್ತಿಯೊಂದಿಗೆ ವಿಜೃಂಭಿಸುವುದೇ ರಾಮಾವತಾರದಲ್ಲಿ ವಿಷ್ಣುವು ನಡೆಸಿದ ಅದ್ಭುತಕಾರ್ಯಗಳ ಅರ್ಥ ; ಅಂದರೆ ರಾವಣನ ಹನನ, ಸೀತೆಯ ಪುನಃಪ್ರಾಪ್ತಿ ಹಾಗೂ ಅಯೋಧ್ಯಾಗಮನಗಳ ಆಧ್ಯಾತ್ಮಿಕ ಅರ್ಥ. ಸಹಸ್ರಾರಪದ್ಮದಲ್ಲಿ ಜೀವಾತ್ಮನು ವಿರಾಜಿಸುವುದೇ ರಾಮನು ಸೀತೆಯೊಂದಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾಗುವುದು.

ಹೀಗೆಯೇ ಮುಂದೆ ಬರುವವು ನಾಗಚೌತಿ – ಪಂಚಮೀ – ಕೃಷ್ಣಾಷ್ಟಮೀ ಗಣೇಶ ಚತುರ್ಥಿಗಳು. ಇವೆಲ್ಲವುಗಳ ಆಧ್ಯಾತ್ಮಿಕ ಅರ್ಥಗಳು ಇಲ್ಲಿಯ ಪದ್ಯಗಳಲ್ಲಿ ಸುಲಭಗ್ರಾಹ್ಯವಾಗುವಂತಿವೆ. ಕೊನೆಯಲ್ಲಿ ಬರುವುದು ಮಹಾಲಯ ; ಆತ್ಮದ ಪರಮಾತ್ಮವಿಲೀನತೆ.

೧೮. ನವಗ್ರಹತತ್ತ್ವ ದರ್ಶಿಕಾ

[**ಪೀಠಿಕೆ :** ಆಕಾಶದಲ್ಲಿಯ ನವಗ್ರಹಗಳು ಪ್ರತಿಯೊಂದು ಜೀವಿಯ ಪ್ರಾಕ್ತನ ಕರ್ಮಫಲಗಳಿಗನುಗುಣವಾಗಿ ತಮ್ಮ ಪ್ರಭಾವವನ್ನು ಬೀರುತ್ತ ಜೀವಿಯ ಬದುಕನ್ನು ರೂಪಿಸುತ್ತವೆ ಮತ್ತು ನಡೆಸಿಕೊಂಡು ಹೋಗುತ್ತವೆ. ದೇವತೆಗಳೆಲ್ಲ ಗ್ರಹಗಳ ರೂಪದಲ್ಲಿಯೇ ತಮ್ಮ ಅನುಗ್ರಹ–ಅವಗ್ರಹಾದಿಗಳನ್ನು ಕಾರ್ಯಗತಗೊಳಿಸುವರೆಂಬುದಾಗಿ "ದೇವತಾಃ ಗ್ರಹರೂಪೇಣ ದರ್ಶಯಂತಿ ಶುಭಾಶುಭಮ್" ಎಂದು ಪ್ರಾಚೀನ ಮಹರ್ಷಿಗಳು ಒಡನುಡಿದಿದ್ದಾರೆ. ಮನುಷ್ಯನಿಗೆ ಸಂಬಂಧಿಸಿದಂತೆ ನವಗ್ರಹಗಳು ಭ್ರೂಣಾವಸ್ಥೆಯಲ್ಲಿಯೇ ತಮ್ಮಕಾರ್ಯವನ್ನು ಆರಂಭಿಸಿ ಮಿದುಳಿನ ರೂಪು–ರೇಷೆಗಳೊಂದಿಗೆ ಮನುಷ್ಯನ ಸರ್ವಾವಯವ–ಕಾರ್ಯಚಟುವಟಿಕೆ–ಗತಿ–ಸ್ಥಿತಿಗಳನ್ನು ರೂಪಿಸುತ್ತವೆ. ಈ ಎಲ್ಲ ತತ್ತ್ವಗಳನ್ನೂ ಇಲ್ಲಿ ವಿವೇಚಿಸಲಾಗಿದೆ. ನನಗೆ ಬಹಳ ಆತ್ಮೀಯರೊಬ್ಬರು ಗ್ರಹಗಳ ವಿಗ್ರಹಗಳನ್ನು ಯಾವ ದಿಕ್ಕಿಗೆ ಮುಖಮಾಡುವುದೆಂಬ ವಿಷಯದಲ್ಲಿ ಹಾಗೂ ಗ್ರಹಗಳು ನೋಡುವ ದಿಕ್ಕುಗಳ ವಿಷಯದಲ್ಲಿ ತಮಗಾದ ಗೊಂದಲದ ಸ್ಥಿತಿಯನ್ನು ದೂರವಾಣಿಯ ಮೂಲಕ ನನಗೆ ತಿಳಿಸಿದಾಗ ದೇವತೆಗಳು ಹಾಗೂ ಗ್ರಹಗಳು ಸರ್ವತೋಮುಖಿಗಳು ಎಂದು ನಾನು ಹೇಳಿದೆ. ಒಂದು ಶ್ಲೋಕವಿದ್ದಿದ್ದರೆ ಚೆನ್ನಾಗಿತ್ತು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಆಗ,

"ದೇವತಾಶ್ಚ ಗ್ರಹಾಸ್ಸರ್ವೇ ಸರ್ವದಾ ಸರ್ವತೋಮುಖಾಃ
ಪ್ರಾಣಿವನ್ನಹಿ ಚಿಂತ್ಯಾಸ್ತೇ ಜ್ಯೋತಿವತ್ತಾಂಸ್ತು ಭಾವಯ"

–ದೇವತೆಗಳು ಮತ್ತು ಗ್ರಹಗಳು ಯಾವಾಗಲೂ ಸರ್ವತೋಮುಖಿಗಳು ; ಈ ವಿಷಯದಲ್ಲಿ ಮನುಷ್ಯಾದಿ ಪ್ರಾಣಿಗಳಂತೆ ಅವುಗಳನ್ನು ಭಾವಿಸಲಾಗದು.ಅವೆಲ್ಲವೂ ಜ್ಯೋತಿರೂಪವೆಂದೇ ಭಾವಿಸಬೇಕು ಎಂಬ ಅರ್ಥದ ಈ ಶ್ಲೋಕವನ್ನು ಆಗಲೇ ರಚಿಸಿ ದೂರವಾಣಿಯಲ್ಲಿಯೇ ಹೇಳಿದೆ. ಋಷಿಯೊಬ್ಬರು ಹೇಳಿದ ಮಾತೆಂದು ಅವರು ತಮ್ಮ ಕೃತಿಯಲ್ಲಿ ಈ ಶ್ಲೋಕವನ್ನು ಉದಾಹರಿಸಿದ್ದಾರೆ. ಅವರಿಗೆ ವಂದನಾಪೂರ್ವಕ ಕೃತಜ್ಞತೆಗಳು.]

ಮಹಾಸೂರ್ಯಪರಮಾತ್ಮನ ಗೋಚರಿಪ ರೂಪಗಳು
ನವಗ್ರಹಗಳವು ನಡೆಸುವವೆಲ್ಲವನು ನಿಯಮದಂತೆ ॥ಪ॥

ವೇದೋಪನಿಷತ್ತುಗಳಿಂದ ತಿಳಿದುಬರುವಂತೆ
ಪರಬ್ರಹ್ಮನವ ಮಹಾ ಸೂರ್ಯನಾಗಿಹನು
ಆ ಮಹಾಸೂರ್ಯನಿಂ ಕೋಟಿ ಕೋಟಿ ಸಂಖ್ಯೆಯಲ್ಲಿ
ಗೋಚರಿಪ ಸೂರ್ಯನಕ್ಷತ್ರಗಳು ಮತ್ತವರ ಸಂಸಾರ ॥1॥

ಪೂರ್ವಜನುಮಗಳ ಕರ್ಮಫಲಕನುಸಾರವಾಗಿ
ನವಗ್ರಹಗಳ ಸ್ಥಿತಿಗತಿಯಿಹವು ಪ್ರತಿವ್ಯಕ್ತಿಯಲ್ಲಿ
ಸೂರ್ಯ–ಚಂದ್ರ–ಕುಜ–ಬುಧ–ಬೃಹಸ್ಪತಿ–ಶುಕ್ರ
ಶನಿ–ರಾಹು–ಕೇತುಗಳು ನವಗ್ರಹಗಳೆನಿಸಿಹವು ॥2॥

ಶುಕ್ಲ–ಶೋಣಿತಮಿಲನ ಗರ್ಭಕೋಶದಲಿ
ಜೀವಾತ್ಮನವತರಣಗೆಡೆಗೊಡುತ್ತಿರಲು
ಕಲಿಲ–ಭ್ರೂಣಾವಸ್ಥೆಯಲಿ ಜೀವಾತ್ಮದೊಡನೆ
ಮಸ್ತಿಷ್ಕ ಪಡೆಯುವುದು ತನ್ನ ಅಸ್ತಿತ್ವ ॥3॥

ಜೀವಾತ್ಮನವತರಣ ಪ್ರಾಣಿವರ್ಗದಲಿ
ಯಾವ ಯೋನಿಯಲೆಂದು ಪ್ರಾಕ್ತನ ಕರ್ಮಫಲಗಳವು
ನಿರ್ಧರಿಸಿ ಮೊದಲದಕ್ಕನುಗುಣದ ವೀರ್ಯದೊಳಗೆ
ಜೀವಾತ್ಮವನು ಸೇರಿಸುವ ಪ್ರಕೃತಿಯ ಕಾರ್ಯವದ್ಭುತವು ॥4॥

ಮಿದುಳು ಬೆಳೆಯುತ್ತಿರಲು ಗರ್ಭಕೋಶದಲಿ
ಪೂರ್ವಕರ್ಮಾರ್ಜಿತಫಲಗಳತಿಸೂಕ್ಷ್ಮವಾಗಿ
ಬಂದುಸೇರುವವು ಮಸ್ತಿಷ್ಕದೊಳಗೆ ಕೃತಕರ್ಮ
ಫಲಗಳಿಗನುಗುಣವಾಗಿ ಮೆದುಳಲ್ಲಿ ಗ್ರಹಗಳುದಿಸುವವು ॥5॥

ಮಸ್ತಿಷ್ಕದಲಿ ಮೂಡಿ ಬಂದಿರುವ ಗ್ರಹಗಳವು
ಜೀವಿಯವಯವಗಳು ಮನ ಮತ್ತು ಗುಣವು
ಹೇಗೆ ಇರಬೇಕೆಂದು ಮೊದಲು ನಿರ್ಧರಿಸಿ
ಆ ರೀತಿಯಲಿ ರೂಪುಗೊಳುವಂತೆ ಮಾಡುವವು ॥6॥

ಮಿದುಳೆ ತಾನಿಹುದು ಯಮಧರ್ಮ ಮತ್ತಾ ಚಿತ್ರಗುಪ್ತ
ಜೀವಿಯೆಸಗುವ ಕಾರ್ಯಫಲಗಳನ್ನೆಲ್ಲ
ಗ್ರಹಿಸಿಕೊಳ್ಳುವವ ಚಿತ್ರಗುಪ್ತನೆನಿಸಿರಲು
ಆ ಫಲಕ್ಕನುಗುಣದೆಲ್ಲ ಗ್ರಹಗಳ ರೂಪಕನು ಯಮನು ॥7॥

ಯಾರಿಗಷ್ಟೇ ಅಲ್ಲ ತನಗೂ ತಿಳಿಯದಂತೆ
ಯಾವುದೇ ಕಾರ್ಯವನ್ನೆಸಗಿದರೂ ಒಡನೆ
ಗ್ರಹಿಸಿ ಕಾಪಿಡುವುದದನು ಚಿತ್ರಗುಪ್ತಮಿದುಳು
ದೇವಸೃಷ್ಟಿಯಲಿ ವಿಚಿತ್ರ ಗಣಕಯಂತ್ರವದು ॥8॥

ಖಗೋಲದಲಿ ಸೂರ್ಯ ತಾ ನಕ್ಷತ್ರಗಳಲೊಬ್ಬ
ಆದರವ ಗ್ರಹವಾಗಿ ಮಿದುಳಿನಲಿ ಮೂಡಿ
ಅವರವರ ಕರ್ಮಕ್ಕನುಗುಣದ ಸ್ಥಿತಿಯನ್ನು ಪಡೆದು
ನಡೆಸುವನು ಎಲ್ಲರನು ವಿವಿಧ ವಿಧವಾಗಿ ॥9॥

ಮಹಾಸೂರ್ಯನೇ ಯಮನೆನಿಸಿ ಕೃತಕರ್ಮಫಲಗಳಿಗೆ
ನಿರ್ದೇಶಿಸುತ ನಿಯಮಿತ ಪರಿಣಾಮಗಳನು
ಸುಖದುಃಖಗಳೆಂಬ ಸ್ವರ್ಗ–ನರಕಗಳ ರೂಪಕನಾದ
ಯಮನನ್ನು ಸೂರ್ಯಸುತನೆಂದು ಬಗೆಯಲಾಗುವುದು ॥10॥

ಶನಿಯೆಂಬ ಮತ್ತೊಬ್ಬ ಸೂರ್ಯಸುತನಿಹನು
ಯಮ–ಚಿತ್ರಗುಪ್ತರೀರ್ವರ ಸಾಕಾರ ಮೂರ್ತಿಯಾಗಿ
ಶನಿಯೆಂಬ ಗ್ರಹರೂಪದಲಿ ಕಾಣಿಸಿಕೊಂಡು ಆ ಮಹಾಸೂರ್ಯ
ಯಾವುದೇ ಜೀವಾತ್ಮವನು ಬಿಡದೆ ಲಕ್ಷ್ಮಿಪನು ॥11॥

ಒಂದು ನಾಣ್ಯದ ಎರಡು ಮುಖಗಳೈ ಚಿತ್ರಗುಪ್ತ–ಯಮರು
ಅವರೇ ಶನಿಯವರೇ ವೇದಗಳಲ್ಲಿ ವರುಣ
ಮಹಾಸೂರ್ಯನ ಪ್ರಭೆಯು ಮಿತ್ರಾ–ವರುಣರೆಂದೆನಿಸಿ
ಜಗವನ್ನು ನಡೆಸುತಿದೆ ತನಗೆ ಬೇಕೆನಿಸಿದಂತೆ ॥12॥

ಕೃತಕರ್ಮಫಲವಾಗಿ ಮಿದುಳಿನಲಿ ಮೂಡಿದ್ದ
ನವಗ್ರಹಗಳವು ತಮ್ಮ ಸ್ಥಿತಿಗತಿಗಳನ್ನು
ಅವಯವಗಳಾಕಾರ ಹಸ್ತಾದಿಗಳ ರೇಖೆ
ಮೊದಲಾದ ರೀತಿಯಲಿ ತೋರ್ಪಡಿಸುತಿಹವು ॥13॥

ಜಾತಕಪದ್ಧತಿಯಿರುವಲ್ಲಿ ನವಗ್ರಹಗಳೆಲ್ಲ
ತನ್ವಾದಿ ಹನ್ನೆರಡು ಭಾವಗಳಲ್ಲಿ ನಿಂತು
ಉಚ್ಚ–ನೀಚ–ತ್ರಿಕೋಣ–ಕೇಂದ್ರಾತ್ಮಮಿತ್ರಾರಿಸಮವೆಂಬ
ರಾಶಿಸ್ಥಿತಿಗನುಗುಣವಾಗಿ ಫಲದರ್ರೈ ಕೃತಕರ್ಮಕನುಸಾರವಾಗಿ ॥14॥

ಮೇಷಾದಿ ಮೀನಪರ್ಯಂತ ಹನ್ನೆರಡು ರಾಶಿಗಳು
ಜನ್ಮಸಮಯದಲಿ ಪೂರ್ವದಲ್ಲುದಿತ ರಾಶಿ ಲಗ್ನ
ಲಗ್ನಕ್ಕೆ ತನುಭಾವವೆಂದೂ ಹೇಳಲಾಗುವುದು
ಧನ–ಸಹಜ–ಗೃಹ–ಸಂತತಿ–ವೈರಿ–ಭಾವಗಳು ಮುಂದೆ ॥15॥

ಏಳನೆಯ ರಾಶಿಯಲಿ ಜೀವಸಂಗಾತಿಭಾವ
ಮುಂದೆ ಮೃತಿ–ಭಾಗ್ಯ–ಕರ್ಮ–ಲಾಭ–ವ್ಯಯವು
ದ್ವಾದಶ ಭಾವಗಳೀ ರೀತಿ ಹನ್ನೆರಡು ರಾಶಿಗಳಲಿ
ಮೂರುನೂರಾ ಅರವತ್ತಂಶಗಳು ಹನ್ನೆರಡು ಭಾಗಗಳಲಿ ॥16॥

ಜನ್ಮಸಮಯದಲಿ ಚಂದ್ರನಿರುವ ನಕ್ಷತ್ರದಧಿಪಗ್ರಹದ
ದಶೆಯಿಂದ ಗುಣಿಸುವಿಕೆಯೆಲ್ಲ ದಶಾಭುಕ್ತಿಗಳನು
ಚಂದ್ರನೆಂದರೆ ಮನವು; ಮನವೆ ಕರ್ಮದ ಮೂಲ
ಅದಕೆಂದೆ ಚಂದ್ರನಿಗೆ ಬಹು ಪ್ರಾಶಸ್ತ್ಯವಿಹುದು ॥17॥

ಮನುಜನಂಗೈಯಲ್ಲೂ ನವಗ್ರಹಗಳಿಗೆ ಸ್ಥಾನವಿದ್ದಿಹುದು
ಕಿರಿ–ಪವಿತ್ರ–ಮಧ್ಯಮ–ತೋರು–ಹೆಬ್ಬೆರಳ ಬುಡಗಳವು
ಕ್ರಮವಾಗಿ ಬುಧ–ಸೂರ್ಯ–ಶನಿ–ಗುರು–ಶುಕ್ರರೆಂದೆನಿಸಿಕೊಂಡು
ಫಲವನ್ನು ನೀಡುವವು ತಮ್ಮ ಕೃಶ–ದಪ್ಪ–
ಉಬ್ಬು–ತಗ್ಗುಗಳಿಗನುಸಾರವಾಗಿ ॥18॥

ಕಿರಿಬೆರಳ ಕೆಳ ಪಕ್ಕ ಕುಜನಿಹನು ಅದಕಿಂತ ಕೆಳಗೆ ಚಂದ್ರ
ತೋರು–ಹೆಬ್ಬೆರಳುಗಳ ಮಧ್ಯೆಯೂ ಕುಜನಿಹನು ಮತ್ತೆ
ಅಂಗೈಮಧ್ಯದ ಮಾತೃರೇಖೆಯ ಕೆಳ–ಮೇಲ್ಭಾಗಗಳು ರಾಹು–ಕೇತುಗಳು
ನೆಲಸಿಹರು ಮನುಜನಂಗೈಯಲ್ಲಿ ನವಗ್ರಹಗಳೀ ರೀತಿಯಲ್ಲಿ ॥19॥

ನವ ಸಂಖ್ಯೆಗಳು ಕೂಡ ನವಗ್ರಹಗಳೆನಿಸುವವು
ಒಂದು ಸೂರ್ಯನಾಗಿರಲು ಚಂದ್ರನೆರಡು ಮೂರು ಗುರುವು
ನಾಲ್ಕು ರಾಹುವಿರಲೈದು ಬುಧನಾರು ಶುಕ್ರನಿಹನು
ಏಳು ತಾ ಕೇತುವಿರಲೆಂಟು ಶನಿಯೊಂಬತ್ತು ಕುಜನು ॥20॥

ನವವರ್ಣಗಳಲಿ ಕೆಂಪು ರವಿ ಚಂದ್ರ ನಸುಗೆಂಪುಮಿಶ್ರ ಬಿಳುಪು
ಕುಜನು ಕಡುಗೆಂಪು ಹಸಿರು ಬುಧನರಿಷಿಣವು ಗುರುವು
ಅಚ್ಚಬಿಳುಪು ಶುಕ್ರನಿರೆ ಶನಿ ನೀಲವರ್ಣ
ಕಪ್ಪುವರ್ಣವದು ರಾಹುವಾಗಿರಲು ಧೂಮ್ರವರ್ಣ ಕೇತು ॥21॥

ನವರತ್ನಗಳಲಿ ಮಾಣಿಕ್ಯ ರವಿ; ಚಂದ್ರ ಮುತ್ತು
ಕುಜ ಹವಳ;ಬುಧ ಪಚ್ಚೆ;ಗುರು ಪುಷ್ಯರಾಗ
ಶುಕ್ರ ವಜ್ರ; ಶನಿ ನೀಲ; ಗೋಮೇದಕವು ರಾಹು
ಕೇತು ವೈಡೂರ್ಯವೀ ರೀತಿ ನವಗ್ರಹಗಳೇ ನವರತ್ನಗಳು ದಿಟದಿ ॥22॥

ರವಿ ಗೋದಿ; ಚಂದ್ರನಕ್ಕಿ; ಕುಜ ತೊಗರಿ; ಬುಧ ಹೆಸರು; ಗುರು ಕಡಲೆಕಾಳು
ಶುಕ್ರನವರೆ; ಶನಿ ಕಪ್ಪು ಎಳ್ಳು;ರಾಹು–ಕೇತುಗಳು ಉದ್ದು–ಹುರುಳಿಗಳು
ಆಕಾರದಲಿ ರವಿ ವೃತ್ತ; ಚಂದ್ರ–ಗುರು ಚತುಷ್ಕೋಣ;ಕುಜ ತ್ರಿಕೋಣ
ಬುಧ ಬಾಣ; ಶನಿ ಬಿಲ್ಲು; ಶುಕ್ರ ಷಟ್ಕೋಣ ರಾಹು ಮೊರ; ಕೇತು ಧ್ವಜವು ॥23॥

ಎಕ್ಕೆಯಲಿ ರವಿ;ಮುತ್ತುಗದಲಿ ಚಂದ್ರ;ಖದಿರದಲಿ ಕುಜ;ತಾನುತ್ತರಣಿಯಲ್ಲಿ ಬುಧನು
ಗುರುವಶ್ವತ್ಥದಲಿ;ಶುಕ್ರನೌದುಂಬರದಲಿ;ಶನಿ ಶಮೀವೃಕ್ಷದಲ್ಲಿ
ರಾಹು ದೂರ್ವೆಯಲಿ;ಕೇತು ದರ್ಬೆಯಲಿ
ಈ ತೆರದಿ ನವಗ್ರಹಗಳಾವಾಸ ವನಸ್ಪತಿಗಳಲ್ಲಿ ॥24॥

ಪರಬ್ರಹ್ಮಶಕ್ತಿ ತಾ ಪರಾಪ್ರಕೃತಿರೂಪದಿಂ ಮೂಲಪ್ರಕೃತಿಯಾಗಿ
ನವಗ್ರಹಗಳ ರೂಪದಿಂದೆಲ್ಲ ಕಡೆಗಳಲಿ ವಿಜೃಂಭಿಸುತ್ತ
ತಾನೇ ಯಮ–ಚಿತ್ರಗುಪ್ತ–ವರುಣಾದಿಗಳೆಲ್ಲವಾಗಿ
ಜಗವನ್ನು ನಡೆಸುವಳು ತನ್ನಿಚ್ಛೆಗನುಸಾರವಾಗಿ ॥25॥

ಶನಿ–ರಾಹು–ಕೇತುಗಳ ವಿಷಯದಲಿ ಹೆದರಿಕೆಯು
ಸಾಮಾನ್ಯವೆಂಬಂತೆ ಕಂಡು ಬರುವುದೆಲ್ಲೆಡೆಗೂ
ಕೃತಕರ್ಮಪಾಪವನು ತೊಳೆದು ಜೀವಾತ್ಮವನು
ಪರಮಪದಕರ್ಹಗೊಳಿಸುವ ಗ್ರಹಗಳಿವು ನಿಜದಿ ॥26॥

ದಶೇಂದ್ರಿಯಗಳನು ತನಗೆ ಬೇಕಾದಂತೆ
ನಡೆಸಿಕೊಳ್ಳುವ ಮನವು ವೇದದಲಿ ಇಂದ್ರ
ಸರ್ವೇಂದ್ರಿಯಗಳಿತರ ದೇವತೆಗಳಾಗಿಹರು
ದಿವ್ಯರೂಪಕಕೆ ತಂದರಾ ಋಷಿಗಳವರನ್ನು ॥27॥

ದೇವಾನುದೇವತೆಗಳ ಕುರಿತು ಪೂಜಾಯಜ್ಞಗೈದಲ್ಲಿ
ಸುಪ್ರಸನ್ನರು ಚಂದ್ರಾದಿ ಸರ್ವಗ್ರಹಗಳವು
ಪರಮಾತ್ಮನೆಂಬ ಮಹಾಸೂರ್ಯನಲ್ಲಿ ಮೂಡಿ
ಅನುಗ್ರಹಿಪರು ಒಳಿತಿಗಾಗಿ ಎಂದರಾ ಋಷಿಗಳವರು ॥28॥

ಪರಾತ್ಪರ–ಪರಾಶಕ್ತಿಯರು ನಾಣ್ಯದೆರಡು ಮುಖಗಳಿರುವಂತೆ
ಮಹಾಸೂರ್ಯನ ದಿವ್ಯ ಪ್ರಭೆಯು ತಾ ಪರಾಶಕ್ತಿಯಾಗಿಹುದು
ಆ ಮಹಾಶಕ್ತಿಯ ವಿವಿಧತೆಗಳೇ ದೇವಾನುದೇವತೆಯರೆಲ್ಲ
ದೇವತೆಗಳೆಲ್ಲ ಭೂಮಿಗೆಟುಕುವುದು ನವಗ್ರಹಗಳ ರೂಪದಲ್ಲಿ ॥29॥

ಪರಾಶಕ್ತಿಯೇ ದೇವತೆಗಳೆಲ್ಲವೂ; ನಿಜದಾತ್ಮಕಾಯಕ ತಥಾ
ಸ್ತೋತ್ರ–ಪೂಜಾ–ಯಜ್ಞಾದಿಗಳಿಂ ದೇವಾನುದೇವತೆಗಳನ್ನು
ಪ್ರೀತಗೊಳಿಸಿದರಾಗ ನವಗ್ರಹಗಳೊಲುಮೆ ಮನುಜರಿಗೆ
ಅದರಿಂ ಪರಾತ್ಪರ–ಪರಾಶಕ್ತಿಯರು ಪ್ರಸನ್ನರಾಗುವರು ॥30॥

ಆತ್ಮ–ಪರಮಾತ್ಮ–ರುದ್ರ–ಸ್ವಪಿತೃರೂಪಗಳಲ್ಲಿ ರವಿಯಾಗಿ
ಲಲಿತಾ–ಪಾರ್ವತಿ–ಶಾರದಾ–ಸ್ವಮಾತೃರೂಪಗಳಲಿ ಚಂದ್ರನಾಗಿ
ಮೃತ್ಯುಂಜಯ–ಷಣ್ಮುಖ–ಸ್ವಭ್ರಾತೃ–ಭಗಿನೀ–ಮಿತ್ರಾದಿರೂಪಿ ಕುಜನಾಗಿ
ರೂಪುಗೊಂಡೆಲ್ಲ ಜೀವಾತ್ಮರನು ಮುನ್ನಡೆಸುವವಳು ಪರಮಾತ್ಮಶಕ್ತಿ ॥31॥

ವಿಷ್ಣು–ಮನೆ–ಕ್ಷೇತ್ರ–ವಾಹನ–ವಿದ್ಯಾ–ಬುದ್ಧಿಗಳರೂಪಿ ಬುಧನಾಗಿ
ಬ್ರಹ್ಮ–ಗುರು–ಜೀವಾತ್ಮ–ಪುಣ್ಯಾದಿಗಳ ರೂಪಗಳಲಿ ಗುರುವಾಗಿ
ಮಹಾಲಕ್ಷ್ಮಿ–ಕಲಾಚಾತುರ್ಯ–ಜೀವನಸಂಗಾತಿರೂಪಿ ಶುಕ್ರನಾಗಿ
ರೂಪುಗೊಂಡು ತಾನನುಗ್ರಹಗೈಯುವಳು ಮಹಾಸೂರ್ಯಶಕ್ತಿ ॥32॥

ವೆಂಕಟೇಶ–ಮಾರುತಿ–ಕರ್ಮಜವಿಧಿರೂಪಿ ಶನಿಗ್ರಹವಾಗಿ
ಸರ್ಪ–ಸುಬ್ರಹ್ಮಣ್ಯ–ಶಾಪ–ತಾಪಗಳ ರೂಪಗಳಲಿ ರಾಹುವಾಗಿ
ಮಹಾಗಣಪತಿ–ಪುನರ್ಜನ್ಮ–ಮೋಕ್ಷಕಾರಕ ಕೇತುವಾಗಿ
ನಿತ್ಯಾನುಗ್ರಹಗೈಯುವವಳಾ ಪರಮಪುರುಷಶಕ್ತಿ ॥33॥

ಪರಹಿಂಸೆ–ಪರವಸ್ತ್ವಪಹರಣ–ಸ್ವಾರ್ಥಾದಿಗಳೇ ಪೂರ್ವಜನ್ಮಗಳಲ್ಲಿ
ತುಂಬಿಕೊಂಡಿರಲು ಶುಭಫಲಗಳನ್ನು ನೀಡುವ ನವಗ್ರಹಗಳೆಲ್ಲ
ವೈರಿ–ದುಃಸ್ಥ–ನೀಚವ್ಯಯಾದಿರಾಶಿಗಳಲ್ಲಿ ಬಂದು
ಆ ಆ ಫಲಗಳನಶುಭಗೊಳಿಸುವುದು ನಿಶ್ಚಿತವು ॥34॥

ಯಾರು–ಯಾರಿಗೆ ದ್ರೋಹ ಬಗೆಯಲಾಯಿತೊ ಹಿಂದೆ
ಅವಕೆ ಸಂಬಂಧಿಸಿದ ಗ್ರಹಗಳವು ತಾವು
ಯಮಚಿತ್ರಗುಪ್ತಸ್ಥಸ್ವಮಿದುಳು ಹೇಳುವ ರೀತಿ
ಆ ಆ ಫಲಕ್ಕನುಗುಣದ ಸ್ಥಾನ ಪಡೆಯುವವು ॥35॥

ಯಾವುದೇ ಕಷ್ಟಕ್ಕೆ ಯಾವುದೇ ತೊಂದರೆಗೆ
ಬೇರೆ ಯಾರೋ ಕಾರಣರು ಖಂಡಿತದಲಲ್ಲ
ತನ್ನದೇ ಪೂರ್ವಾರ್ಜಿತ ಪ್ರಾರಬ್ಧವೆಂಬ ವಿಧಿಯು
ಎಲ್ಲವನು ನಡೆಸುವುದು;ಹೊಣೆ ನಮಗೆ ನಾವೇ ॥36॥

ಊಟವುಸಿರಾಟಸಹಿತೆಲ್ಲ ಕಾರ್ಯಗಳು
ಪ್ರಕೃತಿಪರಮಾತ್ಮರಿಗೆ ಸಲ್ಲಿಸುವ ಸೇವೆ
ಎಂಬ ದೃಢಭಾವವದು ನಿಜದಿ ಬೇರೂರಿದರೆ
ಕೇವಲವಾಗಿ ಸರ್ವಶುಭಪ್ರದರು ನವಗ್ರಹಗಳೆಲ್ಲ ॥37॥

ಸ್ವಾರ್ಥವನ್ನು ಸಂಪೂರ್ಣ ಕಿತ್ತೆಸೆದು ಮತ್ತೆ
ಗೀತೆ ಹೇಳುವ ಲೋಕಸಂಗ್ರಹಕೆ ಜಗದ ವಿಕಸನಕೆ
ತನ್ನ ಮನಕೊಪ್ಪುವ ಕರ್ತವ್ಯಲೀನತೆಯು
ನವಗ್ರಹಗಳಿಂ ಜೀವಿಯನು ಮುಕ್ತಗೊಳಿಸುವುದು ॥38॥

ಸ್ವಾರ್ಥವನ್ನಿಟ್ಟು ಪುಣ್ಯಕಾರ್ಯದಲಿದ್ದರೂ ಕೂಡ
ಆ ಪುಣ್ಯಫಲದನುಭವಕೆಂದು ಮತ್ತೆ ಜನನ – ಮರಣ
ನವಗ್ರಹಗಳವು ಅವಕ್ಕನುಗುಣವಾಗಿ ಬಂದು
ಮೋಕ್ಷವನು ಮತ್ತಷ್ಟು ದೂರಗೊಳಿಸುವುದು ನಿಶ್ಚಿತವು ॥39॥

ಸತತ ಕರ್ತವ್ಯದಲಿದ್ದು ಫಲವನ್ನು ಇನಿತು ಲಕ್ಷಿಸದೆ
ಎಲ್ಲವಕ್ಕೂ ಮೂಲ ಪರಮಾತ್ಮನೆಂಬ
ತಿಳುವಳಿಕೆಯಲಿ ಮತ್ತು ಸೋS ಹಂಭಾವದಲಿ ತಾನಿದ್ದು
ಪರಮಾನಂದಲೀನನಾಗಲು ಪರಮಗುರುಪಾದಕರುಣೆಯಿರಲಿ ॥40॥

ಮಹಾಸೂರ್ಯಪರಮಾತ್ಮನ ಗೋಚರಿಪ ರೂಪಗಳು
ನವಗ್ರಹಗಳವು ನಡೆಸುವವೆಲ್ಲವನು ನಿಯಮದಂತೆ ॥ಪ॥

ನವಗ್ರಹತತ್ತ್ವದರ್ಶಿಕಾ

ಜ್ಯೋತಿಷ್ಯವು ವೇದಗಳ ಶಿಕ್ಷಾ – ಕಲ್ಪ – ವ್ಯಾಕರಣ – ಜ್ಯೋತಿಷ್ಯ – ಛಂದಸ್ಸು – ನಿರುಕ್ತಗಳೆಂಬ ಆರು ಅಂಗಗಳಲ್ಲಿ ಒಂದು ಅಂಗವಾಗಿದ್ದರೂ ಇದಕ್ಕಿರುವ ಪ್ರಾಮುಖ್ಯ ಮತ್ತೆ ಯಾವುದಕ್ಕೂ ಇಲ್ಲವೆಂದು ಹೇಳಲೇಬೇಕಾಗುತ್ತದೆ. ಜ್ಯೋತಿಷ್ಯವು ಭವಿಷ್ಯದರ್ಶಕ ಶಾಸ್ತ್ರ ಅನ್ನುವುದೇ ಇದಕ್ಕೆ ಕಾರಣ. ವೇದದ ಋಷಿಗಳು ಹೋಮ–ಹವನಗಳಿಗೆ ಶುಭಾಶುಭ ಸಮಯವನ್ನರಿಯಲು ಸಹಕಾರಿಯಾಗಿ ಜ್ಯೋತಿಷ್ಯವನ್ನು, ಅರ್ಥಾತ್ ಗ್ರಹಗಣಿತ–ಗ್ರಹಫಲಶಾಸ್ತ್ರವನ್ನು ರೂಢಿಸಿದರು. ಆದರೆ ಕಾಲಾನುಗತವಾಗಿ ಜನರು ತಮ್ಮ ಭವಿಷ್ಯವನ್ನು ತಿಳಿಯಲಿಕ್ಕಾಗಿಯೇ ಇರುವ ಶಾಸ್ತ್ರವೆಂದು ಇದನ್ನು ಭಾವಿಸತೊಡಗಿದ್ದು ಒಂದು ಕೌತುಕಮಯ ವಿಶೇಷ ಹಾಗೂ ಈ ಜ್ಯೋತಿಷ್ಯಶಾಸ್ತ್ರವನ್ನು ಸ್ವಾರ್ಥ ಸಾಧಕ ಜ್ಯೋತಿಷಿ ಗಳನೇಕರು ಕೇವಲ ಸಂಪತ್ತನ್ನು ಗಳಿಸಲು ಒಂದು ಸಾಧನವನ್ನಾಗಿ ಪರಿವರ್ತಿಸಿ ಕೊಂಡದ್ದು ಒಂದು ದುರಂತ.

ಭವಿಷ್ಯಸೂಚಕ ಶಾಸ್ತ್ರವಾಗಿ ಜ್ಯೋತಿಷ್ಯವು ಜನಸಾಮಾನ್ಯರಲ್ಲಿಯೂ ಬಳಕೆಯಲ್ಲಿ ಬಂದಿದ್ದರೂ ಇದರ ಮೂಲ ಉದ್ದೇಶ ಸಮಾಜದ ಸರ್ವತೋಮುಖ ಅಭಿವೃದ್ಧಿಯೇ

ಆಗಿದೆ. ಆದರೆ, ಆ ರೀತಿಯಲ್ಲಿ ಇದನ್ನು ಬಳಸಿಕೊಳ್ಳಬೇಕಷ್ಟೇ. ಯಾರಿಗೇ ಆಗಲಿ ಯಾವುದೋ ಕಷ್ಟವು ಬಂದಾಗ, ರೋಗ–ರುಜಿನಗಳು ಬಾಧಿಸತೊಡಗಿದಾಗ ಅವುಗಳು ತಮ್ಮ ಜಾತಕದಲ್ಲಿಯ ಯಾವ ಗ್ರಹವು ಆ ಕಷ್ಟವನ್ನು ಕೊಡುತ್ತಾ ಇದೆ ಹಾಗೂ ಅದಕ್ಕೆ ಪರಿಹಾರವೇನು ಎಂದು ತಿಳಿಯಲು ಅವರು ಜ್ಯೋತಿಷಿಗಳ ಬಳಿಗೆ ಹೋಗುವುದು ಸಹಜವೆನಿಸುವ ವಾಸ್ತವ. ಆಗ ಜ್ಯೋತಿಷ್ಯದ ಉದ್ದೇಶವು ಯಾವ ಗ್ರಹವು ತೊಂದರೆಯನ್ನು ಕೊಡುವಂಥಾದ್ದು ಅನ್ನುವುದನ್ನು ತಿಳಿಸುವ ಜೊತೆಯಲ್ಲಿ ತೊಂದರೆ ಕೊಡಲು ಹೊರಟ ಆ ಗ್ರಹದ ಗತಿ–ಸ್ಥಿತಿಗಳು ಯಾವ ಕಾರಣದಿಂದ ಬಂದದ್ದು ಅನ್ನುವದನ್ನು ತಿಳಿಸುತ್ತ ಅವುಗಳಿಂದ ಹೊರಗೆ ಬರುವುದು ಹೇಗೆ ಅನ್ನುವುದನ್ನು ತಿಳಿಸುವುದೇ ಆಗಿದೆ.

ಆದರೆ ಸಾಮಾನ್ಯವಾಗಿ ಜ್ಯೋತಿಷಿಗಳು ಯಾವ ಯಾವ ಪೂಜೆ – ಹೋಮಾದಿಗಳಿಂದ, ವ್ರತ–ಕಥೆಗಳ ಆಚರಣೆಯಿಂದ ಬಂದ ಕಷ್ಟದಿಂದ ಪಾರಾಗಬಹುದು ಅನ್ನುವುದನ್ನು ಮಾತ್ರ ಸೂಚಿಸುವರೇ ಹೊರತು ಕಷ್ಟ ಕೊಡಲು ತೊಡಗುವ ರೀತಿಯಲ್ಲಿ ಸಂಬಂಧಿಸಿದ ಗ್ರಹವು ಆ ಜಾತಕ ಕುಂಡಲಿಯಲ್ಲಿ ಇರಲು ಕಾರಣಗಳಾವವು ಮತ್ತು ಆ ಕಾರಣಗಳನ್ನು ಸರಿಪಡಿಸಿಕೊಳ್ಳುವ ಬಗೆ ಯಾವುದು ಅನ್ನುವುದು ತಿಳಿಸಿಕೊಡುವ ಗೋಜಿಗೇ ಹೋಗುವುದಿಲ್ಲ. ಗ್ರಹಗಳು ಕಷ್ಟಕೊಡುವ ರೀತಿಯಲ್ಲಿ ಆ ಜಾತಕದಲ್ಲಿ ಇರುವುದು ಆ ವ್ಯಕ್ತಿಯ ಹಿಂದಿನ ಜನ್ಮದ ಅಥವಾ ಜನ್ಮ–ಜನ್ಮಗಳ ದುಷ್ಕೃತ್ಯಗಳ ಪರಿಣಾಮವೇ ಆಗಿರುತ್ತದೆ. ಅದನ್ನು ಸರಿಪಡಿಸಿಕೊಳ್ಳಲು ಪೂಜಾ–ಹೋಮಾದಿಗಳಿಗೆ ಮಾತ್ರ ಶರಣಾಗದೆ ತಮ್ಮ ನಡವಳಿಕೆಯನ್ನೂ ತಿದ್ದಿಕೊಳ್ಳಬೇಕಾಗುವುದು. ಹಿಂದಿನ ಜನ್ಮದಲ್ಲಿ ತಂದೆಯನ್ನು ಸರಿಯಾಗಿ ನಡೆಸಿಕೊಳ್ಳದ ವ್ಯಕ್ತಿಗೆ ಪ್ರಸ್ತುತ ಜನ್ಮದಲ್ಲಿ ತಂದೆಯನ್ನು ಸೂಚಿಸುವ ಗ್ರಹವು ದುಃಸ್ಥಾನಕ್ಕೆ ಸರಿದು ತಂದೆಯಿಂದಲೇ ಆಪತ್ತು ಬರುವಂತೆ ಮಾಡುವುದು. ಗುರುವಿಗೆ ದ್ರೋಹ ಬಗೆದಿದ್ದಲ್ಲಿ, ಅಪಮಾನಗೈದಿದ್ದಲ್ಲಿ ಎಷ್ಟೇ ಪ್ರಯತ್ನಿಸಿದರೂ ವಿದ್ಯೆ ಲಭಿಸದಿರುವಂತೆ ವಿದ್ಯಾಸ್ಥಾನಾಧಿಪಗ್ರಹವು ಜಾತಕದಲ್ಲಿ ದುರ್ಬಲ ಸ್ಥಿತಿಯಲ್ಲಿ ನಿಲ್ಲುವುದು. ಯಾರು–ಯಾರಿಗೆ ಯಾವ ಯಾವ ರೀತಿಯಲ್ಲಿ ದುಷ್ಕೃತ್ಯ ನಡೆದಿದೆಯೋ ಅವರಿಗೆ ಆ ರೀತಿಯಲ್ಲಿಯೇ ತೊಂದರೆಗಳು ಬರುವಂತೆ ಗ್ರಹಗಳು ಜಾತಕದಲ್ಲಿ ಸ್ಥಾನವನ್ನು ಪಡೆಯುತ್ತವೆ. ಹಿಂದಿನ ಜನ್ಮದಲ್ಲಿ ವಿದ್ಯೆಯನ್ನು ದುರುಪಯೋಗಪಡಿಸಿಕೊಂಡಿದ್ದಲ್ಲಿ ಪ್ರಸ್ತುತ ಜನ್ಮದಲ್ಲಿ ಎಷ್ಟೇ ವಿದ್ಯಾಪ್ರಾವೀಣ್ಯವಿದ್ದರೂ ಯೋಗ್ಯ ಉದ್ಯೋಗವೇ ದೊರೆಯುವುದಿಲ್ಲ. ಇದೇ ರೀತಿ ಎಲ್ಲವೂ. ರೋಗಾದಿಗಳ ವಿಷಯದಲ್ಲಿಯೂ ಹೀಗೆಯೇ. ಆಗೆಲ್ಲ ಯಾರಿಗೋ, ಯಾವ ಪ್ರಾಣಿಗೋ ಯಾವುದೇ ಅವಯವಕ್ಕೆ ಘಾಸಿಗೊಳಿಸಿದ್ದು ಇದ್ದಲ್ಲಿ ಪ್ರಸ್ತುತ ಜನ್ಮದಲ್ಲಿ ಅದೇ ಅಂಗಕ್ಕೆ ಪೆಟ್ಟು ಬೀಳುವುದು ಅಥವಾ ಆ ಅಂಗವು ರೋಗದಿಂದ ಬಳಲುವುದು. ಹೀಗೆ ಪ್ರತಿಯೊಂದು ಕಷ್ಟಕ್ಕೂ ಹಾಗೂ ಸುಖಕ್ಕೂ ಹಿಂದಿನ ಜನ್ಮಗಳಲ್ಲಿ ನಡೆಸಿದ ಕೆಟ್ಟ ಅಥವಾ ಒಳ್ಳೆಯ

ಕೃತ್ಯಗಳ ಪರಿಣಾಮವೇ ಕಾರಣವಾಗಿದ್ದು ಅವನ್ನು ಸುಧಾರಿಸಿಕೊಳ್ಳುವುದೇ ಮುಂದೆ ಇಹದಲ್ಲಿ ಹಾಗೂ ಜನ್ಮ–ಜನ್ಮಾಂತರಗಳಲ್ಲಿ ಅಂತಹ ತೊಂದರೆ ಬರದಿರುವಂತೆ ಮಾಡುವ ಉಪಾಯ ಅನ್ನುವುದನ್ನು ಬಿಂಬಿಸಬೇಕಾದುದು ಜ್ಯೋತಿಷ್ಯದ ನಿಜವಾದ ಉದ್ದೇಶ. ಯಾವುದೇ ಅಪಘಾತ – ಆಘಾತಗಳು ಕೇವಲ ಆಕಸ್ಮಿಕ ಎಂದು ಭಾವಿಸುವುದು ಹಾಗೂ ಬಿಂಬಿಸುವುದು ನಿಜವಾಗಿಯೂ ಘನಘೋರತಪ್ಪು.

ಆ ಆಕಸ್ಮಿಕವು ಘಟಿಸಲು ಕಾರಣ ಪೂರ್ವಜನ್ಮಾರ್ಜಿತ ದುಷ್ಕೃತ್ಯಫಲವೇ ಹೊರತು ಅನ್ಯಥಾ ಅಲ್ಲ ; ಅದೇ ವಾಹನದಲ್ಲಿದ್ದ ಕೆಲವರಿಗೆ ಮೂಳೆ ಮುರಿಯುವುದು ಹಾಗೂ ಇನ್ನು ಕೆಲವರಿಗೆ ಏನೂ ಆಗದೇ ಇರುವುದು ಈ ಮುಂತಾದ ಘಟನೆಗಳು ಈ ವಾಸ್ತವ ಅರ್ಥಕ್ಕೆ ಉದಾಹರಣೆಗಳಾಗುತ್ತವೆ. ಮುಂದೆ ಯಾವುದೇ ಗ್ರಹವೂ ಕಷ್ಟಕೊಡುವ ಸ್ಥಾನಕ್ಕೆ ಹೋಗದ ರೀತಿಯಲ್ಲಿ, ಸುಖವನ್ನೇ ವಿತರಿಸುವ ಸ್ಥಾನವನ್ನು ಪಡೆಯುವ ರೀತಿಯಲ್ಲಿ ಇರಬೇಕಾದರೆ ತನ್ನ ನಡವಳಿಕೆಯನ್ನು, ತನ್ನ ಕರ್ತವ್ಯ–ಕರ್ಮಗಳನ್ನು ಹೇಗೆ ತಿದ್ದಿಕೊಳ್ಳಬೇಕು ಅನ್ನುವುದನ್ನು ಪೃಚ್ಛಕನಿಗೆ ಜ್ಯೋತಿಷಿಯು ಮನವರಿಕೆ ಮಾಡಿಕೊಟ್ಟಾಗ ಮುಂದೆ ಸಮಾಜದಲ್ಲಿ ಅಂತಹ ದುಷ್ಕೃತ್ಯಗಳಿಗೆ ಆಸ್ಪದವಿಲ್ಲದಂತಾಗುವುದು ಹಾಗೂ ಜಗತ್ತಿನ ಎಲ್ಲರೂ ಸುಖಿಗಳೇ ಆಗುವರು. ಹೀಗೆ ಜ್ಯೋತಿಷ್ಯವು ಸಮಾಜದಲ್ಲಿ ಶಾಂತಿ–ನೆಮ್ಮದಿಗಳಿಗೆ ಕಾರಣವಾಗುವುದು.

ಆಕಾಶದಲ್ಲಿ ಗೋಚರಿಸುವ ನಮ್ಮ ಸೂರ್ಯನು ಕ್ಷೀರಪಥದಲ್ಲಿಯ ಕೋಟಿಗಟ್ಟಲೆ ಸೂರ್ಯರಲ್ಲಿ ಒಬ್ಬನಾಗಿದ್ದು ಈ ಕೋಟಿಗಟ್ಟಲೆ ಸೂರ್ಯರು ಈಶಾವ್ಯಾಸ್ಯ ಉಪನಿಷತ್ತು ತನ್ನ ಹದಿನಾರನೆಯ ಮಂತ್ರದಲ್ಲಿ ಸೂಚಿಸುವ ಆ ಮಹಾಸೂರ್ಯನ ಕಿರಣಗಳೇ ಆಗಿವೆ, ಭಾಗಗಳೇ ಆಗಿವೆ, ಅಂಗಗಳೇ ಆಗಿವೆ. ನಮಗೆ ಗೋಚರಿಸುವ ಗ್ರಹಗಳಿಗೆಲ್ಲ ಕಾರಣೀಭೂತ ಈ ನಮ್ಮ ಸೂರ್ಯ. ಆದುದರಿಂದ ಈ ಗ್ರಹಗಳನ್ನೆಲ್ಲ ಸೌರಸಂಸಾರವೆಂದು ಗುರುತಿಸಲಾಗುತ್ತದೆ. ಈ ಗ್ರಹಗಳ ಜೊತೆಗೆ ನಕ್ಷತ್ರವೆನಿಸಿದ ಆ ಸೂರ್ಯನೂ ಒಂದು ಗ್ರಹವಾಗಿ ಜಾತಕಗಳಲ್ಲಿ ಅರ್ಥಾತ್ ಜ್ಯೋತಿಷ್ಯದಲ್ಲಿ ಗಣಿಸಲ್ಪಡುವನು.

ಯಾವುದೇ ದೇವತೆಯಿರಬಹುದು. ಅದು ನೇರವಾಗಿ ಫಲವನ್ನು ಕೊಡಲಾರದು ; ಯಾವುದೋ ಗ್ರಹದ ಮೂಲಕವೇ ಅದು ಫಲವನ್ನು ಕೊಡುತ್ತದೆ. ಅದಕ್ಕಾಗಿ ದೇವತಾ ಗ್ರಹರೂಪೇಣ ದರ್ಶಯಂತಿ ಶುಭಾಶುಭಮ್" ಎಂಬ ಉಕ್ತಿಯು ಪ್ರಾಚೀನಕಾಲದಿಂದಲೂ ಪ್ರಚಲಿತವಾಗಿ ಇದ್ದದ್ದು. ನವಗ್ರಹಹೋಮವನ್ನು ನಡೆಸಿದರೆ ನವಗ್ರಹಗಳಿಗೆ ಹೇಳಲ್ಪಟ್ಟ ದೇವರುಗಳು ಆ ಗ್ರಹಗಳ ಮೂಲಕ ತೃಪ್ತರಾಗಿ ಆ ಗ್ರಹಗಳ ಮೂಲಕವೇ ಶುಭವನ್ನುಂಟು ಮಾಡುತ್ತವೆ. ಆದರೆ ಆ ಶುಭಗಳು ಕೇವಲ ತಾತ್ಕಾಲಿಕವೇ ಹೊರತು ಶಾಶ್ವತವಾಗಿ ಶುಭವನ್ನುಂಟು ಮಾಡುವುದು ವ್ಯಕ್ತಿಯು ತನ್ನ ನಡವಳಿಕೆಯನ್ನು ತಿದ್ದಿಕೊಂಡು ತನ್ನಿಂದ ಯಾರಿಗೂ ಯಾವುದೇ ವಿಧವಾದ ತೊಂದರೆಯಾಗದಂತೆ ಎಚ್ಚರ ವಹಿಸಿದಾಗ ಹಾಗೂ

ಸಾಧ್ಯವಾದರೆ ತನ್ನಿಂದ ಇತರರಿಗೆ ಶುಭವಾಗುವಂತೆ ಪ್ರವರ್ತಿಸಿದಾಗ ಮಾತ್ರ ಅನ್ನುವುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಅದೇ ದಿನ ಅದೇ ಹೊತ್ತಿನಲ್ಲಿ ಅದೇ ಊರಿನಲ್ಲಿ ಜನಿಸಿದ ಮಕ್ಕಳೆಲ್ಲವೂ ಮುಂದೆ ಒಂದೇ ರೀತಿಯ ಜೀವನದಲ್ಲಿ ಇರುವುದಿಲ್ಲವೆನ್ನುವುದನ್ನು ಅವಶ್ಯವಾಗಿ ಗಮನಿಸಬೇಕು. ಇದಕ್ಕೆ ಕಾರಣ ಆ ಆ ಮಗುವಿನ ಜಾತಕದಲ್ಲಿ ರೂಪುಗೊಳ್ಳುವ ಗ್ರಹಗಳ ಸೂಕ್ಷ್ಮಾತಿಸೂಕ್ಷ್ಮ ನಡವಳಿಕೆ. ಅದೇ ಸಮಯದಲ್ಲಿ ಜನಿಸಿದ ಮಕ್ಕಳೆಲ್ಲರ ಜನ್ಮಲಗ್ನವು ಒಂದೇ ಆಗಿದ್ದರೂ ಹಾಗೂ ಗ್ರಹಗಳೆಲ್ಲವುಗಳ ಸ್ಥಿತಿ–ಗತಿಗಳು ಒಂದೇ ಆಗಿದ್ದರೂ ಆ ಮಕ್ಕಳ ಭವಿಷ್ಯವು ಭಿನ್ನ–ಭಿನ್ನವಾಗಿರಲು ಕಾರಣ ಆ ಗ್ರಹಗಳ ಸೂಕ್ಷ್ಮಾತಿಸೂಕ್ಷ್ಮ ಸ್ಥಿತಿಗಳೇ ಆಗಿರುತ್ತವೆ; ಈ ಸೂಕ್ಷ್ಮಾತಿಸೂಕ್ಷ್ಮ ಸ್ಥಿತಿಗಳು ಅಂಗೈಗಳಲ್ಲಿ ಸ್ಪಷ್ಟವಾಗಿ ಗೋಚರಿಸುವವು.

ಆ ಮಕ್ಕಳೆಲ್ಲರ ಅಂಗೈಯಲ್ಲಿಯ ರೇಖೆಗಳು ಅವುಗಳ ಮುಂದಿನ ಜೀವನದ ನಡೆಗನುಸಾರವಾಗಿ ಭಿನ್ನವಾಗಿ ಇರುತ್ತವೆ. ಹಾಗೂ ಅಂಗೈಗಳಲ್ಲಿ ಗ್ರಹಗಳ ಸ್ಥಾನಗಳೇನಿರುತ್ತವೆಯೋ ಅವು ಭಿನ್ನ – ವಿಭಿನ್ನ ರೀತಿಯಲ್ಲಿ ಶುಭಾಶುಭಗಳನ್ನು ತಿಳಿಯಪಡಿಸಲು ಅನುಕೂಲವಾದ ಏರುತಗ್ಗುಗಳಿಂದ ಕೂಡಿರುತ್ತವೆ. ಇವನ್ನೆಲ್ಲ ಗಣಿಸಿ ಫಲಗಳನ್ನು ನಿಶ್ಚಯಿಸಬೇಕಾಗುತ್ತದೆ. ಹಾಗೂ ಜ್ಯೋತಿಷಿಯಲ್ಲಿ ಕೇವಲ ಗಣಿತ ಬಲಮಾತ್ರವಿದ್ದಲ್ಲಿ ಫಲಗಳ ನಿಶ್ಚಯವು ನಿಜವಾದದ್ದಾಗದೆ ಹೋಗಬಹುದು. ಹೇಳಿದ ಫಲಗಳು ನಿಜವಾಗಬೇಕಿದ್ದಲ್ಲಿ ಜ್ಯೋತಿಷಿಯಲ್ಲಿ ಧನಾರ್ಜನೆಯ ಬಗ್ಗೆ ನಿರಾಸಕ್ತಿ ಹಾಗೂ ಅನುಷ್ಠಾನ ಬಲವೂ ಆಧ್ಯಾತ್ಮಿಕ ಬಲವೂ ಅತ್ಯಾವಶ್ಯಕ. ಇವನ್ನೆಲ್ಲ ಗಣನೆಗೆ ತೆಗೆದುಕೊಂಡಾಗ ಮಾತ್ರ ಜ್ಯೋತಿಷ್ಯದ ಫಲವು ನಿಜವಾಗುವುದು. ಜ್ಯೋತಿಷ್ಯವೇ ಸುಳ್ಳಿನ ಕಂತೆಯೆಂದು ಹೇಳುವುದೂ ವಾದಿಸುವುದೂ ಸರ್ವಥಾ ಸಲ್ಲದು. ವಾರಭವಿಷ್ಯ – ವರ್ಷ ಭವಿಷ್ಯಾದಿಗಳು ವಿಭಿನ್ನ ಜಾತಕಗಳ ಫಲಗಳಿಗನುಗುಣವಾಗಿ ವ್ಯತ್ಯಸ್ತಗೊಳ್ಳುವುದರಿಂದ ಅವನ್ನು ಆಧರಿಸುವುದಾಗಲೀ ನಿಜವೆಂದು ನಂಬುವುದಾಗಲೀ ಸರ್ವಥಾಯೋಗ್ಯವಲ್ಲ.

ಜಾತಕದಲ್ಲಿಯಾಗಲೀ ಅಥವಾ ಹಸ್ತದಲ್ಲಿಯಾಗಲೀ ಗ್ರಹಗಳ ಸ್ಥಿತಿಗಳು ಹೇಗಿರುತ್ತವೆ ಅನ್ನುವುದು ನಿರ್ಧಾರಗೊಳ್ಳುವುದು ಜೀವಾತ್ಮವು ವೀರ್ಯಾಣುವಿನ ಜೊತೆಯಲ್ಲಿ ಅಂಡಾಣುವನ್ನು ಸಂಧಿಸುವಾಗಲೇ ನಡೆಯುವುದು. ಆ ಕಾರಣದಿಂದ ಜ್ಯೋತಿಷ್ಯಶಾಸ್ತ್ರವು ಸಂತಾನೇಚ್ಛೆಯುಳ್ಳ ಸತಿ–ಪತಿಗಳು ಅರ್ಥಾತ್ ಸ್ತ್ರೀ – ಪುರುಷರು ಯಾವ ಸಮಯದಲ್ಲಿ ಸಮಾಗಮಿಸುವುದು ಪ್ರಶಸ್ತ ಅನ್ನುವುದನ್ನು ತಿಳಿಸುತ್ತದೆ. ಅಪ್ರಶಸ್ತ ಸಮಯದಲ್ಲಿ ಸಂಗಮಿಸಿದಾಗ ಸಂಭವಿಸುವ ಗರ್ಭೋತ್ಪತ್ತಿಯು ಅದಕ್ಕನುಗುಣವಾದ ಅಪ್ರಶಸ್ತ ಸಂತಾನಕಾರಕವಾಗುವುದು. ಗರ್ಭದಲ್ಲಿಯ ಪಿಂಡದಲ್ಲಿ ಮಸ್ತಿಷ್ಕವು ಅರ್ಥಾತ್ ಮಿದುಳು ರೂಪುಗೊಳ್ಳುವಾಗಲೇ ಆ ಮಿದುಳಿನಲ್ಲಿ ಪೂರ್ವ ಜನ್ಮಕರ್ಮಾರ್ಜಿತ ಫಲಗಳಿಗನುಗುಣವಾಗಿ ಗ್ರಹಗಳು ಆ ಜೀವಿಯ ವಿಷಯದಲ್ಲಿ ರೂಪುಗೊಂಡು ಸೂಕ್ಷ್ಮವಾಗಿ ಆ

ಮಸ್ತಿಷ್ಕದಲ್ಲಿ ನೆಲಸುವವು ಹಾಗೂ ಆ ಮಸ್ತಿಷ್ಕವನ್ನು ಹೊಂದಿದ ಜೀವಾತ್ಮದ ಆ ದೇಹವೂ ಹೇಗಿರಬೇಕೆನ್ನುವುದನ್ನೂ ಮತ್ತು ಆ ದೇಹದ ಅಂಗಾಂಗಗಳಿಗನುಗುಣವಾದ ಗುಣ–ರೂಪ–ಜೀವನಾದಿಗಳು ಹೇಗಿರಬೇಕೆನ್ನುವುದನ್ನೂ ಆ ಗ್ರಹಗಳು ನಿರ್ದೇಶಿಸುತ್ತವೆ. ಪುರಾಣಗಳು ಹೇಳುವ ಚಿತ್ರಗುಪ್ತನೆಂದರೆ ಬೇರೆ ಯಾರೋ ಆಗಿರದೆ ಪ್ರತಿವ್ಯಕ್ತಿಯಲ್ಲಿಯ ಮಿದುಳೇ ಆಗಿದೆ. ಪೂರ್ವಜನ್ಮದ ಕರ್ಮಪರಿಣಾಮವೇ ಪುರಾಣಗಳಲ್ಲಿ ಹೇಳುವ ಯಮ, ಧರ್ಮರಾಜ. ಹೀಗೆ ಎಲ್ಲವಕ್ಕೂ ಕಾರಣ ನವಗ್ರಹಗಳು ಮತ್ತು ಆ ನವಗ್ರಹಗಳ ರೂಪುಗೊಳ್ಳುವಿಕೆಗೆ ಕಾರಣ ಪೂರ್ವಜನ್ಮಾರ್ಜಿತ ಕರ್ಮಫಲಗಳು. ಆ ಕರ್ಮಫಲಗಳೇ ಜನಿಸುವ ಜೀವಿಯ ತಂದೆ – ತಾಯಿಯರ ಸಮಾಗಮದ ಸಮಯವನ್ನೂ ಕೂಡ ನಿರ್ದೇಶಿಸುವವು, ನಿಶ್ಚಯಿಸುವವು ಅನ್ನುವುದು ತುಂಬ ಸೋಜಿಗದ, ಕೌತುಕದ ವಿಚಾರವಾದರೂ ಅದು ವಾಸ್ತವವೆನ್ನುವುದೂ ಅಷ್ಟೇ ನಿಶ್ಚಿತ.

ಗ್ರಹಗಳೂ ಅವುಗಳ ರತ್ನ–ಧಾನ್ಯ–ಸಸ್ಯಾದಿಗಳೂ ಹಾಗೂ ಅವುಗಳ ಕಾರಕ ಮುಂತಾದವುಗಳೆಲ್ಲ ಇಲ್ಲಿಯ ಪದ್ಯಗಳಲ್ಲಿ ಸುಲಲಿತವಾಗಿ ಬಂದಿವೆ ಅನ್ನುವ ತಿಳುವಳಿಕೆಯೊಂದಿಗೆ ಈ ವಿವರಣೆಯನ್ನು ಮುಕ್ತಾಯಗೊಳಿಸಲಾಗುವುದು.

ಈ ಗ್ರಹಗಳ ಪರಿಣಾಮಗಳನ್ನು ತಪ್ಪಿಸಿಕೊಂಡು ಮೋಕ್ಷಮಾರ್ಗದಲ್ಲಿ ಸಾಗಬೇಕು ಎಂಬ ನಿಶ್ಚಯಕ್ಕೆ ಬರುವ ವ್ಯಕ್ತಿಯು ತಾನು ಆಚರಿಸುವ ಸರ್ವಕರ್ಮಗಳನ್ನೂ ಪರಮಾತ್ಮನ ಸೇವೆಗಾಗಿ ಮುಡಿಪಿಟ್ಟಲ್ಲಿ, ನಿಷ್ಕಾಮಕರ್ಮಿಯಾದಲ್ಲಿ, ಫಲಾಫಲಗಳ ಬಗ್ಗೆ ಯೋಚನೆಗೆ ತೊಡಗದೆ ಕರ್ತವ್ಯಪರತ್ವವನ್ನು ಮಾತ್ರ ರೂಪಿಸಿಕೊಂಡಲ್ಲಿ ಕರ್ಮಫಲಲೇಪದಿಂದ ಮುಕ್ತಗೊಂಡು ಮೋಕ್ಷಕ್ಕೆ ಅರ್ಹಗೊಳ್ಳಲು ಸಾಧ್ಯವೆನ್ನುವುದನ್ನು ಮೊದಲು ಗ್ರಹಿಸಬೇಕು.

* * * * *

೧೯. ಅಘಮರ್ಷಣ ಸೂಕ್ತ ದರ್ಶಿಕಾ

[**ಪೀಠಿಕೆ :** ಅಘಮರ್ಷಣಸೂಕ್ತವೆಂಬ ಸೂಕ್ತವು ಋಗ್ವೇದದ ಹತ್ತನೆಯ ಮಂಡಲದಲ್ಲಿ ನೂರಾತೊಂಬತ್ತನೆಯ ಸೂಕ್ತವಾಗಿ ಬಂದಿದೆ.ಈ ಸೂಕ್ತದಲ್ಲಿ ಮೂರೇ ಮೂರು ಮಂತ್ರಗಳಿವೆ. ಈ ಮಂತ್ರಗಳ ದರ್ಶಕನಾದ ಅಘಮರ್ಷಣನ ಹೆಸರಿನಿಂದ ಈ ಸೂಕ್ತವನ್ನು ಗುರುತಿಸಲಾಗಿದೆ. ಇಲ್ಲಿಯ ದೇವತೆಯನ್ನು 'ಭಾವವೃತ್ತ' ಎಂದು ಕರೆಯಲಾಗಿದೆ. ಆದರೆ ಮುಂದೆ ಯಜುರ್ವೇದ ಹಾಗೂ ಬ್ರಾಹ್ಮಣ–ಉಪನಿಷತ್ತುಗಳಲ್ಲಿ ವರುಣದೇವನನ್ನು ಅಘಮರ್ಷಣನೆಂದು ಸ್ತುತಿಸಿದ್ದು ಕಂಡುಬರುತ್ತದೆ. ಇವೆಲ್ಲವುಗಳ ಸಾರವನ್ನು ಆಧ್ಯಾತ್ಮಿಕ ಅರ್ಥಗಳೊಂದಿಗೆ ಇಲ್ಲಿ ತರಲಾಗಿದೆ.]

ಅಘಮರ್ಷಣವೆಂದರೆ ಪಾಪಪ್ರಾಯಶ್ಚಿತ್ತ
ದುಷ್ಕೃತ್ಯಪರಿಣಾಮನಿವಾರಣೆಯೆ ಅಘಮರ್ಷಣ ॥ಪ॥

ಸ್ವಾರ್ಥಕೆಂದನುಚಿತ ಘಟನೆಯನು ನಡೆಸಿದರೆ ಅಘವು
ಅಘಮೂಲವಾಗಿಹವು ಜೀವಿಗಳ ದುಃಸ್ಥಿತಿಗಳೆಲ್ಲ
ವರುಣನನು ಅಘಮರ್ಷಣನೆಂದು ಸ್ತುತಿಸಲಾಗುವುದು
ಜೀವವನ್ನಾವರಿಸಿ ನಡೆಸಿಕೊಂಡದನು ಹೋಗುವ ಬ್ರಹ್ಮತತ್ತ್ವ ವರುಣ ॥1॥

ಅಘಮರ್ಷಣನೆಂಬ ಋಷ್ಯಭಿಧಾನದಿಂದ
ಅಲಂಕೃತನಾದ ದರ್ಶಕನಲ್ಲಿ ಸೂಕ್ತರೂಪದಲಿ
ಅವತರಿಸಿ ಬಂದ ಪರಮಪುರುಷನವ ಋತದ ರೂಪದಲಿ
ಸತ್ಯವನು ಮೀರಿ ನಿಂತಿರುವ ಋತವೆ ವರುಣನಾಗಿಹನು ॥2॥

ಅಘಮರ್ಷಣಸೂಕ್ತದಲಿ ಭಾವವೃತ್ತವದು
ವರ್ಣನೆಗೆ ವಸ್ತುವಾಗಿದ್ದು ದೇವತೆಯಾಗಿ ನಿಂತಿಹುದು
ಭಾವವೆಂದರೆ ಸೃಷ್ಟಿ; ಭಾವವೆಂದರೆ ಕ್ರಿಯೆಯು
ಮತ್ತೆ ಮತ್ತಿಲ್ಲಿ ಸೃಷ್ಟಿಕ್ರಿಯೆಗೊಳಪಡುವ ತತ್ತ್ವವೇ ವೃತ್ತ ॥3॥

ಋತಸತ್ಯಗಳೆರಡನೂ ಸೃಷ್ಟಿಸಲು ತಪಗೈದ
ಪರಮಪುರುಷನ ಸಂಕಲ್ಪಶಕ್ತಿಯದು ಪರಾಶಕ್ತಿಯಾಗಿಹುದು
ಅದುವೆ ಸ್ಪಂದನವದುವೆ ಓಂಕಾರವಾದಿಶಕ್ತಿ
ಋತಸತ್ಯಗಳದರಿಂ ಕ್ರಮದಿ ವರುಣಸೂರ್ಯರೆನಿಪ ॥4॥

ಋತವೆನಿಪ ವರುಣನಿಂ ರಾತ್ರಿಯುದಯಿಸಿತು
ಕೊಡು ಎಂಬ ಅರ್ಥದಲಿ 'ರಾ'; ಮೂರೆಂಬ ಅರ್ಥದಲಿ'ತ್ರಿ'
ರಾತ್ರಿಯೆಂದರೆ ಇಲ್ಲಿ ಮೂರು ಗುಣಗಳನು ಸೃಷ್ಟಿಗೆ ನೀಡಿರುತ ತತ್ತ್ವ
ಸತ್ವರಜಸ್ತಮೋಗುಣಗಳುದಯವದು ಋತವೆಂಬ ವರುಣನಿಂದ ॥5॥

ಮಿತ್ರನೆನಿಪ ಸೂರ್ಯನಾಗಿ ವರುಣನೇ ಜಗದುದಯಕಾರಕನು
ಪೃಥವ್ಯಾದಿ ಸರ್ವಗ್ರಹಗಳುದಯವದುವೇ ಸೌರಸಂಸಾರ
ಉದಕದುದಯದಿಂ ಜೀವರಾಶಿಗಳುದಯ ಪೃಥ್ವಿಯಲಿ
ಉದಕವೂ ಋತವದುವೇ ವರುಣ ಜಲಾಧಿಪನೂ ವರುಣನಾಗಿಹನು ॥6॥

ಅಘಮರ್ಷಕ ವರುಣನಿಂ ಜಲರಾಶಿಯರ್ಣವವು
ಆಕಾಶವಾಗಿಯೂ ವರುಣ ತಾ ಸಮುದ್ರವೆನಿಸಿಹನು
ನೀರನ್ನು ಸುರಿಸುವ ಮೋಡಗಳಿಗಾಸರೆಯು ನಭವು
ನಭವಿಲ್ಲಿ ಸಮುದ್ರವದೂ ವರುಣಜವು ದಿಟದಿ ॥7॥

ಸಮುದ್ರವೆಂಬಾಕಾಶದಿಂ ದಿನ–ರಾತ್ರಿ–ವರುಷಗಳು
ಅರ್ಣವವೆಂಬ ಸಮುದ್ರದಿಂ ದೇಶ–ದಿಕ್ಕುಗಳು
ಮೂಲವೀ ಎಲ್ಲವಕು ವರುಣನಾಗಿಹನು
ವರುಣರೂಪದಲಿರುವನಾ ಪರಮಾತ್ಮ ಕಾಲದಿಕ್ಕುಗಳಿಗಧಿಪನಾಗಿ ॥8॥

ಸಂಖ್ಯಾತೀತ ಕಲ್ಪಗಳು ಬಂದು ಮರೆಯಾಗಿರಲು
ಜಗತ್ಸೃಷ್ಟಿ ನಡೆಯುತ್ತಲಿಹುದು ಮತ್ತೆ ಮತ್ತೆ
ಸೃಷ್ಟಿತತ್ತ್ವಬ್ರಹ್ಮ;ಸ್ಥಿತಿತತ್ತ್ವ ವಿಷ್ಣು;ಲಯತತ್ತ್ವ ಶಿವನು
ಈ ಎಲ್ಲರನು ನಡೆಸುವನು ಪರಬ್ರಹ್ಮ ತಾ ವರುಣನಾಗಿ ॥9॥

ಸೃಷ್ಟಿತತ್ತ್ವಕ್ಕೆಳಸಿ ಪರಮ ಪುರುಷ ತಾ ವರುಣನಾಗಿ
ಮೀರ್ಯಾಣ್ವಂಡಾಣುಗಳ ರೂಪದಲಿ ಸೂರ್ಯಚಂದ್ರರನ್ನು
ದ್ಯಾವಾಪೃಥ್ವ್ಯಂತರಿಕ್ಷಾಕಾಶಗಳ ಹೆಸರುಗಳಲಿ ಕ್ರಮದಿ
ಇಹ–ಪರ–ಬದುಕು–ದಿವ್ಯತ್ವ–ಪರಮಪದಗಳನು ತಂದ ॥10॥

ಹಿರಣ್ಯಶೃಂಗನೆಂದೂ ವರುಣನನು ಸ್ತುತಿಸಲಾಗುವುದು
ಹಿರಣ್ಯವೆನೆ ಬಂಗಾರವದುವೆ ಗುರುವದುವೆ ಜೀವಾತ್ಮ
ಜೀವಾತ್ಮಸತ್ವವೇ ನಾನೆಂಬ ತತ್ತ್ವವದು ಹಿರಣ್ಯಶೃಂಗವಾಗಿಹುದು
ಪರಮಾತ್ಮನಿರುವಿಕೆಯ ಸಾರುವುದು ಜೀವಾತ್ಮವದುವೇ ಹಿರಣ್ಯಶೃಂಗ ವರುಣ॥11॥

ಇಂದ್ರಾಗ್ನಿಬೃಹಸ್ಪತಿಸವಿತ್ರಾದಿಗಳೆಲ್ಲ ವರುಣನಾನೇಕ ಶಕ್ತಿರೂಪಗಳು
ಆ ರೂಪಗಳಲೆಲ್ಲರೆಲ್ಲರನು ಮನ್ನಿಸಲಿ ವರುಣ
ಜಲರೂಪ-ವನಸ್ಪತಿಗಳ ರೂಪಗಳಲ್ಲಿರುವ ವರುಣನವನು
ದುಷ್ಕೃತ್ಯಗಳೆಂಬ ವೈರಿಗಳ ದಹಿಸಿ ಸುಮಿತ್ರನಾಗಿರಲಿ ॥12॥

ಮೃತ್ತಿಕೆಯಾಗಿ ಲೋಕಧಾರಿಣಿ ದುರ್ಗತಿನಾಶಿಕೆ ದುರ್ಗೆಯಾಗಿ
ವಸುಂಧರಳಾಗಿ ಶತಮೂಲ-ಶತಾಂಕುರದ ದೂರ್ವೆಯಾಗಿ
ಸಹಸ್ರಶಸ್ಸಂತಾನವಿವರ್ಧಕಳಾಗಿ ತೀರ್ಥ ತಾನಾಗಿ
ಸರ್ವಾರಿಷ್ಟ ನಿವಾರಕ ಭೂ-ದೂರ್ವಾ-ತೀರ್ಥರೂಪಗಳಲಿರುವವನು ವರುಣ ॥13॥

ಪಂಚಭೂತಗಳ-ದೇವಪಿತೃಗಳೆಲ್ಲರ ರೂಪದಲ್ಲಿರುವ
ವರುಣನವ ರಕ್ಷಿಸಲಿ ನಮ್ಮನ್ನು ಪಾಪಕೂಪದಿಂದ
ಸ್ವಾರ್ಥಸಾಧನೆಗೆಳೆಸಿ ದುಷ್ಕೃತ್ಯಗಳ ನಡೆಸಿ
ತಪಿಸುತ್ತಲಿರುವ ನಮಗಾತ ಕೊಡಲಿ ಸದ್ಬುದ್ಧಿ ॥14॥

ಅತ್ಯನ್ನಪಾನಗಳಿಂದ ನಮ್ಮನ್ನು ವಿಮುಖಗೊಳಿಸಲಿ ವರುಣ
ಪರವಸ್ತ್ವಪೇಕ್ಷೆಯನು ನಮ್ಮಿಂದ ಬಹುದೂರ ಸಾಗಿಸಲಿ
ನಡೆಸಿದೆಲ್ಲ ದುಷ್ಕಾರ್ಯಗಳಿಗೆ ಪ್ರಾಯಶ್ಚಿತ್ತಕೊಟ್ಟು
ನಮ್ಮೆಲ್ಲರನು ಮುಕ್ತಕಿಲ್ಬಿಷರನ್ನಾಗಿ ನಡೆಸಲವ ಮುಂದೆ ॥15॥

ಭೂತ-ವರ್ತಮಾನ-ಭವಿಷ್ಯಗಳನ್ನು ನಡೆಸುವವನು
ದುಃಸ್ಥಾನಸ್ಥಿತನವಗ್ರಹಗಳ ರೂಪದಲಿದ್ದು ಪಾಪಗಳ ತೊಳೆಯುವವನು
ಪುಣ್ಯಕ್ಕೆ ತಕ್ಕ ಫಲವಿತ್ತದಕನುಕೂಲನಡೆಯನ್ನು ನೀಡುವವನು
ಜನುಮ-ಜನುಮಕ್ಕೆ ಜಾರದಂತೆ ಕರ್ತವ್ಯಪಥದಲ್ಲಿ ನಡೆಸುವವ ವರುಣ ॥16॥

ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳೆಂಬ ವೈರಿಗಳು
ಆರರೊಕ್ಕೂಟದಲಿದ್ದು ದುಷ್ಕೃತ್ಯಗಳಿಗೆಲ್ಲ ಜೀವಾತ್ಮರನ್ನು
ಸಂಪ್ರೇರಿಸುತ್ತ ಪಾಪಪ್ರೇರಕರಾಗಿ ನಿಂತು ನಲಿಯುತ್ತಲಿಹರು
ವರುಣನಾ ಶತ್ರುಗಳ ಬಹುದೂರ ನಿವಾರಿಸಲಿ ಕೃಪೆಯಿಂದ ॥17॥

ಅಘಮರ್ಷಣನೆಂಬ ಹೆಸರನ್ನು ತಾ ಪಡೆದು
ಜೀವಾತ್ಮರೆಲ್ಲರ ಪಾಪನಿವಾರಕನಾಗಿ ಶೋಭಿಸುವ
ಅವರೆಲ್ಲರಂತಜ್ಯೋತಿರೂಪದಲ್ಲಿರುವ
ಪರಮಗುರುಪಾದಪದ್ಮಬ್ರಹ್ಮ ವರುಣನವ ಬೆಳಗಲೆಲ್ಲರಲಿ ॥18॥

ಅಘಮರ್ಷಣವೆಂದರೆ ಪಾಪಪ್ರಾಯಶ್ಚಿತ್ತ
ದುಷ್ಕೃತ್ಯಪರಿಣಾಮ ನಿವಾರಣೆಯೆ ಅಘಮರ್ಷಣ ॥ಪ॥

ಅಘಮರ್ಷಣಸೂಕ್ತದರ್ಶಿಕಾ

ಅಘ ಅಂದರೆ ಪಾಪ. ಪಾಪವು ಘಟಿಸಲು ಮುಖ್ಯವಾದ ಕಾರಣಗಳು ಆರು. ಅವನ್ನು ಅರಿಷಡ್ವರ್ಗ ಎಂದು ಕರೆಯಲಾಗುವುದು. ಕಾಮ (ಅತಿಯಾದ ಬಯಕೆ, ಎಲ್ಲವೂ ಬೇಕೆಂಬ ಬಯಕೆ) – ಕ್ರೋಧ (ಎಲ್ಲೆಂದರಲ್ಲಿ ಬರುವ ಸಿಟ್ಟು) – ಲೋಭ (ಬೇಕೆನಿಸಿದ ವಸ್ತು ಯಾರದೇ ಆಗಿದ್ದರೂ ತಾನು ಅದನ್ನು ಪಡೆಯಲೇಬೇಕು ಅನ್ನುವ ದುರಾಶೆ ಹಾಗೂ ತನ್ನದೇನೂ ಖರ್ಚಾಗಬಾರದೆಂಬ ನಿಲುವು) – ಮೋಹ (ತನ್ನ ಮನೆ ಮಡದಿ –ಮಕ್ಕಳು–ಮೊಮ್ಮಕ್ಕಳು – ನೆಂಟರು–ಜಾತಿಯವರು ಎಂಬ ಭಾವಾತಿರೇಕ ಹಾಗೂ ಅವರಿಗಾಗಿ ಇತರರಿಗೆ ದ್ರೋಹ ಬಗೆಯಲೂ ಹೊರಡುವ ಅತಿಯಾದ ಅನುರಕ್ತಿ) – ಮದ (ಸೊಕ್ಕು ಹಾಗೂ ಅಹಂಕಾರ) – ಮಾತ್ಸರ್ಯ (ಹೊಟ್ಟೆಕಿಚ್ಚು) ಗಳೆಂಬ ಭಾವಗಳನ್ನು, ಭಾವತೀವ್ರತೆಗಳನ್ನು ಆತ್ಮದ ಆರು ವೈರಿಗಳೆಂದು ಭಾವಿಸಲಾಗುತ್ತದೆ. ಇವು ಮಾನವನ ಮನಸ್ಸಿನಲ್ಲಿ ನೆಲೆಸಿದ್ದು ಅನ್ಯಾಯ-ಪಾಪಕರ್ಮಗಳಿಗೆ ಕಾರಣವಾಗುವವು. ಮನಸ್ಸಿಗೆ ಇವು ಆಕರ್ಷಕವೆಂದೂ ತನಗೆ ಅನುಕೂಲಕಾರಕಗಳೆಂದೂ ಅನಿಸಿ ಇವುಗಳನ್ನು ಹೊರಗೆ ದಬ್ಬಲು ಅದು ಇಷ್ಟಪಡುವುದೇ ಇಲ್ಲ. ಆದರೆ ಇವುಗಳಿಂದಾಗಿ ನಡೆಯುವ ರಾದ್ಧಾಂತಗಳು ಆತ್ಮವನ್ನು, ಜೀವಾತ್ಮವನ್ನು ಜನ್ಮ-ಮರಣಚಕ್ರದಲ್ಲಿ ಸುತ್ತುವಂತೆ ಮಾಡುತ್ತವೆ. ಅಗಣಿತ ಕಷ್ಟ-ಕೋಟಲೆಗಳಿಗೆ ಜೀವಾತ್ಮವನ್ನು ತಳ್ಳುತ್ತವೆ. ಮನಸ್ಸಿಗೆ ಇವುಗಳ ಸಾಂಗತ್ಯ ಬೇಕೇಬೇಕು ಅನ್ನುವ ಭ್ರಮೆಯನ್ನು ಇವುಗಳು ಉಂಟು ಮಾಡುವುದರಿಂದಾಗಿ ಜೀವಾತ್ಮಕ್ಕೆ ಇವು ವೈರಿಗಳಾದರೂ ಇವುಗಳನ್ನು ಅದು ಸಹಿಸಕೊಳ್ಳಬೇಕಾಗುತ್ತದೆ. ಆದರೆ ಕ್ರಮೇಣ

ಪ್ರಾಚೀನ ಕಾಲದಲ್ಲಿ ಯೋಗ್ಯಗುರುವೊಬ್ಬನ ಎಚ್ಚರಿಕೆಯಿಂದಾಗಿ ಅರಿಷಡ್ವರ್ಗವು ತನ್ನ ವೈರಿಗಳು ಅನ್ನುವ ತಿಳುವಳಿಕೆಗೆ ಬಂದು ಅವುಗಳಿಂದ ದೂರವಾಗಲು ಬಯಸಿ ವ್ಯಕ್ತಿಯೊಬ್ಬನು ಆ ಅರಿಷಡ್ವರ್ಗದ ಪ್ರೇರಣೆಯಿಂದಾಗಿ ತಾನು ನಡೆಸಿದ ಕೃತ್ಯಗಳ ಬಗ್ಗೆ ಪಶ್ಚಾತ್ತಾಪಪಟ್ಟು ಆ ವೈರಿವರ್ಗದಿಂದ ದೂರವಾಗಿ ಯೋಗಮಾರ್ಗಕ್ಕೆ ಶರಣು ಬಂದು ಯೋಗಿಯಾಗಿ ಸಮಾಧಿ ಸ್ಥಿತಿಯಲ್ಲಿ ಈ ಅಘಮರ್ಷಣ ಸೂಕ್ತವನ್ನು ದರ್ಶಿಸಿದ್ದು. ಅಂತಹ ಆ ಋಷಿಯು ಸಮಾಧಿಸ್ಥಿತಿಯಲ್ಲಿ ತಾನೂ ಅಘಮರ್ಷಣನೇ ಆಗುವನು. ಆದುದರಿಂದ ಈ ಸೂಕ್ತದ ಋಷಿಯನ್ನು ಅಘಮರ್ಷಣನೆಂದೇ ಕರೆಯಲಾಯಿತು. ವೇದದ ಋಷಿಗಳೆಲ್ಲ ಹೀಗೆಯೇ ; ತಾವುದರ್ಶಿಸಿದ ಮಂತ್ರಕ್ಕನುಗುಣವಾಗಿ ಹೆಸರನ್ನು ಪಡೆದವರು ; ಮೂಲ ಹೆಸರನ್ನು ಬದಿಗೆ ಸರಿಸಿದವರು.

ಅಘಮರ್ಷಣನೆಂದರೆ ಪಾಪನಾಶಕ. ಈ ಸೂಕ್ತಕ್ಕೆ ಭಾವವೃತ ಎಂದು ಕರೆದಿದ್ದರೂ ಮುಂದೆ ಆ ಹೆಸರು ಮರೆಯಾಗಿ ವರುಣದೇವನನ್ನೇ ಅಘಮರ್ಷಕನೆಂದು ಸ್ವೀಕರಿಸಲಾಯಿತು.

ಭಾವವೃತ್ತವೆಂಬ ಭಾವವನ್ನೇ ಈ ಸೂಕ್ತದ ವಸ್ತುವನ್ನಾಗಿ ಮೊದಲು ಭಾವಿಸಿದ್ದಕ್ಕೆ ಕಾರಣವೂ ಇದೆ. 'ಭಾವೋ ನಾಮ ಕ್ರಿಯಾ' ಎಂದು ಭಾವವನ್ನು ಅರ್ಥೈಸಲಾಗುತ್ತದೆ. ಭಾವವೆಂದರೆ ಕ್ರಿಯೆಯೆಂದು ಇದರ ಅರ್ಥ. ಕ್ರಿಯೆಯು ಮತ್ತೆ ಮತ್ತೆ ಘಟಿಸುತ್ತ ಇರುವುದೇ ಕ್ರಿಯಾವೃತ್ತ. ಜನ್ಮ–ಜನ್ಮಾಂತರದಲ್ಲಿ ಮಾತ್ರವಲ್ಲ ದಿನನಿತ್ಯದಲ್ಲಿಯೂ ಅವೇ ದಿನಚರಿಗಳು ಘಟಿಸುತ್ತ ಇರುತ್ತವೆ ; ಹಾಗೆಯೇ ಜನ್ಮಜನ್ಮಾಂತರಗಳೂ ವೃತ್ತಾಕಾರವಾಗಿ ಘಟಿಸುತ್ತಲೇ ಇರುತ್ತವೆ. ಈ ಜನ್ಮಜನ್ಮಾಂತರವೃತ್ತಕ್ಕೆ ಕಾರಣ ಕಾಮ್ಯಕರ್ಮಗಳು ಮತ್ತು ಅವುಗಳ ಪರಿಣಾಮಗಳು. ನಮಗೆ ಬೇಕು ಎಂಬ ಸ್ವಾರ್ಥಭಾವದಿಂದ ನಡೆಸುವ ಎಲ್ಲ ಕರ್ಮಗಳೂ, ಕ್ರಿಯೆಗಳೂ ಕಾಮ್ಯಕರ್ಮಗಳು. ಇವುಗಳ ಪರಿಣಾಮದಿಂದಾಗಿ ಪಾಪವೃತ್ತವು ಘಟಿಸುತ್ತದೆ. ಅವುಗಳಿಂದ ನಿವೃತ್ತಿ ಬೇಕೆಂದು ಚಿಂತಿಸಿ ಆ ಚಿಂತನಾಕ್ರಮದಲ್ಲಿ ಅವೇ ತಾನಾಗುವುದೇ ಇಲ್ಲಿಯ ಭಾವವೃತ್ತದ ವಿಶೇಷತೆ. ಆದರೆ ಸುಲಭಗ್ರಾಹ್ಯವಾಗುವಂತೆ ಮುಂದೆ ಈ ಸೂಕ್ತವನ್ನು ಅಘಮರ್ಷಣಸೂಕ್ತವೆಂದು ಕರೆಯಲಾಯಿತು. ಋಷಿಯು ಸಮಾಧಿಯಲ್ಲಿ ವರುಣನೇ ಆಗಿ ಅಘಮರ್ಷಕನೇ ಆದನು ; ಭಾವವೃತ್ತವು ಅಘಮರ್ಷಕ ವರುಣನೇ ಆದಂತಾಯಿತು.

ಋತ ಮತ್ತು ಸತ್ಯಗಳು ಪರಬ್ರಹ್ಮದ ಎರಡು ಸ್ಥಿತಿಗಳು. ಋತವು ಜಾಗೃದವಸ್ಥೆಗೆ ಮೀರಿದ್ದು ಹಾಗೂ ಸತ್ಯವು ಜಾಗೃದವಸ್ಥೆಗೆ ನೇರವಾಗಿ ಸಂಬಂಧಿಸಿದ್ದು. ಆಕಾಶದಲ್ಲಿ ಕಂಡು ಬರುವ ಸೂರ್ಯನು ಸತ್ಯಕ್ಕೆ ಪ್ರತೀಕನು ಹಾಗೂ ಕಾಣಲಾರದ, ಆದರೆ ಸತ್ಯವನ್ನು ನಡೆಸಿಕೊಂಡು ಹೋಗುವ ಪರಾತ್ಮರ ಬ್ರಹ್ಮನ ಚಿಚ್ಛಕ್ತಿಯ ಭಾವವು

ಭಾವವೃತ್ತ ವರುಣನೆಂದು ಗೃಹೀತವಾಯಿತು. ಈ ಭಾವವೃತ್ತಾತ್ಮಕ ವರುಣನು ಋತಕ್ಕೆ ಪ್ರತೀಕನು. ಆದುದರಿಂದ ಇಲ್ಲೆಲ್ಲ ವರುಣನದೇ ಸಂಸ್ಥಿತಿ. ಇನ್ನೂ ಒಂದು ವಿಧವಾಗಿ ವರುಣ–ಸೂರ್ಯರ ಬಗ್ಗೆ ಹೇಳಬಹುದು. ಪರಾತ್ಪರನ ಸ್ಪಂದನದಿಂದ ಓಂಕಾರದ ಉದಯ ; ಆ ಓಂಕಾರವೇ ಆದಿಶಕ್ತಿ, ಸ್ಪಂದಶಕ್ತಿ, ಪರಾಶಕ್ತಿ ; ಆ ಆದಿಶಕ್ತಿಯೇ ಋತ – ಸತ್ಯಗಳೆಂಬ ಭಾವಗಳಲ್ಲಿ ಬಂದದ್ದು ಹಾಗೂ ಋತವೇ ವರುಣನೆಂದಾಯಿತು ಮತ್ತು ಸತ್ಯವೇ ಸೂರ್ಯನೆಂದಾಯಿತು. ಆದರೆ ಓಂಕಾರಕ್ಕೆ ಮತ್ತೆ ಹಿಂದಿರುಗಿದರೆ ಓಂಕಾರವೇ ಸೂರ್ಯ ; ಓಂಕಾರವೇ ವರುಣ ಎಂದೂ ಆಗುವುದು. ಸೂರ್ಯಭಾವದಲ್ಲಿ ಪೃಥ್ವಿಯ ಉದಯವೆಂದಾದರೆ ವರುಣಭಾವದಲ್ಲಿ ಜಲದ ಉದಯವೆಂದು ಭಾವಿಸಲಾಯಿತು. ಜಲದಿಂದ ಜೀವರಾಶಿಗಳು ಅನ್ನುವ ಕಾರಣದಿಂದ ಜೀವರಾಶಿಗಳ ಮೂಲ ವರುಣಭಾವವೇ ಸರಿ ಎಂಬ ತೀರ್ಮಾನ ಋಷಿಗಳದ್ದು. ಎಲ್ಲವಕ್ಕೂ ವರುಣನೇ ಮೂಲವೆಂಬ ಭಾವವು ಗೃಹೀತವಾಯಿತು ; ಆ ಪರಬ್ರಹ್ಮನೇ ವರುಣ ಎಂಬ ಭಾವದ ವರೆಗೂ ಬರಲಾಯಿತು. ಎಲ್ಲವುಗಳಲ್ಲಿಯೂ ವರುಣನನ್ನು ದರ್ಶಿಸಿದ ಈ ಅಘಮರ್ಷಣ ಸೂಕ್ತವು ಅವನನ್ನು ಅಘಮರ್ಷಕನೆಂದು ಹೊಗಳುತ್ತದೆ.

ಮನುಷ್ಯನಿಗೆ ರೋಗಗಳು ಬರುವುದು ಅನ್ನ–ಪಾನಾದಿಗಳ ಅತಿಸೇವನೆಯಿಂದ ಹಾಗೂ ಪಾಪಗಳ ಲೇಪನವು ಪರವಸ್ತುಗಳನ್ನು ಬಯಸಿ ಪ್ರಯತ್ನಿಸಿ ಸಫಲನಾಗುವುದರಿಂದ. ಅತ್ಯನ್ನಪಾನಾದಿಗಳೂ ಹಾಗೂ ಪರವಸ್ತುವಿನ ಸ್ವಾಧೀನತೆಯೂ ಆ ಆ ಸಮಯಗಳ ಸಂತೋಷ – ಸಂಭ್ರಮಗಳಿಗೆ ಕಾರಣವಾಗುವವು. ಆದರೆ ಮುಂದೆ ರೋಗಗಳ ಬಾಧೆ, ಕಷ್ಟ ಕೋಟಲೆಗಳ ಬಾಧೆ. ಆಗ ವರುಣನು ನವಗ್ರಹಗಳನ್ನು ದುಃಸ್ಥಾನಕ್ಕೆ ತಂದು ಕೂರಿಸುವವನಾಗುವನು. ಆದುದರಿಂದ ಅವುಗಳಿಂದ ದೂರ ಮಾಡೆಂದು ವರುಣನನ್ನೇ ಬೇಡಿಕೊಳ್ಳುವುದು. ಈ ಅಘಮರ್ಷಣಸೂಕ್ತಪಠಣ ಹಾಗೂ ಹೋಮಹವನಾದಿಗಳು ಆ ವರುಣನೆಂಬ ಹೆಸರಿನಿಂದ ಇರುವ ಪರಮಾತ್ಮನ ಕೃಪೆಗಾಗಿ.

* * * * *

೨೦. ಪಂಚಾಯತನಪೂಜಾ ದರ್ಶಿಕಾ

[**ಪೀಠಿಕೆ :** ಸಮಸ್ತ ದೇವತೆಗಳನ್ನೂ ಹಾಗೂ ಗುರು–ಪಿತೃಗಳನ್ನೂ ಸೂರ್ಯ–ಗಣಪತಿ–ಅಂಬಿಕಾ–ಶಿವ–ವಿಷ್ಣುಗಳೆಂಬ ಐದು ದೇವತೆಗಳಲ್ಲಿ ಭಾವಿಸಿ ಪೂಜಿಸುವ ಪದ್ಧತಿಗೆ "ಪಂಚಾಯತನಪೂಜೆ"ಯೆಂದು ಹೇಳಲಾಗುವುದು. ಇವರಲ್ಲಿ ಸೂರ್ಯನಲ್ಲಿ ಪುರಾಣಗಳು ಹೇಳುವ ಸೃಷ್ಟಿಕರ್ತ ಬ್ರಹ್ಮ ಹಾಗೂ ಉಪನಿಷತ್ತುಗಳು ಹೇಳುವ ಪರಬ್ರಹ್ಮ–ಜೀವಾತ್ಮ ಹಾಗೂ ಅಗ್ನಿ ಎಂಬ ದೇವತೆಗಳು ಬರುತ್ತಾರೆ. ಗಣಪತಿಯು ಪಂಚಕರ್ಮೇಂದ್ರಿಯ ಪಂಚಜ್ಞಾನೇಂದ್ರಿಯಾದಿಗಳನ್ನು ಪ್ರತಿನಿಧಿಸುವ ಇಂದ್ರಾದಿ ದೇವಗಣಗಳನ್ನು ಅರ್ಥೈಸುತ್ತ ಆ ಇಂದ್ರಾದಿ ದೇವಗಣಗಳಿಗೆ ಒಡೆಯ ಹಾಗೂ ಓಂಕಾರ ಸ್ವರೂಪಿಯಾಗಿರುವನು. ಅಂಬಿಕೆಯು ಗಾಯತ್ರೀ–ಲಲಿತಾ–ಮಹಾದುರ್ಗೆ–ಮಹಾಲಕ್ಷ್ಮೀ–ಮಹಾಸರಸ್ವತಿಯಾಗಿದ್ದಾಳೆ. ವಿಷ್ಣುವು ಸ್ಥಿತಿತತ್ತ್ವ–ಗುರು ಹಾಗೂ ಬ್ರಹ್ಮಾಂಡ ಇವುಗಳ ಸಾಕಾರಸ್ವರೂಪನು. ಶಿವನು ಗುರುವೂ ಜ್ಞಾನಪ್ರದಾತನೂ ಲಯಕಾರನೂ ಆಗಿರುವನು. ಪುರಾಣಾದಿಗಳ ಕಾಲದಿಂದಲೇ ಈ ಪಂಚಾಯತನ ಪೂಜಾಪದ್ಧತಿಯು ಬೆಳೆದು ಬಂದಿದೆ. ಬ್ರಹ್ಮ–ವಿಷ್ಣು–ರುದ್ರರನ್ನು ಸರಿಸಮವಾಗಿ ಕಾಣುವ ಸ್ಮಾರ್ತರಲ್ಲಿ ಈ ಪಂಚಾಯತನ ಪೂಜಾಪದ್ಧತಿಯು ಅನೂಚಾನವಾಗಿ ನಡೆದು ಬಂದಿದೆ.ಈ ಪಂಚಾಯತನ ಪೂಜೆಯ ಪದ್ಯವನ್ನು ಅದೇ ತಾನೇ ಈ ಲೇಖಕರು ಬರೆದು ಮುಗಿಸಿದಾಗ ಭರತನಾಟ್ಯದ ವಿಷಯವೊಂದರ ಚರ್ಚೆಗಾಗಿ ಈ ಲೇಖಕರ ಮನೆಗೆ ಬಂದಿದ್ದ ಮೈಸೂರಿನಲ್ಲಿರುವ ಅಂತಾರಾಷ್ಟ್ರೀಯ ನೃತ್ಯ ಕಲಾವಿದೆ ಮತ್ತು ಗುರು ಡಾ.ವಸುಂಧರಾ ದೊರೆಸ್ವಾಮಿಯವರು ತಮ್ಮ ತಂಡದ ಜೊತೆಯಲ್ಲಿ 22–12–2012ರ ಒಂದೂವರೆ ತಾಸಿನ ಒಂದು ಭರತನಾಟ್ಯ ವಿಶೇಷಕ್ಕಾಗಿ ಈ ಲೇಖಕರ ಸಹಕಾರದೊಂದಿಗೆ ಇಲ್ಲಿಯ ಪೀಠಿಕೆಯನ್ನು ಪ್ರಾಸ್ತಾವಿಕವಾಗಿ ಹೇಳಿಕೊಂಡು ಈ 'ಪಂಚಾಯತನಪೂಜೆ'ಯ ಪದ್ಯಗಳಲ್ಲಿ 1, 2 ಮತ್ತು 8 ರಿಂದ 14ರ ವರೆಗಿನ ನುಡಿಗಳನ್ನು ಹಾಗೂ ಈ ಲೇಖಕರು ಅರ್ಥೈಸಿಕೊಟ್ಟ ಹಾಗೂ ಸ್ವತಃ ರಚಿಸಿಕೊಟ್ಟ ಕೆಲವು ಸಂಸ್ಕೃತ ಪದ್ಯಗಳನ್ನು ಹಾಡಿಸುತ್ತ ನಡೆಸಿದ ಭರತನಾಟ್ಯ ಕಾರ್ಯಕ್ರಮವು ಅತ್ಯಂತ ಮನೋಜ್ಞವಾಗಿ ಮೂಡಿ ಬಂದು ಸಹೃದಯರ ಮನಸ್ಸನ್ನು ಸೂರೆಗೊಂಡಿದ್ದನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆಂದು ಭಾವಿಸಲಾಗುವುದು.]

ಸರ್ವದೇವೀದೇವರುಗಳನು ಪಂಚಮೂರ್ತಿಗಳಲ್ಲಿ ಕಂಡು
ಪೂಜಿಸುವ ಪದ್ಧತಿಯು ಪಂಚಾಯತನ ಪೂಜೆಯಾಗಿಹುದು ॥ಪ॥

ಸೂರ್ಯ ಗಣಪತ್ಯಂಬಿಕಾ ಶಿವ ವಿಷ್ಣುಗಳಲಿ
ಕಲ್ಪಿಸಿ ಸರ್ವದೇವೀ–ದೇವರು–ಪಿತೃಗಳನ್ನೆಲ್ಲ
ಪೂಜಿಸುವ ಪದ್ಧತಿಯು ಪಂಚಾಯತನಪೂಜೆ
ಪ್ರಾಚೀನಕಾಲದಿಂ ಪದ್ಧತಿಯಿದು ನಡೆದು ಬಂದಿಹುದು ॥1॥

ಗಣಪತಿಯು ಪಂಚ–ಪಂಚಜ್ಞಾನಕರ್ಮೇಂದ್ರಿಯಪತಿಯು ಸರ್ವಾತ್ಮ
ವಿಷ್ಣು ತಾನಿಹನು ಸ್ಥಿತಿತತ್ತ್ವಸಾಕಾರ ಮತ್ತು ಬ್ರಹ್ಮಾಂಡ
ಸ್ಥಾವರಜಂಗಮಾತ್ಮಕ ಜಗದ ಚಾಲನಾಶಕ್ತಿ ಗಾಯತ್ರಿ ದುರ್ಗೆ
ಹೊಸರೂಪಕಾಸ್ಪದವೀಯುವವ ಶಿವ;ಸೂರ್ಯನಿಹ ಬ್ರಹ್ಮ–ಪರಬ್ರಹ್ಮ ॥2॥

ಆಕಾಶವಾತಾಗ್ನಿಜಲಪೃಥ್ವಿಭೂತಪಂಚಕವು
ಶಿವ–ವಿಷ್ಣು–ರವಿ–ಮಾತೃ–ಗಣಪತಿಯರಾಗಿ
ಕ್ರಮದಲ್ಲಿ ಒಡಮೂಡಿ ಪಂಚಮೂರ್ತಿಗಳೆನಿಸಿ
ಪೂಜೆಯನು ಪಡೆಯುತಿವೆ ಪರಶಿವನ ಪಂಚಮುಖಗಳವು ॥3॥

ದಶೇಂದ್ರಿಯ–ಪಂಚಭೂತ–ತನ್ಮಾತ್ರ–ಬುದ್ಧ್ಯಾದಿಗಧಿಪ ಗಣಪ
ಪರಬ್ರಹ್ಮಸ್ಪಂದದಿಂದುದ್ಭೂತ ಬ್ರಹ್ಮಾಂಡದ ಸ್ಥಿತಿ–ಗತಿಕಾರಕನು ವಿಷ್ಣು
ಇಚ್ಛಾಕ್ರಿಯಾಜ್ಞಾನ–ತ್ರಿಶಕ್ತಿಭಾವದಿಂ ಸರ್ವರನು ನಡೆಸುವಂಬಿಕೆಯು ದುರ್ಗೆ
ಪ್ರಸ್ತುತಕ್ಕವಸಾನವನು ತಂದು ಹೊಸತನಕ್ಕವಕಾಶ ಕಲ್ಪಕ ರುದ್ರ ಶಿವನು ॥4॥

"ಸರ್ವಸ್ಯಪ್ರಸವಿತಾ ಸವಿತೃ"ನೆಂಬರ್ಥದಲ್ಲಿ
ಸೂರ್ಯನವ ಸೃಷ್ಟಿಕರ್ತ ಬ್ರಹ್ಮನಾಗಿಹನು
"ಸೂರ್ಯ ಆತ್ಮಾ ಜಗತಃ ತಸ್ಥುಷಶ್ಚ" ಎಂಬಂತೆ
ಸ್ಥಾವರ–ಜಂಗಮಗಳಾತ್ಮನೀ ಸೂರ್ಯ ಪರಮಾತ್ಮ ॥5॥

ಏಕಮೇವಾದ್ವಿತೀಯ ಪರಬ್ರಹ್ಮತತ್ತ್ವವದು
ಸೂರ್ಯಗಣಪತ್ಯಂಬಿಕಾಶಿವವಿಷ್ಣುರೂಪಗಳಲಿ
ಸರ್ವ ಸೃಷ್ಟಿ–ಸ್ಥಿತಿ–ಲಯಗಳನು ನಡೆಸುತ್ತಿರುವುದನ್ನು
ಮನಗಂಡ ಋಷಿವರರು ತಂದರೈ ಪಂಚಾಯತನ ಪೂಜೆಯನ್ನು ॥6॥

"ಪ್ರತಿಮಾ ಅಲ್ಪಬುದ್ಧೀನಾಮ್" ಎಂಬ ಪ್ರಾಚೀನಮಾತಿನಲ್ಲಿ
ಏಕಾಗ್ರತಾವಿಹೀನರಿಗೆ ಪ್ರತಿಮೆಯ ಪೂಜೆಯೆಂಬರ್ಥವಿಹುದು
ಮೂರ್ತಿಪೂಜೆಯನು ಸುಜ್ಞಾನಿಗಳು ಬಳಕೆಯಲಿ ತಂದರೈ
ಜ್ಞಾನಮಾರ್ಗವು ಕಷ್ಟ ಬಹುಜನರಿಗೆಂಬ ಸತ್ಯಾರ್ಥದಲ್ಲಿ ॥7॥

ಪಂಚಮೂರ್ತಿಗಳನ್ನು ಪೂಜಿಸುವಾಗ ಕ್ರಮಗಳೈದಿಹವು
ಗಣಪತಿಯನ್ನು ಮಧ್ಯದಲಿ ಸಂಸ್ಥಾಪಿತಗೊಳಿಸಿದಾಗ
ಆಗ್ನೇಯಕ್ಕೆ ಶಿವ ನೈರುತ್ಯಕ್ಕೆ ರವಿ ವಾಯವ್ಯಕ್ಕೆ ದುರ್ಗೆ
ಈಶಾನ್ಯದಲಿ ವಿಷ್ಣುವೀ ಕ್ರಮದಿ ಗಣೇಶಪಂಚಾಯತನವು ॥8॥

ಸೂರ್ಯನನು ಮಧ್ಯೆ ಸಂಸ್ಥಾಪಿತಗೊಳಿಸಿದಾಗ
ಆಗ್ನೇಯದಲಿ ಗಣಪತಿಯು ನೈರುತ್ಯದಲಿ ವಿಷ್ಣು
ಮಹಾದುರ್ಗೆ ಲಲಿತಾ ಪರಮೇಶ್ವರಿಯು ವಾಯವ್ಯದಲ್ಲಿ
ಈಶಾನ್ಯದಲಿ ರುದ್ರನೀ ರೀತಿಯಲಿ ಸೂರ್ಯಪಂಚಾಯತನವು ॥9॥

ಮಹಾವಿಷ್ಣುವನು ಮಧ್ಯೆ ಸಂಸ್ಥಾಪಿತಗೊಳಿಸಿದಾಗ
ಆಗ್ನೇಯದಲಿ ಗಣಪತಿಯು ನೈರುತ್ಯದಲ್ಲಿ ಸೂರ್ಯ
ವಾಯವ್ಯದಿಕ್ಕಿನಲಿ ಮಹಾದುರ್ಗೆ ಗಾಯತ್ರಿಮಾತೆ
ಈಶಾನ್ಯದಲಿ ಶಿವನೀ ರೀತಿಯಲಿ ಸೂರ್ಯಪಂಚಾಯತನವು ॥10॥

ದುರ್ಗಾಂಬಿಕೆಯನು ಮಧ್ಯದಲಿ ಸಂಸ್ಥಾಪಿತಗೊಳಿಸಿದಾಗ
ಆಗ್ನೇಯದಲಿ ಶಿವ ನೈರುತ್ಯದಲಿ ದೇವ ಗಣಪ
ವಾಯವ್ಯ ದಿಕ್ಕಿನಲ್ಲಿ ಸೃಷ್ಟಿಕರ್ತ ಸೂರ್ಯ
ಈಶಾನ್ಯದಲಿ ವಿಷ್ಣುವೀ ರೀತಿ ದುರ್ಗಾಪಂಚಾಯತನವು ॥11॥

ಶಿವನನ್ನು ಮಧ್ಯದಲಿ ಸಂಸ್ಥಾಪಿತಗೊಳಿಸಿದಾಗ
ಆಗ್ನೇಯದಲಿ ಸೂರ್ಯ ಗಣಪತಿಯು ನೈರುತ್ಯದಲ್ಲಿ
ವಾಯವ್ಯದಲಿ ರಾಜರಾಜೇಶ್ವರಿ ಶ್ರೀಮಾತೆ ದುರ್ಗೆ
ಈಶಾನ್ಯದಲಿ ವಿಷ್ಣುವೀ ತೆರದಿ ಶಿವಪಂಚಾಯತನವು ॥12॥

ಸೂರ್ಯ ಧ್ವನಿಸುವನು ಬ್ರಹ್ಮ–ಜೀವಾತ್ಮ–ಪರಮಾತ್ಮರನ್ನು
ಗಣಪತಿಯು ಧ್ವನಿಸುವನು ಓಂಕಾರವನ್ನು ಗುರುವನ್ನು
ಜಗದಂಬಿಕೆಯು ಧ್ವನಿಸುವಳು ಆದಿಶಕ್ತಿ–ಲಕ್ಷ್ಮೀ–ಗೌರಿ–ಶಾರದೆಯರನ್ನು
ವಿಷ್ಣು ಧ್ವನಿಸುವನು ವಿಶ್ವೇದೇವರು–ಪಿತೃದೇವತೆಗಳನ್ನು
ಶಿವನು ಧ್ವನಿಸುವನು ಪಾಪಪ್ರಾಯಶ್ಚಿತ್ತ–ಧ್ಯಾನ–ತಪಸ್ಸುಗಳನ್ನು ॥13॥

ಋಷಿಗಳೆಲ್ಲರು ದರ್ಶಿಸಿದ ದೇವ–ದೇವತೆಗಳೆಲ್ಲ
ಪಂಚಾಯತನ ಪೂಜೆಯನು ಪಡೆವ ಈ ಮೂರುತಿಗಳಲ್ಲಿ
ಸೇರಿರುವರೆಂಬ ಸತ್ಯವನು ಸಾಕ್ಷಾತ್ಕರಿಸಿಕೊಂಡು
ತಂದರೀ ಪದ್ಧತಿಯನ್ನು ಪ್ರಾಚೀನ ಪ್ರಾಜ್ಞರು ಸರ್ವಹಿತಕಾಗಿ ॥14॥

ಪಂಚಾಯತನದೀ ದೇವತೆಗಳಲ್ಲಿ ಕೆಲವನ್ನು
ಒಪ್ಪಿಕೊಳ್ಳದ ಭಿನ್ನ ಮತಗಳಿವೆ ಹಲವು
ಸುಜ್ಞಾನಯುತ ಶ್ರದ್ಧೆಭಕ್ತಿಭಾವಸಂಯುಕ್ತರಿದ್ದವರು
ಭಿನ್ನಮತನಿಂದನೆಗೆಳಸದೆ ಪೂಜಿಪರಿಷ್ಟದೇವತೆಗಳನ್ನು ॥15॥

ಒಬ್ಬನಲ್ಲೇ ಸರ್ವ ದೇವತೆಗಳನು ಕಂಡು ಪೂಜಿಸುವುದಿನ್ನೊಂದು ವಿಧವು
ನಿಜದಿ ನೋಡಿದರೆ ದೇವನೊಬ್ಬನೇ ಒಬ್ಬ ; ನಾಮ–ರೂಪಗಳು ಹಲವು
ಒಬ್ಬನಾತನ ಕಾರ್ಯಸಾಮರ್ಥ್ಯಗಳಿಗನುಗುಣದ ವಿಭಿನ್ನ ನಾಮರೂಪಗಳು
ಏಕೋಪಾಸನೆಯಿಂದಲೂ ಲಭ್ಯವಿಹದಲ್ಲಿ ಸುಖ ಪರದಲ್ಲಿ ಮುಕ್ತಿ ॥16॥

ಮಾನಸಪೂಜೆ ಮತ್ತೊಂದು ; ಸರ್ವಪೂಜೆಗಳಲತಿ ಶ್ರೇಷ್ಠವಾಗಿಹುದು
ಮನಃಪೂಜೆಯಿಂದಾತ್ಮ–ಪರಮಾತ್ಮ ಸಂಪರ್ಕ ನೇರ
ಏಕಾಗ್ರಚಿತ್ತವತಿಮುಖ್ಯ ಮನಃಪೂಜೆಯಲ್ಲಿ
ಅಂತಃಕರಣಪೂಜೆಯಲಿ ಕಟ್ಟುಪಾಡುಗಳ ಗೊಡವೆ ತಾನಿಲ್ಲ ॥17॥

ಏಕದೇವೋಪಾಸನೆಯೊಂದು ಪಂಚಾಯತನಪೂಜೆ ಮತ್ತೊಂದು
ಮಾನಸಪೂಜೆಯಿನ್ನೊಂದೆಂಬ ಮೂರುವಿಧಗಳಲಿ
ಯಾವುದಾದರೂ ಸರಿಯೆ ಪರಮಗುರುಪಾದಕರುಣೆಯಿಂದ
ಪರಮತದೂಷಣವಿಮುಖತೆ–ಶ್ರದ್ಧಾ–ಭಕ್ತಿ–ಜ್ಞಾನ ಸಮ್ಮಿಲನವಿರಲು ॥18॥

ಸರ್ವದೇವೀದೇವರುಗಳನು ಪಂಚಮೂರ್ತಿಗಳಲ್ಲಿ ಕಂಡು
ಪೂಜಿಸುವ ಪದ್ಧತಿಯು ಪಂಚಾಯತನಪೂಜೆಯಾಗಿಹುದು ॥ಪ॥

ಪಂಚಾಯತನಪೂಜಾದರ್ಶಿಕಾ

ಆಯತನ ಅಂದರೆ ಇರುವ ಸ್ಥಳ. ಪಂಚ, ಅರ್ಥಾತ್ ಐವರು ಇರುವ ಸ್ಥಳ ಪಂಚಾಯತನ ಏಕೆಂದರೆ ಪ್ರಮುಖವಾಗಿ ಐದು ದೇವತೆಗಳು, ಸೂರ್ಯ – ಗಣಪತಿ – ಅಂಬಿಕಾ–ಶಿವ–ವಿಷ್ಣುಗಳೆಂಬ ಐದು ದೇವತೆಗಳು ಪೂಜಾರಾಧನೆಗಳನ್ನು ಸ್ವೀಕರಿಸಲು ಬಂದು ಆಸೀನರಾಗಿ ಇರುವ ಸ್ಥಳ ಪಂಚಾಯತನ ; ಈ ಐವರನ್ನೂ ಒಟ್ಟಿಗೆ ಪೂಜಿಸುವ ಸ್ಥಳ ಪಂಚಾಯತನ. ಸ್ಮಾರ್ತಸಂಪ್ರದಾಯದಲ್ಲಿ ಮಾತ್ರ ಬಳಕೆಯಲ್ಲಿರುವ ವಿಶೇಷ ಪೂಜಾಪದ್ಧತಿಯಿದು. ಏಕೆಂದರೆ ವೈಷ್ಣವ ಸಂಪ್ರದಾಯದಲ್ಲಿ ಶಿವನನ್ನು ಸುತರಾಂ ಒಪ್ಪಲಾಗುವುದಿಲ್ಲ ; ಶೈವ–ವೀರಶೈವಾದಿಗಳಲ್ಲಿ ವಿಷ್ಣುವನ್ನು ಒಪ್ಪಲಾಗುವುದಿಲ್ಲ. ಗಣಪತಿಯನ್ನೋ ಅಂಬಿಕೆಯನ್ನೋ ಮಾತ್ರ ಆರಾಧಿಸುವವರು ಎಲ್ಲವನ್ನೂ ಅವರಲ್ಲಿಯೇ ಕಂಡು ಪ್ರತ್ಯೇಕ ದೇವತಾಪೂಜೆಗೆ ಹೋಗಲಾರರು. ಸ್ಮಾರ್ತ ಪದ್ಧತಿಯು ಸನಾತನಧರ್ಮಕ್ಕೆ ಸೇರಿದ ಎಲ್ಲ ಪದ್ಧತಿಗಳಲ್ಲಿ ಪ್ರಾಚೀನತಮ ಪದ್ಧತಿಯು ; ಹೊಸ–ಹೊಸ ವಿಚಾರ ಬಂದಂತೆ ಹೊಸ ಹೊಸ ಪದ್ಧತಿಗಳು ಬಂದವು. ಆ ಕ್ರಮದಲ್ಲಿ ಮುಂದೆ ಕೇವಲ ವಿಷ್ಣು ಪೂಜೆ, ಕೇವಲ ಶಿವಪೂಜೆ, ಕೇವಲ ಅಂಬಿಕಾಪೂಜೆ, ಕೇವಲಗಣಪತಿ ಪೂಜೆ – ಹೀಗೆಲ್ಲ ಪದ್ಧತಿಗಳು ಹುಟ್ಟಿಕೊಂಡವು ಹಾಗೂ ಆ ಆ ದೇವತಾ ಪೂಜಾರಾಧಕರು ವೈಷ್ಣವರು ವೀರವೈಷ್ಣವರು, ಶೈವರು – ವೀರಶೈವರು, ಗಾಣಪತ್ಯರು ಎಂದು ಮುಂತಾಗಿ ವಿಭಿನ್ನ ಪಂಥದವರಾದರೂ ಹಳೆಯ ಸನಾತನ ಪದ್ಧತಿಯಲ್ಲಿ ಮುಂದುವರಿಯುವರು. ಪಂಚಾಯತನ ಪೂಜಾಪದ್ಧತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವವರು ಸಾಮಾನ್ಯವಾಗಿ ಸ್ಮಾರ್ತರು. ಇವರು ಶಂಕರಾಚಾರ್ಯರ ಮತವನ್ನು, ಅರ್ಥಾತ್ ಅದ್ವೈತ ಮತವನ್ನು ಅನುಸರಿಸುವವರು. ಅದ್ವೈತವೆಂದರೆ ದ್ವೈತ ಅರ್ಥಾತ್ ಎರಡು

ಅನ್ನುವುದು ಇಲ್ಲದಂತಾದದ್ದು. ಜೀವಾತ್ಮವು ಆತ್ಮಸಾಧನೆಯ ಮೂಲಕ ಮೋಕ್ಷವನ್ನು ಪಡೆದಾಗ, ಜನ್ಮ–ಪುನರ್ಜನ್ಮಚಕ್ರದಿಂದ ಮುಕ್ತಿಯನ್ನು ಪಡೆದಾಗ ಪರಮಾತ್ಮನಲ್ಲಿ ಒಂದೇ ಆಗಿ ಬಿಡುವುದು ಅದ್ವೈತ. ಮೋಕ್ಷವೆಂದರೆ ಜೀವಾತ್ಮವು ತನ್ನ ಜೀವಭಾವವನ್ನು ತ್ಯಜಿಸಿ ಕೇವಲ ಆತ್ಮಮಾತ್ರವಾಗಿ ಪರಮಾತ್ಮನಲ್ಲಿ ಒಂದಾಗುತ್ತದೆ. ಅಭಿನ್ನವಾಗುತ್ತದೆ. ಆತ್ಮವನ್ನು ಪುನಃ ಪ್ರತ್ಯೇಕಿಸಲು ಸಾಧ್ಯವಿಲ್ಲದಂತಾಗುತ್ತದೆ ಅನ್ನುವುದು ಅದ್ವೈತ. ಕಟ್ಟಿಗೆಯ ತುಂಡೊಂದನ್ನು, ಅರ್ಥಾತ್ ಇಂಧನವನ್ನು ಜ್ವಲಿಸುವ ಅಗ್ನಿಕುಂಡಕ್ಕೆ ಹಾಕಿದಾಗ ಇಂಧನವು ಹೇಗೆ ಅಗ್ನಿಯೇ ಆಗಿಬಿಡುವುದೋ ಹಾಗೆ ಪ್ರತ್ಯಗಾತ್ಮವು ಮೋಕ್ಷದಲ್ಲಿ ಪರಮಾತ್ಮವೇ ಆಗಿ ಸಾಯುಜ್ಯಮೋಕ್ಷವನ್ನು ಪಡೆಯುವುದು ಅನ್ನುವುದು ಅದ್ವೈತ. ಓಂಕಾರದಲ್ಲಿ ರುವ ಅ–ಉ–ಮ್ ಗಳ ವಿವಿಧಾರ್ಥಗಳಿಂದಾಗಿ ಪರಾಶಕ್ತಿಯೇ ಆದ ಆ ಓಂಕಾರವು ವಿವಿಧ ದೈವೀತತ್ತ್ವಗಳಿಗೆ ಇಂಬುಗೊಟ್ಟಿತು. ಪರಾಶಕ್ತಿಯೇ ಪರಾಪ್ರಕೃತಿಯೆಂದೆನಿಸಿದ್ದು ಹಾಗೂ ಸತ್ ಚಿತ್‌ಗಳಲ್ಲಿ ಸತ್ ಅನ್ನುವ ದೃಶ್ಯ ಜಗತ್ತನ್ನು ನಡೆಸುವ ಪ್ರಕೃತಿಯ ವಿವಿಧಕಾರ್ಯಸಾಮರ್ಥ್ಯಗಳು ಸನಾತನಪದ್ಧತಿಯಲ್ಲಿ ವಿವಿಧ ದೇವತೆಗಳ ಅಸ್ತಿತ್ವಕ್ಕೆ ದಾರಿ ಮಾಡಿಕೊಟ್ಟವು. ಉದಾಹರಣೆಗೆ ಸ್ಥಿತಿತತ್ತ್ವವನ್ನು ಅರ್ಥೈಸುವ 'ಅ' ವು ವಿಷ್ಣುವಿಗೆ ಹಾಗೂ ಆತನ ಅವತಾರಗಳ ಹೆಸರುಗಳಿಗೆ ಮತ್ತು ರೂಪುಗುಣಾದಿಗಳಿಗೆ ಕಾರಣವಾಯಿತು. ಇದೇ ರೀತಿ 'ಉ' 'ಮ್' ಗಳು ಶಿವ–ಬ್ರಹ್ಮ ಮುಂತಾದ ಅನೇಕ ರೂಪ–ಹೆಸರುಗಳಿಗೆ ಕಾರಣವಾದವು. ಓಂಕಾರವೂ ಕೂಡ ಇಡಿಯಾಗಿ ಗಣಪತಿ, ಮಾರುತಿ, ದುರ್ಗಾ ಮುಂತಾದ ಅನೇಕ ನಾಮ–ರೂಪಗಳಿಗೆ ಕಾರಣವಾಯಿತು. ಪ್ರಕೃತಿಯ ಕಾರ್ಯಸಾಮರ್ಥ್ಯವೈವಿಧ್ಯದಿಂದಾಗಿ ಬಂದ ಈ ಎಲ್ಲರನ್ನೂ ಅಥವಾ ಎಲ್ಲವನ್ನೂ ಲೌಕಿಕ ಜಗತ್ತಿನಲ್ಲಿಯ ಸುಖ–ಸಮೃದ್ಧಿಗಳಿಗಾಗಿ ಆರಾಧಿಸುವ ಪದ್ಧತಿಯು ಕ್ರಮೇಣ ರೂಢಿಯಲ್ಲಿ ಬಂದಿತು. ಹೀಗಾಗಿ ಸನಾತನಪದ್ಧತಿಯಲ್ಲಿ ನೂರಾರು ದೇವತೆಗಳು ಮುಖ್ಯದೇವತೆಗಳಾದರೆ ಅಮುಖ್ಯದೇವತೆಗಳು ಸಾವಿರಾರು ಎಂಬಂತಾಯಿತು. ಮೋಕ್ಷವನ್ನು ಅರಸಿಕೊಂಡು ಹೋಗುವವನಿಗೆ ಈ ಯಾವ ದೇವತೆಗಳ ಆರಾಧನೆಯೂ ಬೇಕಾಗಿಲ್ಲ. ಏಕೆಂದರೆ ಈ ಎಲ್ಲವೂ ಪರಬ್ರಹ್ಮದಿಂದ, ಪರಮಾತ್ಮನಿಂದ ಮೂಡಿಬಂದ ಓಂಕಾರಮೂಲದವುಗಳು.

ಈ ಕಾರಣದಿಂದ ಎಲ್ಲ ದೇವತೆಗಳ ಹೆಸರುಗಳ ಪ್ರಾರಂಭದಲ್ಲಿ ಓಂಕಾರವನ್ನು ತರಲಾಗುವುದು. ಮೋಕ್ಷವು ಓಂಕಾರವನ್ನು ಮೀರಿದ್ದು. ಯೋಗಮಾರ್ಗದಲ್ಲಿ ಅನಾಹತ ಓಂಕಾರವು ಅಂತರಂಗದಲ್ಲಿ ಧ್ವನಿಸಿದರೂ ಅದನ್ನೂ ಮೀರಿಸಿ ನಿರ್ವಿಕಲ್ಪಕ್ಕೆ

ಹೋಗಬೇಕಾಗುತ್ತದೆ. ಆದುದರಿಂದ ಅಲ್ಲಿ ನಿರಾಕಾರಪರಬ್ರಹ್ಮದ ಉಪಾಸನೆ ; ವಿಕಲ್ಪಕ್ಕೆ ಆಸ್ಪದಕೊಟ್ಟಲ್ಲಿ ಮತ್ತೆ ಜನ್ಮ-ಪುನರ್ಜನ್ಮಗಳು. ವಿಕಲ್ಪಾತೀತ ನಿರ್ವಿಕಲ್ಪಕ್ಕೆ ಹೋದಾಗಲೇ ಮೋಕ್ಷ. ಆಗ ನಿರಾಕಾರ-ನಿರ್ಗುಣ ಪರಬ್ರಹ್ಮೋಪಾಸನೆ.

ನೂರಾರು ಮುಖ್ಯ ದೇವತೆಗಳಲ್ಲಿಯೂ ಐದು ದೇವತೆಗಳನ್ನು ಅತಿಮುಖ್ಯವೆಂದು ನಿರ್ಧರಿಸಲಾಯಿತು. ಈ ನಿರ್ಧಾರಕ್ಕೆ ಬರಲು ಕಾರಣ ಪೃಥ್ವಿ – ಜಲ – ಅಗ್ನಿ-ವಾಯು-ಆಕಾಶಗಳೆಂಬ ಪಂಚಭೂತಗಳು ಪ್ರಮುಖವೆನಿಸಿದ್ದು ; ಇವುಗಳಿಂದಾಗಿಯೇ ಜೀವಿಗಳ ದೇಹ ಹಾಗೂ ದೇಹಪೋಷಕಗಳಾದ ಪ್ರಾಣ-ಅನ್ನ-ಪಾನೀಯ-ಶ್ರವಣಗಳು. ಈ ಪೃಥ್ವ್ಯಾದಿಗಳಿಗೆ ಕಾರಣೀಭೂತ ಸೂರ್ಯನಾದುದರಿಂದ ಸೂರ್ಯನ ಅಸ್ತಿತ್ವವನ್ನು ಈ ಎಲ್ಲವುಗಳಲ್ಲಿಯೂ ಕಂಡುಕೊಂಡ ಋಷಿ-ಮುನಿಗಳು ಸೂರ್ಯನನ್ನು ಪ್ರಮುಖ ಪಂಚದೇವತೆಗಳಲ್ಲಿ ಒಬ್ಬನೆಂದು ಗಣಿಸಿದರು. ಈ ಪ್ರಮುಖಪಂಚದೇವತೆಗಳಿಗೆ ಪೂಜೆಯನ್ನು ಸಲ್ಲಿಸಿದರೆ ಎಲ್ಲ ದೇವತೆಗಳನ್ನೂ ಪೂಜಿಸಿದಂತಾಗುವುದು ಅನ್ನುವ ತಿಳುವಳಿಕೆಯಿಂದ ಪಂಚಾಯತನಪೂಜೆಯನ್ನು ಅಸ್ತಿತ್ವಕ್ಕೆ ತಂದರು. ಯಾವ ತತ್ತ್ವದ ಅನುಗ್ರಹ ಮುಖ್ಯವೋ ಆ ತತ್ತ್ವಾಧಿದೇವನನ್ನು ಮನದಲ್ಲಿಟ್ಟು ಪೂಜಿಸುವ ಪದ್ಧತಿಯು ಕ್ರಮೇಣ ರೂಢಿಯಲ್ಲಿ ಬಂದಿತು. ಉದಾಹರಣೆಗೆ ಸ್ಥಿತಿತತ್ತ್ವಕ್ಕೆ ಅವಶ್ಯಕವಾದ ಧನಧಾನ್ಯ ಮುಂತಾದವುಗಳನ್ನು ಅತಿಮುಖ್ಯವಾಗಿ ಅಪೇಕ್ಷಿಸುವವರು ಹಾಗೂ ಪಿತೃತೃಪ್ತಿಯನ್ನು ಬಯಸುವವರು ವಿಷ್ಣುವನ್ನು ಮಧ್ಯದಲ್ಲಿಟ್ಟುಕೊಳ್ಳುವರು. ಕಾರ್ಯಕ್ಷಮತೆಯೇ ಮುಂತಾದವುಗಳಿಗೆ ಹೆಚ್ಚಿನ ಬಲವನ್ನು ಅಪೇಕ್ಷಿಸುವವರು ಶಕ್ತಿದೇವತೆ ಅಂಬಿಕೆಯನ್ನು ಮಧ್ಯದಲ್ಲಿ ಇಟ್ಟುಕೊಳ್ಳುವರು. ಪಂಚಮೂರ್ತಿಗಳು ಯಾವ ಯಾವ ದೇವತೆಗಳನ್ನು ಸಂಕೇತಿಸುವರು ಎಂದು ಮುಂತಾದವುಗಳೆಲ್ಲ ಇಲ್ಲಿಯ ಹದಿನೆಂಟು ಪದ್ಯಗಳಲ್ಲಿ ವಿವರಿಸಲ್ಪಟ್ಟಿದ್ದನ್ನು ಗಮನಿಸಬಹುದು.

ಭೌತಿಕವಾಗಿ ಯಾವುದೇ ಪೂಜಾ-ಹೋಮಾದಿಗಳನ್ನು ನಡೆಸಲು ಸಮಯ-ಸ್ಥಳ-ಧನಾನುಕೂಲತೆಯೇ ಮುಂತಾದವುಗಳು ಲಭ್ಯವಿಲ್ಲದಿದ್ದಲ್ಲಿ ಮನಸ್ಸಿನಲ್ಲಿಯೇ ಆ ದೇವತೆಗಳನ್ನು ಕಲ್ಪಿಸಿಕೊಂಡು ಪೂಜೆಯನ್ನು ನಡೆಸಬಹುದು. ಆಗ ಆ ಪೂಜಾರಾಧನೆಯು ಮಾನಸಿಕ ಪೂಜೆಯೆನಿಸುವುದು. ಮಾನಸಪೂಜೆಯಲ್ಲಿ ಸ್ನಾನ-ಮಡಿಮೈಲಿಗೆಗಳೆಂಬ ಅಡೆತಡೆಗಳೇನೂ ಇರುವುದಿಲ್ಲ. ಆದರೆ ಇಲ್ಲಿ ಮನಸ್ಸಿನ ಏಕಾಗ್ರತೆ ಅತಿಮುಖ್ಯವಾಗುವುದು. ಏಕಾಗ್ರಚಿತ್ತವಿಲ್ಲದಿದ್ದಲ್ಲಿ ಮಾನಸಪೂಜೆ ಅಸಾಧ್ಯ. ಮಾನಸಪೂಜಾಫಲವು ನಿಶ್ಚಿತವಾಗಿ ಅಪರಿಮಿತವಾದುದು.

ಗುರುಗೌರವಾತ್ಮಿಕಾ ಪಂಚಾಯತನ ಪಂಚಮೂರ್ತಿಸ್ತುತಿಃ

ಗಣಪತಿಸ್ತುತಿಃ :

ಗಣಪತೇ ನಮಸ್ತೇ ತ್ವಮೋಂಕಾರೋಽಸಿ ಗಜಾನನಃ।
ಮೂಷಕವಾಹನೋ ರಮ್ಯಃ ಸರ್ವವಿಘ್ನನಿವಾರಕಃ ॥1॥

ಆದಿಪೂಜ್ಯೋಽಸಿ ತ್ವಂ ನಿತ್ಯಸೂಕ್ಷ್ಮಜ್ಞೋ ಮೋದಕಪ್ರಿಯಃ।
ಗುರುಪಾದಕೃಪಾಲ್ಲಭ್ಯೋ ಗಣೇಶೋ ಮೇ ನಮೋಽಸ್ತುತೇ ॥2॥

ದುರ್ಗಾಸ್ತುತಿಃ :

ಇಚ್ಛಾಜ್ಞಾನಕ್ರಿಯಾಶಕ್ತಿಸಂಪನ್ನಾ ಪರಮೇಶ್ವರೀ ।
ತಮೋಹಂತ್ರೀ ನಮಸ್ತೇಽಸ್ತು ದುರ್ಗೇ ದುರ್ಗತಿನಾಶಿನೀ ॥3॥

ತ್ವಂ ಹಿ ಕುಂಡಲಿನೀಶಕ್ತಿರ್ವಿಷ್ಣುಮಾಯಾ ಮಹೇಶ್ವರಿ ।
ಗುರುಪಾದಾನುಗ್ರಹಾದೇವ ತ್ವತ್ಪಾದೇ ಮದುಪಸ್ಥಿತಿಃ ॥4॥

ಸೂರ್ಯಸ್ತುತಿಃ :

ಪ್ರಾತರ್ಬ್ರಹ್ಮಾ ದಿನೇ ವಿಷ್ಣುಃ ಸೂರ್ಯ ಸಾಯಂ ತ್ವಮೀಶ್ವರಃ ।
ನಮೋಽಸ್ತುತೇ ಸದಾ ಸರ್ವಲಯ-ಪ್ರಸವ-ಪೋಷಕಃ ॥5॥

ಭರ್ಗಸ್ತೇ ಸೂರ್ಯ ಗಾಯತ್ರೀ ಪ್ರಭಾ ಸಾ ಸರ್ವರಕ್ಷಿಕಾ ।
ಗುರುಪಾದಾಶಿಷೋ ನಿತ್ಯಂ ಯುವಯೋಃ ಸನ್ನಿಧೌ ರಮೇ ॥6॥

ಶಿವಸ್ತುತಿಃ :

ಪಂಚಭೂತಾಧಿಪಃ ಶಂಭೋ ತ್ರಿಶೂಲೀ ಲಯಕಾರಕಃ ।
ಪಾರ್ವತೀಪಃ ಕಪಾಲೀ ತೇ ಗಜಚರ್ಮಧರೋ ನಮಃ ॥7॥

ಉಪನಿಷನ್ನುತೋಽಸಿ ತ್ವಮೀಶ ಇತಿ ಪರಾತ್ಪರ ।
ತವಶ್ರೀಗುರುಪಾದಾಬ್ಜೇ ಭೃಂಗೋಽಸ್ಮಿ ವರದೋ ಭವ ॥8॥

ವಿಷ್ಣುಸ್ತುತಿಃ :

ಶಂಖಚಕ್ರಗದಾಪದ್ಮಹಸ್ತಸ್ತ್ವಂ ಸ್ಥಿತಿಕಾರಕಃ ।
ದಶಾವತಾರಸುಖ್ಯಾತೋ ವಿಷ್ಣೋ ತುಭ್ಯಂ ನಮೋನಮಃ ॥9॥

ನಿತ್ಯಃ ಕೃಷ್ಣಾವತಾರೇ ತ್ವಂ ಸುವಿಖ್ಯಾತೋ ಜಗದ್ಗುರುಃ ।
ನಮಸ್ತೇ ಗುರುಪಾದಾಭ್ಯಾಂ ಬುದ್ಧಸ್ತ್ವಂ ಹಿ ರಮಾಪತೇ ॥10॥

ಸಮಾಪ್ತಿಃ :

ಪಂಚಾಯತನಪೂಜಾರ್ಥಮರ್ಪಿತೇಯಂ ಸುಪದ್ಯಸೃಕ್ ।
ಹೆಗಡೆ (ಕೆ.)ಗುರುಪಾದೇನ ಭಕ್ತಾಭೀಷ್ಟಪ್ರದಾಯಿಕಾ ॥11॥

೨೧. ವಿಶ್ವಪ್ರೇಮ ದರ್ಶಿಕಾ

[**ಪೀಠಿಕೆ :** ಋಗ್ವೇದದ ಏಳನೆಯ ಮಂಡಲದ ಮೂವತ್ತೈದನೆಯ ಸೂಕ್ತದಲ್ಲಿ ಋಷಿ ವಸಿಷ್ಠನು ಇಂದ್ರಾಗ್ನಿಸಹಿತರಾದ ಸರ್ವದೇವತೆಗಳನ್ನು ಶಾಂತಿಗಾಗಿ ಹಾಗೂ ಸರ್ವಕಲ್ಯಾಣಕ್ಕಾಗಿ ಪ್ರಾರ್ಥಿಸಿಕೊಂಡದ್ದು ಬರುತ್ತದೆ. ಆ ಸೂಕ್ತದಲ್ಲಿ 15 ಮಂತ್ರಗಳಿದ್ದು ಅವುಗಳನ್ನು ಸಂಕ್ಷಿಪ್ತಗೊಳಿಸಿ ಇಲ್ಲಿ ಆಧ್ಯಾತ್ಮಿಕ ಅರ್ಥಕ್ಕೆ ಅಳವಡಿಸಲಾಗಿದೆ. ಅನಂತರ ಇಲ್ಲಿ ತಂದಿರುವುದು ಋಗ್ವೇದದ ಕೊನೆಯ ಸೂಕ್ತವನ್ನು, ಅಂದರೆ ಋಗ್ವೇದದ 10ನೆಯ ಮಂಡಲದ 191ನೆಯ ಸೂಕ್ತವಾದ ಸಂವನನಸೂಕ್ತವನ್ನು. 'ಸಂವನನ' ಶಬ್ದದ ಅರ್ಥ ವಿಶ್ವಪ್ರೇಮ. ಭಾವಸಮಾಧಿಯಲ್ಲಿದ್ದ ಋಷಿಯ ಆಗಿನ ಅವಸ್ಥೆಗನುಗುಣವಾಗಿ ಆ ಋಷಿಗೆ ಸಂವನನ ಎಂಬ ಹೆಸರು ಬಂದಿತು. ಆ ಹೆಸರಿನಿಂದಲೇ ಗುರುತಿಸಲ್ಪಟ್ಟ ಈ ಸೂಕ್ತದಲ್ಲಿ ನಾಲ್ಕು ಮಂತ್ರಗಳಿದ್ದು ಮೊದಲನೆಯದರಲ್ಲಿ ಅಗ್ನಿಯು ದೇವತೆಯಾಗಿದ್ದಾನೆ. ಮುಂದಿನ ಮೂರು ಮಂತ್ರಗಳ ದೇವತೆಯು 'ಸಂಜ್ಞಾನ'ವಾಗಿರುವುದು ಇಲ್ಲಿಯ ವಿಶೇಷ. ಸಮ್ಯಕ ಜ್ಞಾನ ಅಂದರೆ ಸರಿಯಾದ ತಿಳುವಳಿಕೆ–ಇದೇ ಸಂಜ್ಞಾನ. ಈ ಮಂತ್ರದ ಭಾವಾರ್ಥವನ್ನು ಗ್ರಹಿಸಿ ಇಲ್ಲಿ ಅದನ್ನು ಆಧ್ಯಾತ್ಮಿಕವಾಗಿ ತರಲಾಗಿದೆ. ಸಂಗಡ ಸೋಮರಸ ಮತ್ತು ಮಧು ಇವುಗಳನ್ನೂ ಇಲ್ಲಿ ಪ್ರಸ್ತಾಪಿಸಲಾಗಿದೆ.]

ಪರಸ್ಪರಪ್ರೇಮಮಯ ಮಧುವು ತುಂಬಿರಲಿ ಜಗವೆಲ್ಲ
ವಿಶ್ವರೂಪದಲಿರುವ ಪರಮಾತ್ಮ ವಿಶ್ವಪ್ರೇಮವಾವರಿಸಲೆಲ್ಲರಲಿ ॥ಪ॥

ಇಂದ್ರಾಗ್ನಿವರುಣತ್ರಿಮೂರ್ತ್ಯಾದಿ ದೇವತೆಗಳ ರೂಪ ತಳೆದ
ದ್ಯಾವಾಪೃಥಿವ್ಯಾದಿಲೋಕಗಳ ರೂಪಗಳಲ್ಲಿ ಕಂಗೊಳಿಪ
ಗಿರಿ–ನದಿ–ವನಾರ್ಣವಪರ್ಜನ್ಯಾದಿ ಪ್ರಕೃತಿವೈವಿಧ್ಯಮಯನಾದ
ಏಕಮೇವಾದ್ವಿತೀಯ ಪರಾತ್ಪರನವನು ಸರ್ವರಿಗೂ ಶುಭವನ್ನು ತರಲಿ ॥1॥

ಅಗ್ನಿಮುಖವಾಗಿರುವ ಯಜ್ಞವೇದಿಕೆ ಮತ್ತು
ವಿವಿಧ ಕಾರ್ಯಕ್ಷೇತ್ರಗಳೆಂಬ ಯಜ್ಞವೇದಿಗಳು
ಎಲ್ಲರಿಗು ಶುಭತರಲಿ ಸರ್ವರಿಗು ಸಮವಾದ
ಶಾಂತಿ ನೆಲಸಲಿ ಸರ್ವತ್ರ ಸರ್ವಕಾಲದಲಿ ॥2॥

ದೇವದೇವಿಯರು ಪಿತೃಗಳು ಪಂಚಭೂತಗಳು
ಗೋವುಗಳೇ ಮೊದಲಾದ ಪ್ರಾಣಿವರ್ಗಗಳು
ಪರಮಪುರುಷ – ಪರಾಶಕ್ತಿಯರ ವಿವಿಧತೆಗಳಾಗಿಹವು
ಅನುಗ್ರಹಿಸಲವರೆಲ್ಲ ತಂತಮ್ಮ ಸರ್ವಸ್ವಗಳೊಡನೆ ಸಮಾನವಾಗಿ ॥3॥

ಸರಸ್ವತೀಲಕ್ಷ್ಮೀದುರ್ಗಾದಿ ಮಾತೃದೇವೀಸ್ವರೂಪಗಳಲ್ಲಿ
ಅಹೋರಾತ್ರ್ಯುಷಾಸಂಧ್ಯಾದಿಕಾಲರೂಪಗಳಲ್ಲಿ
ಮನೋಬುದ್ಧ್ಯಹಂಕಾರ ಪ್ರಜ್ಞಾದ್ಯಂತರಂಗ ವೈವಿಧ್ಯಗಳಲ್ಲಿ
ಅನುಭವವೇದ್ಯ ಪರಮಾತ್ಮನವ ನೀಡಲೆಲ್ಲರಿಗೆ ಶಾಂತಿ ಸುಖಗಳನು ॥4॥

ಒಬ್ಬನೇ ಒಬ್ಬನಾ ಪರಮಾತ್ಮ ಜಗನ್ನಿಯಂತ್ರಕನು
ವಿಭಿನ್ನದೇಶ ಜನಾಂಗಗಳವನನ್ನು ಗುರುತಿಸುವ ಪರಿಯು ಭಿನ್ನ
ಅವನ ಕಾರ್ಯಕ್ಷಮತೆಗಳಿಗನುಗುಣವಾಗಿ ದೇವರುಗಳಸಂಖ್ಯ
ಅವರವರ ಶಕ್ತಿಯನೇ ಪತ್ನಿಯರೆಂದು ರೂಪಿಸಲಸಂಖ್ಯದೇವಿಯರು ಮತ್ತೆ ॥5॥

ಸರ್ವದೇವೀ–ದೇವ–ಗುರು–ಪಿತೃ–ಜೀವಿಗಳ ರೂಪಗಳಲ್ಲಿ ತಾನಿದ್ದು
ಬ್ರಹ್ಮಾಂಡವಾಗಿ ತಾ ರೂಪುಗೊಂಡಲ್ಲೆಲ್ಲವೊಳಹೊರಗೆ ತಾನೆ ತಾನಿದ್ದು
ಅನೇಕಾನೇಕ ಹೆಸರು – ಸಂಕಲ್ಪಗಳ ಮೂಲಕವೆಲ್ಲವನು ನಡೆಸುತ್ತಲಿರುವ
ಪರಾಶಕ್ತ್ಯಾತ್ಮಕ ಪರಮಾತ್ಮನವ ನೀಡಲೆಲ್ಲರಿಗೆ ಸುಖ–ಪರಮಶಾಂತಿಗಳ ॥6॥

ಸರ್ವಪ್ರೇಮಮಯ ಸ್ಥಿತಿಯು ಸಂವನನವೆನಿಸುವುದು
ಚಿದಾನಂದ ಪರಮಾತ್ಮ ಸರ್ವಪ್ರೇಮಮಯ ಪುರುಷ
ಸಮಾಧಿಯಲಿ ಋಷಿಯು ಸಂವನನ ಸ್ಥಿತಿಯನ್ನು ತಲುಪಿ
ಹಾರೈಸುತಿಹನಿಲ್ಲಿ ಪರಸ್ಪರದ ವಿಶ್ವಪ್ರೇಮವನು ॥7॥

ಜೀವಾತ್ಮವೇ ಅಗ್ನಿಯದು ಸರ್ವಸಮಾನವೆಲ್ಲರಿಗೂ
ಜಗದ ಪ್ರಾಣಿಗಳೆಲ್ಲವೂ ಅಗ್ನ್ಯಂತರಾತ್ಮಗಳು
ಎಲ್ಲರಲ್ಲಿರುವ ಮನವೆ ಯಜ್ಞದ ಋತ್ವಿಜರು ಇಲ್ಲಿ
ಬೆಳಗಲವರೆಲ್ಲರಲಿ ನಿರ್ವ್ಯಾಜ ಪ್ರೇಮಮಯ ಬೆಳಕು ॥8॥

ವಿವಿಧ ಜನಮನಗಳೆಂಬ ಋತ್ವಿಜರೆಲ್ಲರೊಂದು ಭಾವದಲಿ
ವಿಧವಿಧದ ಕಾಯಕಗಳೆಂಬ ಯಜ್ಞಗಳನು ನಡೆಸುತ್ತ
ಆತ್ಮಶಕ್ತಿಯ ರೂಪದಲ್ಲಿರುವ ಯಜ್ಞಾಗ್ನಿ ಬೆಳಕಿನಲ್ಲಿ
ಪಡೆಯಲಿಷ್ಟಾರ್ಥಗಳನೆಲ್ಲರೂ ಎಲ್ಲರೊಂದಾಗಿ ॥9॥

ಯಜ್ಞದಲಿ ಅಗ್ನಿಮುಖವಾಗಿ ಬರುವ ದೇವತೆಗಳೆಲ್ಲ
ಪರಸ್ಪರ ಪ್ರೀತಿಯಿಂದಲ್ಲಿಗವತರಣಗೈದು
ತಂತಮ್ಮ ಹವಿರ್ಭಾಗಗಳ ಪಡೆದು ನಲಿಯುವಂತೆ
ಉಲ್ಲಸಿತರಾಗಿರಲಿ ಪರಸ್ಪರ ಪ್ರೀತಿಯಿಂ ಮನುಜರೆಲ್ಲ ॥10॥

ಯಾಗದಲಿ ಋತ್ವಿಜರ ಮಂತ್ರಗಳಲೇಕಧ್ವನಿಯು ತಾನಿರುವಂತೆ
ನವಗ್ರಹಗಳೆಲ್ಲ ನವವಿಧಾಹುತಿಯನೊಂದೆಡೆಯಲ್ಲಿ ಸ್ವೀಕರಿಸುವಂತೆ
ಸರ್ವಚಿತ್ತಗಳಲೈಕ್ಯಮತ್ಯ ತುಂಬಿರಲಿ
ವಿವಿಧ ಕಾಯಕಯಜ್ಞಗಳಲಿ ಸರ್ವಸುಖವೇಕ ಗುರಿಯಿರಲಿ ॥11॥

ಗುರಿಯೊಂದೆ ಅದು ಮನುಜಕುಲಕೆಲ್ಲ ಸುಖವು
ಧರ್ಮವಿವಿಧತೆಯಲೂ ಮನವೊಂದೆ ಅದು ಮನುಜಮನವು
ಸುಖ–ದುಃಖಗಳಲ್ಲಿ ಹಿಗ್ಗು–ಕುಗ್ಗುವಿಕೆಗಳೆಲ್ಲರಿಗೂ ಒಂದೇ
ಎಲ್ಲರೇಳಿಗೆ–ಸುಖಕೆ ಮೀಸಲಿರಲೆಲ್ಲರ ಕಾಯಕಗಳೆಲ್ಲ ॥12॥

ಯಾವುದೇ ಹೆಸರಿನ ದೇವೀ–ದೇವ–ಗುರು–ಹಿರಿಯರೆಲ್ಲರಿಗೆ
ಗೋಪ್ರಮುಖ ಪ್ರಾಣಿ–ಜಲ–ಕಲ್ಲು–ಮರ–ಸೂರ್ಯ–ಧರ್ಮಪ್ರತಿಮೆಗಳಿಗೆ
ಯಾವುದೇ ಜಂಗಮಕೆ–ಸ್ಥಾವರಕೆ ಸಲ್ಲಿಸಿದ ಗೌರವ – ಭಕ್ತಿ – ಪ್ರೇಮಭಾವಗಳು
ಸಲ್ಲುವವು ಆ ಆ ಭಾವದಲ್ಲಿರುವ ಪರಮಾತ್ಮನೊಬ್ಬನಿಗೇ ॥13॥

ವಿಶ್ವಪ್ರೇಮವದು ಸೋಮರಸ; ವಿಶ್ವಪ್ರೇಮವದು ಮಧುವು
ಸೋಮ–ಮಧುಗಳು ತಿಳಿದು ನೋಡಿದರೆ ನಿಜದಲಿರುವುದೊಂದೇ
ಮನವೆಲ್ಲರದು ಮಧುವಾಗಿರಲು ಜಗವೆಲ್ಲ ಮಧುವು
ನಿರ್ವಿಕಲ್ಪದಲಿ ಪರಾತ್ಪರ ಮಧು ಜ್ಯೋತಿಯದು ಪರಾಶಕ್ತಿ ಮಧುವು ॥14॥

ಸರ್ವಧರ್ಮಗಳ ಗ್ರಂಥಗಳಲೆಲ್ಲ ತಾನೆತಾನಾಗಿ ಮೆರೆಯುತ್ತಲಿರುವ
ಚಿರಂತನ ವಿಶ್ವಪ್ರೇಮವದು ಬೆಳಗಲೆಲ್ಲರಲಿ
ಸೋಽಹಂಭಾವದು ಪರಮಾತ್ಮವಿಲೀನತಾಚಿದ್ವಿಲಾಸ
ಸೌಭಾಗ್ಯ ಬರಲೆಲ್ಲರಿಗಾ ಪರಮಗುರುಪಾದಕರುಣೆಯಿಂದ ॥15॥

ಪರಸ್ಪರ ಪ್ರೇಮಮಯ ಮಧುವು ತುಂಬಿರಲಿ ಜಗವೆಲ್ಲ
ವಿಶ್ವರೂಪದಲಿರುವ ಪರಮಾತ್ಮ ವಿಶ್ವಪ್ರೇಮವಾವರಿಸಲೆಲ್ಲರಲಿ ॥ಪ॥

ವಿಶ್ವಪ್ರೇಮದರ್ಶಿಕಾ

ಋಗ್ವೇದವು ಕೊನೆಗೊಳ್ಳುವುದು ಸಂವನನ ಅನ್ನುವ ಸೂಕ್ತದಿಂದ. 'ಸಂವನ್' ಅಂದರೆ ಸಮಾನವಾಗಿ ಪ್ರೀತಿಸು ಎಂದು ಅರ್ಥ. ಪರಸ್ಪರರೆಲ್ಲರ ಸಮಾನ ಪ್ರೀತಿಯೇ ಸಂವನನ ; ಸಮಾನವಾದ ಪರಸ್ಪರ – ಪ್ರೀತಿಯೇ ವಿಶ್ವಪ್ರೇಮವಾಗುವುದು. ಎಲ್ಲರೂ ಎಲ್ಲರನ್ನೂ ಪ್ರೀತಿಸುವುದು, ಎಲ್ಲರೂ ಎಲ್ಲರಿಗೂ ಶುಭವನ್ನೇ ಹಾರೈಸುವುದು ಸಂವವನ, ಅರ್ಥಾತ್ ವಿಶ್ವಪ್ರೇಮ. ಇದಕ್ಕಾಗಿ 'ಸಂ ಸಮಿತ್ ಯುವಸೇ ವೃಷನ್ ಅಗ್ನೇ ವಿಶ್ವಾನಿ ಆರ್ಯ ಆ " – 'ಆರ್ಯನೆ, ಶ್ರೇಷ್ಠನೆ, ಅಗ್ನಿಯೆ, ಇಷ್ಟಾರ್ಥದಾಯಕನೆ, ಎಲ್ಲರನ್ನೂ ಸರ್ವಪ್ರಕಾರಗಳಿಂದಲೂ ಒಂದಾಗಿರುವಂತೆ ಮಾಡು' ಎಂಬ ಪ್ರಾರ್ಥನೆಯೊಂದಿಗೆ ಈ ಸಂವನನಸೂಕ್ತವು ಪ್ರಾರಂಭವಾಗುವುದು. ಯೋಗಸಮಾಧಿಸ್ಥಿತಿಯಲ್ಲಿ ಋಷಿಯು ತಾನು ಮೊದಲು ಸಂವನನಾಗಿ ಸರ್ವರನ್ನೂ ಪ್ರೀತಿಸುವವನಾಗಿ, ಶುದ್ಧಪ್ರೇಮದ ಸಾಕಾರವಾಗಿ ಸಂವನನ ಎಂಬ ಹೆಸರಿನಲ್ಲಿಯೇ ಪ್ರಕಾಶಿಸುವನು. ಮುಂದಿನ ಮಂತ್ರಗಳಲ್ಲಿ "ಸಂಗಚ್ಛಧ್ವಂ ಸಂವದಧ್ವಂ......., ಸಮಾನೋ ಮಂತ್ರಃ ಸಮಿತಿಃ ಸಮಾನೀ ಸಮಾನಂ ಮನಃ........." ಎಂದು ಮುಂತಾಗಿ ಹೇಳುತ್ತ, ಒಟ್ಟಿಗೆ ಚಲಿಸಿರಿ. ಒಂದೇ ಅಭಿಪ್ರಾಯದ ಮಾತುಗಳನ್ನು ಆಡುತ್ತಿರಿ...... ಒಂದೇ ಯೋಚನೆಯಿರಲಿ, ಕಾರ್ಯಫಲವೂ ಸಮಾನವಾಗಿರಲಿ, ಎಲ್ಲರ ಮನಸ್ಸು ಸಮಾನವಾಗಿರಲಿ ಎಂದು ಮುಂತಾಗಿ ಸಂವನನನೇ ಆದ ಋಷಿಯು ಒಡನುಡಿಯುವನು. 'ಸಂ' ಅನ್ನುವುದು ಈ ಸೂಕ್ತದಲ್ಲಿ ಮತ್ತೆ ಮತ್ತೆ ಬರುವುದರಿಂದ ಈ ಸೂಕ್ತವನ್ನು 'ಸಂಸಂಸೂಕ್ತ' ಎಂದೂ ಕರೆಯಲಾಗುವುದು. "ಸಮಾನೀ ವ ಅಕೂತಿಃ' – ಉದ್ದೇಶವೂ ಸಮಾನವಾಗಿರಲಿ "ಸಮಾನಾ ಹೃದಯಾನಿ ವಃ" ನಿಮ್ಮೆಲ್ಲರ ಹೃದಯವೂ ಸಮಾನವಾಗಿರಲಿ ಎಂದು ಮುಂತಾಗಿ ಹೇಳುತ್ತ ಈ 'ಸಂ ಸಂ' ಕೊನೆಯವರೆಗೂ ಮುಂದುವರಿಯುವುದು.

ಈ ಸಂ ಸಂ ಅನ್ನುವ ಸಂವನನ ಸೂಕ್ತಕ್ಕೆ ಋಗ್ವೇದದ ಏಳನೆಯ ಮಂಡಲದಲ್ಲಿ ಬರುವ ಮೂವತ್ತೈದನೆಯ ಸೂಕ್ತವಾದ ಶಂಪ್ರಧಾನಸೂಕ್ತವು ಮೂಲವಾಗಿರ ಬಹುದೆಂದೆನಿಸಿ ಆ ಸೂಕ್ತದ ಭಾವವನ್ನೂ ಈ 'ವಿಶ್ವಪ್ರೇಮ'ದಲ್ಲಿ ತರಲಾಗಿದೆ. ಆ ಸೂಕ್ತದರ್ಶಕ ಋಷಿಯು ತಾನು ಸಮಾಧಿಸ್ಥಿತಿಯಲ್ಲಿ ಮೊದಲು ವಸುಶ್ರೇಷ್ಠನಾಗುವನು ಅರ್ಥಾತ್ ವಸಿಷ್ಠನಾಗುವನು. ಆದುದರಿಂದ ಆ ಮಂತ್ರದ ಋಷಿಯನ್ನು ವಸಿಷ್ಠನೆಂದು ಕರೆಯಲಾಯಿತು. ಎಲ್ಲರಲ್ಲಿಯೂ ಅಧಿಷ್ಠಿತನಾದ ವಸುಶ್ರೇಷ್ಠ ಪರಬ್ರಹ್ಮನೇ ವಸಿಷ್ಠ. ಆ ಋಷಿಯ ಮೂಲನಾಮ ಯಾವುದೇ ಇದ್ದರೂ ಅದು ಮರೆಯಾಗಿ ಇಲ್ಲಿ ಈ ಮಂತ್ರದರ್ಶನದ ಸಮಯದಲ್ಲಿ ಆತ ವಸಿಷ್ಠನಾಗುವನು ; ಹಾಗೆ ಆತ ವಸಿಷ್ಠನಾದಾಗಲೇ ಅವನಿಗೆ ಈ ಮಂತ್ರದ ದರ್ಶನವಾಗುವುದು ಹಾಗೂ ಆದದ್ದು. ಆ ಋಷಿಯು ಶಂನ ಇಂದ್ರಾಗ್ನೀ......" ಎಂದು ಮುಂತಾಗಿ ಹೇಳುತ್ತ, ಅಂದರೆ ಇಂದ್ರ–ಅಗ್ನಿಯರು ನಮಗೆಲ್ಲ ಶಾಂತಿಪ್ರದರಾಗಲಿ, ಸುಖಪ್ರದರಾಗಲಿ ಎಂದು ಹೇಳುತ್ತ ಮೊದಲಿನಿಂದ ಹದಿಮೂರನೆಯ ಮಂತ್ರದ ಕೊನೆಯವರೆಗೂ ಎಲ್ಲದೇವತೆಗಳ ಹಾಗೂ ವಸ್ತುಗಳೊಂದಿಗೆ 'ಶಂ ನೋ ಅಸ್ತು' ಅನ್ನುವುದನ್ನು ತರುತ್ತಾನೆ; ಅರ್ಥಾತ್ ಶಾಂತಿಪ್ರದರಾಗಿ ಎಲ್ಲವೂ ಪ್ರವರ್ತಿಸಲಿ ಎಂಬ ಭಾವದೊಂದಿಗೆ 'ಶಂ ಶಂ' ಎಂದು ಹೇಳುವುದರಿಂದ ಈ ಸೂಕ್ತವು 'ಶಂಶಂ' ಸೂಕ್ತವೆಂದು ಕರೆಸಿಕೊಳ್ಳಲು ಪ್ರಶಸ್ತವಾದುದು ಅನ್ನುವುದು ಗಮನಾರ್ಹ. ಕೊನೆಯ ಎರಡು ಮಂತ್ರಗಳಲ್ಲಿ ಸರ್ವಕಲ್ಯಾಣಕೋರಿಕೆಯೊಂದಿಗೆ ಈ ಸೂಕ್ತ ಮುಗಿಯುತ್ತದೆ.

ಸಂವನನ ಸೂಕ್ತದಲ್ಲಿಯ ನಾಲ್ಕು ಮಂತ್ರಗಳಲ್ಲಿ ಮೊದಲನೆಯ ಮಂತ್ರದಲ್ಲಿ ಅಗ್ನಿಗೆ ಸಲ್ಲಿಸುವ ಪ್ರಾರ್ಥನೆಯು ಕಂಡುಬರುವುದು ಹಾಗೂ ಮುಂದಿನ ಮೂರು ಮಂತ್ರಗಳು ಸುಜ್ಞಾನಸೂಕ್ತಗಳೆನಿವೆ. ಸು ಅಂದರೆ ಯೋಗ್ಯ, ಅರ್ಥಾತ್ ಸಮ್ಯಕ್ ಎಂದೇ ಅರ್ಥ. ಸಮ್ಯಕ್ ಜ್ಞಾನವೇ ಸುಜ್ಞಾನ. ಎಲ್ಲರಲ್ಲಿಯೂ ಸರಿಯಾದ ತಿಳುವಳಿಕೆಯಿದ್ದಲ್ಲಿ, ಏಕಾಭಿಪ್ರಾಯ ಬಂದಲ್ಲಿ ಸಮಾಜವು ಸುಖ–ಶಾಂತಿ–ನೆಮ್ಮದಿಯಿಂದ ಬಾಳುವುದು. ಸಮಾಜವೆಂದರೆ ರಾಷ್ಟ್ರ ಎಂಬ ಕಲ್ಪನೆಯು ಪುಷ್ಟಿಕೊಳ್ಳುವುದು. ಸರ್ವರ ಏಳಿಗೆಯೊಂದಿಗೆ ರಾಷ್ಟ್ರದ ಏಳಿಗೆ.

ವೇದಗಳಲ್ಲಿಯ ಸೋಮನ ವರ್ಣನೆಯಲ್ಲಿ ಬರುವ ಸೋಮರಸ ಹಾಗೂ ಮಧುವರ್ಣನೆಯಲ್ಲಿ ಬರುವ ಮಧು ಈ ವಿಶ್ವಪ್ರೇಮಕ್ಕೆ ಸಹಕಾರಿಯಾಗಿವೆ. ಸೋಮರಸ– ಮಧುಗಳ ಪ್ರಸ್ತಾವ ಇಲ್ಲಿದೆ. ಜಗತ್ತೇ ಸೋಮಮಯವಾಗಲಿ, ಆನಂದರಸಮಯವಾಗಲಿ ಹಾಗೂ ಜಗತ್ತೇ ಮಧುವಾಗಲಿ, ಪ್ರತಿಯೊಬ್ಬರೂ ಇತರರಿಗೆಲ್ಲ ಪ್ರಿಯರಾಗಲಿ ಅನ್ನುವುದೇ ವೇದಗಳ ಆಶಯ.

* * * * *

೨೨. ಭಾರತಮಾತಾಸ್ತುತಿ

ಪೀಠಿಕೆ : ಇಲ್ಲಿ, ಈ ಪದ್ಯದಲ್ಲಿ ಜಗತ್ತನ್ನು ಸುಂದರವನಿತೆಯನ್ನಾಗಿ ರೂಪಕಕ್ಕೆ ತರಲಾಗಿದೆ. ಹಾಗೂ ಆ ಸುಂದರ ವನಿತೆಯ ಸರ್ವಸಮರ್ಥ ಮಗಳೆಂದು ಭಾರತವನ್ನು ಚಿತ್ರಿಸಲಾಗಿದೆ. ಕ್ರಿ.ಪೂ. ಹತ್ತು ಸಾವಿರ ವರ್ಷಗಳಿಂದಲೂ ಸಮೃದ್ಧವಾಗಿ ನಡೆದು ಬಂದ ದೇಶವಿದು ಭಾರತ. ಜಗತ್ತಿನಲ್ಲಿ ಸಾಹಿತ್ಯದ ಗಂಧವೇ ಇಲ್ಲದ ದಶಸಹಸ್ರಾಧಿಕ ವರ್ಷಗಳ ಆ ಪೂರ್ವಕಾಲದಿಂದಲೂ ವೇದಮಂತ್ರಗಳು ಭಾರತದಲ್ಲಿ ನಿನದಿಸುತ್ತಿದ್ದವು ಅನ್ನುವುದನ್ನು ಪ್ರಸ್ತಾಪಿಸುತ್ತ ಭಾರತದ ಸರ್ವವೈಶಿಷ್ಟ್ಯಗಳನ್ನೂ ಈ ಪದ್ಯದಲ್ಲಿ ತರಲಾಗಿದೆ. ಇದನ್ನು ಕನ್ನಡದಲ್ಲಿ ಬರೆದರೂ ಇದರಲ್ಲಿ ಕನ್ನಡಕ್ಕೆ ಚಿರಪರಿಚಿತವಾದ ಹಾಗೂ ಕನ್ನಡ ಭಾಷಿಕರಿಗೆ ಸುಲಭವೇದ್ಯವಾದ ಸಂಸ್ಕೃತವೇ ಇರುವುದರಿಂದ ಸಂಸ್ಕೃತವನ್ನು ಬಲ್ಲ ಹಾಗೂ ಸಂಸ್ಕೃತಜನ್ಯ ಮತ್ತು ಸಂಸ್ಕೃತದಿಂದ ಪೋಷಿತವಾದ ಭಾರತದ ಸಮಸ್ತ ಭಾಷಿಕರಿಗೂ ಈ ಪದ್ಯವು ಸುಲಭವಾಗುವುದೆಂಬ ನಂಬಿಕೆ ಇಲ್ಲಿದೆ.

ಭಾರತಮಾತೆ

ಓಂ ಭುವನಸುಂದರೀತನಯೆ ಭಾರತಮಾತೆ
ಹೇ ಬಹುಧರ್ಮಜನನಿ ಆಧ್ಯಾತ್ಮತತ್ತ್ವವಿಖ್ಯಾತೆ ॥ಪ॥

ಸನಾತನವೈದಿಕಮಂತ್ರಗತಿಗಮನಗಂಭೀರನಿನದೆ
ಋಷಿಮುನಿಸಮೂಹವಿರಾಜಿತವಕ್ಷೋವಿಶೋಭಿತಮಹೀತಲೆ
ತಪೋವನಚರಿತನಿರ್ಭೀತಖಗಮೃಗಸಂಕುಲವಿಭೂಷಿತೆ
ಸುವ್ಯಾಪ್ತಹೋಮಧೂಮಸುಗಂಧಪರಿಪೂರಿತಧರಣೀವಿಶೋಭಿತೆ ॥1॥

ಸಂಜಾತ ಜೈನ–ಬೌದ್ಧಾದ್ಯವೈದಿಕಧರ್ಮವಿರಾಜಿತಕ್ಷಿತಿಭೃತೆ
ಕಾಲಾಗತಮುಸಲ್ಮಾನ ಕ್ರೈಸ್ತಾದಿ ಸರ್ವಧರ್ಮಸಂವರ್ಧನಪರೆ
ವಿಧವಿಧ–ಧರ್ಮಾಂತರ್ಗತ–ಬಹುವಿಧ–ಮತಮತಿ–ವಿಪೋಷಣರತೆ
ಶಾಂತಿಮಂತ್ರಜಪನಿರತ ಶಕ್ತಪ್ರಜಾಕೋಟಿ–ಕೋಟಿಸುಶೋಭಿತೆ ॥2॥

ವೇದಾದ್ಯನೇಕವಿಧಕಾವ್ಯಪರಿಪೂರಿತಶತಾಧಿಕ ಭಾಷಾವಿಭೂಷಿತೆ
ಶಿಕ್ಷಾಕಲ್ಪವ್ಯಾಕರಣಾದಿಷಡ್ವೇದಾಂಗಸುಶೋಭಿತಶಾಸ್ತ್ರಸಂಯುತೆ
ಯೋಗಮಾರ್ಗವಿಖ್ಯಾತಪತಂಜಲಿಪ್ರಮುಖಯೋಗಿಗಣಸೇವಿತೆ
ಭರತಾದಿಪ್ರಣೀತನಾಟ್ಯಕಲಾಶೋಭಿತಧೀಮಜ್ಞನಾಧಿಷ್ಠಿತೆ ॥3॥

ಧರ್ಮಶಾಸ್ತ್ರೋಕ್ತಪದ್ಧತ್ಯನುಸೃತಪ್ರಾಕ್ತನರಾಜಕುಲವಿರಾಜಿತೆ
ಅನೇಕಧಾ ಸಂಪ್ರಾಪ್ತಸ್ವಾರ್ಥೈಕಪರರಿಂ ಬಹುವಿಧವ್ಯಾಕುಲಿತಚಿತ್ತೆ
ಸ್ವಾತಂತ್ರ್ಯೈಕಮಂತ್ರಜಪನಿರತಮಹಾಸಾಧಕರಿಂ ಸಂಪ್ರಾಪ್ತಹರ್ಷೆ
ವಿಜ್ಞಾನ ವಿಶೇಷಾಣ್ವಸ್ತ್ರೋಪಗ್ರಹಾದ್ಯನೇಕ ಸಾಧನಾನಂದಮೂರ್ತೆ ॥4॥

ಅನೇಕಾನೇಕ ಮಹಾದೇವೀದೇವ–ಗುರುವೃಂದಪೂತಸುಕ್ಷೇತ್ರವಿಶೋಭಿತೇ
ಹಿಮವದ್ವಿಂಧ್ಯಾದ್ಯನೇಕರಮಣೀಯಪವಿತ್ರಗಿರಿಗಣಧೃತೆ
ಗಂಗಾಯಮುನಾಕಾವೇರೀತ್ಯಾದಿ ಪ್ರಮುಖಪುಣ್ಯಕ್ಷೇತ್ರಕಾರಕನದೀಭೃತೆ
ನಿಜಾನಂದಪದಸಂಪ್ರಾಪಯಿತೃಮೋಕ್ಷಾರ್ಥಿಬಹುಜನವಿಸಂಸ್ತುತೆ ॥5॥

ದೇಶವಿದೇಶರಸಿಕಾಕರ್ಷಕವಿಶಿಷ್ಟಶಿಲ್ಪಾದಿಕಲಾನ್ವಿತೆ
ಸಹೃದಯಸಮ್ಮೋಹಕಾನೇಕಜಾನಪದಕಲಾಸುಶೋಭಿತೆ
ಸಾರ್ಥಕ ಜೀವನವಿಧಾಯಕಸರ್ವವಿಧಖನಿಜಸಂಪದ್ವಿಭೂಷಿತೆ
ಗಂಭೀರಸಮುದ್ರತರಂಗನಿರ್ಧೌತಸುಪೂಜ್ಯಗುರುಪಾದಪದ್ಮೇ ನಮಸ್ತೇ ॥6॥

ಓಂ ಭುವನಸುಂದರೀತನಯೆ ಭಾರತಮಾತೆ
ಹೇ ಬಹುಧರ್ಮಜನನಿ ಆಧ್ಯಾತ್ಮತತ್ತ್ವವಿಖ್ಯಾತೆ ॥ಪ॥

* * * * *

೨೩. ಭಾ–ರತತ್ವ

ಪೀಠಿಕೆ : ಭಾ ಅಂದರೆ ಪ್ರಕಾಶ ಅರ್ಥಾತ್, ಜ್ಞಾನ ; ಅಂದರೆ ಆತ್ಮಜ್ಞಾನ. ಸನಾತನದೇಶವಾದ ಈ ಆರ್ಯಾವರ್ತಕ್ಕೆ ಭಾರತವೆಂಬ ಹೆಸರು ಬರಲು ಕಾರಣ ಈ ದೇಶದಲ್ಲಿ ಹತ್ತಾರು ಸಾವಿರ ವರುಷಪೂರ್ವದಿಂದಲೂ ಋಷಿ–ಮುನಿಗಳೇ ತಮ್ಮ ಆಶ್ರಮಗಳಲ್ಲಿ ಎಲ್ಲರಿಗೂ ವಿದ್ಯಾಭ್ಯಾಸವನ್ನು ನೀಡುತ್ತ ತಪಸ್ಸಿನಲ್ಲಿ ತಾವು ಕಂಡ ಮಂತ್ರಗಳನ್ನು ಮನನ ಮಾಡುತ್ತ ಜ್ಞಾನದಲ್ಲಿ ಪೂರ್ಣನಿರತರಾಗಿದ್ದುದು. ರಾಜರಿಂದ ರಂಕರವರೆಗೆ, ಅಂದರೆ ಸರ್ವಸಮರ್ಥರಿಂದ ಮೊದಲುಗೊಂಡು ಸರ್ವ ಅಸಮರ್ಥರ ವರೆಗೆ ಎಲ್ಲರೂ ತಮ್ಮ ಮಕ್ಕಳನ್ನು ಋಷಿ–ಮುನಿಗಳ ಆಶ್ರಮಗಳೆಂಬ ವಿದ್ಯಾನಿಕೇತನಗಳಿಗೆ ವಿದ್ಯೆಗಾಗಿ ಕಳಿಸುತ್ತಿದ್ದುದರಿಂದ ಎಲ್ಲರ ವಿದ್ಯಾಭ್ಯಾಸವೂ ಈ ದೇಶದಲ್ಲಿ ಆ ಪ್ರಾಚೀನಕಾಲದಲ್ಲಿ ಜ್ಞಾನಿಗಳ, ಆತ್ಮಜ್ಞಾನಿಗಳ ಆಶ್ರಯದಲ್ಲಿಯೇ ನಡೆಯುತ್ತಿತ್ತು. ಅದಕ್ಕಾಗಿ ಈ ದೇಶವನ್ನು ಭಾರತ, ಭಾದಲ್ಲಿ, ಜ್ಞಾನದಲ್ಲಿ ರತ, ನಿರತ ದೇಶವೆಂದು ಗುರುತಿಸಲಾಗುತ್ತಿತ್ತು. ಆದುದರಿಂದ ಇದು ಭಾರತವೇ ಹೊರತು ಯಾವುದೋ ಭರತನು ಆಳಿದ್ದರಿಂದ ಅಲ್ಲ ಅನ್ನುವುದು ಗಮನಾರ್ಹ ಮತ್ತು ಮನನಾರ್ಹ. ಆ ರೀತಿಯ 'ಭಾ'ದಲ್ಲಿ ರತರಾಗುವ ಯೋಗವನ್ನು ನಮಗೆಲ್ಲರಿಗೂ ಭಾರತಮಾತೆ ಕರುಣಿಸಲಿ ಅನ್ನುವುದು ಇಲ್ಲಿಯ ಒಳತಿರುಳು.

ಭಾರತವು ತರಲೆಮಗೆ ಭಾ–ರತತ್ವವನು
ನಿಜದರಿವ ಮೂಡಿಸಲೆಮ್ಮ ಮನದೊಳಗೆ ॥ಪ॥

ಅನುಭವದ ಘಳಿಗೆ ಸರಿದ ಮೇಲಿರದ ಸುಖಕೆ
ನಾಲಿಗೆಗೆ ತಾ ಬಂದು ಮರೆಗೆ ಸರಿಯುವ ರುಚಿಗೆ
ಇಂದಿದ್ದು ನಾಳೆ ತಾನಿರದ ಗದ್ದುಗೆಗೆ
ಸೀಮಿತರಾಗದಲೆ
ಮಾರುಹೋಗದಲೆ
ನಡೆವ ಶಕ್ತಿಯನು ನೀಡಲೆಮಗೆ ಭಾರತವು ॥1॥

ದೇಶಾತ್ಮದಭಿಮಾನ ಬಲಿಪಡೆವ ಸ್ವಾರ್ಥಕ್ಕೆ
ಕೃತಕ ಮರೆಯಾದ ಮೇಲಿರದ ಚಂದಕ್ಕೆ
ಪುಣ್ಯತೀರಿದ ಮೇಲಿರದ ಸ್ವರ್ಗಸುಖಕೆ

ಮನಸೋಲದಂತೆ
ನಡೆಸಲೆಮ್ಮನು
ಭಾರತದ ಪ್ರಾಚೀನ ಪುಣ್ಯಫಲವು ॥2॥

ಸರ್ವಧರ್ಮಗಳ ಸರ್ವೋತ್ತಮ ತತ್ತ್ವಗಳನು
ಮೈಗೂಡಿಸಿಕೊಂಡ ಭಾರತದ ಸಂಸ್ಕೃತಿಯು
ಸನಾತನತ್ವವನ್ನಿನಿತು ಬಿಡದಂತೆ
ಜಗದ ಜನರೆಲ್ಲರನ್ನೂ
ತಾನೊಂದುಗೂಡಿಸುತ್ತ
ವಿಶ್ವದೆಲ್ಲೆಡೆಗಳಲಿ ನಲಿದಾಡುತಿರಲಿ ॥3॥

ಯಾವ ಕಾಲಕು ಮರೆಗೆ ತಾ ಸರಿಯದಂಥ
ನಿತ್ಯ ಸುಖವೀವ ತಥ್ಯ ಬಳಿಗೆ ಬರಲಿ
ಜಗದ ಶುಭದೇಳಿಗೆಯ ಜೊತೆಗಾತ್ಮದುನ್ನತಿಯ
ದಾರಿಯನು ತೋರಿ
ಮಹಿಮೆಯನು ಮೆರೆದ
ಭಾರತಕೆ ತಕ್ಕಂತೆ ಭಾ–ರತತ್ವವಿರಲಿ ॥4॥

ಭಾರತದ ಅರ್ಥವದು ಬೆಳಕಿನೊಡನಾಟ
ಇದು ಪರಮ ಸಾಧನೆಗೆ ಗುರುವೆನಿಪ ದೇಶ
ಭಾರತವು ಕರ್ತವ್ಯಸಹಿತಾತ್ಮಚಿಂತಕರ ನಾಡು
ಇಂದೂ ಇದಕನುಕೂಲ
ನಡೆನುಡಿಗಳಿರಲು
ಆ ಪರಮಪುರುಷಗುರುಪಾದಕರುಣಿಯಿರಲಿ ॥5॥

ಭಾರತವು ತರಲೆಮಗೆ ಭಾ–ರತತ್ವವನು
ನಿಜದರಿವ ಮೂಡಿಸಲೆಮ್ಮ ಮನದೊಳಗೆ ॥ಪ॥

* * * * *

೨೪. ಬೆಳಗಲದು ಚಿತ್ರಕಾಶ

[**ಪೀಠಿಕೆ :** ಸತ್ ಮತ್ತು ಚಿತ್ ಅನ್ನುವವು ಆನಂದವೇ ಆದ ಪರಮಾತ್ಮನೆಂಬ ನಾಣ್ಯದ ಎರಡು ಮುಖಗಳು. ಸತ್ ಅಂದರೆ ಸಂಸಾರಕಾರಕವಾದ ಮೂಲಪ್ರಕೃತಿ. ಇದು ನಿತ್ಯಸತ್ಯವಾಗಿರದೆ ಬದಲಾವಣೆಗಳುಳ್ಳದ್ದು. ಚಿತ್ ಅನ್ನುವುದು ಶಾಶ್ವತ ಸುಖದಾಯಕವಾದ, ನಿತ್ಯಾನಂದದಾಯಕವಾದ, ಬದಲಾವಣೆಗೆಡೆಗೊಡದ ಪರಾಪ್ರಕೃತಿಯನ್ನು ಅರ್ಥೈಸುತ್ತದೆ. ಸದ್ವಿಲಾಸವೆಂದರೆ ಭೌತಿಕ ಸುಖವಿಲಾಸ; ಚಿದ್ವಿಲಾಸವೆಂದರೆ ಶಾಶ್ವತಾನಂದದಾಯಕವಾದ ಆತ್ಮವಿಕಾಸ.]

ಸದ್ವಿಲಾಸವು ಸಾಕು ಸಾಕಿನ್ನು ಈ ಮುಂದೆ
ಬೆಳಗಲೆಲ್ಲೆಡೆಗಳಲಿ ಚಿತ್ರಕಾಶ ॥ಪ॥

ಧನಕನಕದಾಂಪತ್ಯ ಮನೆತೋಟ ಸುಖವೆಲ್ಲ
ಕೈಗೆಟುಕಿ ಸಾಗುವುದೆ ಸದ್ವಿಲಾಸ
ಭ್ರೂಮಧ್ಯ ಬೆಳಕೊಂದು ಕತ್ತಲೆಯ ಕೊಲ್ಲುತ್ತ
ತಾ ಮುಂದೆ ಬರುವುದದು ಚಿದ್ವಿಲಾಸ ॥1॥

ಆಶೆಗಳ ಗೋಪುರವನೇರುತ್ತ ಮನ ಹೋಗಿ
ಶಿಖರದಲಿ ನಿಲ್ಲುವುದು ಸದ್ವಿಲಾಸ
ಬೇಕುಗಳು ಬಯಲಾಗಿ ಬೆಳಕಿನೆಡೆ ಸಾಗುತ್ತ
ಧ್ರುವದೆಡೆಗೆ ಚಲಿಸುವುದೆ ಚಿದ್ವಿಲಾಸ ॥2॥

ನೂರೆಂಟು ವಿದ್ಯೆಗಳ ಸಾಧಿಸುತ ಮುನ್ನುಗ್ಗಿ
ಜೀವನದಿ ಬೆಳಗುವುದು ಸದ್ವಿಲಾಸ
ಎಲ್ಲವೂ ಒಂದೆಂಬ ವಿದ್ಯೆಯೆಡೆ ಒಲಿಯುತ್ತ
ಭೂಮದೆಡೆ ಸಾಗುವುದೆ ಚಿದ್ವಿಲಾಸ ॥3॥

ನೂರಾರು ಕೆಲಸಗಳ ಭರದಲ್ಲಿ ತಾ ತೊಡಗಿ
ನಿತ್ಯವೂ ತೊಳಲುವುದೆ ಸದ್ವಿಲಾಸ
ನಿಷ್ಕಾಮಕರ್ಮದಲಿ ಮನುಜ ತಾ ಜನುಮದ
ಸಾರ್ಥಕತೆ ಪಡೆಯುವುದೆ ಚಿದ್ವಿಲಾಸ ॥4॥

ಕನಸುಗಳ ಕುಣಿತಗಳು ಕಣ್ಣುಗಳ ಕೋರೈಪ
ನೂರಾರು ದೃಶ್ಯವದು ಸದ್ವಿಲಾಸ
ಕಣ್ಣು ನಿಚ್ಚಳವಾಗಿ ಮನದಲ್ಲಿ ಬೆಳಕಾಗಿ
ಎಚ್ಚರವು ಮೂಡುವುದು ಚಿದ್ವಿಲಾಸ ॥5॥

ಹೆಸರನ್ನು ಪಡೆಯುತ್ತ ಕೀರ್ತಿಯನು ಗಳಿಸುತ್ತ
ಜಗದಲ್ಲಿ ಮೆರೆಯುವುದು ಸದ್ವಿಲಾಸ
ಎಲ್ಲವನು ಬದಿಸರಿಸಿ ಶಾಶ್ವತಾನಂದದಲಿ
ನಿತ್ಯವೂ ನಲಿಯುವುದು ಚಿದ್ವಿಲಾಸ ॥6॥

ಸಂಭ್ರಮದ ಸಮಯಗಳು ಮನದಲ್ಲಿ ಮಿಂಚುತ್ತ
ಇರುತಿರಲು ಸಾಗುವುದೆ ಸದ್ವಿಲಾಸ
ವಿಭ್ರಮವು ದೂರಾಗಿ ಚಿತ್ತದಲಿ ಸುಸ್ಥಿರತೆ
ತಾನಾಗಿ ಮೂಡುವುದೆ ಚಿದ್ವಿಲಾಸ ॥7॥

ಕಷ್ಟದಲಿ ಕೊರಗದೇ ವಿಘ್ನದಲಿ ನಿಲ್ಲದೇ
ಮುನ್ನಡಿಯನಿಡುವುದೇ ಸದ್ವಿಲಾಸ
ಇಹದ ಸಾಧನೆ ಸಾಕು ಸಾಕೆಂಬ ಭಾವದಲಿ
ಪರದೆಡೆಗೆ ಚಲಿಸುವುದೆ ಚಿದ್ವಿಲಾಸ ॥8॥

ಸಂಗಾತಿ–ಸಂತಾನಸಂತೋಷ–ಸಂಭ್ರಮದ
ಸಮಯದಲಿ ಸುಖಿಸುವುದೆ ಸದ್ವಿಲಾಸ
ಚಿತ್ತದಲಿ ನಿರ್ಮಮದ ಭಾವವನು ತಾ ತುಂಬಿ
ನಿತ್ಯದೆಡೆ ಸಾಗುವುದೆ ಚಿದ್ವಿಲಾಸ ॥9॥

ಶಕ್ತತೆಯ ಮದದಿಂದ ಕರ್ಮಗಳ ಬಂಧನದಿ
ಜನುಮಕ್ಕೆ ಜಾರುವುದು ಸದ್ವಿಲಾಸ
ಕರ್ಮಗಳ ಬಂಧನವ ಕಿತ್ತೊಗೆದು ತಾನಾತ್ಮ
ಸಾಧನೆಗೆ ತೊಡಗುವುದು ಚಿದ್ವಿಲಾಸ ॥10॥

ದ್ವಂದ್ವ ತಾ ಮರೆಯಾಗಿ ಪ್ರೇಮಮಯ ಜಗವಾಗ
ಲೆಚ್ಚತ್ತು ನೋಡಲ್ಲಿ ಚಿತ್ರಕಾಶ
ಸತ್ಯತನುವಾಶ್ರಯಿಸಿ ಚಿತ್ತಿನಲಿ ವಿಹರಿಸುತ
ಆನಂದದೆಡೆ ನಡೆಯಲದು ಚಿದ್ವಿಲಾಸ ॥11॥

ಪರಮಪದಮಾರ್ಗದಲಿ ಹೆಜ್ಜೆ ಸಾಗಲಿ ಮುಂದೆ
ಸತ್ತು ಚಿತ್ತಾಗಿ ಮಾರ್ಪಟ್ಟು ಬೆಳಗಲಾ ಚಿತ್ರಕಾಶ
ಸಚ್ಚಿದಾನಂದಸಾಧನೆಗೆ ತೊಡಗಲೀ ಕ್ಷಣದಲ್ಲಿ
ಪರಮಗುರುಪಾದಕರುಣೆ ತಾನೊದಗಿ ಬರಲಿ ॥12॥

ಸದ್ವಿಲಾಸವು ಸಾಕು ಸಾಕಿನ್ನು ಈ ಮುಂದೆ
ಬೆಳಗಲೆಲ್ಲೆಡೆಗಳಲಿ ಚಿತ್ರಕಾಶ ॥ಪ॥

೨೫. ನಾ ಬಿಂದುಲೀನ

ಅವಿಭಕ್ತತನ ಬೇಕು ವಿಭಕ್ತನಾದುದು ಸಾಕು
ಯಾವ ಕಾಲಕೊ ಸಿಡಿದು ಬಂದಿಹೆನು ನಾನು ॥ಪ॥

ನಾನೇಕೆ ಬಂದಿಹೆನು ತ್ಯಜಿಸಿ ಆನಂದಘನ
ಕಳೆದಿರುವೆ ನಾನೀಗ ಲಕ್ಷ ಲಕ್ಷ ಜನುಮ ॥1॥

ಖಂಡತೆಯಲೇನು ಸುಖ ಸುಖವೆಂದು ಸುಮ್ಮನೆ
ಬಡಿದಾಡಿ ನೆಲಸರಿಯೆ ಗಾಳಿಯಲಿ ಲೀನ ॥2॥

ರಾಧೆ ನಾ ಕೊಳಲಧ್ವನಿಯೆಡೆಗೆ ಧಾವಿಸಲೇಬೇಕು
ಮೀರೆ ನಾ ಗೋಪಾಲಕೃಷ್ಣನಲ್ಲೊಂದಾಗಬೇಕು ॥3॥

ವಾಗಾಂಭೃಣಿಯು ನಾ ಪರಾಶಕ್ತಿಯನು ಧ್ವನಿಸಬೇಕು
ಮಹಾದೇವಿಯಕ್ಕ ನಾ ಶಿವಾತ್ಮಲಿಂಗದಲಿ ಸಂಗಮಿಸಬೇಕು ॥4॥

ಬಿಂದುವಿನದೊಂದು ಕಣವಾಗಿ ಬಂದಿರುವೆನೀಚೆ
ಮತ್ತದೇ ಬಿಂದುವಿನಲೊಂದಾಗಬೇಕು ॥5॥

ಬಿಂದುವಿನದಾಶಕ್ತಿ ಸಿಡಿಸಿ ನನ್ನನು ದೂರ
ಆಟವಾಡುತ್ತಿಹುದು ತಾ ಪ್ರಕೃತಿಯಾಗಿ ॥6॥

ಬಗೆಬಗೆಯಲೆನ್ನಲ್ಲಿ ಮಹದಾಶೆಗಳನಿಟ್ಟು
ತಾನು ನಲಿಯುತ್ತಿಹಳು ಆ ಪ್ರಕೃತಿ ಮಾತೆ ॥7॥

ನಿರಂತರದಲೀ ತೆರದಿ ಮಹದಾಟ ನಡೆಯುತಿದೆ
ಕೊನೆಗೊಳಿಸಲಿದನಾದಿಶಕ್ತಿ ತಾ ಪರಮಗುರುಪಾದಪದ್ಮವಾಗಿ ॥8॥

ನಿಜದರಿವು ತಾನಾಗಿ ಆ ಮಹಾನಂದವದು
ಮೊಳೆಯಲೆನ್ನಲಿ ಬೇಗ ನಾ ಬಿಂದುಲೀನ ॥9॥

ಅವಿಭಕ್ತತನ ಬೇಕು ವಿಭಕ್ತನಾದುದು ಸಾಕು
ಯಾವ ಕಾಲಕೊ ಸಿಡಿದು ಬಂದಿಹೆನು ನಾನು ॥ಪ॥

'ರಂ' ಅಂದರೆ ಅಗ್ನಿತತ್ತ್ವ ; 'ಮೀರಾ' ಸಹ ಇದೇ ಅರ್ಥದಲ್ಲಿದೆ. 'ಧಾ' ಅಂದರೆ ಧರಿಸುವಿಕೆ; ಅಗ್ನಿತತ್ತ್ವದ ಜೀವಾತ್ಮವೇ ಭಾಗವತದಲ್ಲಿ ಬರುವ ರಾಧೆ. 'ಮ್' ಅಂದರೆ ಸೃಷ್ಟಿತತ್ತ್ವದ ಬ್ರಹ್ಮ; ಈ ತತ್ತ್ವಕ್ಕೆ ಅಧೀನವಾದ 'ರಾ'–ಅಗ್ನಿಯೂ ಸಹ ಜೀವಾತ್ಮವನ್ನೇ ಆಧ್ಯಾತ್ಮಿಕವಾಗಿ ಅರ್ಥೈಸುವುದು. ಎಲ್ಲರಲ್ಲೂ ಇರುವ 'ನಾನು'–ಅಹಂ' ಅನ್ನುವುದೇ ಜೀವಾತ್ಮ.

* * * * *

೨೬. ಬರುವುದಾನಂದ

ಅಲ್ಲೊದಗಿ ಬರುವುದಾನಂದ ಮಾತ್ರ
ಅದು ತಾನು ತಾನಾದ ಕೇವಲಾನಂದ ॥ಪ॥

ಬರುವುದಾನಂದವದು ಯಜ್ಞಫಲವಾಗಿ
ಚಿದಾಕಾಶವಾಗಿಹುದು ಯಜ್ಞವೇದಿಕೆಯು ॥1॥

ನಿತ್ಯಸಂತೃಪ್ತಿಯದು ಯಜ್ಞಾಗ್ನಿಯಾಗಿಹುದು
ಆಶೆಯೆನ್ನುವ ಪಶುವ ವಪೆಯಿಂದ ಹೋಮ ॥2॥

ಸಂಕಲ್ಪ–ವಿಕಲ್ಪಗಳೇ ಸಮಿತ್ತಗಳು ಅಲ್ಲಿ
ಸುಜ್ಞಾನವೆಂಬ ಗೋತುಪ್ಪದಾಲೇಪ ॥3॥

ಪೌರೋಹಿತ್ಯಕ್ಕಿಲ್ಲಿ ಸದಸದ್ವಿವೇಕ
ಜೀವಾತ್ಮ ತಾನಿಹನು ಯಜಮಾನನಾಗಿ ॥4॥

ನಿತ್ಯ ಸಾವಿರಬಾರಿ ನಡೆಯಲೀ ಯಜ್ಞ
ಅದರ ಫಲವೇ ಫಲವು ಕೇವಲಾನಂದ ॥5॥

ಮೂಡಿಬರಲೆನ್ನಲ್ಲಿ ಆ ಮಹಾನಂದವದು
ಇದಕಿರಲಿ ಪರಮ ಗುರುಪಾದಪದ್ಮಕರುಣೆ ॥6॥

ಅಲ್ಲೊದಗಿ ಬರುವುದಾನಂದ ಮಾತ್ರ
ಅದು ತಾನು ತಾನಾದ ಕೇವಲಾನಂದ ॥ಪ॥

* * * * *

೨೭. ಮಾತೃ ಗುರುವಂದನಾದಿಗಳು

ಲೌಕಿಕಾಲೌಕಿಕಜ್ಞಾನಮಾರ್ಗಯೋಃ ಸರ್ವದಾ ಭುವಿ
ಸೂರ್ಯೋ ಭೂತ್ವಾ ಜ್ವಲಂತಂ ತಂ ಶ್ರೀಗುರುಂ ಪ್ರಣಮಾಮ್ಯಹಮ್॥1॥

ಲೌಕಿಕಾಲೌಕಿಕಗಳ ಜ್ಞಾನಮಾರ್ಗಗಳಲ್ಲಿ ಸತತವಾಗಿ
ಬೆಳಗುತ್ತ ಭೂಮಿಯಲ್ಲಿ ಸೂರ್ಯನೆನಿಸಿದ ಶ್ರೀಗುರುವಿಗೆ ನಮಸ್ಕರಿಸುವೆನು.

ಬಾಲಾನಾಂ ಸುಖಬೋಧಾಯ ಗುರುರ್ಮಾತಾ ಗೃಹೇ ಗೃಹೇ
ನಮಃ ಶ್ರೀಮಾತೃರೂಪಾಯ ಗುರವೇ ಶುಭಕಾಂಕ್ಷಿಣೇ ॥2॥

ಪ್ರತಿಮನೆಯಲ್ಲಿಯೂ ಇರುವ ಮಕ್ಕಳಿಗೆ ಸುಲಭವಾಗುವಂತೆ ತಿಳುವಳಿಕೆ ನೀಡುವ
ಹಾಗೂ ಸದಾ ಶುಭವನ್ನೇ ಹಾರೈಸುವ ಮಾತೆಯೆಂಬ ಗುರುವಿಗೆ ನಮನ.

ನಮಶ್ಶ್ರಾವಕಸರ್ವೇಷಾಂ ಮನುಷ್ಯೇತರಜಂತುಷು
ಜೀವನಿರ್ವಾಹಮಾರ್ಗಸ್ಥಗುರವೇ ಮಾತೃರೂಪಿಣೇ ॥3॥

ಮನುಷ್ಯೇತರ ಪ್ರಾಣಿಗಳಲ್ಲಿ ಮರಿಗಳಿಗೆಲ್ಲ ಜೀವನಿರ್ವಹಣೆಯ
ಮಾರ್ಗವನ್ನು ತೋರುವ ತಾಯಿಯ ರೂಪದಲ್ಲಿರುವ ಗುರುವಿಗೆ ನಮಸ್ಕಾರ.

ಮೋಕ್ಷಾನಂದದಸನ್ಮಾರ್ಗೇ ಜ್ಯೋತಿರೂಪೇಣ ಸಂಸ್ಥಿತಮ್
ಆತ್ಮಾನಂದನಿಮಗ್ನಂ ತಂ ಗುರುದೇವಂ ನಮಾಮ್ಯಹಮ್ ॥4॥

ಮೋಕ್ಷಾನಂದವನ್ನು ಕೊಡುವ ಸನ್ಮಾರ್ಗದಲ್ಲಿ ಜ್ಯೋತಿರೂಪದಲ್ಲಿರುವ,
ಆತ್ಮಾನಂದದಲ್ಲಿ ನಿಮಗ್ನನಾದ ಗುರುದೇವನಿಗೆ ನಮಸ್ಕರಿಸುವೆ.

ನಿತ್ಯಾನಂದದಲೋಪೇತಂ ನಿಜಾನಂದಸರೋರುಹಮ್
ಗುರುಪಾದಾಂಬುಜಂ ವಂದೇ ಮಹಾನಂದಕರಂ ಶುಭಮ್ ॥5॥

ನಿಜಾನಂದವೆಂಬ ಸರೋವರದಲ್ಲಿ ಹುಟ್ಟಿಬಂದಿರುವ, ನಿತ್ಯಾನಂದವೆಂಬ ದಳಗಳುಳ್ಳ,
ಪರಮಾನಂದವನ್ನುಂಟುಮಾಡುವ ಗುರುವಿನ ಪಾದಕಮಲಕ್ಕೆ ನಮಸ್ಕರಿಸುವೆ.

* * * * *

೨೮. ಅಂಬಿಕಾ

ತ್ರಿಪುರಾಸುರನಾಶಿನೀ ಸುರನರೋರುಗಾರಾಧಿತಾ
ಶುಂಭ–ನಿಶುಂಭಮರ್ದಿನೀ ಸುಜನಪಾಲನೈಕಾದ್ಭುತಾ ।
ಚಂಡ–ಮುಂಡವಿಘಾತಿನೀ ಬಹುವಿಧಾಯುಧಾಲಂಕೃತಾ
ಮಹಿಷಾಸುರಸೂದಿನೀ ತ್ರಿಜಗದಂಬಿಕಾ ಸ್ತೂಯತೇ॥

ಇಲ್ಲಿ ತ್ರಿಜಗದಂಬಿಕೆಯನ್ನು ಸ್ತುತಿಸಲಾಗುತ್ತದೆ. ಅವಳು ತ್ರಿಪುರಾಸುರರನ್ನು ನಾಶಗೈದವಳು, ದೇವತೆಗಳಿಂದಲೂ ಉರಗಕುಲದಿಂದಲೂ, ಅಂದರೆ ಸ್ವರ್ಗ–ಮರ್ತ್ಯ–ಪಾತಾಳನಿವಾಸಿಗಳಿಂದೆಲ್ಲ ಆರಾಧಿತಳು, ಶುಂಭ–ನಿಶುಂಭಮರ್ದಕಳು; ಚಂಡ–ಮುಂಡರನ್ನು ಕೊಂದವಳು; ಮಹಿಷಾಸುರನನ್ನು ನಾಶಗೊಳಿಸಿದವಳು ಹಾಗೂ ಸಜ್ಜನರನ್ನು ರಕ್ಷಿಸುವ ಏಕೈಕ ಅದ್ಭುತಳಾಗಿದ್ದು ನಾನಾವಿಧವಾದ ಆಯುಧಗಳಿಂದ ಅಲಂಕೃತಳೂ ಆಗಿರುವಳು.

ಸೂರ್ಯ–ಪರಮಾತ್ಮ–ತ್ರಿಮೂರ್ತ್ಯಂಬಿಕಾ

ಸವಿತಾಸ್ತಿ ಪರಂಬ್ರಹ್ಮ ಸ ಏವ ಪಾರ್ವತೀಪತಿಃ।
ವಿಷ್ಣುಶ್ಚ ಸೃಷ್ಟಿಕರ್ತಾ ಚ ಭರ್ಗೋಽಸ್ಯ ಜಗದಂಬಿಕಾ॥

ಸವಿತೃ ಎಂದು ಕರೆಯಲ್ಪಡುವ ಸೂರ್ಯನು ಪರಬ್ರಹ್ಮನೇ ಆಗಿದ್ದಾನೆ; ಆತನೇ ಪಾರ್ವತೀಪತಿಯಾದ ಶಿವನು; ಅವನೇ ವಿಷ್ಣುವು ಹಾಗೂ ಅವನೇ ಸೃಷ್ಟಿಕರ್ತ ಬ್ರಹ್ಮ.ಆತನ ತೇಜಸ್ಸೇ ಜಗದಂಬಿಕೆ, ಅರ್ಥಾತ್, ಗಾಯತ್ರಿ.ಈಶ್ಲೋಕವನ್ನು ದಿನವೂ ಹೇಳುತ್ತಿದ್ದರೆ ಪಂಚಮೂರ್ತಿಗಳನ್ನು ಸ್ತುತಿಸಿದ ಹಾಗೂ ಆರಾಧಿಸಿದ ಫಲವು ಲಭಿಸುತ್ತದೆ.

ಮೈಸೂರಿನ ಬೋಗಾದಿಯ ಬ್ಯಾಂಕ್ ಕಾಲನಿಯಲ್ಲಿರುವ 'ಗುರುಕುಲ ಯೋಗಾಶ್ರಮ'ದ ಶ್ರೀ ಶ್ರೀ ನಾರಾಯಣಗುರು ಸ್ವಾಮೀಜಿಯವರು ಸೂರ್ಯ ನಮಸ್ಕಾರದ ರೀತಿಯಲ್ಲಿ ವಿಶೇಷತಃ ಸ್ತ್ರೀಯರಿಗಾಗಿ "ದುರ್ಗಾನಮಸ್ಕಾರ" ವನ್ನು ತಾವು 20 ಆಸನಗಳೊಂದಿಗೆ ಪ್ರಸ್ತುತಪಡಿಸುವುದಾಗಿಯೂ ಆಗ ಮೊದಲು ಹೇಳಿಕೊಳ್ಳಲು ಮಂಡಲ–ಹೋಮಾದಿ ಶಬ್ದಗಳ ಸಹಿತವಾದ ಶ್ಲೋಕದ್ವಯವನ್ನು ಸಂಸ್ಕೃತದಲ್ಲಿ ರಚಿಸಿಕೊಡಲು ನನ್ನನ್ನು ಈ ಮಧ್ಯೆ ಕೇಳಿಕೊಂಡಾಗ ಅವರಿಗೆಂದು ಸ್ರಗ್ಧರಾ ವೃತ್ತದಲ್ಲಿ ಒಂದು ಶ್ಲೋಕ ಹಾಗೂ ಅನುಷ್ಟುಪ್ ಛಂದಸ್ಸಿನಲ್ಲಿ ಮತ್ತೊಂದು ಶ್ಲೋಕ–ಹೀಗೆ ಎರಡು ಶ್ಲೋಕಗಳನ್ನು ಬರೆದು ಕೊಟ್ಟದ್ದನ್ನೂ ಅರ್ಥಸಹಿತವಾಗಿ ಎಲ್ಲರ ಪ್ರಯೋಜನಕ್ಕಾಗಿ ಇಲ್ಲಿ ಕೊಡುತ್ತಿದ್ದೇನೆ:

ದುರ್ಗಾಂಬಾಯೈ ನಮಸ್ತೇಽಸ್ತು ಸಕಲಜಗತಃ ಪೋಷಣಾಸಕ್ತಮಾತ್ರೇ
ದುಷ್ಪ್ರಜ್ಞಾದಾನವಾಕಾರಭವಭಯತಮೋಧ್ವಂಸಿಶಕ್ತಿತ್ರಯಾಯೈ
ಶ್ರೀಮಾತ್ರೇ ಮಂಡಲಾಧಿಷ್ಠಿತಬಹುವಿಧಹೋಮಾದಿಭಿಃ ಪೂಜಿತಾಯೈ
ಮಂತ್ರಾನುಷ್ಠಾತೃನಿಷ್ಠಾತೃಸುಖದಗುರುಪಾದಾಂಬುಜಾಲಂಕೃತಾಯೈ ॥1॥

ಸಕಲ ಜಗತ್ತಿನ ಪೋಷಣೆಯಲ್ಲಿ ನಿರತಳಾದ ದುರ್ಗಾಂಬೆಯೆ, ನಿನಗೆ ನಮಸ್ಕಾರ. ದುಷ್ಪ್ರಜ್ಞೆ ಮತ್ತು ರಾಕ್ಷಸರ ಆಕಾರದಲ್ಲಿರುವ ಹಾಗೂ ಭವದಲ್ಲಿ ಭಯವನ್ನುಂಟು ಮಾಡುವ ತಮಸ್ಸನ್ನು ಧ್ವಂಸಗೊಳಿಸುವ ಶಕ್ತಿತ್ರಯಳು ನೀನು. ಶ್ರೀಮಾತೆಯೆ, ಮಂಡಲಾಧಿಷ್ಠಿತಳಾಗಿದ್ದು ಬಹುವಿಧವಾದ ಹೋಮಾದಿಗಳಿಂದ ಆರಾಧಿಸಲ್ಪಡುವವಳು ನೀನು. ಮಂತ್ರಾನುಷ್ಠಾನನಿಷ್ಠರಿಗೆ ಸುಖವನ್ನುಂಟುಮಾಡುವ ಪೂಜ್ಯಪಾದಗಳಿಂದ ನೀನು ಅಲಂಕೃತಳಾಗಿರುವೆ.

ನಮಸ್ಕರೋಮಿ ದುರ್ಗೇ ತ್ವಾಂ ವಿಂಶತ್ಯಾಸನಪೂರ್ವಕಮ್
ನವನಾಮಾರ್ಚನಖ್ಯಾತನವರಾತ್ರ್ಯುತ್ಸವಪ್ರಿಯಾಮ್ ॥2॥

ದುರ್ಗಾಮಾತೆಯೆ ನಿನ್ನ ಒಂಭತ್ತು ಹೆಸರುಗಳನ್ನು ಆಧರಿಸಿ ನಡೆಯುವ ಸುಪ್ರಸಿದ್ಧವಾದ ನವರಾತ್ರಿಯ ಉತ್ಸವ ಪ್ರಿಯಳಾದ ನಿನಗೆ ಇಪ್ಪತ್ತು ಯೋಗಾಸನ ಪೂರ್ವಕವಾಗಿ ನಮಸ್ಕರಿಸುವೆನು.

* * * * *

೨೯. ಯುಗಾರ್ಥಸಹಿತ–ವಿಷ್ಣುದಶಾವತಾರರಹಸ್ಯದರ್ಶಿಕಾ

[**ಪೀಠಿಕೆ :** ಮಹಾವಿಷ್ಣುವಿನ ದಶಾವತಾರಗಳಲ್ಲಿ ಮತ್ಸ್ಯ–ಕೂರ್ಮಾದಿ ಪ್ರಾಣಿಗಳೂ ಮನುಷ್ಯಾರ್ಧದೇಹದ ಸಿಂಹವೂ ಬರುವುದು ತುಂಬ ವಿಚಿತ್ರವೆನಿಸುತ್ತದೆ ಹಾಗೂ ಯುಗಗಳ ಲಕ್ಷಗಟ್ಟಲೆ ವರುಷಗಳ ವಿಷಯದಲ್ಲಿಯೂ ಗೊಂದಲವಿದೆ; ಇಲ್ಲಿ ಏನಾದರೂ ರಹಸ್ಯಾರ್ಥವಿದೆಯೇ ಎಂಬ ಪ್ರಶ್ನೆಯನ್ನು ಈ ಲೇಖಕನ ಮುಂದಿಟ್ಟಾಗ ಉತ್ತರದ ರೂಪದಲ್ಲಿ ಈ ಕೆಳಗಿನ 63 ಶ್ಲೋಕಗಳು ಈ ಲೇಖಕನಿಂದ ರೂಪುಗೊಂಡವು. ಅವಶ್ಯಕತೆಗನುಗುಣವಾಗಿ ವಿವರಣೆಯನ್ನು ಅಲ್ಲಲ್ಲಿ ಕೊಡಲಾಗಿದೆ.]

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ।
ಭಾರ್ಗವರಾಮಕಾಕುತ್ಸ್ಥರಾಮೌ ತೌ ಚ ಮಹಾಬಲೌ ॥ 1 ॥

ಕೃಷ್ಣೋ ಬುದ್ಧೋ ಮಹಾಕಲ್ಕಿರ್ವಿಷ್ಣೋಸ್ತಸ್ಯ ಪರಸ್ಯ ಚ ।
ಅವತಾರದಶಪ್ರೋಕ್ತಾಃ ಪುರಾಣೇಷು ಮನೀಷಿಭಿಃ ॥ 2 ॥

(1 ಮತ್ತು 2) ಮತ್ಸ್ಯ–ಕೂರ್ಮ–ವರಾಹ–ನಾರಸಿಂಹ–ವಾಮನ–ಪರಶುರಾಮ–ಕಾಕುತ್ಸ್ಥ(=ದಾಶರಥೀ)ರಾಮ–ಕೃಷ್ಣ–ಬುದ್ಧ–ಕಲ್ಕಿ ಈ ಹತ್ತು ಪರಾತ್ಪರ ಮಹಾವಿಷ್ಣುವಿನ ಅವತಾರಗಳು ಎಂದು ಜ್ಞಾನಿಗಳು ಪುರಾಣಗಳಲ್ಲಿ ಹೇಳಿರುವರು.

'ರಾಮ' ಎಂಬ ಶಬ್ದದೊಂದಿಗೆ ಎರಡು ಅವತಾರಗಳು ಇರುವುದರಿಂದ ಇಲ್ಲಿ ಭಾರ್ಗವರಾಮ ಮತ್ತು ಕಾಕುತ್ಸ್ಥರಾಮ ಎಂದು ಹೆಸರಿಸಲಾಗಿದೆ. ಭೃಗುಮಹರ್ಷಿಯ ಕುಲದಲ್ಲಿ ಪರಶುರಾಮನ ಅವತಾರವಾದದ್ದು; ಆದುದರಿಂದ ಆತನನ್ನು ಭಾರ್ಗವರಾಮ ಎಂದೂ ಕರೆಯಲಾಗುವುದು. ಭೃಗುವಿನ ಮಗ ಚ್ಯವನಮಹರ್ಷಿ ಹಾಗೂ ಮೊಮ್ಮಗ ಋಚೀಕ ಮಹರ್ಷಿ ಹಾಗೂ ಮರಿಮಗ ಜಮದಗ್ನಿ; ಈ ಜಮದಗ್ನಿಯ ಪುತ್ರ ಪರಶುರಾಮ. ಪರಶು ಅಂದರೆ ಗಂಡುಗೊಡಲಿ, ಅಂದರೆ ಕೈಯಲ್ಲಿ ಸದಾಕಾಲ ಇಟ್ಟುಕೊಳ್ಳಬಹುದಾದ ಚಿಕ್ಕಹಿಡಿಕೆಯುಳ್ಳ ಭೀಕರಕೊಡಲಿ. ಪರಶುವನ್ನು ಆಯುಧವಾಗಿ ಧರಿಸಿದ ರಾಮ ಪರಶುರಾಮ.

ಕೌಸಲ್ಯಾ–ದಶರಥರ ಪುತ್ರನಾದ ರಾಮನನ್ನು ಕಾಕುತ್ಸ್ಥರಾಮ ಎಂದೂ ಕರೆಯಲಾಗುವುದು. ಸೂರ್ಯವಂಶದಲ್ಲಿ ಆಗಿಹೋದ ಪುರಂಜಯ ಅನ್ನುವ ರಾಜನು ಇಂದ್ರನಿಗೆ ಯುದ್ಧದಲ್ಲಿ ಸಹಾಯಕನಾಗಿ ಹೋಗಿದ್ದಾಗ ಇಂದ್ರನು ವೃಷಭರೂಪದಲ್ಲಿ ಆತನ ವಾಹನವಾಗಿದ್ದನು. ಆ ವೃಷಭದ ಕಕುದದ ಮೇಲೆ, ಅರ್ಥಾತ್ ಬೆನ್ನಿನ ಡುಬ್ಬದ ಮೇಲೆ ಕುಳಿತು ಪುರಂಜಯನು ಇಂದ್ರನ ವೈರಿಗಳಾದ ರಾಕ್ಷಸರನ್ನು ನಾಶಪಡಿಸಿದ.

ಕಕುದದ ಮೇಲೆ ಆತ ಕುಳಿತಿದ್ದರಿಂದ ಅವನನ್ನು ಕಕುತ್ಸ್ಥ ಎಂದು ಕರೆಯಲಾಯಿತು; ಅವನ ಆ ಹೆಸರಿನಿಂದಲೇ ಮುಂದೆ ಆ ಕುಲವು ಪ್ರಖ್ಯಾತವಾಯಿತು. ಹೀಗಾಗಿ ಆ ಕುಲದ ಮುಂದಿನವರನ್ನೆಲ್ಲ ಕಾಕುತ್ಸ್ಥ ಎಂಬ ಉಪನಾಮದಿಂದಲೂ ಗುರುತಿಸಲಾಗುವುದು. ಈ ಅರ್ಥದಲ್ಲಿ ದಶರಥಪುತ್ರ ರಾಮನು ಕಾಕುತ್ಸ್ಥನೆನಿಸಿದನು.

ವಿಷ್ಣುರತ್ರ ಮಹಾಸೂರ್ಯಃ ಪ್ರತ್ಯಗಾತ್ಮಾ ಕರೋಽಸ್ಯ ಚ ।
ವಿಷ್ಣೋಃಸ್ಪಂದಃ ಪರಾಶಕ್ತಿಃ ಪ್ರಕೃತಿಸ್ಸಾಪಿ ಸತ್ಯತಃ ॥ 3 ॥

(3) ಇಲ್ಲಿ ವಿಷ್ಣುವೆಂದರೆ ಮಹಾಸೂರ್ಯ. ಆತನ ಕಿರಣವೇ ಪ್ರತ್ಯಗಾತ್ಮ. ಆ ಮಹಾವಿಷ್ಣುವಿನ ಸ್ಪಂದವೇ ಪರಾಶಕ್ತಿ. ಆ ಪರಾಶಕ್ತಿಯೇ ಪ್ರಕೃತಿ ಅನ್ನುವುದು ಅಷ್ಟೇ ಸತ್ಯ.

ಉಪನಿಷತ್ತುಗಳು ಪರಬ್ರಹ್ಮನಿಗೆ 'ಪೂಷನ್' ಎಂದು ಹೇಳುತ್ತ ಆತನನ್ನು ಮಹಾಸೂರ್ಯನನ್ನಾಗಿ ಗುರುತಿಸಿದವು (ನೋಡಿ: ಈಶಾವಾಸ್ಯ ಉಪನಿಷತ್ತಿನ ಹದಿನಾರನೆಯ ಮಂತ್ರವನ್ನು). ದಶ ಅವತಾರಗಳನ್ನು ಹೊಂದಿದ ವಿಷ್ಣುವು ತ್ರಿಮೂರ್ತಿಗಳಲ್ಲೊಬ್ಬನಾದ ವಿಷ್ಣು ಮಾತ್ರವಾಗಿರದೆ ಆ ವಿಷ್ಣುವಿನ ಮೂಲನೆನಿಸಿದ ಮಹಾಸೂರ್ಯನೇ ಆದುದರಿಂದ ಇಲ್ಲಿ ವಿಷ್ಣುವನ್ನು ಮಹಾವಿಷ್ಣು ಎಂದು ಗುರುತಿಸಲಾಗುತ್ತದೆ. ಆ ಮಹಾವಿಷ್ಣುವೇ ಉಪನಿಷತ್ತುಗಳು ಹೇಳುವ ಪೂಷನ್, ಅರ್ಥಾತ್ ಮಹಾಸೂರ್ಯ. ಆ ಮಹಾಸೂರ್ಯನಿಂದಲೇ ಬ್ರಹ್ಮಾಂಡದಲ್ಲಿ ಕೋಟಿಗಟ್ಟಲೆ ಸೂರ್ಯರು ಹಾಗೂ ಆ ಸೂರ್ಯರಿಗೆ ಸಂಬಂಧಪಟ್ಟ ವಿವಿಧಗ್ರಹಗಳು, ಅರ್ಥಾತ್, ಸೌರಸಂಸಾರಗಳು. ಎಲ್ಲವಕ್ಕೂ ಮೂಲನಾದ ಆ ಮಹಾಸೂರ್ಯನಿಂದ ಹೊರಸೂಸುವ ಕಿರಣಗಳೇ ಅಸಂಖ್ಯಾಸಂಖ್ಯ ಆತ್ಮಗಳು. ಆ ಮಹಾಸೂರ್ಯನೆಂಬ ಪರಮಾತ್ಮನಿಂದ ಪ್ರತ್ಯೇಕಿತಗೊಂಡು ಬಂದ ಆತ್ಮಗಳನ್ನು ಪ್ರತ್ಯಗಾತ್ಮಗಳು ಎಂದು ಗುರುತಿಸಲಾಗುವುದು. ಆ ಮಹಾಸೂರ್ಯನಲ್ಲಿ, ಅರ್ಥಾತ್, ಮಹಾವಿಷ್ಣುವಿನಲ್ಲಿ, ಪರಮಾತ್ಮನಲ್ಲಿ ಮೂಡಿದ ಸ್ಪಂದವೇ ಪರಾಶಕ್ತಿ. ಈ ಪರಾಶಕ್ತಿಯನ್ನು ಪರಾಪ್ರಕೃತಿ ಎಂದೂ ಕರೆಯಲಾಗುವುದು ಹಾಗೂ ಮುಂದೆ ಪುರಾಣಗಳಲ್ಲಿ ಅವಳನ್ನು ಶ್ರೀಮಾತೆ ಲಲಿತೆ ಎಂದೂ ಮುಂತಾಗಿ ಕರೆಯಲಾಗಿದೆ. ಮಹಾಸೂರ್ಯನಿಂದ ಹೊರಬಂದ ಪ್ರತ್ಯಗಾತ್ಮಗಳನ್ನು ಮುನ್ನಡೆಸಲು ಪ್ರಕೃತಿಯಾಗಿ ಈ ಪರಾಶಕ್ತಿಯು ತನ್ನನ್ನು ತಾನೇ ರೂಪಿಸಿಕೊಂಡಳು ಅನ್ನುವುದು ಈ ಪರಾಪ್ರಕೃತಿ–ಪ್ರಕೃತಿಯರಿಗೆ ಸಂಬಂಧಿಸಿದಂತೆ ಒಂದು ಗಮನಾರ್ಹ ಸಂಗತಿ.

ಪ್ರಕೃತಿರ್ಜೀವಭಾವೇನ ರಶ್ಮಿಮಾವೃತ್ಯ ಶೀಘ್ರತಃ ।
ಸಂಸಾರೇ ಚಾಲಯತ್ಯೇನಮೇವಂ ಜೀವಾತ್ಮನೋ ಗತಿಃ ॥ 4 ॥

(4) ಆ ಪ್ರಕೃತಿಯೇ ಜೀವಭಾವವನ್ನು ತಳೆದು (ಆ ಮಹಾಸೂರ್ಯನಿಂದ ಹೊರಬಂದ) ಕಿರಣವನ್ನು ಕೂಡಲೇ ಆವರಿಸಿ ಆ ರಶ್ಮಿಯೆಂಬ ಆತ್ಮವನ್ನು ಜೀವಾತ್ಮವನ್ನಾಗಿ ಮಾಡುವುದು ಹಾಗೂ ಜಗತ್ತಿನಲ್ಲಿ ಅದನ್ನು ಮುನ್ನಡೆಸುವುದು. ಈ ರೀತಿ ಜೀವಾತ್ಮದ ನಡೆ ಪ್ರಾರಂಭಗೊಂಡದ್ದು.

ಜೀವಾತ್ಮವೆಂದರೆ ಪರಮಾತ್ಮನೆಂಬ ಮಹಾಸೂರ್ಯನ ಅಂಶವೇ ಆದ, ಕಿರಣವೇ ಆದ ಆತ್ಮವಾಗಿದ್ದು ಪ್ರಕೃತಿಯು ಜೀವಭಾವವನ್ನು ಅದಕ್ಕೆ ಉಂಟುಮಾಡುವುದರಿಂದಾಗಿ ಅದು ಜೀವಾತ್ಮವಾಗುವುದು. ಆತ್ಮ–ಜೀವಗಳನ್ನು ಹರಿ–ವಾಯುಗಳು ಎಂದೂ ಕೆಲವು ಪದ್ಧತಿಗಳಲ್ಲಿ ಗುರುತಿಸಲಾಗುತ್ತದೆ. ಜೀವವೆಂದರೆ ವಾಯುತತ್ತ್ವ. ಸೂಕ್ಷ್ಮಾಣುರೂಪದ ವಾಯುತತ್ತ್ವವು ಆತ್ಮವನ್ನು ಆವರಿಸಿದಾಗ ಅದು ಜೀವಾತ್ಮವಾಗುವುದು. ವಾಯುತತ್ತ್ವವು ಪ್ರಕೃತಿಯ ಒಂದು ಪ್ರಮುಖಾಂಗವಾಗಿದೆ. ಅಲ್ಲಿ 'ಹರಿ' ಅಂದರೆ ಆ ಮಹಾಸೂರ್ಯನೇ ಸರಿ; ಹಾಗೂ ಈಶಾವಾಸ್ಯೋಪನಿಷತ್ತಿನಲ್ಲಿ ಬರುವ ಈಶನೇ ಸರಿ.

ವಿಷ್ಣೋರ್ದಶಾವತಾರತೋ ಜ್ಞೇಯಂ ಜೀವಾಯನಂ ಮಹತ್ ।
ಸಾಧನಾತ್ಪರಮಾತ್ಮತ್ವಂ ಪುನಸ್ಸಂಪ್ರಾಪ್ತಮವ್ಯಯಮ್ ॥5॥

(5) ವಿಷ್ಣುವಿನ ದಶಾವತಾರವೆಂದರೆ ಜೀವಾತ್ಮದ ಮಹತ್ತರವಾದ ಚರಿತೆ ಎಂದು ಅರ್ಥ. ಜೀವಾತ್ಮವು ತನ್ನ ಸಾಧನೆಯಿಂದ ಅವ್ಯಯವಾದ ಪರಮಾತ್ಮತತ್ತ್ವವನ್ನು ಪುನಃ ಸಂಪಾದಿಸುವ ಚರಿತವೇ ದಶಾವತಾರ.

"ಪೂರ್ಣಮ್ ಅದಃ; ಪೂರ್ಣಮ್ ಇದಮ್...." ಎಂಬ ಉಪನಿಷದುಕ್ತಿಯ ಪ್ರಕಾರ ಮಹಾಸೂರ್ಯನಾದ ಪರಬ್ರಹ್ಮನು ಎಷ್ಟು ಪರಿಪೂರ್ಣನೋ ಅಷ್ಟೇ ಆತನ ಅಂಶವಾದ ಜೀವಾತ್ಮವೂ ಪರಿಪೂರ್ಣವೇ ಆಗಿದೆ. ಅದು ತನ್ನ ಪೂರ್ಣತ್ವವನ್ನು ಅರಿತುಕೊಳ್ಳುವುದೇ ಪ್ರಕೃತಿಯ ಪರಿಧಿಯಿಂದ ಹೊರಗೆ ಬರುವುದಾಗಿದೆ. ಹಾಗೆ ಪ್ರಕೃತಿಯ ಪರಿಧಿಯಿಂದ ಹೊರಗೆ ಬರುವುದೇ ಮೋಕ್ಷ. ಹೊರಗೆ ಬಂದ ಪ್ರತ್ಯಗಾತ್ಮವೆಂಬ ಕಿರಣವು ತನ್ನ ಮೂಲವನ್ನು ಸೇರುವುದೇ ಪರಮಪದವೆನಿಸಿದ ಮೋಕ್ಷ. ಅದಕ್ಕಾಗಿಯೇ ಈಶಾವಾಸ್ಯ ಉಪನಿಷತ್ತಿನಲ್ಲಿ ಆ ಮಹಾಸೂರ್ಯನನ್ನು "ಪೂಷನ್,.... ವ್ಯೂಹ ರಶ್ಮೀನ್ ಸಮೂಹ"– ಸೂರ್ಯನೆ, ನಿನ್ನ ಕಿರಣಗಳನ್ನೆಲ್ಲ ಒಟ್ಟುಗೂಡಿಸಿಕೊ ಎಂದು ಪ್ರಾರ್ಥಿಸಲಾಗಿದೆ. ಪ್ರತ್ಯಗಾತ್ಮವು ಜೀವಾತ್ಮವಾದದ್ದು ಅಣುರೂಪದಲ್ಲಿ ವೀರ್ಯಗತವಾಗಿ ಶೋಣಿತದ ಸಂಪರ್ಕಕ್ಕೆ ಬಂದು ಗರ್ಭಕೋಶದಲ್ಲಿ ಕಲಿಲ–ಭ್ರೂಣಾದಿ ಅವಸ್ಥೆಗಳನ್ನು ಪಡೆದು ಬೆಳವಣಿಗೆಯನ್ನು ಹೊಂದಿ ಯಾವುದೋ ಪ್ರಾಣಿಯಾಗಿ ಜನಿಸಿ ಸತ್ತು ಮತ್ತೆ ಜನಿಸುತ್ತಿರುವುದು ಮತ್ಸ್ಯದಿಂದ ಪರಶುರಾಮನವರೆಗಿನ ಅವತಾರಗಳ ಅರ್ಥ. ಆದರೆ

ಪುಣ್ಯ ಜೀವಾತ್ಮವು ಮನುಷ್ಯಯೋನಿಗೆ (ಜನ್ಮಕ್ಕೆ) ಬಂದು ತನ್ನ ಅಧ್ಯಾತ್ಮಸಾಧನೆಯ ಬಲದಿಂದ ಮೋಕ್ಷವನ್ನು ಪಡೆಯುವ ಚರಿತೆಯು ರಾಮಾವತಾರದಲ್ಲಿ ಹಾಗೂ ಮುಂದಿನ ಕೃಷ್ಣ–ಬುದ್ಧಾವತಾರಗಳಲ್ಲಿ ಮುಂದುವರಿಯುವುದು.

ಮತ್ಸ್ಯಃಕರತಲೇ ತತ್ರ ವೈವಸ್ವತಮನೋರಸೌ ।
ರಾಜಾ ಜೀವಕುಲಶ್ರೇಷ್ಠೋ ಮಹಾನಂಶೋ ವಿವಸ್ವತಃ ॥ 6 ॥

ವಿಚಾರಶಕ್ತಿಸಂಪನ್ನೋ ಮಾನವೋಽತ್ರ ನೃಪೋ ಮನುಃ ।
ಪರಮಾತ್ಮಾಂಶಜೀವಾತ್ಮಾ ಮತ್ಸ್ಯೋ ಜೀವನಯಾನಗಃ ॥ 7 ॥

(6 ಮತ್ತು 7) ವಿವಸ್ವಂತನ ಮಗನಾದ ರಾಜಾ ಮನುವಿನ ಅಂಗೈಯಲ್ಲಿ ಮತ್ಸ್ಯವೊಂದು ಬಂದುಬಿದ್ದಿತು. ಇಲ್ಲಿ ರಾಜನೆಂದರೆ ಜೀವಕುಲಶ್ರೇಷ್ಠ. ಮನುವೆಂದರೆ ಮಾನವಯೋನಿಜ ಎಂದು ಅರ್ಥ. ಪ್ರಾಣಿಗಳಲ್ಲಿ ಶ್ರೇಷ್ಠನಾಗಿ ಅವುಗಳಲ್ಲಿ ರಾಜನೆನಿಸಿದ ಮಾನವ ಪ್ರಾಣಿಯು ಸೂರ್ಯನ (ವಿವಸ್ವಂತನ) ಅತಿಶ್ರೇಷ್ಠ ಅಂಶವೆನಿಸಿದನು. ಇಲ್ಲಿ ಮನು ಅಂದರೆ ವಿಚಾರಶಕ್ತಿಸಂಪನ್ನನಾದ ಮಾನವಜೀವಿ ಎಂದು ಅರ್ಥ. ವಿಚಾರಶಕ್ತಿಸಂಪನ್ನನಾದ ಮಾನವನು ಎಲ್ಲ ಜೀವಿಗಳಲ್ಲಿ ಶ್ರೇಷ್ಠನು. ಏಕೆಂದರೆ ಜನ್ಮ–ಪುನರ್ಜನ್ಮಚಕ್ರದಿಂದ ಪಾರಾಗಲು ವಿಚಾರಶಕ್ತಿಯುಳ್ಳ ಜೀವಿಗೆ ಮಾತ್ರ ಸಾಧ್ಯ. ಜೀವನಯಾನಕ್ಕೆ ಸಿದ್ಧಗೊಂಡ ಜೀವಾತ್ಮವೇ ಇಲ್ಲಿಯ 'ಮತ್ಸ್ಯ'. ಜೀವಾತ್ಮವು ಪರಮಾತ್ಮನ ಅಂಶವಾದುದರಿಂದ ಅಂಶಕ್ಕೂ ಪೂರ್ಣಕ್ಕೂ ಭೇದವೆಣಿಸಲಾಗದು ಎಂಬ ಉಪನಿಷತ್ತುಗಳ (ಪೂರ್ಣಮದಃ ಪೂರ್ಣಮಿದಮ್ ಎಂಬ) ವಾಣಿಯ ಪ್ರಕಾರ ಜೀವಾತ್ಮದ ಅವತರಣವನ್ನು ಪರಮಾತ್ಮನ ಅವತಾರವನ್ನಾಗಿ ಇಲ್ಲಿ ಭಾವಿಸಲಾಗಿದೆ. 'ಆತ್ಮಾ ವೈ ಪುತ್ರನಾಮಾಸಿ'– ತಾನೇ ಮಗನಾಗಿ ಜನಿಸುವುದು ಎಂಬ ವೇದವಾಣಿಯಂತೆಯೂ ಜೀವಾತ್ಮವು ಪರಮಾತ್ಮನೆಂದೇ ಆಗುವುದು. 'ಮದ್ಭಾವಃ ಸ್ಯಂದ್ಯತೇ ಅತ್ರ ಇತಿ ಮತ್ಸ್ಯಃ'–ನಾನು ಎಂಬ ಭಾವದಿಂದ ಕೂಡಿದ ಆತ್ಮವೇ, ಜೀವಾತ್ಮವೇ ಮತ್ಸ್ಯ. ನದಿಯಲ್ಲಿಯ ಮತ್ಸ್ಯ ಹಾಗೂ ಈ ಮತ್ಸ್ಯಗಳಲ್ಲಿ ನಾಮಮಾತ್ರ ಸಾಮ್ಯವೇ ಹೊರತು ಅರ್ಥದಲ್ಲಿ ಸಾಮ್ಯತೆ ಖಂಡಿತವಾಗಿಯೂ ಇಲ್ಲ. ಇದನ್ನು 'ಮೀನು' ಎಂದು ಅರ್ಥ ಮಾಡಿದರೆ ಅನರ್ಥವಾಗುವುದು.

ಜಲಂ ತು ಜೀವನಂ ಪೂರ್ವವಾಸನಾತತ್ತ್ವಸಂಯುತಃ ।
ಜೀವಾತ್ಮಾಸೌ ಮಹಾಮತ್ಸ್ಯೋ ನೌರ್ಗರ್ಭೋಽಸ್ಮಿನ್ ಸ ಸಂಸ್ಥಿತಃ॥ 8 ॥

(8) ಜಲವೆಂದರೆ ಜೀವನ. ಇಲ್ಲಿಯ ಮಹಾಮತ್ಸ್ಯವು ಹಿಂದಿನ ಜನ್ಮಗಳ ಕರ್ಮಫಲಯುಕ್ತವಾದ ಜೀವಾತ್ಮವನ್ನು ಅರ್ಥೈಸುತ್ತದೆ. ಇಲ್ಲಿ ನೌಕೆಯೆಂದರೆ ಗರ್ಭಕೋಶ.

ಇದರಲ್ಲಿ ಪೂರ್ವವಾಸನೆಗಳಿಂದ ಕೂಡಿದ ಜೀವಾತ್ಮವು ಸುಸ್ಥಿರವಾಯಿತು. ಪೂರ್ವವಾಸನೆಗಳೇ ಮನುಮಹಾರಾಜನು ನೌಕೆಯಲ್ಲಿ ಇರಿಸಿಕೊಂಡ ವಿವಿಧ ವಸ್ತುಗಳು.

ಸಂಸ್ಕೃತದಲ್ಲಿ ಜಲಕ್ಕೆ ಜೀವನ ಅನ್ನುವುದು ಪರ್ಯಾಯಶಬ್ದಗಳಲ್ಲಿ ಒಂದು. ಇಲ್ಲಿ ಮಹಾಮತ್ಸ್ಯ ಎಂದು ಹೇಳಲು ಕಾರಣ ಚಾಲನೆಯಲ್ಲಿರುವ ಪ್ರತಿಯೊಂದು ಜೀವಾತ್ಮವೂ ಹಿಂದೆ ಮಾನವೇತರ ಅನೇಕ ಯೋನಿಗಳಲ್ಲಿ ಹಾಗೂ ಸಾಮಾನ್ಯ ಮಾನವನಾಗಿಯೂ ಜನ್ಮತಳೆದಿದ್ದು ಆ ಎಲ್ಲ ಜನ್ಮಗಳ ಕರ್ಮಫಲಗಳಿಂದ ಕೂಡಿದೆ. ಕರ್ಮಫಲಗಳನ್ನು 'ವಾಸನೆ' ಎಂದು ಗುರುತಿಸಲಾಗುವುದು. ಸಾಮಾನ್ಯ ಅರ್ಥದಲ್ಲಿ ಮತ್ಸ್ಯವು ವಾಸನೆಯಿಂದ ಕೂಡಿರುವುದರಿಂದಾಗಿಯೂ ಇಲ್ಲಿ ಜೀವಾತ್ಮವನ್ನು ಬೋಧಿಸಲು ಮತ್ಸ್ಯ ಶಬ್ದವನ್ನು ತರಲಾಗಿದೆ. ರಾಮಾಯಣದ ನಂತರದ ಮಹಾಭಾರತದಲ್ಲಿ ಬರುವ ಮತ್ಸ್ಯಗಂಧೆಯೂ ಇದೇ ಅರ್ಥದಲ್ಲಿ ಬರುತ್ತದೆ. (ನೋಡಿ ಈ ಎಲ್ಲ ವಿಶೇಷಾರ್ಥಗಳಿಗಾಗಿ ಇದೇ ಲೇಖಕರ "ಶ್ಲೇಷಸಿದ್ಧಾಂತಃ" ಎಂಬ ಗ್ರಂಥವನ್ನು)

ಪ್ರಾಕ್ತನಜನ್ಮಸಂಪ್ರಾಪ್ತವಿದ್ಯಾ ವೇದಃ ಸ ಚೋರಿತಃ ।
ಹಯಗ್ರೀವೇಣ ದೇಹಾಂತ್ಯಕೃತ್ತಮಃ ಸ ಚ ರಾಕ್ಷಸಃ ॥ 9 ॥

ಪುನಸ್ಸಂಸ್ಥಾಪನಂ ತ್ವತ್ರ ವಿದ್ಯಾಯಾ ಗರ್ಭಪೋಷಿತೇ ।
ಪೂರ್ವಜನ್ಮಾರ್ಜಿತಾಯಾಶ್ಚ ಮಸ್ತಿಷ್ಕೇ ಮತ್ಸ್ಯಕರ್ಮಣಿ ॥ 10 ॥

(9 ಮತ್ತು 10) ಹಿಂದಿನ ಜನ್ಮಗಳಲ್ಲಿ ಸಂಪಾದಿಸಿದ್ದ ವಿದ್ಯೆಯನ್ನು ವೇದ ಎಂದು ಇಲ್ಲಿ ಕರೆಯಲಾಗಿದೆ. ಈ ವೇದವನ್ನು ಹಯಗ್ರೀವನೆಂಬ ರಾಕ್ಷಸನು ಕದಿಯುವನು. ಇಲ್ಲಿ ಸಾವನ್ನು ತಂದೊಡ್ಡುವ ತಮಸ್ತತ್ತ್ವವನ್ನು ಹಯಗ್ರೀವರಾಕ್ಷಸನನ್ನಾಗಿ ಚಿತ್ರಿಸಲಾಗಿದೆ. ಎಷ್ಟೇ ವಿದ್ಯೆಯಿದ್ದರೂ ಮರಣವು ಅವನ್ನೆಲ್ಲ ಮರೆಸಿಬಿಡುವುದು. ಮುಂದಿನ ಜನ್ಮದಲ್ಲಿ ಮತ್ತೆ ಪ್ರಾರಂಭದಿಂದಲೇ ಕಲಿಯಬೇಕಾಗುವುದು. ಆದರೆ ಹಾಗೆ ಕಲಿಯುವಾಗ ವಿದ್ಯೆಯು ತಲೆಗೆ ಹತ್ತಬೇಕಿದ್ದರೆ ಹಿಂದಿನ ಜನ್ಮಗಳಲ್ಲಿ ಕಲಿತ ವಿದ್ಯೆಯ ಪ್ರಭಾವವು ಸಂಸ್ಕಾರರೂಪದಲ್ಲಿ ಮಿದುಳಿನಲ್ಲಿ ಇರಬೇಕಾಗುತ್ತದೆ. ಗರ್ಭದಲ್ಲಿ ಪೋಷಿತವಾಗುತ್ತಿರುವ ಪಿಂಡರೂಪದಲ್ಲಿರುವ ಶಿಶುವಿನ ಮಸ್ತಿಷ್ಕದಲ್ಲಿ, ಅರ್ಥಾತ್ ಮಿದುಳಿನಲ್ಲಿ ಆ ವಿದ್ಯಾಸಂಸ್ಕಾರದ ಪುನಸ್ಸಂಸ್ಥಾಪನೆಯೇ ಇಲ್ಲಿ ಮತ್ಸ್ಯವು ನಡೆಸಿದ ಹಯಗ್ರೀವ ರಾಕ್ಷಸನ ವಧೆ ಹಾಗೂ ವೇದೋದ್ಧರಣಕಾರ್ಯ.

ವೀರ್ಯಾಣುಗತಜೀವಾತ್ಮಾ ಯದಾ ಗರ್ಭೇ ಸುಸಂಸ್ಥಿತಃ ।
ತದಾ ಯತ್ಕಲಿಲಂ ತತ್ರ ಕ್ರಮಾತ್ ಪಿಂಡದಶಾ ಖಲು ॥ 11 ॥

ತತ್ಪಿಂಡಾಕಾರತತ್ತ್ವಂ ಚ ಕೂರ್ಮೋ ವಿಷ್ಣೋರ್ದ್ವಿತೀಯಕಃ ।
ಅವತಾರೋ ಯತೋ ತತ್ರ ಜೀವಾತ್ಮಾ ವಿಕಸನೇ ರತಃ ॥ 12 ॥

(11 ಮತ್ತು 12) ಪುರುಷನ ವೀರ್ಯಾಣುವಿನೊಂದಿಗೆ ಬೆರೆತ ಜೀವಾತ್ಮವು ಗರ್ಭದಲ್ಲಿ ಅಂಡಾಣುವಿನ ಸಂಯೋಗದೊಂದಿಗೆ ಸುಸಂಸ್ಥಿತವಾದ ಮೇಲೆ ಕಲಿಲರೂಪಕ್ಕೆ ತಿರುಗಿ ಕ್ರಮವಾಗಿ ಪಿಂಡದ ರೂಪವು ಗರ್ಭದಲ್ಲಿ ಉಂಟಾಗುವುದು. ಆ ಪಿಂಡಾಕಾರವೇ ಮಹಾವಿಷ್ಣುವಿನ ಎರಡನೆಯದಾದ ಕೂರ್ಮಾವತಾರ. ಏಕೆಂದರೆ ಅಲ್ಲಿ ಜೀವವು ವಿಕಸಿತವಾಗುತ್ತ ಇರುತ್ತದೆ.

ತೇ ದೇವದಾನವಾಸ್ತತ್ರ ಸತ್ತ್ವರಜಸ್ತಮೋಗುಣಾಃ ।
ಯಾ ಪೂರ್ವಸಂಚಿತಾಶಾ ಸಾ ಸರ್ಪೋ ವಾಸುಕಿರೇವ ಚ ॥ 13 ॥

(13) ಇಲ್ಲಿ 'ತತ್ರ' ಅಂದರೆ ಸಮುದ್ರಮಂಥನದ ಆ ಸಂದರ್ಭದಲ್ಲಿ ದೇವ–ದಾನವರೇನಿರುವರೋ ಅವರು ಸತ್ವ–ರಜ–ತಮೋಗುಣಗಳನ್ನು ಅರ್ಥೈಸುವರು. ದೇವತೆಗಳೆಂದರೆ ಸತ್ವಗುಣ. ದಾನವರಲ್ಲಿ ಉತ್ತಮರು ರಜೋಗುಣವನ್ನು ಪ್ರತಿನಿಧಿಸಿದರೆ ಕ್ರೂರಿಗಳು ತಮೋಗುಣವನ್ನು ಅರ್ಥೈಸುವರು. ಕಡೆಗೋಲಿನ ಹಗ್ಗವಾಗಿ ಬಂದ ವಾಸುಕಿ ಸರ್ಪವು ಹಿಂದಿನ ಜನ್ಮಗಳಿಂದ ಸಂಚಿತವಾಗಿ ಬಂದಿದ್ದ ಆಶೆಯನ್ನು ಪ್ರತಿನಿಧಿಸುವುದು; ಆಶೆಯನ್ನು ರೂಪಕಾತ್ಮಕವಾಗಿ ಸರ್ಪವೆಂದು ಕರೆಯಲಾಗಿದೆ.

ಏವಂ ಕೂರ್ಮಾವತಾರೇ ಸಃ ಪರಮಾತ್ಮಾಂಶಸ್ತು ತತ್ತ್ವಶಃ ।
ಕೃತಯುಗಸ್ಯ ತತ್ರಾರ್ಥಃ ಕೃತಕರ್ಮಜಯೋಜನಮ್ ॥ 14 ॥

(14) ಹೀಗೆ ತಾತ್ವಿಕವಾಗಿ ಪರಮಾತ್ಮನ ಅಂಶವಾದ ಜೀವಾತ್ಮವು ತನ್ನ ಪೂರ್ವಾರ್ಜಿತ ಕರ್ಮಫಲಗಳನ್ನೆಲ್ಲ ತುಂಬಿಕೊಂಡು ಗರ್ಭದಲ್ಲಿ ಬೆಳವಣಿಗೆಯನ್ನು ಹೊಂದುತ್ತಿರುವಾಗ ಭ್ರೂಣಕ್ಕೆ ಬರುವ ತೊಂದರೆಯನ್ನು ತನ್ನ ಆ ಕರ್ಮಫಲಗಳಿಂದಾಗಿ ಹಿಮ್ಮೆಟ್ಟಿಸುವಿಕೆಯೇ ಮಂಥರಪರ್ವತವನ್ನು ಕೂರ್ಮವು ಸಮುದ್ರದಲ್ಲಿ ಮುಳುಗದಂತೆ ಎತ್ತಿಹಿಡಿದದ್ದು. ಗರ್ಭಕೋಶದಲ್ಲಿಯ ಜಲತತ್ತ್ವವೇ ಇಲ್ಲಿಯ ಸಮುದ್ರ. ಅವಯವಗಳ ಸೂಕ್ಷ್ಮ ರೂಪಗಳನ್ನೊಳಗೊಂಡ ಭ್ರೂಣವೇ ಇಲ್ಲಿಯ ಕೂರ್ಮ. ತನ್ನ ಅಂಗಗಳನ್ನು ಒಳಗೆ ಸೆಳೆದುಕೊಳ್ಳುವ ಕೂರ್ಮದ ಗುಣದಿಂದಾಗಿ ಇಲ್ಲಿ ಭ್ರೂಣಕ್ಕೆ ಕೂರ್ಮವೆಂದು ಹೇಳಲಾಯಿತು. ಕೃತಯುಗದ ಅರ್ಥವೆಂದರೆ ಹಿಂದಿನ ಜನ್ಮಗಳಲ್ಲಿ ನಡೆಸಿದ ಕರ್ಮಫಲಗಳ ಸಂಯೋಜನೆ. 'ಕೃತ' ಅಂದರೆ ಹಿಂದೆ ನಡೆಸಿದ್ದು. 'ಯುಗ' ಅಂದರೆ ಯೋಜನೆ, ಜೋಡಿಸುವಿಕೆ. ಗರ್ಭದಲ್ಲಿಯ ಶಿಶುವಿನ ಮಸ್ತಿಷ್ಕಕ್ಕೆ ಪ್ರಕೃತಿಯು ಜೀವಾತ್ಮದ ಪ್ರಾಕ್ತನ ಕರ್ಮಫಲಗಳನ್ನು ಜೋಡಿಸುವಿಕೆಯೇ ಕೃತಯುಗ.

ಹಿರಣ್ಯವರ್ಣಕರ್ತಾ ಸ ರೋಗೋ ಕಾಮಲನಾಮಕಃ ।
ಹಿರಣ್ಯಾಕ್ಷಃ ಸ ಗರ್ಭಸ್ಥಪಿಂಡಪೀಡನತತ್ಪರಃ ॥ 15 ॥

(15) ಹಿರಣ್ಯವರ್ಣ ಅಂದರೆ ಬಂಗಾರದ ಬಣ್ಣ, ಅರ್ಥಾತ್ ಹಳದಿ ಬಣ್ಣ. ದೇಹದಲ್ಲಿ, ಇಲ್ಲಿ ಭ್ರೂಣದಲ್ಲಿ ಈ ಬಣ್ಣವನ್ನು ಉಂಟುಮಾಡುವುದು ಕಾಮಾಲೆ ಎಂಬ ರೋಗ. ಈ ಕಾಮಾಲೆರೋಗವನ್ನು ಹಿರಣ್ಯಾಕ್ಷ ಎಂದು ಕರೆಯಲಾಯಿತು. ಏಕೆಂದರೆ ಕಣ್ಣು ಹಳದಿಯಾದದ್ದರ ಮೂಲಕ ಈ ರೋಗವನ್ನು ಗುರುತಿಸಲಾಗುವುದು. ಗರ್ಭದಲ್ಲಿಯ ಪಿಂಡಕ್ಕೆ ಪೀಡಾಕಾರಕವಾಗಿ ಬರಬಹುದಾದ ರೋಗವಿದು. ಇದನ್ನು 'ಸೂತಿಕಾ'ರೋಗವೆಂದೂ ಗುರುತಿಸಲಾಗುವುದು. ಗರ್ಭಿಣಿಯ ಆಶೆಗನುಗುಣದ ಆಹಾರದ ದೋಷದಿಂದಾಗಿ ಪಿತ್ತವು ಉಲ್ಬಣಗೊಂಡು ಬರುವ ರೋಗವಿದು. ಇದೇ ಹಿರಣ್ಯಾಕ್ಷ.

ಗರ್ಭಸ್ಥಜಲಸಂಕ್ಷೋಭಕಾರಕೋಽಸೌ ತಥಾ ಖಲು ।
ಪೃಥ್ವೀತತ್ತ್ವಸ್ಯ ಪಿಂಡಸ್ಯ ಸರ್ವನಾಶಕರೋಽಸುರಃ ॥ 16 ॥

(16) ಗರ್ಭದಲ್ಲಿಯ ಜಲವನ್ನು ಸಂಕ್ಷೋಭಗೊಳಿಸುವ ರೋಗವಿದು ಕಾಮಾಲೆ. ಹಿರಣ್ಯಾಕ್ಷನು ಪೃಥ್ವಿಯನ್ನು ಅಪಹರಿಸಿದನು ಎಂದು ಕಥೆಯಲ್ಲಿ ಹೇಳಲಾಗುತ್ತದೆ. ಪೃಥ್ವೀತತ್ತ್ವದ ಪಿಂಡವನ್ನು ಸರ್ವನಾಶಗೈಯಲು ಉದ್ಯಮಿಸಿದ ಈ ರೋಗವೇ ಆ ರಾಕ್ಷಸ ಹಿರಣ್ಯಾಕ್ಷ.

ವರಸ್ಯಾರ್ಥಂ ಯದಾಹಂತಿ ವರಾಹ ಇತಿ ಸಂಜ್ಞಿತಮ್ ।
ಭ್ರೂಣರಕ್ಷಕತತ್ತ್ವಂ ಯತ್ ಸ್ಥಿತಿತತ್ತ್ವಂ ವಿಜೃಂಭಿತಮ್ ॥ 17 ॥

(17) ಸ್ಥಿತಿತತ್ತ್ವಕ್ಕೆ ಅತ್ಯಂತ ಇಷ್ಟವಾದ ಈ ಭೂತತ್ತ್ವವನ್ನು, ಭೂತತ್ತ್ವದ ಪಿಂಡವನ್ನು (ವರಸ್ಯಾರ್ಥಂ) ರಕ್ಷಿಸಲಿಕ್ಕಾಗಿ ಮೇಲೆ ಬಿದ್ದು ಆಕ್ರಮಣ ಮಾಡುವ ತತ್ತ್ವವೇ ವರಾಹ. ಭ್ರೂಣರಕ್ಷಣಾತತ್ತ್ವವೇ ವರಾಹ. ಈ ವರಾಹವಾಗಿ, ಅರ್ಥಾತ್ ಆಕ್ರಮಣಗೈಯುವ ತತ್ತ್ವವಾಗಿ ಸ್ಥಿತಿತತ್ತ್ವವು ವಿಜೃಂಭಿಸುತ್ತದೆ. ಸ್ಥಿತಿತತ್ತ್ವವೆಂದರೆ ವಿಷ್ಣುವೆಂದೇ ಅರ್ಥ; ಏಕೆಂದರೆ ಈತ ಸ್ಥಿತಿಕಾರಕನಾಗಿ ತ್ರಿಮೂರ್ತಿಗಳಲ್ಲಿ ಒಬ್ಬ. ಇಲ್ಲಿ ವರಾಹ ಅನ್ನುವಲ್ಲಿ ಕೇವಲ ಅಕ್ಷರಸಾಮ್ಯವೇ ಹೊರತು ಹಂದಿ ಎಂದು ಭಾವಿಸಲಾಗದು.

ಧ್ವನಿಧಮನಿವರ್ಧನಂ ಭ್ರೂಣೇ ಪ್ರಹ್ಲಾದ ಇತಿ ಸಂಸ್ತುತಮ್ ।
ಓಂಕಾರಪುರುಷಾಕಾರೋ ದೇವರ್ಷಿರ್ನಾರದಃ ಖಲು ॥ 18 ॥

(18) ಭ್ರೂಣದಲ್ಲಿ ಧ್ವನಿಧಮನಿಗಳು ರೂಪುಗೊಳ್ಳುವಿಕೆಯೇ ಹಾಗೂ ಅವುಗಳ ವರ್ಧನೆಯೇ ಪ್ರಹ್ಲಾದನ ಹುಟ್ಟು–ಬೆಳವಣಿಗೆಗಳು. ಓಂಕಾರದ ಪುರುಷಾಕಾರವೇ ದೇವರ್ಷಿಯಾದ ನಾರದ.

ಓಂಕಾರವೇ ಧ್ವನಿಧಮನಿಗಳ ಮೂಲ ಹಾಗೂ ಎಲ್ಲ ಧ್ವನಿಗಳ ಮೂಲ. ಸದಾ ವೀಣೆಯನ್ನು ನುಡಿಸುತ್ತಿರುವ ನಾರದನು ಓಂಕಾರದ ಸಾಕಾರಸ್ವರೂಪ. ಅದಕ್ಕಾಗಿ ಹಿರಣ್ಯಕಶಿಪುವಿನ ಹೆಂಡತಿ ಕಯಾಧುವಿಗೆ ನಾರದನ ಉಪದೇಶ. ವಿಶೇಷ ಆಹ್ಲಾದಕಾರಕತತ್ತ್ವ ಪ್ರಹ್ಲಾದ. ನಾದತರಂಗವು ಪ್ರಾಣಿಗಳನ್ನು ಮಾತ್ರವಲ್ಲದೆ ಮರ–ಗಿಡಗಳನ್ನೂ ತನ್ನೆಡೆಗೆ ಆಕರ್ಷಿಸಿಕೊಳ್ಳುವ ಶಕ್ತಿಯುಳ್ಳದ್ದು. ನಾದದ ಮೂಲವು ಓಂಕಾರವೇ ಆದುದರಿಂದ ಇಲ್ಲಿ ನಾರದನನ್ನು ತಂದದ್ದು; ಓಂಕಾರವು ಪರಬ್ರಹ್ಮಕ್ಕೆ ಕೊಂಡೊಯ್ಯುವ ತತ್ತ್ವವಾದುದರಿಂದ ಪ್ರಹ್ಲಾದನು ನಾರಾಯಣನ ಸ್ಮರಣೆಯಲ್ಲಿರುವುದು.

ಹಿರಣ್ಯಕಶಿಪುಸ್ತತ್ರ ಜಡತ್ವಂ ಭ್ರೂಣಸಂಸ್ಥಿತಮ್ ।
ಜಡತ್ವಶಕ್ತಿಸ್ಸಾತ್ವತ್ರ ಕಯಾಧುರಿತಿ ಸಂಜ್ಞಿತಾ ॥ 19 ॥

(19) ಭ್ರೂಣದಲ್ಲಿರುವ ಜಡತ್ವವೇ ಹಿರಣ್ಯಕಶಿಪು. ಬಂಗಾರವು ಅತಿಬೆಲೆಯ ಧಾತುವಾದುದರಿಂದ ಅತಿ ಶ್ರೇಷ್ಠವಾದುದನ್ನು 'ಹಿರಣ್ಯ'ವೆಂದು ಇಲ್ಲಿ ಕರೆಯಲಾಯಿತು. ಅದನ್ನು ನಾಶ ಮಾಡುವ ತತ್ತ್ವ 'ಕಶಿಪು'. ಶ್ರೇಷ್ಠವಾದ ನಾದತತ್ತ್ವವನ್ನು ಹಿಂಸಿಸುವ ತಮಸ್ತತ್ತ್ವದ ಜಡತ್ವವು ನಾಶವಾದರೆ ಮಾತ್ರ ನಾದತತ್ತ್ವದ ಉಳಿಯುವಿಕೆ. ಜಡತ್ವದ ತಮಶ್ಶಕ್ತಿಯೇ ಇಲ್ಲಿ ಹಿರಣ್ಯಕಶಿಪುವಿನ ಹೆಂಡತಿ ಕಯಾಧು. ಇಲ್ಲಿ ನಾದವೆಂದರೆ ಧ್ವನಿ, ಶಬ್ದ, ಮಾತಿನ ಮೂಲ.

ನಾರಮಿತ್ಯಾರ್ದ್ರತಾ ತತ್ರ ಜಡತ್ವಂ ಚಾತ್ರ ರೋಧಕಮ್ ।
ನಾರಂ ಸಿಂಚತಿ ಯತ್ ತತ್ತ್ವಂ ನಾರಸಿಂಹೋ ಜಡತ್ವಹಾ ॥ 20 ॥

(20) ನಾರವೆಂದರೆ ನೀರು, ಅರ್ಥಾತ್ ಆರ್ದ್ರತೆ. ಅದನ್ನು ತಡೆಯುವ ತತ್ತ್ವ ಜಡತ್ವ. ಅಯನವೆಂದರೆ ಮಾರ್ಗ ಹಾಗೂ ಗಮನ. ಆರ್ದ್ರತೆಯನ್ನು ಉಂಟುಮಾಡುವ ತತ್ತ್ವವೇ ಇಲ್ಲಿ ನಾರಾಯಣ. ಆರ್ದ್ರತೆಯೇ ನಾಶವಾದರೆ ನಾದತತ್ತ್ವದ ಅಳಿವು ನಿಶ್ಚಿತ. ಈ ಆರ್ದ್ರತತ್ತ್ವದ ನಾಶಕನ ವಿನಾಶಕ್ಕಾಗಿ ಜಲತತ್ತ್ವವನ್ನುಂಟುಮಾಡುವ ತತ್ತ್ವವೇ ನಾರಾಯಣನ ನಾರಸಿಂಹಾವತಾರ. 'ನಾರಂ' ಅಂದರೆ ಆರ್ದ್ರತೆಯನ್ನು 'ಸಿಂಚತಿ ಇತಿ ಸಿಂಹಃ' ಸಿಂಪಡಿಸುವ, ಉಂಟುಮಾಡುವ ತತ್ತ್ವವೇ ನಾರಸಿಂಹ; ಆರ್ದ್ರತೆಯನ್ನು ಬತ್ತಿಸುವ ಜಡತ್ವದ ನಾಶಕವೇ ನಾರಸಿಂಹತತ್ತ್ವ. ಈ ನಾರಸಿಂಹತತ್ತ್ವವನ್ನು ನರಸಿಂಹನೆಂದು ಕರೆದು ಪುರಾಣಗಳು ಮಾನವದೇಹಕ್ಕೆ ಸಿಂಹದ ತಲೆಯನ್ನು ಜೋಡಿಸಿ ನರಸಿಂಹನನ್ನಾಗಿ ರೂಪಿಸಿದವು.

ಸ್ಥಂಭೇನ ಭಾವ್ಯತೇ ನಾಡೀ ಚಾರ್ದ್ರತಾಸಹಿತಾ ನನು ।
ತತ್ರಾಪಿ ಸ್ಥಿತಿತತ್ತ್ವಸ್ಯ ಮಹಾವಿಷ್ಣೋರುಪಸ್ಥಿತಿಃ ॥ 21 ॥

(21) ಇಲ್ಲಿ ಸ್ತಂಭವು ಆರ್ದ್ರತಾಸಹಿತ ಸ್ಥಿತಿಯಲ್ಲಿರುವ ನಾಡಿಯನ್ನು ಅರ್ಥೈಸುತ್ತದೆ. ಅದರಲ್ಲಿಯೂ ಕೂಡ ಸ್ಥಿತಿತತ್ತ್ವದ ಅಧಿದೇವ ವಿಷ್ಣುವೂ ಆಗಿರುವ ಪರಮಾತ್ಮನ ಉಪಸ್ಥಿತಿ. ಇಲ್ಲಿ ಬರುವ ಮಹಾವಿಷ್ಣುವು ಸ್ಥಿತಿತತ್ತ್ವಾಧಿಪ ವಿಷ್ಣುವನ್ನೂ ಅರ್ಥೈಸುತ್ತ ಏಕಕಾಲದಲ್ಲಿ ಪರಮಾತ್ಮನನ್ನೂ ಅರ್ಥೈಸುವವನು. ಪ್ರತಿಯೊಂದು ವಸ್ತುವಿನಲ್ಲಿಯೂ ಅಣುರೂಪದಲ್ಲಿ ಪರಮಾತ್ಮನಿರುವನು ಅನ್ನುವ ತತ್ತ್ವಾರ್ಥವೂ ಇಲ್ಲಿದೆ.

ಇಂದ್ರಸೇನೋ ಬಲೀಂದ್ರಸ್ತು ಮಾಲಿನ್ಯಂ ನಾಡಿಸಂಸ್ಥಿತಮ್ ।
ತದುತ್ಪಾಟನಕಾರ್ಯಜ್ಞಸ್ಥಿತಿತತ್ತ್ವಂ ಸ ವಾಮನಃ ॥ 22 ॥

ಶಿರಃ ಕಂಠಾದಧೋಭಾಗಃ ಕಟ್ಯಧೋಭಾಗ ಏವ ಚ ।
ಆಕಾಶಪೃಥ್ವಿಪಾತಾಲಲೋಕಾಸ್ತೇ ಕ್ರಮಶಃ ಖಲು ॥ 23 ॥

(22 ಮತ್ತು 23) ಅಸುರರಾಜ ಇಂದ್ರಸೇನನನ್ನು ಬಲೀಂದ್ರ ಎಂದೂ ಕರೆಯಲಾಗುವುದು. ನರ–ನಾಡಿಗಳಲ್ಲಿ ಸಂಚಿತಗೊಳ್ಳುವ ಮಾಲಿನ್ಯವೇ ಇಂದ್ರಸೇನ. ಇಂದ್ರಿಯದ ಕೆಲಸವು ಸರಾಗವಾಗಿ ನಡೆಯುವುದೇ ಇಂದ್ರಾದಿ ದೇವತೆಗಳ ಪೋಷಣಾತ್ಮಕ ಕಾರ್ಯ. ಆ ಕಾರ್ಯವನ್ನು ಜಯಿಸುವ ಅರ್ಥಾತ್, ಆ ಕಾರ್ಯಕ್ಕೆ ತಡೆಯನ್ನುಂಟುಮಾಡುವ ಶಬ್ದ 'ಸೇನಾ'. ಆ ಮಾಲಿನ್ಯವನ್ನು ತೊಡೆದುಹಾಕುವ ಸ್ಥಿತಿತತ್ತ್ವವನ್ನು ಇಲ್ಲಿ ವಾಮನನೆಂದು ಕರೆಯಲಾಯಿತು.

ಕ್ರಮವಾಗಿ ಇಲ್ಲಿ ದೇಹದ ಶಿರೋಭಾಗವು ಆಕಾಶವೆನಿಸಿದರೆ ಕುತ್ತಿಗೆಯಿಂದ ಕೆಳಗೆ ಸೊಂಟದ ಭಾಗವು ಭೂಲೋಕವೆನಿಸಿತು ಹಾಗೂ ಸೊಂಟದಿಂದ ಕೆಳಗಿನ ಭಾಗವು ಪಾತಾಲವೆನಿಸಿತು.

ಪ್ರಹ್ಲಾದನ ಮೊಮ್ಮಗ ಇಂದ್ರಸೇನ. ತನ್ನ ಬಲದಿಂದ ಇಂದ್ರನನ್ನೂ ಗೆದ್ದದ್ದರಿಂದ ಆತ ಬಲೀಂದ್ರ. ಇಲ್ಲಿ ಇಂದ್ರನೆಂದರೆ ಇಂದ್ರಿಯಗಳೆಂದು ಅರ್ಥ. ನಾಲಿಗೆ, ಚರ್ಮ ಮುಂತಾದ ಇಂದ್ರಿಯಗಳೆಲ್ಲ ತಾನು ಬಯಸಿದ್ದನ್ನೇ ಅಪೇಕ್ಷಿಸುವಂತೆ ಅವುಗಳ ಮೇಲೆ ಹಿಡಿತವಿಟ್ಟುಕೊಂಡ ಅಸುರ ಬಲೀಂದ್ರ. ಅಸುರನಾದರೂ ಪ್ರಹ್ಲಾದನ ಮೊಮ್ಮಗನಾದುದರಿಂದ ಈತನಲ್ಲಿ ಸತ್ವಗುಣವಿದೆ; ಅಸುರತ್ವದಿಂದಾಗಿ ಆ ಸತ್ವವು ತಮೋಯುಕ್ತವಾಗಿ ಮಲಿನವಾಗಿದೆ. ನಾಡಿಗಳಲ್ಲಿ ಆರ್ದ್ರತೆಯಿದ್ದರೂ ಗರ್ಭಧೃತಮಾತೆಯ ಆಹಾರದ ವ್ಯತ್ಯಾಸದಿಂದಾಗಿ ಆ ಆರ್ದ್ರತೆಯು ಮಲಿನಗೊಂಡು ರಕ್ತಸಂಚಾರಕ್ಕೆ ಅಡಚಣೆಯನ್ನುಂಟುಮಾಡುವುದು. 'ವಮ್' ಧಾತುಸಾಧಿತ ನಾಮಪದವಾದ 'ವಾಮನ' ಶಬ್ದವು ಆ ಮಾಲಿನ್ಯವನ್ನು ಹೊರಹಾಕುವುದನ್ನು ಅರ್ಥೈಸುತ್ತದೆ. ಇದು ಸ್ಥಿತಿತತ್ತ್ವದ ವಿಷ್ಣುವಿನದೇ ಕಾರ್ಯವಾದುದರಿಂದ ಈ ತತ್ತ್ವವನ್ನು ವಿಷ್ಣುವಿನ ವಾಮನಾವತಾರ

ಎಂದು ಕರೆಯಲಾಯಿತು. ಕುಬ್ಜಾರ್ಥದಲ್ಲಿಯೂ 'ವಾಮನ' ಶಬ್ದವಿರುವುದರಿಂದಾಗಿ ಇಲ್ಲಿ ವಾಮನನನ್ನು ಚಿಕ್ಕ ಬ್ರಹ್ಮಚಾರಿಯನ್ನಾಗಿ ರೂಪಿಸಲಾಯಿತು. ದೇಹದ ಎಲ್ಲ ಭಾಗಗಳಿಗೂ ಆರ್ದ್ರತಾರೂಪದ ಚೈತನ್ಯವು ವ್ಯಾಪಿಸುವಂತಾದುದರಿಂದ ವಾಮನನು ತನ್ನ ಪಾದದ ಮೂರು ಅಳತೆಗಳಿಂದ ಆಕಾಶ–ಪೃಥ್ವಿ–ಪಾತಾಳಗಳನ್ನು ಅಳೆದನೆಂದು ವರ್ಣಿಸಲಾಯಿತು.

ಕೃತಕರ್ಮಪರಿಣಾಮಾಃ ಕಾರಣಾ ಯೋನಿನಿಶ್ಚಯೇ ।
ಪ್ರತ್ಯಂಗಸೌಷ್ಟವೇ ಚಾತ್ರ ಪೂರ್ಣಃ ಕೃತಯುಗೋ ನನು ॥ 24 ॥

(24) ಪೂರ್ವಜನ್ಮದಲ್ಲಿ ನಡೆಸಿದ ಕರ್ಮಗಳ ಪರಿಣಾಮಗಳೇನಿವೆಯೋ ಅವೇ ಜೀವಾತ್ಮವು ಯಾವ ಪ್ರಾಣಿಯೋನಿಯಲ್ಲಿ ಜನಿಸಬೇಕೆನ್ನುವುದನ್ನು ನಿರ್ಧರಿಸುತ್ತವೆ. (ಉತ್ತಮಕಾರ್ಯಗಳನ್ನು ಆಚರಿಸಿದಲ್ಲಿ ಮನುಷ್ಯಯೋನಿಯಲ್ಲಿ ಆ ಜೀವಾತ್ಮವನ್ನು ಪ್ರಕೃತಿಯು ಹುಟ್ಟಿಸುತ್ತದೆ.) ಗರ್ಭಗತ ಭ್ರೂಣದ ಪ್ರತಿಯೊಂದು ಅಂಗದ ಸೌಷ್ಟವದೊಂದಿಗೆ ಕೃತಯುಗವು ಇಲ್ಲಿಗೆ ಮುಗಿಯುತ್ತದೆ. ಕೃತಯುಗವೆಂದರೆ ಹಿಂದೆ ನಡೆಸಿದ್ದ (ಕೃತ) ಕರ್ಮಗಳ ಪರಿಣಾಮಗಳನ್ನು ಗರ್ಭಗತಭ್ರೂಣದ ಮಸ್ತಿಷ್ಕಕ್ಕೆ ಜೋಡಿಸುವ ಪ್ರಕೃತಿಯ ಕಾರ್ಯ. ಪುಣ್ಯಕರ್ಮಫಲಗಳಿದ್ದಲ್ಲಿ ಮನುಷ್ಯನಾಗಿ ಎಲ್ಲ ಅವಯವಗಳ ಪೂರ್ಣತೆಯೊಂದಿಗೆ ಆ ಜೀವಾತ್ಮವು ಜನಿಸುವುದು. ಎಲ್ಲೆಲ್ಲಿ ಪಾಪಕಾರ್ಯಾಚರಣೆಯಾಗಿದೆಯೋ ಅಲ್ಲಲ್ಲಿ, ಅಂದರೆ ಆ ಆ ಅಂಗಕ್ಕೆ ಹಾನಿಯಾಗುವುದು; ಅಂದರೆ ವಿಕಲಾಂಗತೆಯುಂಟಾಗುವುದು. ಯಾವುದೇ ಹೀನಕಾರ್ಯವೆಸಗಿರಲಿ ಅದರ ಪರಿಣಾಮವನ್ನು ಅದೇ ಜೀವಾತ್ಮವೇ ಮುಂದಿನ ಜನ್ಮಗಳಲ್ಲಿ ಅನುಭವಿಸುವುದು.

ಭೃಗುರಾಮಪ್ರಸಂಗಾದ್ಧಿ ಮಸ್ತಿಷ್ಕೇ ಗರ್ಭಸಂಸ್ಥಿತೇ ।
ಸತ್ವಂ ರಜಸ್ತಮಶ್ಚೇತಿ ಗುಣತ್ರಯಸುಯೋಜನಮ್ ॥ 25 ॥

ಪ್ರಕೃತ್ಯಾ ಕ್ರಿಯತೇ ನೂನಮತ್ರ ತ್ರೇತಾಯುಗಸ್ಯ ಚ ।
ಪ್ರಾರಂಭಃ ಖಲು ಮುಕ್ತಾಯೋ ರಾಮಾಯಣಪ್ರಸಂಗತಃ ॥ 26 ॥

(25, 26) ಪರಶುರಾಮನ ಪ್ರಸಂಗದಿಂದಾರಂಭಿಸಿ ಗರ್ಭಗತ ಭ್ರೂಣದಲ್ಲಿ ಸಿದ್ಧಗೊಂಡ ಮಿದುಳಿಗೆ (ಮಸ್ತಿಷ್ಕಕ್ಕೆ) ಸತ್ವ–ರಜ–ತಮೋಗುಣಗಳನ್ನು ಸೇರಿಸುವ ಕ್ರಿಯೆಯು ಪ್ರಕೃತಿಯಿಂದ ನಡೆಯುತ್ತದೆ. ಇಲ್ಲಿಂದ ನಿಜವಾಗಿ ತ್ರೇತಾಯುಗದ ಆರಂಭವು. ಈ ತ್ರೇತಾಯುಗವು ರಾಮಾಯಣದೊಂದಿಗೆ ಪೂರ್ಣಗೊಳ್ಳುವುದು. ಜೀವಾತ್ಮವು ನೆಲೆಸಿದ ವರ್ಧನಾತತ್ಪರದೇಹದಲ್ಲಿಯ ಭ್ರೂಣಗತ ಮಸ್ತಿಷ್ಕದಲ್ಲಿ ಈ ಮೂರು ಗುಣಗಳಲ್ಲಿ

ಆ ಜೀವಾತ್ಮದ ಪೂರ್ವಜನ್ಮಗಳ ನಡವಳಿಕೆಗಳನ್ನಾಧರಿಸಿ ಯಾವ ಗುಣವನ್ನು ಪ್ರಧಾನಗೊಳಿಸಬೇಕು ಅನ್ನುವುದನ್ನು ಪ್ರಕೃತಿಯು ನಿಶ್ಚಯಿಸುತ್ತದೆ ಹಾಗೂ ಅಳವಡಿಸುತ್ತದೆ. ಆ ಪ್ರಕೃತಿಯೇ ಮೂಲತಃ ಬ್ರಹ್ಮಶಕ್ತಿ, ಪರಾಶಕ್ತಿ. ರಾಮ ಎಂಬ ಶಬ್ದದೊಂದಿಗೆ ಬರುವ ಈ ಎರಡೂ ಅವತಾರಗಳಲ್ಲಿ ಈ ಗುಣಗಳದೇ ಸಾಮ್ರಾಜ್ಯವು ಕಂಡುಬರುವುದರಿಂದ ಇಲ್ಲಿ ತ್ರೇತಾಯುಗ, ಅರ್ಥಾತ್ ಮೂರರ ಯುಗ, ಮೂರುಗುಣಗಳ ಯುಗ.

ಪಂಚಭೂತೇಷು ಚಾಗ್ನಿರ್ಯಃ ಸ ಭೃಗುರ್ನಾತ್ರ ಸಂಶಯಃ ।
ತತ್ಕುಲೇ ಜಮದಗ್ನಿಸ್ತು ನನು ಜೀವಾಣುಸೂಚಕಃ ॥ 27 ॥

ಅಸ್ಯ ವ್ಯಾಪನಶಕ್ತಿರ್ಹಿ ರೇಣುಕಾ ಸಾ ಪತಿವ್ರತಾ।
ರಾಮಃ ಪರಶುಧಾರೀಚ ಪುತ್ರೋ ದೀಪ್ತಾಗ್ನಿರೇವ ಸಃ ॥ 28 ॥

ರಜೋಗುಣವಿಶೇಷಸ್ತು ಕ್ಷತ್ರಿಯಸ್ಸೋತಿರೇಕತಃ ।
ವಿಜೃಂಭತಿ ಯದಾ ತತ್ರ ಭ್ರೂಣೇ ಪೀಡಾ ತು ನಿಶ್ಚಿತಾ ॥ 29 ॥

ವಿಷ್ಣುಸ್ಸೋಗ್ನಿಸ್ವರೂಪೋಽಸ್ತಿ ತಥಾ ಚ ಭಾರ್ಗವಃ ಖಲು ।
ನಿಗ್ರಹೀತಂ ಮದೋನ್ಮತ್ತರಜಸ್ತು ತೇನ ಪೂರ್ಣತಃ ॥ 30 ॥

(27,28,29,30) ಪಂಚಭೂತಗಳಲ್ಲಿ ಬರುವ ಅಗ್ನಿತತ್ತ್ವವೇ ಭೃಗುಮಹರ್ಷಿ ಅನ್ನುವುದರಲ್ಲಿ ಸಂಶಯವು ಬೇಡವೇ ಬೇಡ. ಭೃಗುಕುಲದಲ್ಲಿಯ ಜಮದಗ್ನಿಯು ಜೀವಾಣುವನ್ನು ಸೂಚಿಸುವನು ಹಾಗೂ ಆ ಜೀವಾಣುವಿನ ವ್ಯಾಪನಶಕ್ತಿಯೇ ಮಹಾಪತಿವ್ರತೆಯಾದ ರೇಣುಕಾ. ಇವರ ಮಗ ಪರಶುರಾಮನು ಪ್ರದೀಪ್ತ ಅಗ್ನಿತತ್ತ್ವವೇ ಆಗಿರುವನು, ಅರ್ಥಾತ್ ಉಷ್ಣತೆಯೇ ಆಗಿರುವನು.

ರಜೋಗುಣದ ಅತಿರೇಕತೆಯೇ ಸೊಕ್ಕಿದ ಕ್ಷತ್ರಿಯರು. ಮತ್ತೆ ಮತ್ತೆ ರಜೋಗುಣವು ವಿಜೃಂಭಿಸಿದಾಗ ಭ್ರೂಣಕ್ಕೆ ಪೀಡೆ ನಿಶ್ಚಿತ. ಮಹಾವಿಷ್ಣುವೇ ಇಲ್ಲಿ ಅಗ್ನಿಸ್ವರೂಪದ ಭಾರ್ಗವ. ಅವನಿಂದ ಮದೋನ್ಮತ್ತ ರಜಸ್ಸು ಪೂರ್ತಿಯಾಗಿ ನಿಗ್ರಹಗೊಂಡಿತು.

ಪ್ರಕಾಶಿಸು ಅನ್ನುವ ಅರ್ಥವನ್ನು ಕೊಡುವ 'ಭ್ರಾಜ್' ಧಾತುಸಾಧಿತ ನಾಮಪದ ಭೃಗು. ಬ್ರಹ್ಮನ ಹೃದಯದಿಂದ ಭೃಗುವಿನ ಜನನ. ಪರಬ್ರಹ್ಮನ ಹೃದಯವೆಂದರೆ ಆಧ್ಯಾತ್ಮಿಕವಾದ ಅನಾಹತಚಕ್ರ. ಯೋಗಿಯು ಅನಾಹತಚಕ್ರಕ್ಕೆ ತನ್ನ ಚೈತನ್ಯವೇ ಆದ ಕುಂಡಲಿನಿಯನ್ನು ಕೊಂಡೊಯ್ದಾಗ ಹುಬ್ಬುಗಳ ಮಧ್ಯದಲ್ಲಿ ಆಂತರಂಗಿಕ ಚಕ್ಷುವಿಗೆ ಗೋಚರವಾಗುವ ತೇಜಸ್ಸೇ ಇಲ್ಲಿಯ ಭೃಗು. ತೇಜಸ್ಸು ಅಗ್ನಿತತ್ತ್ವಾತ್ಮಕವಾದುದರಿಂದ

ಭೃಗು ಅಂದರೆ ಪಂಚಭೂತಗಳಲ್ಲಿ ಒಂದಾದ ಅಗ್ನಿ. ಭೃಗುವಿನ ಮಗ ಋಚೀಕಮಹರ್ಷಿ. ತೇಜಸ್ಸು ಋಕ್ ಸ್ವರೂಪವನ್ನು, ಅಂದರೆ ಮಂತ್ರಸ್ವರೂಪವನ್ನು ಪಡೆಯುವುದೇ ಋಚೀಕ. ಮಂತ್ರದೊಂದಿಗೆ ಆಹುತಿಯನ್ನು ಸ್ವೀಕರಿಸುವ ಪ್ರಜ್ವಲಿತಾಗ್ನಿಯೇ ಜಮದಗ್ನಿ. ಈ ಪ್ರಜ್ವಲಿತ ಸ್ಥಿತಿಯಿಂದಾಗಿ ಜಮದಗ್ನಿಯನ್ನು ಕಡುಕೋಪಿಷ್ಠನೆಂದು ರೂಪಿಸಲಾಯಿತು. ಶಕ್ತಿಯನ್ನು ಪತ್ನಿಯನ್ನಾಗಿ ಭಾವಿಸಿ ಚಿತ್ರಿಸುವುದು ವೇದ–ಪುರಾಣಗಳ ಪದ್ಧತಿ. ಅದಕ್ಕನುಗುಣವಾಗಿ ಕಿಡಿಗಳನ್ನು ಹೊರಸೂಸುವ ಪ್ರಜ್ವಲಿತಾಗ್ನಿಯ ಶಕ್ತಿ ಇಲ್ಲಿ ಜಮದಗ್ನಿಯ ಪತ್ನಿ ರೇಣುಕಾ. ಈ ಅಗ್ನಿತತ್ತ್ವದ ಮುಂದುವರಿಕೆಯೇ ಭಾರ್ಗವರಾಮ. ಗರ್ಭಗತ ಭ್ರೂಣಪೀಡಕ ರಜೋಗುಣಾಧಿಕ್ಯವನ್ನು ನಿಗ್ರಹಿಸುವ ಅಗ್ನಿತತ್ತ್ವ ಪರಶುರಾಮ. ರಜೋಗುಣವನ್ನು ಕ್ಷತ್ರಿಯರೆಂದು ರೂಪಿಸಲಾಗುವುದು. ಮತ್ತರಜೋಗುಣವೇ ದುಷ್ಟಕ್ಷತ್ರಿಯ ಸಮೂಹ. 'ಪರಾನ್ ಶೃಣಾತಿ ಇತಿ ಪರಶುಃ' – ವೈರಿಗಳನ್ನು ಸೀಳುವ ತತ್ತ್ವ ಪರಶು. ದುಷ್ಟಕ್ಷತ್ರಿಯರೂಪದ ರಜೋಗುಣವನ್ನು ಸೀಳುವ ಅಗ್ನಿತತ್ತ್ವದ ಶಕ್ತಿಯೇ ಪರಶು. ಸ್ಥಿತಿತತ್ತ್ವದ ಮಹಾವಿಷ್ಣುವಿನ ಮತ್ತೊಂದು ರೂಪವೇ ಅಗ್ನಿ. ಆ ಅಗ್ನಿಯೇ ಇಲ್ಲಿ ಭಾರ್ಗವರಾಮ. 'ರಾಮ' ಶಬ್ದದಲ್ಲಿಯ 'ರ್' ಅಂದರೆ ಅಗ್ನಿಯೆಂದೇ ಅರ್ಥ. 'ಆ' ಅಂದರೆ ನಿರಂತರತೆ. 'ಮ'ಕಾರವು ಸೃಷ್ಟಿತತ್ತ್ವದ ಬ್ರಹ್ಮನನ್ನು ಸೂಚಿಸುವುದು. (ಓಂಕಾರದಲ್ಲಿಯ ಅ, ಉ, ಮ್‌ಗಳು ವಿಷ್ಣು, ಶಿವ, ಬ್ರಹ್ಮರನ್ನು ಸೂಚಿಸುವುದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು). ಸೃಷ್ಟಿತತ್ತ್ವಕ್ಕೆ ಒಳಪಡುವ ನಿರಂತರಾಗ್ನಿತತ್ತ್ವವೇ ಜೀವಾತ್ಮ. ಆದುದರಿಂದ ರಾಮ ಅಂದರೆ ಜೀವಾತ್ಮ ಅಥವಾ ಚೇತನ.

ಭಾರ್ಗವಸ್ಸ ಚ ದೀಪ್ತಾಗ್ನಿಃ ರಾಮೇ ರಘುಕುಲೋತ್ತಮೇ ।
ಸಮಾವೇಶಿತಮಾತ್ಮಾನಂ ಕೃತ್ವಾ ತತೋ ವಿನಿರ್ಗತಃ ॥ 31 ॥

(31) ಭಾರ್ಗವನೆಂಬ ದೀಪ್ತಾಗ್ನಿಯು ರಘುಕುಲೋತ್ತಮನಾದ ರಾಮನಲ್ಲಿ ಸಮಾವೇಶಿತಗೊಳ್ಳುವುದೇ ರಾಮನಿಗೆ ತನ್ನ ಶಕ್ತಿಯನ್ನೆಲ್ಲ , ಅರ್ಥಾತ್ ತೇಜಸ್ಸನ್ನು ಸಮರ್ಪಿಸಿ ಪರಶುರಾಮನು ನಿಸ್ತೇಜನಾಗುವುದಾಗಿದೆ, ಹೊರಟುಹೋಗುವುದಾಗಿದೆ.

ಈ ದೀಪ್ತಾಗ್ನಿಯೆಂಬ ಚೇತನದ, ಅಂದರೆ ಜೀವಾತ್ಮದ ಮುಂದುವರಿದ ಭಾಗವೇ ರಾಮ ಹಾಗೂ ಆತನ ಚರಿತ್ರೆ. ಚೇತನದ ಮುಂದಿನ ಬೆಳವಣಿಗೆಯೇ, ಅರ್ಥಾತ್ ಗರ್ಭಗತ ಶಿಶುವಿನ ಮುಂದಿನ ಮಾನಸಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯೇ ರಾಮಾಯಣ.

ಸರ್ವಯೋನಿಸಮಾನಂ ಚರಿತ್ರಂ ಷಡವತಾರಕಮ್ ।
ಸರಾಮಚರಿತಾಜ್ಞೇಯಂ ಮಾತ್ರಂ ಮನುಕುಲಾತ್ಮಕಮ್ ॥ 32 ॥

(32) ಇಲ್ಲಿಯವರೆಗಿನ ಆರೂ ಅವತಾರಗಳು ಜಗತ್ತಿನ ಸಮಸ್ತ ಪ್ರಾಣಿಗಳ ಜನ್ಮದ ಚರಿತ್ರೆಯಾಗಿದೆ. ರಾಮನ ಅವತಾರದಿಂದ ಮೊದಲುಗೊಂಡು ಮುಂದಿನವು ಕೇವಲ ಮನುಕುಲಕ್ಕೆ, ಅರ್ಥಾತ್ ಮಾನವಜನ್ಮದಲ್ಲಿ ಬರುವ ಜೀವಾತ್ಮಗಳಿಗೆ ಮಾತ್ರ ಸಂಬಂಧಿಸಿದವು.

ಮನುಷ್ಯಮಾತ್ರಸಂಸಾಧ್ಯಾ ಪರಮಾತ್ಮವಿಲೀನತಾ ।
ತತೋಽತ್ರ ರಾವಣೋ ಹನ್ಯೋ ಮನುಕುಲೋದ್ಭವತೋ ನನು॥ 33 ॥

(33) ಮಾನವಯೋನಿಯಲ್ಲಿ ಜನಿಸಿದ ಜೀವಾತ್ಮಗಳಿಗೆ ಮಾತ್ರ, ಅಂದರೆ ಮನುಷ್ಯಪ್ರಾಣಿಗೆ ಮಾತ್ರ ಪರಮಾತ್ಮವಿಲೀನತೆ, ಅರ್ಥಾತ್, ಮೋಕ್ಷವು ಸಾಧ್ಯವಾಗುವುದು. ಅದಕ್ಕಾಗಿಯೇ ರಾವಣನಿಗೆ ಕೇವಲ ಮನುಷ್ಯಪ್ರಾಣಿಯಿಂದ ಮಾತ್ರ ಸಾವು ಎಂದು ಕಥೆಯಲ್ಲಿ ತರಲಾಯಿತು.

ಅಷ್ಟಾಂಗಯೋಗಸಾಮರ್ಥ್ಯಂ ಮಾನವಮಾತ್ರಸೀಮಿತಮ್ ।
ವರದಾನಪ್ರಸಂಗೇ ತದನುಕೂಲಂ ಸುಯೋಜಿತಮ್ ॥ 34 ॥

(34) ಅಷ್ಟಾಂಗಯೋಗದ ಸಾಧನೆಯು ಮನುಷ್ಯನಿಗೆ ಮಾತ್ರ ಸಾಧ್ಯವಾಗುವಂತಹುದು. ವರದಾನದ ಸಂದರ್ಭದಲ್ಲಿ ಇದಕ್ಕನುಗುಣವಾಗಿಯೇ ರಾಮಾಯಣದಲ್ಲಿ ಸಂದರ್ಭವನ್ನು ಯೋಜಿಸಲಾಗಿದೆ.

ಯೋಚನೆ ಮಾಡಿ ಸರಿ–ತಪ್ಪುಗಳನ್ನು ತಿದ್ದಿಕೊಳ್ಳುವ ಸಾಮರ್ಥ್ಯವು ಮನನಕ್ರಿಯಾಶಕ್ತಿಸಂಪನ್ನನಾದ ಮಾನವನಲ್ಲಿ ಮಾತ್ರ ಇರುವಂಥಾದ್ದು ಒಂದೆಡೆಯಾದರೆ ಮತ್ತೊಂದೆಡೆ ಮಾನವನಲ್ಲಿ ಮಾತ್ರ ಅಂಗಾಂಗವಿಶೇಷತೆ ಹಾಗೂ ಬುದ್ಧಿಮತ್ತೆಯು ಯಮ–ನಿಯಮ–ಪ್ರಾಣಾಯಾಮಾದಿ ಸಮಾಧಿಪರ್ಯಂತ ಅಷ್ಟಾಂಗಯೋಗಕ್ಕೆ ಅನುಕೂಲಕರವಾಗಿವೆ. ರಾವಣನು ಯಾರಿಂದಲೂ ಸಾವು ಬರದಂತೆ ಬ್ರಹ್ಮನಲ್ಲಿ ವರವನ್ನು ಯಾಚಿಸಿದಾಗ ಬ್ರಹ್ಮನು ಅದು ಸಾಧ್ಯವಿಲ್ಲವೆಂದು ನಿರಾಕರಿಸಿ ಸಾವು ಯಾರಿಂದ ಬರಬಹುದೆಂಬ ಆಯ್ಕೆಯ ಅನುಕೂಲವನ್ನು ರಾವಣನಿಗೆ ನೀಡಿದ್ದು. ಆಗ ಮನುಷ್ಯಮಾತ್ರನಿಂದ ರಾಕ್ಷಸನಾದ ತನ್ನನ್ನು ಕೊಲ್ಲಲು ಸಾಧ್ಯವಿಲ್ಲವೆಂದು ಭಾವಿಸಿ ರಾವಣನು ಸಾವು ಬರುವುದಾದರೆ ಮನುಷ್ಯನಿಂದ ಬರಬಹುದು ಎಂಬ ವರವನ್ನು ಕೇಳಿದ್ದು.

ಸರ್ವೇಷು ಸರ್ವಥಾ ಯತ್ತನ್ಮತ್ತರಜೋ ವಿಜೃಂಭತೇ ।
ಅಹಂಕರ್ತೃತ್ವಯೋಜಕಂ ಸ್ವಾರ್ಥಭಾವಸ್ಸ ರಾವಣಃ ॥ 35 ॥

(35) ಎಲ್ಲರಲ್ಲಿಯೂ ನಾನೇ ಎಲ್ಲವನ್ನೂ ಮಾಡುವವನು ಎಂಬ ಅಹಂಕರ್ತೃತ್ವವನ್ನುಂಟುಮಾಡುವ ಮತ್ತರಜಸ್ತತ್ತ್ವವು ವಿಜೃಂಭಿಸುತ್ತ ಇರುತ್ತದೆ. ಆ ರಜೋಗುಣಭೂಯಿಷ್ಟ ಸ್ವಾರ್ಥಭಾವವೇ ರಾವಣನು.

ಚೇತನಪ್ರಮುಖಾಂಶೋ ಯದ್ಬುದ್ಧಿತತ್ತ್ವಂ ಸದಾನಘಮ್ ।
ರಾಮೋ ತಚ್ಛಕ್ತಿರತ್ರಾಸೌ ಸೀತಾಕುಂಡಲಿನೀ ಚ ಸಾ ॥ 36 ॥

(36) ಸದಾಕಾಲ ಅನಘ, ಅರ್ಥಾತ್ ಪಾಪರಹಿತವಾಗಿರುವ ಬುದ್ಧಿತತ್ತ್ವವೇ ರಾಮ; ಈ ಬುದ್ಧಿತತ್ತ್ವವು ಚೇತನದ, ಅಂದರೆ ಜೀವಾತ್ಮದ ಪ್ರಮುಖಾಂಶವಾಗಿದೆ. ಈ ಬುದ್ಧಿತತ್ತ್ವದ ಶಕ್ತಿಯೇ ಸೀತೆ ಹಾಗೂ ಈ ಸೀತೆಯೇ ಕುಂಡಲಿನೀ ಶಕ್ತಿ. 'ಸ'ಕಾರವು ಶ್ವಾಸೋಚ್ಛ್ವಾಸವನ್ನು ಸೂಚಿಸುವುದು. ಇದು ಜೀವಾತ್ಮದ ಜೊತೆಗೆ ನಿರಂತರವಾಗಿ ಇರುವುದು ಮಾತ್ರವಲ್ಲ ಜೀವಾತ್ಮದ ಶಕ್ತಿಯೇ ಆಗಿದೆ. ಯಾರೇ ಆಗಲಿ ಹೆಚ್ಚಿನ ಶಕ್ತಿ ಬೇಕಾದಾಗ ದೀರ್ಘಶ್ವಾಸವನ್ನು ತೆಗೆದುಕೊಳ್ಳುವುದನ್ನು ನಿತ್ಯ ನೋಡಲಾಗುತ್ತದೆ. ಸೀತಾ ಶಬ್ದದಲ್ಲಿಯ 'ತ'ಕಾರವು ತಾರಣಾರ್ಥದಲ್ಲಿ ಬರುತ್ತದೆ. ಜೀವಿಯನ್ನು ಮರಣದಿಂದ ರಕ್ಷಿಸುವುದೇ ಶ್ವಾಸ. ಈ ಅರ್ಥದಲ್ಲಿ ಸೀತೆಯು ರಾಮನ ಶಕ್ತಿ ಅರ್ಥಾತ್, ಪತ್ನಿ. ಈ ಸೀತಾ ಅನ್ನುವ ಶಕ್ತಿಯೇ ಪ್ರತಿ ಜೀವಿಯ ಆಧ್ಯಾತ್ಮಿಕನಾಡಿಯಾದ ಸುಷುಮ್ನೆಯ ಬುಡದಲ್ಲಿರುವ ಕುಂಡಲಿನೀಶಕ್ತಿ.

ಜೀವಾತ್ಮಾ ಚೇತನಂ ತದ್ಧಿ ಪಾಯಸಂ ದತ್ತಮಗ್ನಿನಾ ।
ದಶರಥಾಯ ಯೋ ನೂನಂ ದಶೇಂದ್ರಿಯಸಮುಚ್ಚಯಃ ॥ 37 ॥

(37) ರಾಮ ಅಂದರೆ ಜೀವಾತ್ಮ ಅನ್ನುವುದನ್ನು ಪರಶುರಾಮನನ್ನು ಕುರಿತು ವಿವರಿಸುವಾಗ ಹೇಳಿದ್ದನ್ನು ಇಲ್ಲಿ ಮನಸ್ಸಿಗೆ ತಂದುಕೊಳ್ಳಬೇಕು. ಜೀವಾತ್ಮವೇ ಚೇತನ ಹಾಗೂ ಚೇತನವೇ ಯಜ್ಞಾಗ್ನಿಯು ದಶರಥನಿಗೆ ಕೊಟ್ಟ ಪಾಯಸ. ದಶರಥನೆಂದರೆ ದಶೇಂದ್ರಿಯಸಮುಚ್ಚಯ. ವಾಕ್(ನಾಲಿಗೆ)–ಪಾಣಿ–ಪಾದ–ಪಾಯು (ಗುದ)□ಉಪಸ್ಥಾನ (ಜನನೇಂದ್ರಿಯ)ಗಳು, ಪಂಚಕರ್ಮೇಂದ್ರಿಯಗಳು ಹಾಗೂ ತ್ವಕ್ (ಚರ್ಮ)–ಚಕ್ಷು–ಶ್ರೋತ್ರ(ಕಿವಿ)–ನಾಸಿಕಾ(ಮೂಗು)–ರಸನಾ(ನಾಲಿಗೆ)ಗಳು ಐದು ಪಂಚಜ್ಞಾನೇಂದ್ರಿಯಗಳು ಈ ಹತ್ತೂ ಸೇರಿ ದಶೇಂದ್ರಿಯಗಳಾಗುತ್ತವೆ(ಇವುಗಳಲ್ಲಿ ನಾಲಿಗೆಯು ಕರ್ಮ–ಜ್ಞಾನೇಂದ್ರಿಯಗಳೆರಡರಲ್ಲೂ ಬಂದಿದ್ದರೂ ಕಾರ್ಯದಲ್ಲಿ ವ್ಯತ್ಯಾಸವಿದೆ. ಕರ್ಮಕ್ಕೆ ಸಂಬಂಧಿಸಿದಂತೆ ಮೂಲಾಧಾರದಿಂದ ಮೇಲೆದ್ದು ಬರುವ ಮಾತು–ಶಬ್ದಗಳಿಗೆ ಇದು ಸೇರಿದ್ದು; ಆದರೆ ಜ್ಞಾನೇಂದ್ರಿಯವಾಗಿ ಇದು ಮನಸ್ಸಿನಲ್ಲಿಯ ಅಭಿಲಾಷೆಯೆಂಬ ರಸದ್ಯೋತಕವಾಗಿದೆ). ಈ ದಶೇಂದ್ರಿಯಗಳ ಮೂಲರೂಪವು ಚೇತನವನ್ನು

ಸ್ವೀಕರಿಸುವುದು; ಇದೇ ದಶರಥನು ಅಗ್ನಿಯಿಂದ ಪಾಯಸವನ್ನು ಸ್ವೀಕರಿಸುವುದು. ಇಲ್ಲಿ ಅಗ್ನಿಯೆಂದರೆ ಪರಮಾತ್ಮ ಹಾಗೂ ಪಾಯಸವೆಂದರೆ ಜೀವಾತ್ಮ.

ರಾಮೋ ಬುದ್ಧಿರ್ಮನಸ್ತತ್ರ ಲಕ್ಷ್ಮಣೋ ಭರತಃ ಖಲು ।
ಅಹಂಕಾರಸ್ತಥಾ ಚಿತ್ತಂ ಶತ್ರುಘ್ನಃ ಪಾಯಸಾತ್ಮಕಾಃ ॥ 38 ॥

(38) ರಾಮನೆಂದರೆ ಬುದ್ಧಿತತ್ತ್ವ; ಲಕ್ಷ್ಮಣನೆಂದರೆ ಮನಸ್ತತ್ತ್ವ; ಭರತನೆಂದರೆ ಅಹಂಕಾರತತ್ತ್ವ ಹಾಗೂ ಶತ್ರುಘ್ನನೆಂದರೆ ಚಿತ್ತತತ್ತ್ವ; ಇವರೆಲ್ಲರೂ ಪಾಯಸದಿಂದಲೇ ಬಂದವರು.

ಬುದ್ಧಿತತ್ತ್ವವು ಚೇತನದ ಪ್ರಮುಖಾಂಶವಾದುದರಿಂದ ಪಾಯಸದ ಅರ್ಧಭಾಗದಿಂದ ರಾಮನು ಜನಿಸಿದ್ದು; ಅನಂತರದ ಪ್ರಾಧಾನ್ಯ ಮನಸ್ಸಿಗೆ; ಆದುದರಿಂದ ಪಾಯಸದ ಕಾಲುಭಾಗದಿಂದ ಲಕ್ಷ್ಮಣನು ಜನಿಸಿದ್ದು; ಅಧ್ಯಾತ್ಮದಲ್ಲಿ ಅಹಂಕಾರ–ಚಿತ್ತಗಳಿಗೆ ಪ್ರಾಧಾನ್ಯವೇನೂ ಇಲ್ಲದಿರುವುದರಿಂದ ಪಾಯಸದ ಎಂಟನೇ ಒಂದೊಂದು ಭಾಗಗಳಿಂದ ಇವರೀರ್ವರ ಜನನ, ಅರ್ಥಾತ್ ಪಾಯಸದ ಕಾಲುಭಾಗದ ಅರ್ಧಾರ್ಧ ಭಾಗಗಳಿಂದ ಇವರ ಜನನ.

ಯದಾ ದಶೇಂದ್ರಿಯಾಸ್ಸರ್ವೇ ಪ್ರಬುದ್ಧಾಃ ಪ್ರಕೃತಿಚೋದಿತಾಃ ।
ದಶಗ್ರೀವಾತ್ಮಕಶ್ಚಿತ್ರಂ ಭವಂತಿ ರಾವಾಣಾಸುರಃ ॥ 39 ॥

(39) ಪ್ರಕೃತಿಯ ಕಾರ್ಯಚಟುವಟಿಕೆಯಿಂದಾಗಿ ದಶೇಂದ್ರಿಯಗಳ ಬೆಳವಣಿಗೆಯು ಪರಿಪೂರ್ಣವಾದ ಮೇಲೆ ಈ ದಶೇಂದ್ರಿಯಗಳೇ ಹತ್ತು ತಲೆಗಳ ರಾವಣಾಸುರನಾಗುವುದು ತುಂಬ ವಿಚಿತ್ರವೆನಿಸಿದರೂ ಇದು ನಿಜ.

ಜೀವಾತ್ಮದ ನಿತ್ಯಜೀವನದ ಚಟುವಟಿಕೆಗಳಿಗೆ ಅನುವಾಗುವ ರೀತಿಯಲ್ಲಿ ದಶೇಂದ್ರಿಯಗಳು ಬೆಳವಣಿಗೆಯನ್ನು ಹೊಂದಿದ ಮೇಲೆ ದಶೇಂದ್ರಿಯಗಳ ಸೂಕ್ಷ್ಮರೂಪವು ಕಣ್ಮರೆಯಾಗುತ್ತದೆ; ಅದೇ ದಶರಥನ ಸಾವು. ಪಂಚಕರ್ಮೇಂದ್ರಿಯ–ಪಂಚ ಜ್ಞಾನೇಂದ್ರಿಯಗಳು ಬೆಳವಣಿಗೆಯನ್ನು ಪಡೆದ ಮೇಲೆ ಮನುಷ್ಯನಲ್ಲಿ ಆಶೆ–ಅತ್ಯಾಶೆಗಳು ಪ್ರಾರಂಭವಾಗುತ್ತವೆ. ಇವನ್ನು ಮೊದಲು ಮಂಥರೆಯ ಮೂಲಕ ಹಾಗೂ ಅನಂತರದಲ್ಲಿ ಶೂರ್ಪಣಖೆಯ ಮೂಲಕ ಸೂಚಿಸಲಾಗಿದೆ. ಆಶಾತತ್ತ್ವವು ಮಂಥರೆಯಾಗಿ ಇಚ್ಛಾಶಕ್ತಿಯ ಸಾಕಾರಳಾದ (ಕೌಸಲ್ಯೆ=ಜ್ಞಾನಶಕ್ತಿ;ಸುಮಿತ್ರೆ=ಕ್ರಿಯಾಶಕ್ತಿ; ಕೈಕೆಯೆಂದರೆ ಇಚ್ಛಾಶಕ್ತಿ; ಹೀಗೆ ದಶರಥನ ಮೂವರು ಹೆಂಡಂದಿರು ಶಕ್ತಿತ್ರಯರೇ ಹೊರತು ಅನ್ಯಥಾ ಅಲ್ಲ) ಕೈಕೆಯಲ್ಲಿ ಪ್ರಲೋಭನೆಯನ್ನುಂಟು ಮಾಡಿದರೆ ಮುಂದೆ ಶೂರ್ಪಣಖೆಯು ಮತ್ತರಜಸ್ತತ್ತ್ವವೆಂಬ ರಾವಣನಲ್ಲಿ ಬುದ್ಧಿತತ್ತ್ವದ ಶಕ್ತಿಯನ್ನೇ ಸ್ವಾಧೀನಪಡಿಸಿಕೊಳ್ಳಲು ಪ್ರಲೋಭನೆಯನ್ನು

ಉಂಟುಮಾಡುತ್ತದೆ. ನಾಲಗೆಯು ರುಚಿಯನ್ನು ಬಯಸಿದರೆ ಚರ್ಮವು ಹಾಗು ಜನನೇಂದ್ರಿಯವು ಅರಸುವುದು ಸ್ತ್ರೀ ಅಥವಾ ಪುರುಷಸುಖವನ್ನು; ಮೂಗು ಸುವಾಸನೆಯನ್ನು ಬಯಸಿದರೆ ಕಿವಿಯು ಹಿತವಚನಕ್ಕಿಂತಲೂ ಪ್ರಿಯವಚನವನ್ನು ಬಯಸುವುದು. ಇವೆಲ್ಲ ಅತಿರೇಕಕ್ಕೆ ಹೋದಾಗ ಬೇರೆಯವರ ತೊಂದರೆಯನ್ನೂ ಲೆಕ್ಕಿಸದೆ ಪ್ರವರ್ತಿಸತೊಡಗುವವು; ಇವೇ ರಾವಣನ ದಶಗ್ರೀವಾತ್ಮಕ ಚಟುವಟಿಕೆಗಳು.

ಮತ್ತೇನ ರಜಸಾತ್ವತ್ರ ಬುದ್ಧಿಶಕ್ತಿರಪಹೃತಾ ।
ತಮಸ್ತತ್ತ್ವನ್ನು ತತ್ಕಾರ್ಯೇ ಭವತ್ಯತ್ರ ಸಹಾಯಕಮ್ ॥ 40 ॥

(40) ಮದೋನ್ಮತ್ತ ರಜಸ್ತತ್ತ್ವವು ಬುದ್ಧಿಶಕ್ತಿಯನ್ನು ಅಪಹರಿಸುವುದು. ಆ ಕಾರ್ಯಕ್ಕೆ ತಮೋಗುಣವು ತನ್ನ ಸಹಾಯವನ್ನು ಸಲ್ಲಿಸುವುದು.

ರಾವಣನು ಮತ್ತರಜೋಗುಣದ ಸಾಕಾರನಾದರೆ ಮಾರೀಚಾದಿ ರಾಕ್ಷಸರೆಲ್ಲ ತಮೋಗುಣವನ್ನು ಅರ್ಥೈಸುವರು. ಚೇತನದ ಪ್ರಮುಖಾಂಶವಾದ ಬುದ್ಧಿಯ ಶಕ್ತಿಯ, ಅರ್ಥಾತ್, ಸೀತೆಯ ಅಪಹರಣವಾಗುವುದು.

ಚೇತನಾರ್ಧಾಂಶಬುದ್ಧಿಸ್ತು ಸುಸಿದ್ಧಮನಸಾ ಸಹ ।
ಮತ್ತರಜೋ ವಿನಿಗ್ರಹ್ಯ ಪುನರ್ಭವತಿ ಶಕ್ತಿಮಾನ್ ॥ 41 ॥

(41) ಚೇತನದ ಅರ್ಧಾಂಶವಾದ ಬುದ್ಧಿತತ್ತ್ವವು ಪವಿತ್ರಮನಸ್ತತ್ತ್ವದ ಸಹಕಾರದೊಂದಿಗೆ ಮತ್ತರಜೋಗುಣವನ್ನು ನಿಗ್ರಹಿಸಿ ತನ್ನ ಶಕ್ತಿಯನ್ನು ಪುನಃ ಪಡೆದುಕೊಳ್ಳುವುದು. ಇದೇ ಲಕ್ಷ್ಮಣಸಹಿತನಾದ ರಾಮನು ಯುದ್ಧದಲ್ಲಿ ರಾವಣನನ್ನು ನಾಶಪಡಿಸಿ ಸೀತೆಯನ್ನು ಪುನಃ ಪಡೆಯುವುದಾಗಿದೆ.

ತತ್ಸಹಸ್ರಾರತೋ ಸಪ್ತಚಕ್ರಾಣಿ ಚಾವರೋಹಣೇ ।
ತಥಾರೋಹಣಮಾರ್ಗೇऽಪಿ ತಾನಿ ವರ್ಷಚತುರ್ದಶ ॥ 42 ॥

(42) ಆಧ್ಯಾತ್ಮಿಕವಾಗಿ ಮಾನವದೇಹದಲ್ಲಿ ಗುರುತಿಸಲಾಗುವ ಸಹಸ್ರಾರದಿಂದ ಏಳು ಚಕ್ರಗಳು, ಜೀವಾತ್ಮವು ಭೂಮಿಗೆ ಬರುವ ಸಂದರ್ಭದಲ್ಲಿ ಒದಗಿ ಬರುವವು ಹಾಗೂ ಭೂತತ್ತ್ವದಿಂದ ಮೇಲಕ್ಕೆ ಏಳುತ್ತ ಮೋಕ್ಷವನ್ನು ಪಡೆಯುವ ಕಾರ್ಯದಲ್ಲಿ ಮೂಲಾಧಾರದಿಂದ ಸಹಸ್ರಾರದವರೆಗಿನ ಏಳೂ ಚಕ್ರಗಳು ಒದಗಿ ಬರುವವು; ಏಳು ಮತ್ತೆ ಏಳು ಎಂದಾಗ ಬರುವ ಸಂಖ್ಯೆ ಹದಿನಾಲ್ಕು. ಆದುದರಿಂದ ರಾಮನಿಗೆ ಹದಿನಾಲ್ಕು ವರುಷ ವನವಾಸ. ಪರಮಾತ್ಮನ ಮೂಲಸ್ಥಳ ಸಹಸ್ರಾರವಾದರೆ ಸಂಸಾರದ ಮೂಲಸ್ಥಳ ಮೂಲಾಧಾರಚಕ್ರ. ಸಹಸ್ರಾರವು ಅಯೋಧ್ಯೆಯಾದರೆ ಮೂಲಾಧಾರವು

ಲಂಕೆಯೆನಿಸುತ್ತದೆ. ಎಲ್ಲಿ ಯುದ್ಧವಿಲ್ಲವೋ, ಅಶಾಂತಿಯ ಗಂಧವೇ ಇಲ್ಲವೋ ಅದು ಅಯೋಧ್ಯಾ; 'ಲಂ' ಅಂದರೆ ಪೃಥ್ವೀ; 'ಲಂ ಕಾರಯತಿ ಇತಿ ಲಂಕಾ'– ಪೃಥ್ವೀತತ್ತ್ವವನ್ನು ಉಂಟುಮಾಡುವ ಮೂಲಾಧಾರವೇ ಲಂಕಾ. ಏಕೆಂದರೆ ಮೂಲಾಧಾರವು ಪೃಥ್ವೀತತ್ತ್ವಾತ್ಮಕವಾದುದು. ಮಧ್ಯದ ವಿಶುದ್ಧಿ, ಅನಾಹತ, ಮಣಿಪೂರಕ, ಸ್ವಾಧಿಷ್ಠಾನಗಳು ಉಳಿದ ಐದು ಚಕ್ರಗಳು. ಹೀಗೆ ಮೋಕ್ಷಸಾಧನೆಯ ಸಂದರ್ಭದಲ್ಲಿ ಭರತನು ನಂದಿಗ್ರಾಮದಲ್ಲಿರುವನು; ನಂದಿಗ್ರಾಮವೆಂದರೆ ಆನಂದಮಯಕೋಶ. ಅಹಂಕಾರತತ್ತ್ವವನ್ನು ಸಂಪೂರ್ಣ ಶಾಂತವಾಗಿಡುವುದು ಆನಂದಮಯಕೋಶ.

ಆತ್ಮಕಲ್ಯಾಣಮಾರ್ಗೇ ಯತ್ ಪ್ರಾಣಾಯಾಮಾದಿಸಾಧನಮ್ ।
ತತ್ಪೂರ್ಯತೇऽತ್ರ ಚಿತ್ರಂ ನು ಮಹದ್ಧನುಮತಾದಿಭಿಃ ॥ 43 ॥

(43) ಆತ್ಮಕಲ್ಯಾಣದ ಮಾರ್ಗದಲ್ಲಿ, ಅರ್ಥಾತ್, ಅಷ್ಟಾಂಗಯೋಗ ಸಾಧನಾಪಥದಲ್ಲಿ ಪ್ರಾಣಾಯಾಮಾದಿಗಳೇನಿವೆಯೋ ಅವನ್ನು ತುಂಬಿಕೊಡುವವು ಹನುಮಂತಾದಿ ಕಪಿಗಳು. ತುಂಬ ವಿಚಿತ್ರವೆನಿಸಿದರೂ ಇದು ಸತ್ಯ.

ಪ್ರಾಣಾಯಾಮದ ಸಂದರ್ಭದಲ್ಲಿ ಹನುವಿನ ಮೂಲಕ, ಅರ್ಥಾತ್ ಮೂಗಿನ ಕೆಳಗಿರುವ ಮೇಲ್ತುಟಿಯ ಮೇಲ್ಭಾಗದಿಂದ ಶ್ವಾಸವನ್ನು ತೆಗೆದುಕೊಳ್ಳುವಾಗಿನ ವಾಯುತತ್ತ್ವವೇ ಹನುಮಂತ. ಸಮಷ್ಟಿವಾಯುವಿನ ವ್ಯಷ್ಟಿಭಾವ ಹನುಮಂತ; ಆದುದರಿಂದ ರಾಮನಿದ್ದಲ್ಲಿ ಸದಾ ಹನುಮಂತನಿರುವುದು. ಅಧೋಗಮನ ವಾಯುವಾದ ಅಪಾನವಾಯುವೇ ವಾಲಿ; ಹೃದಯಸ್ಥಾನಸ್ಥ ಪ್ರಾಣವಾಯುವೇ ಸುಗ್ರೀವ; ಆಹಾರಜೀರ್ಣಕ ಸಮಾನವಾಯುವೇ ನೀಲ ಹಾಗೂ ಸರ್ವಶರೀರವ್ಯಾಪಕ ವ್ಯಾನವಾಯುವೇ ನಲ ಮತ್ತು ಮೂಗಿನ ಮೂಲಕ ಕುತ್ತಿಗೆಗೆ ಹೋಗುವ ಉದಾನವಾಯುವು ಇಲ್ಲಿಯ ಜಾಂಬುವಂತ (ಈ ಎಲ್ಲ ಪಾತ್ರಗಳ ವಿಶೇಷಾರ್ಥಕ್ಕಾಗಿ ನೋಡಿ ಇದೇ ಲೇಖಕರ 'ಸನಾತನ ಶಬ್ದಾರ್ಥಚಿಂತಾಮಣಿ' ಹಾಗೂ ಶ್ಲೇಷಸಿದ್ಧಾಂತಃ ಎಂಬ ಗ್ರಂಥಗಳನ್ನು)

ಅತ್ರ ಜಟಾಯುಸಂಪಾತಿಗರುಡಾಃ ಮಾರ್ಗದರ್ಶಕಾಃ ।
ಆದಿಮಧ್ಯಾಂತ್ಯಸನ್ಮಾರ್ಗೇ ಗುರುವಃ ಕ್ರಮಶಃ ಖಲು ॥ 44 ॥

(44) ಇಲ್ಲಿ ಜಟಾಯು–ಸಂಪಾತಿ–ಗರುಡ ಇವರು ಕ್ರಮವಾಗಿ ಸಾಧನೆಯ ಮಾರ್ಗದ ಪ್ರಾರಂಭದದೆಸೆ ಹಾಗೂ ಮಧ್ಯಮದೆಸೆಯ ಮತ್ತು ಕೊನೆಯ ಪರಿಪೂರ್ಣತೆಯ ಗುರುಗಳಾಗಿ ಮಾರ್ಗದರ್ಶಕರಾಗಿರುವರು.

ಜಟಾಯುವು ರಾಮನಿಗೆ ಸೀತಾಪಹರಣವು ಯಾರಿಂದ ಆದುದು ಅನ್ನುವುದನ್ನು ತಿಳಿಸುವನು; ಅಂದರೆ ಬುದ್ಧಿಯ ಸತ್ವಶಕ್ತಿಯು ಸಂಸಾರದಲ್ಲಿ ಹೇಗೆ ನಷ್ಟಗೊಂಡಿದೆ

ಅನ್ನುವುದನ್ನು ತಿಳಿಸುವನು. ಈತ ಪ್ರಾಥಮಿಕ ಶಿಕ್ಷಕನಂತೆ ಎಂದು ಹೇಳಬಹುದು. ಈತನ ಅಣ್ಣ ಸಂಪಾತಿಯು ಹನುಮಂತನಿಗೆ ಲಂಕೆಯಲ್ಲಿ ಬಂಧನದಲ್ಲಿರುವ ಸೀತೆಯನ್ನು ಕಾಣುವ ಮಾರ್ಗವನ್ನು ತಿಳಿಸುವನು; ಅಂದರೆ ಈತ ಮಾಧ್ಯಮಿಕ ಹಂತದ ಗುರುವು; ಈತನಿಗೆ ಲಂಕಾಗಮನ ಸಾಧ್ಯವಿಲ್ಲ. ಆದರೆ ಗರುಡನು ರಾಮ–ಲಕ್ಷ್ಮಣರು ರಾವಣಪುತ್ರನಾದ ಇಂದ್ರಜಿತುವಿನ ಸರ್ಪಾಸ್ತ್ರಕ್ಕೆ ಈಡಾಗಿ ಪ್ರಜ್ಞಾಹೀನರಾಗಿದ್ದಾಗ ಅವರನ್ನು ಎಚ್ಚರಗೊಳಿಸಿ ಮತ್ತೆ ಸುಸನ್ನದ್ಧಗೊಳಿಸಿದವನು. ಹೀಗೆ ಗುರುಶ್ರೇಷ್ಠನೇ ಗರುಡ. ಕೀರ್ತಿಕಾಮನೆಯೇ ಇಂದ್ರಜಿತ್; ಸರ್ಪವು ಆಶಾಸೂಚಕವು. ಜೀವಾತ್ಮವು ಕೀರ್ತಿಯನ್ನು ಪಡೆಯಬೇಕೆಂಬ ಆಶೆಯಲ್ಲಿ ಮೈಮರೆತು ಯೋಗಸಾಧನೆಯಿಂದ ವಿಚಲಿತವಾದಾಗ ಅದನ್ನು ಎಚ್ಚರಗೊಳಿಸುವ ಗುರು ಗರುಡನಾಗಿ ಇಲ್ಲಿ ಬಂದಿರುವನು.

ಸಹಸ್ರಾರಮಯೋಧ್ಯಾತ್ರ ಪುನರಾಗತಚೇತನಃ ।
ಸಾಯುಜ್ಯೇ ಮೋದತೇ ಪ್ರತ್ಯಗಾತ್ಮಾತ್ರ ಬ್ರಹ್ಮಸಂಸ್ಥಿತಃ ॥ 45 ॥

(45) ಸಹಸ್ರಾರವೇ ಅಯೋಧ್ಯೆ, ಅರ್ಥಾತ್ ಸಾಯುಜ್ಯ ಸ್ಥಳ. ಚೇತನವು, ಅರ್ಥಾತ್ ಪ್ರತ್ಯಗಾತ್ಮವು ತನ್ನ ಶಕ್ತಿಯನ್ನು ಪುನಃ ಪಡೆದು ತನ್ನ ಮೂಲದ ಅಯೋಧ್ಯೆಗೆ ಬರುವುದು. ಅಲ್ಲಿ ಪರಮಾತ್ಮನಲ್ಲಿ ಒಂದಾಗಿ, (ಅಂದರೆ, ಪ್ರತ್ಯಗಾತ್ಮಭಾವವು ಹೋಗಿರಲು) ಮೋಕ್ಷದಲ್ಲಿ ನಲಿಯುವುದು. ಇದೇ ಅಯೋಧ್ಯೆಯಲ್ಲಿಯ ರಾಮನ ಪಟ್ಟಾಭಿಷೇಕ. ಇಲ್ಲಿಗೆ ತ್ರೇತಾಯುಗವು ಮುಗಿಯಿತು. ಏಕೆಂದರೆ ಮೂರೂ ಗುಣಗಳಲ್ಲಿ ಯಾವುದೇ ಗುಣಕ್ಕೂ ಪರಮಪದದಲ್ಲಿ ತುಸುವೂ ಅವಕಾಶ ಖಂಡಿತವಾಗಿ ಇರುವುದಿಲ್ಲ.

ಪರಬ್ರಹ್ಮಸ್ಥಮುಕ್ತಾತ್ಮಾ ಸೋಽಹಂಭಾವೇನ ಜೀವಿಷು ।
ಸರ್ವೇಷು ರಾಜತೇ ತೈಸ್ತು ತ್ವಂರೂಪೇಣ ಚ ಭಾವ್ಯತೇ ॥ 46 ॥

ಪ್ರಕೃತ್ಯಾ ಯುಜ್ಯತೇ ಭಾವಂ ದ್ವಾಪರತ್ವಮಹಂ ಚ ತ್ವಮ್ ।
ಜನೇಷ್ವತೋ ಯುಗೋ ಜ್ಞಾತಃ ಪಶ್ಚಾದ್ದ್ವಾಪರನಾಮತಃ ॥ 47 ॥

(46,47) ಹೀಗೆ ಪ್ರರಬ್ರಹ್ಮದಲ್ಲಿ ಒಂದಾದ ಮುಕ್ತಾತ್ಮವು ಸೋಹಂಭಾವದಲ್ಲಿ ಎಲ್ಲರಲ್ಲಿಯೂ ನೆಲಸಿದ್ದರೂ ಹಾಗೂ ಉಳಿದೆಲ್ಲ ಪ್ರತ್ಯಗಾತ್ಮಗಳು ತಾವೂ ಅದೇ ಆಗಿದ್ದರೂ ಅದರ ಪರಿವೆಯಿಲ್ಲದೆ ಅದನ್ನು 'ನೀನು' ಅನ್ನುವ ಭಾವದಿಂದ ನೋಡುವವು. ಪ್ರತಿಪ್ರತ್ಯಗಾತ್ಮವೂ ನಾನು ಎಂದು ತನ್ನ ಬಗ್ಗೆ ಭಾವಿಸುವುದು. ಹೀಗೆ ಮೂಲತಃ ಮುಕ್ತಾತ್ಮನಿಗೆ ಎಲ್ಲವೂ ಪರಬ್ರಹ್ಮವೇ ಆದರೂ ನಾನು–ನೀನು ಎಂಬ ಭಾವಗಳು ಎಲ್ಲಿ ಬರುವವೋ ಅದೇ ಅನಂತರದಲ್ಲಿ ಬರುವ ದ್ವಾಪರಯುಗ; ಈ ನಾನು–ನೀನೆಂಬುದನ್ನು ಜೀವಾತ್ಮಕ್ಕೆ ಪ್ರಕೃತಿಯು ಜೋಡಿಸುವುದೇನಿದೆಯೋ ಅದೇ ದ್ವಾಪರಯುಗ. ಮುಕ್ತಾತ್ಮಕ್ಕೂ

ಸಹ ಶರೀರವು ಇರುವವರೆಗೆ ಈ ದ್ವಾಪರತತ್ತ್ವದ ಅವಶ್ಯಕತೆ ಇದ್ದೇ ಇರುತ್ತದೆ. ಈ ದ್ವಾಪರದಲ್ಲಿ ಕೃಷ್ಣಾವತಾರ.

ಪರಂಬ್ರಹ್ಮಮಹಾವಿಷ್ಣೋರವತಾರಕ್ರಮೇ ಚ ಯಃ ।
ಕೃಷ್ಣಾವತಾರ ಇತ್ಯತ್ರ ಮುಕ್ತಾತ್ಮಾ ಸವಪುಸ್ಸ್ಥಿತಃ ॥ 48 ॥

(48) ಪರಬ್ರಹ್ಮನ, ಪರಮಾತ್ಮನ, ಮಹಾವಿಷ್ಣುವಿನ ಅವತಾರಕ್ರಮದಲ್ಲಿ ಅನಂತರ ಬರುವುದು ಕೃಷ್ಣಾವತಾರ. ರಾಮಾಯಣಾಂತ್ಯದ ಮುಕ್ತಾತ್ಮನು ತನ್ನ ದೇಹದ ಆಯುಷ್ಯವು ಮುಗಿಯುವ ತನಕ ಪರಮಹಂಸನಾಗಿ ಸದೇಹಸ್ಥಿತಿಯಲ್ಲಿ ಮುಂದುವರಿಯುವುದೇ ಕೃಷ್ಣಾವತಾರ. ಯೋಗಸಾಧನೆಯಿಂದ ಮಹಾತ್ಮರಾದವರು ಪರಮಹಂಸರೆನಿಸುವರು, ಪರಮಾತ್ಮನೆನಿಸುವರು; ಅವರು ಇನ್ನುಳಿದ ಜೀವಾತ್ಮಗಳ, ಅರ್ಥಾತ್ ಜನರ ಶ್ರೇಯಸ್ಸಿಗಾಗಿ ಹಿತೋಪದೇಶತತ್ಪರರಾಗುವರು.

ಪರಮಹಂಸಗುರುಶ್ರೇಷ್ಠಃ ಕೃಷ್ಣೋ ಗೋಪಜನಪ್ರಿಯಃ ।
ಅಧ್ಯಾತ್ಮಯೋಗಮಾರ್ಗಸ್ಥಜೀವಾತ್ಮಾತ್ರ ಸ ಚಾರ್ಜುನಃ ॥ 49 ॥

(49) ಗೋಪಜನಪ್ರಿಯನಾದ ಕೃಷ್ಣನೆಂದರೆ ಪರಮಹಂಸಗುರುಶ್ರೇಷ್ಠ. ಅಧ್ಯಾತ್ಮದ ಮಾರ್ಗದಲ್ಲಿ, ಯೋಗಮಾರ್ಗದಲ್ಲಿ ಪ್ರವರ್ತಿಸಬೇಕೆಂಬ ಜೀವಾತ್ಮವೇ ಇಲ್ಲಿ ಅರ್ಜುನ.

ಮಹಾಭಾರತ–ಭಾಗವತಗಳಲ್ಲಿ 'ಗೋ'ಶಬ್ದವು ಎಲ್ಲೆಲ್ಲಿ ಬರುವುದೋ ಅಲ್ಲೆಲ್ಲ 'ಜ್ಞಾನ' ಅನ್ನುವುದೇ ನಿಜವಾದ ಅರ್ಥ. ಗೋಪ ಅಂದರೆ ಜ್ಞಾನರಕ್ಷಕ; ಗೋಪಾಲನೆಂದರೆ ಆತ್ಮಜ್ಞಾನರಕ್ಷಕ. ಜ್ಞಾನವಾಹಕ ಹದಿನಾರುಸಾವಿರ ನಾಡಿಗಳೇ ಹದಿನಾರು ಸಾವಿರ ಸಂಖ್ಯೆಯಲ್ಲಿ ಚಿತ್ರಿತರಾದ ಕೃಷ್ಣನ ಹೆಂಡಂದಿರು. ಮನುಷ್ಯನಲ್ಲಿರುವ 72 ಸಾವಿರ ನಾಡಿಗಳಲ್ಲಿ ಹದಿನಾರು ಸಾವಿರ ನಾಡಿಗಳು ಜ್ಞಾನನಾಡಿಗಳು. ಯೋಗಸಾಧನೆಗೆ ಮನಸ್ಸು ಮಾಡಲು ಪೂರ್ವಜನ್ಮಾರ್ಜಿತ ಪುಣ್ಯಫಲವಿಶೇಷವುಳ್ಳವನೇ ಆಗಬೇಕಾಗುತ್ತದೆ. ತನ್ನ ಆ ಪುಣ್ಯಫಲವನ್ನು ಮುನ್ನಡೆಸುವ ಜೀವಾತ್ಮವೇ ಇಲ್ಲಿಯ ಅರ್ಜುನ. (ಮಹಾಭಾರತ–ಭಾಗವತಗಳ ಎಲ್ಲ ಮುಖ್ಯಪಾತ್ರಗಳ ವಿಶೇಷಾರ್ಥಕ್ಕಾಗಿ ಇದೇ ಲೇಖಕರ ಮೇಲೆ ಹೇಳಿದ 'ಸನಾತನಶಬ್ದಾರ್ಥಚಿಂತಾಮಣಿ' ಗ್ರಂಥವನ್ನು ಓದಿ).

ಆತ್ಮಜ್ಞಾನಕತತ್ತ್ವಂ ಚ ನವನೀತಂ ನವಾದ್ಭುತಮ್।
ಗೋವರ್ಧನಗಿರೇಃ ಕಾರ್ಯೇ ಜ್ಞಾನಸರ್ವಾಂಗವರ್ಧನಮ್ ॥ 50 ॥

(50) ಅದ್ಭುತವಾದ, ಅರ್ಥಾತ್ ಹಿಂದೆಂದೂ ಕಂಡಿರದ ಹೊಸಹೊಸ ಆತ್ಮಜ್ಞಾನಕಾರಕ ತತ್ತ್ವಗಳನ್ನು (ಭಾಗವತದಲ್ಲಿ) ನವನೀತ ಎಂದು ಕರೆಯಲಾಗಿದೆ.

‘ಗೋ’ ಅಂದರೆ ಆತ್ಮಜ್ಞಾನ. ಈ ಅರ್ಥದಲ್ಲಿ ಗೋವರ್ಧನ ಗಿರಿಯ ಉದ್ಧರಣವೆಂದರೆ ಆತ್ಮಜ್ಞಾನತತ್ತ್ವದ ಸರ್ವಾಂಗೀಣ ಅಭಿವೃದ್ಧಿ ಎಂದು ಅರ್ಥ.

ಆತ್ಮಜ್ಞಾನದ ಸಾಕಾರ ಕೃಷ್ಣ. ಜ್ಞಾನದ ಎಳೆಯು ಎಲ್ಲಿದ್ದರೂ ಅದು ಜ್ಞಾನಘನತತ್ತ್ವಕ್ಕೆ ಸೇರಿಕೊಂಡುಬಿಡುವುದು. ಹೇಗೋ ಆ ಮೂಲಕ ಆತ್ಮಜ್ಞಾನವನ್ನು ಬೋಧಿಸುವ ವಿಚಾರಗಳು ವಿಸ್ತೃತಗೊಳ್ಳುವವು. ಇಲ್ಲಿ ನವನೀತದ ಸುಪ್ರಸಿದ್ಧ ಅರ್ಥವಾದ ಬೆಣ್ಣೆ ಅನ್ನುವುದನ್ನು ಇಟ್ಟುಕೊಂಡು ಸಾಮಾನ್ಯರ ರಂಜನೆಗಾಗಿ ಕೃಷ್ಣನನ್ನು ಬೆಣ್ಣೆಯ ಕಳ್ಳ ಎಂದು ಚಿತ್ರಿಸಲಾಯಿತು.

ಸಾಮಾನ್ಯ ಅರ್ಥದಲ್ಲಿ ‘ಗೋ’ ಅಂದರೆ ಗೋವುಗಳು, ಹಸುಗಳು ಹಾಗೂ ಈ ಅರ್ಥದಲ್ಲಿ ಹಸುಗಳ ಬೆಳವಣಿಗೆಗೆ ಅನುಕೂಲಕರವಾದ ಹುಲ್ಲುಗಾವಲು ಇರುವ ಸ್ಥಳ ಗೋವರ್ಧನಗಿರಿ. ಆದರೆ ಭಾರತ–ಭಾಗವತಗಳಲ್ಲಿಯ ಆಧ್ಯಾತ್ಮಿಕ ಅರ್ಥದಲ್ಲಿ ಗೋ ಅಂದರೆ ಜ್ಞಾನ, ಆತ್ಮಜ್ಞಾನ. ಶ್ರೀಕೃಷ್ಣನು ಆತ್ಮಜ್ಞಾನದ ಸರ್ವಾಂಗೀಣ ಬೆಳವಣಿಗೆಗೆ ಕಾರಣವಾಗುವ ಮಹಾಜ್ಞಾನಿ. ಈ ಅರ್ಥದಲ್ಲಿ ಆತನನ್ನು ಗೋವರ್ಧನಗಿರಿಧಾರಿಯನ್ನಾಗಿ ಚಿತ್ರಿಸಲಾಗಿದೆ.

ವಸ್ತ್ರಾಪಹರಣಂ ಗೋಪವಧೂನಾಂ ಗೋಕುಲೇ ಕೃತಮ್ ।
ಜ್ಞಾನಬೋಧಕಶಕ್ತೀನಾಂ ಮೋಹಾವರಣವಾರಣಮ್ ॥ 51 ॥

(51) ಗೋಕುಲದಲ್ಲಿ ಶ್ರೀಕೃಷ್ಣನು ನಡೆಸಿದ ಗೋಪಸ್ತ್ರೀಯರ ವಸ್ತ್ರಾಪಹರಣವೆಂದರೆ ಜ್ಞಾನಬೋಧಕ ಶಕ್ತಿಗಳಲ್ಲಿ ಇರಬಹುದಾದ ಮೋಹವೆಂಬ ಆವರಣವನ್ನು ದೂರಸರಿಸುವುದಾಗಿದೆ.

‘ಗೋ’ ಅಂದರೆ ಜ್ಞಾನ ಅನ್ನುವ ಅರ್ಥದಲ್ಲಿ ಗೋಕುಲವೆಂದರೆ ಆತ್ಮಜ್ಞಾನದ ಬೋಧನೆಯು ನಡೆಯುವ ಸ್ಥಳ. ಆತ್ಮಜ್ಞಾನಬೋಧಕ ಗುರುವರ್ಯರಲ್ಲಿಯೂ ಮೋಹವೆನ್ನುವುದು ಆಗಾಗ ಕಂಡುಬರುವುದುಂಟು. ವೇದ–ಪುರಾಣಗಳಲ್ಲಿಯ ಶಕ್ತಿಯನ್ನು ಪತ್ನಿಯನ್ನಾಗಿ ಚಿತ್ರಿಸುವ ಪದ್ಧತಿಯ ಅರ್ಥದಲ್ಲಿ ಅಂತಹ ಗುರುಗಳ ಜ್ಞಾನಶಕ್ತಿಯೇ ಗೋಪಸ್ತ್ರೀಯರು. ತಾನು–ತನ್ನವರು ಎಂಬ ಮೋಹದಿಂದ ಆ ಶಕ್ತಿಗಳನ್ನು ದೂರಗೊಳಿಸುವ ತತ್ತ್ವವು ಶ್ರೀಕೃಷ್ಣನು ನಡೆಸಿದ ಗೋಪಿಕಾಸ್ತ್ರೀಯರ ವಸ್ತ್ರಾಪಹರಣದಲ್ಲಿದೆ. ವಾಸ್ತವದಲ್ಲಿ ಕೃಷ್ಣನು ಚೋರನೂ ಅಲ್ಲ, ಸ್ತ್ರೀಕಾಮುಕನೂ ಅಲ್ಲ, ನಿರ್ಲಜ್ಜನೂ ಅಲ್ಲ.

ಯಮುನಾ ಚಂದ್ರನಾಡೀ ಸಾ ಮನೋಽತ್ರ ಸರ್ಪಮರ್ದನಮ್ ।
ಸ್ವಾರ್ಥಾಶಾಮರ್ದನಂ ವೇಣುಃ ಸುಷುಮ್ನೋಂಕಾರ ಏವ ಚ ॥ 52 ॥

(52) ಯಮುನಾ ನದಿಯ ಆಧ್ಯಾತ್ಮಿಕ ಅರ್ಥ ಚಂದ್ರನಾಡಿ, ಅರ್ಥಾತ್ ಇಡಾನಾಡಿ (ಗಂಗಾ ನದಿ ಅಂದರೆ ಸೂರ್ಯನಾಡಿ ಮತ್ತು ಪಿಂಗಲಾನಾಡಿ ಹಾಗೂ ಸರಸ್ವತೀ

ನದಿ ಅಂದರೆ ಸುಷುಮ್ನಾನಾಡಿ). ಲೌಕಿಕ ಮನಸ್ತತ್ತ್ವವೇ ಚಂದ್ರನಾಡಿ. ಆ ಮನಸ್ತತ್ತ್ವದಲ್ಲಿ ನೆಲಸಿದ ಸ್ವಾರ್ಥಪೂರಿತ ಆಶಾಭಾವವೇ ಕಾಳಿಂಗಸರ್ಪ. ಕೃಷ್ಣಕೃತ ಕಾಳಿಂಗಮರ್ದನವೆಂದರೆ ಪರಮಹಂಸಗುರುವು ತನ್ನ ಶಿಷ್ಯರಲ್ಲಿಯ ದುರಾಶಾಪೂರಿತ ನಡವಳಿಕೆಗಳನ್ನು ನಿವಾರಿಸುವುದೇ ಆಗಿದೆ. ಇಲ್ಲಿ ಕೃಷ್ಣನ ಕೈಯಲ್ಲಿಯ ಕೊಳಲು ಅಥವಾ ವೇಣು ಅಂದರೆ ಸುಷುಮ್ನಾನಾಡಿ ಹಾಗು ಅದರಿಂದ ಹೊರಡುವ ನಾದವೆಂದರೆ ಓಂಕಾರ. ಪರಮಹಂಸಪದವಿಗೆ ಏರಿದ ಮೇಲೆ ಓಂಕಾರಾನುಸಂಧಾನವೂ ಬೇಕಾಗುವುದಿಲ್ಲ; ಏಕೆಂದರೆ ಆತನು ಸಾಕ್ಷಾತ್ ಪರಬ್ರಹ್ಮನೇ ಆಗಿರುತ್ತಾನೆ. ಓಂಕಾರಕ್ಕೂ ಮೇಲಿನ ಸ್ಥಿತಿ ಪರಬ್ರಹ್ಮಸ್ಥಿತಿ. ಈ ಅರ್ಥದಲ್ಲಿ ಪ್ರಬುದ್ಧಕೃಷ್ಣನ ಕೈಯಲ್ಲಿ ಕೊಳಲು ಕಂಡುಬರುವುದಿಲ್ಲ.

ಆತ್ಮತತ್ತ್ವಂ ಸುಸಂಸ್ಥಾಪ್ಯ ಮುಮುಕ್ಷುಶಿಷ್ಯಕೋಟಿಷು ।
ವಿದೇಹತ್ವಸ್ಥಿತೋ ಜ್ಞಾನೀ ಮುಕ್ತಾತ್ಮಾ ಬುದ್ಧ ಏವ ಸಃ ॥ 53 ॥

(53) ಮೋಕ್ಷವನ್ನು ಸಾಧಿಸಬೇಕು ಎಂಬ ತೀವ್ರತೆಯಲ್ಲಿರುವ ತನ್ನ ಶಿಷ್ಯಕೋಟಿಗಳಿಗೆ ಆತ್ಮತತ್ತ್ವವನ್ನು ಬೋಧಿಸಿ ಅವರನ್ನು ಜ್ಞಾನಿಗಳನ್ನಾಗಿ ಮಾಡಿ ತನ್ನ ಕಾರ್ಯವನ್ನು ಅವರಿಗೆ ಒಪ್ಪಿಸಿದ ವಿದೇಹಸ್ಥಿತಿಯಲ್ಲಿರುವ ಮುಕ್ತಾತ್ಮನಾದ ಆತ್ಮಜ್ಞಾನಿಯೇ ಇಲ್ಲಿಯ ಬುದ್ಧ. ‘ಬುಧ್ ಜ್ಞಾನೆ’ ಅನ್ನುವದರ ಪ್ರಕಾರ ಬುದ್ಧ ಅಂದರೆ ಜ್ಞಾನಿ, ಆತ್ಮಜ್ಞಾನಿ ಎಂದಾಗುವುದು. ಶಿಷ್ಯರು ಸಮರ್ಥರಾದುದನ್ನು ನೋಡಿ ಜ್ಞಾನಮಾರ್ಗದಲ್ಲಿ ತನ್ನ ಕಾರ್ಯವು ಇನ್ನು ಸಾಕು ಎಂದು ಆತ್ಮತತ್ತ್ವದಲ್ಲಿ, ಪರಬ್ರಹ್ಮದಲ್ಲಿ ವಿಲೀನನಾಗಿ ಇನ್ನೂ ಸದೇಹನಾಗಿರುವ ಮುಕ್ತಾತ್ಮನೇ ಇಲ್ಲಿ ಬರುವ ಬುದ್ಧ; ಇದೇ ಬುದ್ಧಾವತಾರ (ಬೌದ್ಧಧರ್ಮಸ್ಥಾಪಕ ಬುದ್ಧನೇ ಬೇರೆ; ಇಲ್ಲಿಯ ಸನಾತನಧರ್ಮದ ದಶಾವತಾರದ ಬುದ್ಧನೇ ಬೇರೆ). ದೇಹದಲ್ಲಿ ಚೇತನವು, ಅರ್ಥಾತ್ ಆತ್ಮವು ಇನ್ನೂ ನೆಲೆಸಿದ್ದರೂ ಯಾವುದನ್ನೂ ಗಣಿಸದ ಅವಧೂತನೇ ಇಲ್ಲಿಯ ಬುದ್ಧ; ಮುಂದೆ ಮತ್ತೆ ಶಿಷ್ಯರನ್ನು ಹಚ್ಚಿಕೊಳ್ಳದ ಸರ್ವಾವಧೂತನೇ ಇಲ್ಲಿಯ ಬುದ್ಧ.

ಕಲ್ಕ್ಯವತಾರ ಇತ್ಯೇವಂ ದಶಮೋ ಭಾವಿತೋ ಬುಧೈಃ ।
ಅನ್ಯಾನ್ಯಬಹುಸಂಖ್ಯಾಕಪ್ರತ್ಯಗಾತ್ಮಕಥಾತ್ರ ವೈ ॥ 54 ॥

(54) ಜ್ಞಾನಿಗಳು ಹತ್ತನೆಯ ಅವತಾರ ಕಲ್ಕಿಯ ಅವತಾರ ಎಂದು ಹೇಳಿದ್ದಾರೆ. ಯಾವುದೋ ಒಂದು ಆತ್ಮವು ಜೀವಭಾವದಿಂದ ಬಿಡುಗಡೆಗೊಂಡು ಪರಮಾತ್ಮಭಾವದಲ್ಲಿ ವಿಲೀನವಾಗಿ ಬುದ್ಧನಾದ ಮೇಲೆ ಅಲ್ಲಿಗೆ ಆ ಜೀವಾತ್ಮದ ಕಥಾನಕವು ಮುಗಿಯಿತೇ ಹೊರತು ಇನ್ನೂ ಅಸಂಖ್ಯಾಸಂಖ್ಯ ಪ್ರತ್ಯಗಾತ್ಮಗಳು ಪ್ರಕೃತಿಯ ಬಲೆಯಲ್ಲಿ ಸಿಕ್ಕಿಕೊಂಡು ಸಂಸಾರದಲ್ಲಿ ಪ್ರವರ್ತಿಸುವುದು ಇದ್ದೇ ಇದೆ ಅನ್ನುವುದನ್ನು ಸೂಚಿಸುವುದು ಸ್ಥಿತಿತತ್ತ್ವದ ಕಲ್ಕ್ಯವತಾರ.

ಪಂಕಾರ್ಥೇ ಕಲ್ಕಶಬ್ದೋಽತ್ರ ಕಲ್ಕ್ಯರ್ಥಃ ಪಾಪಪೂರಕಃ ।
ಕಲ್ಕ್ಯವತಾರ ಇತ್ಯತ್ರ ಸರ್ವತ್ರ ಸ್ವಾರ್ಥತಾಂಡವಮ್ ॥ 55 ॥

(55) ಕಲ್ಕ ಅಂದರೆ ಪಂಕ, ಕೆಸರು, ಪಾಪ ಎಂದು ಅರ್ಥ. 'ಕಲ್ಕಿ' ಶಬ್ದವು ತನ್ನ ಅಕಾರವನ್ನು ಕಳೆದುಕೊಂಡು 'ಇ' ಅನ್ನುವ ಪ್ರತ್ಯಯಾತ್ಮಕವಾದಾಗ ಪಾಪಪೂರಕವ್ಯಕ್ತಿ ಎಂಬ ತತ್ತ್ವಾರ್ಥ ಬರುತ್ತದೆ. ಇಂತಹ ವ್ಯಕ್ತಿಯಾಗಿ ಮಹಾವಿಷ್ಣುವಿನ, ಅರ್ಥಾತ್ ಸ್ಥಿತಿತತ್ತ್ವದ ಅವತಾರವೆಂದಾಗ ಎಲ್ಲೆಲ್ಲಿಯೂ ಸ್ವಾರ್ಥದ, ಕಡುಸ್ವಾರ್ಥದ ತಾಂಡವ ಎಂದು ಅರ್ಥ. ಈ ಕಡುಸ್ವಾರ್ಥತಾಂಡವವೇ ಕಲ್ಕಿ. ಮಹಾಕವಿ ಮಾಘನೂ ತನ್ನ 'ಶಿಶುಪಾಲವಧ' ಕಾವ್ಯದಲ್ಲಿ 'ಸರ್ವಃ ಸ್ವಾರ್ಥಂ ಸಮೀಹತೇ' ಎಂದು ಹೇಳಿದ್ದಿದೆ. ಈ ಅರ್ಥಕ್ಕೆ ಸಮೀಪದಲ್ಲಿ ಬರುವಂತೆ 'ಕುಮಾರಸಂಭವಮ್' ಮಹಾಕಾವ್ಯದಲ್ಲಿ ಕಾಲಿದಾಸನು 'ಶರೀರಮಾದ್ಯಂ ಖಲುಧರ್ಮಸಾಧನಮ್' ಎಂದು ಹೇಳಿದ್ದಿದೆ.

ಪ್ರತ್ಯೇಕಮಾನವೋಽಪ್ಯತ್ರ ಮಗ್ನಸ್ಸಂಸಾರಸಾಗರೇ ।
ಸ್ವಾರ್ಥೈಕಸಾಧಕೋ ನೂನಂ ಕಲ್ಕಿರೇವ ನ ಚಾಪರಃ ॥ 56 ॥

(56) ಕೇವಲಸ್ವಾರ್ಥಸಾಧಕನಾಗಿ ಸಂಸಾರಸಾಗರದಲ್ಲಿ ಮಗ್ನನಾದ ಪ್ರತ್ಯೇಕ ಮನುಷ್ಯನೂ ಸಹ ನಿಜವಾಗಿಯೂ ಕಲ್ಕಿಯೇ ಸರಿ; ಬೇರೆ ಯಾವನೋ ಕಲ್ಕಿ (ಬರುವನು) ಎಂದು ಖಂಡಿತವಾಗಿ ಭಾವಿಸಲಾಗದು.

ಕಲ್ಕಿಯ ಅವತಾರಕ್ಕಾಗಿ ಕಾಯುವುದು ಬೇಕಿಲ್ಲ, ತನಗೆ, ತನ್ನ ಸಂಗಾತಿಗೆ, ಸಂತಾನಕ್ಕೆ ಎಂದು ಮುಂತಾಗಿ ಧರ್ಮದ, ಅರ್ಥಾತ್ ಕರ್ತವ್ಯದ ಕಟ್ಟಳೆಯನ್ನೂ ಮೀರಿ ಭೂ–ಧನ–ಕನಕಾದಿಗಳನ್ನು ಗಳಿಸುವ ಪ್ರತಿಯೊಬ್ಬ ಪುರುಷನೂ ಹಾಗೂ ಸ್ತ್ರೀಯೂ ಕಲ್ಕಿಯೇ ಸರಿ. ಆದುದರಿಂದ ಸ್ಥಿತಿತತ್ತ್ವದ ಕಲ್ಕ್ಯವತಾರವು ಕೋಟಿ–ಕೋಟಿಸಂಖ್ಯೆಗಳಲ್ಲಿದೆ; ಹಿಂದೆಯೂ ಇತ್ತು ಹಾಗೂ ಮುಂದೆಯೂ ಇರುತ್ತದೆ.

ವಿಷ್ಣು–ಮಹೇಶ–ಬ್ರಹ್ಮಾಣ ಓಂಕಾರತ್ರ್ಯಕ್ಷರಾಣಿ ವೈ ।
ತೇಷಾಮ್ವಿಷ್ಣೂ ರಜೋ ನೂನಂ ಕಲ್ಕಿರೂಪಂ ಕಲೌ ಯುಗೇ॥ 57 ॥

(57) ವಿಷ್ಣು–ಮಹೇಶ–ಸೃಷ್ಟಿಕರ್ತಬ್ರಹ್ಮ ಇವರು ಓಂಕಾರದ ಅಕಾರ, ಉಕಾರ, ಮಕಾರಗಳೆನ್ನುವುದು ಸಾಮಾನ್ಯವಾಗಿ ತಿಳಿದ ವಿಚಾರವಷ್ಟೇ! ಅವರಲ್ಲಿ ವಿಷ್ಣುವು ರಜಸ್ಸನ್ನು, ಅಂದರೆ, ರಜೋಗುಣವನ್ನು ಪ್ರತಿನಿಧಿಸುವನು. ಈ ರಜೋಗುಣವೇ ಕಲಿಯುಗದಲ್ಲಿ ಕಲ್ಕಿಯಾಗಿ ಮೂಡಿಬಂದದ್ದು.

ಯತ್ಕರ್ಮ ಕ್ರಿಯತೇ ಶೀಘ್ರಂ ಜಗತಿ ಜಾತಜೀವಿನಾ ।
ಫಲಮಸ್ಯ ಲಿಖ್ಯತೇ ತಸ್ಯ ಮಸ್ತಿಷ್ಕೇ ಪ್ರಕೃತ್ಯಾ ಖಲು ॥ 58 ॥

ಕಲ್ಯತೇ ಗಣ್ಯತೇ ಕರ್ಮಫಲಂ ತದ್ಯುಜ್ಯತೇ ಕ್ಷಣಾತ್ ।
ಏವಂ ಕಲಿಯುಗೋ ನೂನಂ ಕರ್ಮಫಲಸ್ಯ ಯೋಜನಮ್॥ 59 ॥

(58, 59) ಜಗತ್ತಿನಲ್ಲಿ ಜನಿಸಿಬಂದ ಯಾವುದೇ ಜೀವಿಯು ಯಾವ ಯಾವ ಕರ್ಮಗಳನ್ನು, ಕೆಲಸಕಾರ್ಯಗಳನ್ನು ಎಸಗುತ್ತದೆಯೋ, ನಡೆಸುತ್ತದೆಯೋ ಆ ಆ ಕರ್ಮಫಲವನ್ನು ಪ್ರಕೃತಿಯು ತತ್ಕ್ಷಣದಲ್ಲಿಯೇ ಆ ಆ ಜೀವಿಯ ಮಸ್ತಿಷ್ಕದಲ್ಲಿ ಅರ್ಥಾತ್, ಮಿದುಳಿನಲ್ಲಿ ದಾಖಲಿಸುತ್ತದೆ. ಈ ಲೇಖನಕಾರ್ಯವು ಯಮನ ಮಂತ್ರಿಯಾದ ಚಿತ್ರಗುಪ್ತನಿಂದ ನಡೆಯುತ್ತದೆ ಎಂದು ಪುರಾಣಗಳು ಹೇಳುತ್ತವೆ. ಆ ಚಿತ್ರಗುಪ್ತನೆಂದರೆ ವಿಚಿತ್ರರೀತಿಯಿಂದ ಗುಪ್ತವಾಗಿ ಕಾರ್ಯನಡೆಸುವ (ಪ್ರಕೃತಿಮಾತೆಯಿಂದ ನಿರ್ಮಿತವಾದ) ಮಿದುಳೇ ಸರಿ, ಮಸ್ತಿಷ್ಕವೇ ಸರಿ. ಪ್ರಾಣಿಯ ಶರೀರದಲ್ಲಿ ಇದ್ದುಕೊಂಡು ಆ ಪ್ರಾಣಿಯು ನಡೆಸಿದ ಎಲ್ಲ ಕರ್ಮಗಳ, ಅರ್ಥಾತ್, ಕೆಲಸ–ಕಾರ್ಯಗಳ ಪರಿಣಾಮಗಳನ್ನು ನಮೂದಿಸುವುದು ಮಿದುಳು. ಈ ಮಿದುಳನ್ನೇ ಚಿತ್ರಗುಪ್ತ ಎಂದು ಪುರಾಣಗಳು ಕರೆದವು.

'ಕಲ್ಯತೇ' ಅಂದರೆ ಗಣನೆಗೆ ತರುವುದು ಎಂದು ಅರ್ಥ. ಕರ್ಮಫಲವನ್ನು ಗಣನೆಗೆ ತಂದುಕೊಂಡು ಕ್ಷಣಮಾತ್ರದಲ್ಲಿ ಅದನ್ನು ಮಸ್ತಿಷ್ಕಕ್ಕೆ ಜೋಡಿಸುವ ಕಾರ್ಯವೇನಿದೆಯೋ ಅದೇ ಕಲಿಯುಗ. ಗಣಿಸಲ್ಪಟ್ಟ ಕರ್ಮಫಲಯೋಜನೆಯೇ ಕಲಿಯುಗ.

ಮಾತೃಗರ್ಭಾದ್ಯದಾ ಜೀವೀ ತ್ವಾಗಚ್ಛತಿ ಮಹೀತಲೇ ।
ಖಲ್ವತ್ರಾರಭತೇ ತಸ್ಯ ಕಲಿಯುಗೋ ನ ಸಂಶಯಃ ॥ 60 ॥

(60) ಯಾವಾಗ ಜೀವಿಯು ಮಾತೃಗರ್ಭದಿಂದ ಹೊರಟು ಭೂಮಿಗೆ ಬರುವುದೋ ಆಗಲೇ ನಿಸ್ಸಂದೇಹವಾಗಿ ಆ ಜೀವಿಯ ಕಲಿಯುಗವು ಪ್ರಾರಂಭವಾಗುವುದು. ಈ ಅರ್ಥದಲ್ಲಿ ಪ್ರತೀ ಜೀವಿಗೂ ಅದರದೇ ಆದ ಕಲಿಯುಗವೆಂದಾಗುತ್ತದೆ.

ಏವಂ ದಶಾವತಾರಾಶ್ಚ ಮಹಾವಿಷ್ಣೋರ್ನಿರಂತರಮ್ ।
ಪ್ರಚಲಂತಿ ಚತುರ್ಯುಗೈಃ ಸಾಕಮೇತತ್ ಸುನಿಶ್ಚಿತಮ್ ॥ 61 ॥

(61) ಈ ರೀತಿಯಲ್ಲಿ ಮಹಾವಿಷ್ಣುವಿನ ದಶಾವತಾರಗಳು ನಾಲ್ಕೂ ಯುಗಗಳ ಜೊತೆಜೊತೆಗೆ ನಿರಂತರವಾಗಿ ನಡೆಯುತ್ತಿರುತ್ತವೆ. ನಿಶ್ಚಿತವಾಗಿಯೂ ನಡೆಯುವುದೇ ಹೀಗೆ.

ಸಹಸ್ರಾರಸ್ಥಿತೋ ರಾಮೋ ಭೂತ್ವಾ ಕೃಷ್ಣಸ್ತ್ವನಂತರಮ್ ।
ಭೂಯಾದ್ಬುದ್ಧೋ ಮಹಾಹಂಸೋ ಮುಮುಕ್ಷುರ್ಯೋಗಮಾರ್ಗತಃ ॥ 62 ॥

(62) ಮೋಕ್ಷವನ್ನು ಪಡೆಯಬೇಕೆನ್ನುವವನು ಯೋಗಮಾರ್ಗದಲ್ಲಿ ತೊಡಗಿಕೊಂಡು ಮೊದಲು ರಾಮನಾಗಿ, ಅನಂತರ ಕೃಷ್ಣನಾಗಿ ಕೊನೆಗೆ ಪರಮಹಂಸನಾದ ಬುದ್ಧನಾಗಲಿ.

ಪರಶುರಾಮಾವತಾರದವರೆಗಿನದು ಎಲ್ಲ ಜೀವಿಗಳಿಗೆ ಸಮಾನವೆಂದು ಈ ಹಿಂದೆ ತಿಳಿಸಲಾಗಿದೆ. ಹಿಂದಿನ ಆರು ಅವತಾರಗಳೊಂದಿಗೆ ರಾಮಾವತಾರಕ್ಕೆ ಸಂಬಂಧಿಸಿದಂತೆ ರಾಮಾಯಣದಲ್ಲಿ ಬರುವ ಜಟಾಯು ಪ್ರಸಂಗದವರೆಗಿನದು ಸಾಮಾನ್ಯ ಲೌಕಿಕಾಸಕ್ತ ಮಾನವರಿಗೆ ಸಂಬಂಧಿಸಿ ಬರುವಂಥಾದ್ದು. ರಾಮಾಯಣದಲ್ಲಿ ಯೋಗಮಾರ್ಗದಲ್ಲಿ ಗಮನವು ಆರಂಭವಾಗುವುದು ಜಟಾಯು–ಶಬರಿಗಳ ಪ್ರಸಂಗಗಳೊಂದಿಗೆ. ಕಳೆದುಹೋದ ಆತ್ಮಶಕ್ತಿಯೇ ಸೀತೆ; ಅವಳೇ ಪ್ರತಿಜೀವಿಯಲ್ಲಿರುವ ಕುಂಡಲಿನಿ. ಕುಂಡಲಿನಿಯು ಶೋಕಸ್ಥಿತಿಯಲ್ಲಿ ಮೂಲಾಧಾರದಲ್ಲಿ ಬಿದ್ದಿರುತ್ತದೆ. ಯೋಗಮಾರ್ಗದಲ್ಲಿ, ಅಷ್ಟಾಂಗಯೋಗದೊಂದಿಗೆ ಪ್ರಾಣಾಯಾಮದ ಮೂಲಕ ಚೇತನವು ಅಲ್ಲಿಗೆ ತಲುಪಿ ಆ ಕುಂಡಲಿನಿಯನ್ನು ಸಹಸ್ರಾರಕ್ಕೆ ತರುವುದೇ ಯೋಗಸಾಧನೆ. ಸೀತೆಯ ರೂಪದ ಕುಂಡಲಿನಿಯ ಪರಿಸ್ಥಿತಿಯನ್ನು ಮೊದಲು ತಿಳಿಸುವ ಗುರು ಜಟಾಯು. ಅನಂತರ ಹನುಮಂತಾದಿಗಳಿರುವ ಸ್ಥಳವನ್ನು ತಿಳಿಸುವ ಶಬರಿಯು ಯೋಗಮಾರ್ಗದ ತರ್ಕಬದ್ಧ ನಡವಳಿಕೆಯನ್ನು ಬೋಧಿಸುವ ತತ್ತ್ವವಾಗಿದೆ. ಹೀಗೆ ಯೋಗಮಾರ್ಗದಲ್ಲಿ ಪ್ರವರ್ತಿಸಿದಾಗ ಮೋಕ್ಷಸಾಧನೆ, ಅರ್ಥಾತ್, ರಾಮನು, ಜೀವಾತ್ಮನು ಕುಂಡಲಿನೀಶಕ್ತಿಯೊಂದಿಗೆ ಅಯೋಧ್ಯೆಯೆಂಬ ಸಹಸ್ರಾರವನ್ನು ಸಾಧಿಸುವುದು. ಆದುದರಿಂದ ಮೋಕ್ಷಸಾಧಕನು ಮೊದಲು ರಾಮನಾಗಿ ಅನಂತರ ಕೃಷ್ಣನಾಗಿ ಕೊನೆಗೆ ಬುದ್ಧನಾಗಿ ಕೇವಲ ಪರಮಹಂಸಸ್ಥಿತಿಯಲ್ಲಿ ಮುಂದುವರಿಯುವುದು.

ಮಹಾವಿಷ್ಣೋರ್ದಿವ್ಯಾದವತರಣಕಾರ್ಯಾರ್ಥಜನಿತ–
ನವಶ್ಲಿಷ್ಟಾತ್ಮಾರ್ಥೇನ ಚ ಸುಕೃತಿಪೂರ್ಣೇನ ಮನಸಾ।
ಯುತಾಸ್ಸರ್ವೇ ನೂನಂ ಪರಮಗುರುಪಾದಾಂಬುಜರತಾಃ
ಭವಾಮೋ ಬುದ್ಧಾಂತ್ಯಾವತರಣಸುಸಿದ್ಧಾ ನನು ವಯಮ್ ॥ 63 ॥

(63) ಮಹಾವಿಷ್ಣುವಿನ ದಿವ್ಯವಾದ ಅವತಾರಕಾರ್ಯಗಳೊಂದಿಗೆಹೊಸದಾಗಿ ಹೊಂದಿಕೊಂಡು ಬಂದ ಆತ್ಮಕ್ಕೆ ಸಂಬಂಧಿಸಿದ (ಶ್ಲೇಷಾತ್ಮಕವಾದ) ಈ ಅರ್ಥದಿಂದ

ಹಾಗೂ ಪುಣ್ಯಕಾರ್ಯಾಸಕ್ತವಾದ ಮನಸ್ಸಿನಿಂದ ಒಡಗೂಡಿದ ನಾವೆಲ್ಲರೂ ಪರಮಗುರುಪಾದಗಳಲ್ಲಿ ಲೀನರಾಗಿ (ಆ ಗುರುವಿನ ಅನುಗ್ರಹದಿಂದ) ಬುದ್ಧಾವತಾರಕ್ಕೆ ಕೊನೆಗೊಳ್ಳುವ (ಆ ಮಹಾವಿಷ್ಣುವಿನ) ಅವತರಣಗಳಿಗಾಗಿ ಸಂಪೂರ್ಣ ಸಿದ್ಧರಾಗೋಣ.

ಮಹಾವಿಷ್ಣುವಿನ ಅವತಾರಗಳ ರಹಸ್ಯವನ್ನು ತಿಳಿಯಬಯಸುವ ಎಲ್ಲರಲ್ಲಿಯೂ ಮಹಾಪದ್ಮವೆನಿಸಿದ ಸಹಸ್ರಾರಗಮನಾಕಾಂಕ್ಷೆಯು ಒಡಮೂಡಲೆಂಬ ಆಶಯದಿಂದ ಈ ರಹಸ್ಯಾರ್ಥದರ್ಶಕಪದ್ಯಗುಚ್ಛವನ್ನು ತನ್ನ ಅಭಿದಾರ್ಥಕ್ಕೆ ಅನುಗುಣವಾಗಿ ಶಿಖರಕ್ಕೆ ಕೊಂಡೊಯ್ಯುವ ಶಿಖರಿಣೀಛಂದಸ್ಸಿನೊಂದಿಗೆ ಪೂರ್ಣಗೊಳಿಸಲಾಗಿದೆ.

– ಓಮ್ ಶುಭಮ್ –

ಏವಂ ಭಾರತರಾಷ್ಟ್ರಪತಿದತ್ತ ಸಂಸ್ಕೃತವಿದ್ವತ್ಪ್ರಶಸ್ತಿಪುರಸ್ಕೃತ–ವೇದರತ್ನ–ಶಾಸ್ತ್ರವಿದ್ಯಾನಿಧಿ–
ಜ್ಯೋತಿಶ್ಶಾಸ್ತ್ರಮಹಾನಿಧಿ–ದರ್ಶನವಾರಿಧಿ–ಆದರ್ಶಸೇವಾರತ್ನ–ಸಿದ್ಧಾಂತೀ

ಪ್ರೊ॥ ಡಾ॥ ಗುರುಪಾದ ಕೆ.ಹೆಗಡೆ

ವಿರಚಿತ ಯುಗಾರ್ಥಸಹಿತವಿಷ್ಣುದಶಾವತಾರರಹಸ್ಯದರ್ಶಿಕಾ ಸಂಪೂರ್ಣಾ

30. ಭೋಗಮೋಕ್ಷದ್ವಯಪ್ರದಶ್ರೀಲಲಿತಾಂಬಾ ನಮನಾನುಕೂಲತಃ ಪರಿವರ್ತಿತ ಪ್ರಾಚೀನನವಗ್ರಹಪ್ರಾರ್ಥನಾ

ಹಿಂದಿನಿಂದ ಬಂದ ಶ್ಲೋಕ :

ಸೂರ್ಯಶ್ಶೌರ್ಯಮಥೇಂದುರುಚ್ಚಪದವೀಂ ಸನ್ಮಂಗಲಂ ಮಂಗಲಃ
ಸದ್ಬುದ್ಧಿಂ ಚ ಬುಧೋ ಗುರುಶ್ಚ ಗುರುತಾಂ ಶುಕ್ರಃಸುಖಂ ಶಂ ಶನಿಃ ।
ರಾಹುರ್ಬಾಹುಬಲಂ ಕರೋತು ವಿಪುಲಂ ಕೇತುಃ ಕುಲಸ್ಯೋನ್ನತಿಮ್
ನಿತ್ಯಂ ಪ್ರೀತಿಕರಾ ಭವಂತು ಮಮ ತೇ ಸರ್ವೇ ಪ್ರಸನ್ನಾ ಗ್ರಹಾಃ ॥

ಅರ್ಥ : ನನಗೆ ಸೂರ್ಯನು ಶೌರ್ಯವನ್ನು, ಚಂದ್ರನು ಶ್ರೇಷ್ಠ ಪದವಿಯನ್ನು, ಕುಜನು ಸನ್ಮಂಗಲವನ್ನು, ಬುಧನು (ಲೌಕಿಕ) ಸದ್ಬುದ್ಧಿಯನ್ನು, ಗುರುವು ಗೌರವವನ್ನು, ಶುಕ್ರನು ಸುಖವನ್ನು, ಶನಿಯು ಶಾಂತಿಯನ್ನು, ರಾಹುವು ವಿಪುಲ ಬಾಹುಬಲವನ್ನು ಹಾಗೂ ಕೇತುವು ಕುಲೋನ್ನತಿಯನ್ನು ಪ್ರಸನ್ನತೆಯಿಂದ ವಿತರಿಸಲಿ.

ಇದನ್ನು ನವಗ್ರಹರೂಪಸ್ಥಶ್ರೀಲಲಿತಾನಮನಾತ್ಮಕವಾಗಿ ಈ ಕೆಳಗಿನಂತೆ ಬದಲಿಸಲಾಗಿದೆ.

ಸೂರ್ಯಃಕೀರ್ತಿಮಥೇಂದುರುಚ್ಚಪದವೀಂ ಸನ್ಮಂಗಲಂ ಮಂಗಲಃ
ಚಿದ್ಬುದ್ಧಿಂ ಚ ಬುಧೋ ಗುರುಶ್ಚ ಗುರುತಾಂ ಶುಕ್ರಃಸುಖಂ ಶಂ ಶನಿಃ।
ರಾಹುಸ್ತ್ವಾತ್ಮಬಲಂ ದದಾತು ಕೃಪಯಾ ಕೇತುಶ್ಚ ಮುಕ್ತಿಂ ಹಿ ನಃ
ಶ್ರೀಮಾತರ್ಲಲಿತೇ ನಮೋಽಸ್ತು ಸತತಂ ತೇ ನಸ್ತ್ವಮೇತೇ ಗ್ರಹಾಃ ॥

ಅರ್ಥ : ನಮಗೆಲ್ಲರಿಗೂ ಸೂರ್ಯನು ಕೀರ್ತಿಯನ್ನೂ ಚಂದ್ರನು ಉನ್ನತ ಪದವಿಯನ್ನೂ ಕುಜನು ಸನ್ಮಂಗಲವನ್ನೂ ಬುಧನು ಚಿದ್ಬುದ್ಧಿ(ಆತ್ಮಜ್ಞಾನಕಾರಕ ಬುದ್ಧಿ)ಯನ್ನೂ ಗುರುವು ಗೌರವವನ್ನೂ ಶುಕ್ರನು ಸುಖವನ್ನೂ ಶನಿಯು ಶಾಂತಿಯನ್ನೂ ರಾಹುವು ಆತ್ಮಬಲವನ್ನೂ ಕೇತುವು ಮುಕ್ತಿಯನ್ನೂ ಕೃಪೆಯಿಂದ ನೀಡುವವರಾಗಲಿ. ಶ್ರೀಮಾತೆ ಲಲಿತೆ, ಈ ಗ್ರಹಗಳೆಲ್ಲ ನೀನೇ ಆಗಿರುವೆ; ನಿನಗೆ ನಮ್ಮೆಲ್ಲರ ಸತತ ನಮನಗಳು.

॥ ಏವಂ ಶ್ರೀ ಗುರುಪಾದಃ ಕೆ. ಹೆಗಡೇಭಿಃ ಭೋಗ–ಮೋಕ್ಷಪ್ರದಶ್ರೀಲಲಿತಾಂಬಾನುಕೂಲತಃ ಪರಿವರ್ತಿತಾ ನವಗ್ರಹಾತ್ಮಿಕಾ ಶ್ರೀಲಲಿತಾಪ್ರಾರ್ಥನಾ ಸಂಪೂರ್ಣಾ ॥

ವಿಶೇಷ ವಿಚಾರ :

(1) ಮೂಲದಲ್ಲಿ 'ಮಮ' ಅನ್ನುವಲ್ಲಿ ಸ್ವಾರ್ಥಭಾವವು ಗೋಚರಿಸುತ್ತದೆ. ಆದರೆ ಬದಲಾವಣೆಯಲ್ಲಿ 'ನಃ' ಎಂದು ತಿದ್ದಲಾಗಿದ್ದು ನಮ್ಮೆಲ್ಲರಿಗೆ ಎಂಬ ವಿಶಾಲ ಅರ್ಥ ಇಲ್ಲಿ ಬರುತ್ತದೆ.

(2) ಸೂರ್ಯನು ಶೌರ್ಯವನ್ನು ಅನ್ನುವುದಕ್ಕೆ ಬದಲಾಗಿ ಕೀರ್ತಿಯನ್ನು ಎಂದು ಇಲ್ಲಿ ತಿದ್ದಲಾಗಿದೆ. ಕೀರ್ತಿಯು ಎಲ್ಲ ವ್ಯವಸಾಯದವರಿಗೂ ಸಂಬಂಧಿಸಿ ಬರುತ್ತದೆ ಹಾಗೂ ಅದಕ್ಕಾಗಿ ಬೇಕಾಗುವ ಸಾಹಸ–ಶೌರ್ಯಾದಿಗಳನ್ನು ಅದು ಒಳಗೊಂಡಿರುತ್ತದೆ.

(3) ಮೂಲದಲ್ಲಿ ವಿನಯಾತ್ಮಕ ಹಾಗೂ ನಮಸ್ಕಾರಾತ್ಮಕ ಶಬ್ದಗಳು ಇಲ್ಲದ ಕೊರತೆಯಿದೆ; ಇಲ್ಲಿ, ಬದಲಾವಣೆಯಲ್ಲಿ ಅದನ್ನು ಸರಿಪಡಿಸಲಾಗಿದೆ.

(4) ಪರಾಶಕ್ತಿಯನ್ನು ಇಲ್ಲಿಯ ಬದಲಾವಣೆಯಲ್ಲಿ ಶ್ರೀಮಾತೆ ಲಲಿತೆ ಎಂದು ಗುರುತಿಸಲಾಗಿದೆ. ಪ್ರಕೃತಿಯಾಗಿ ಪರಾಶಕ್ತಿಯು ಸಮಸ್ತಗ್ರಹಗಳ ರೂಪದಲ್ಲಿ ಗೋಚರಿಸುವವಳು; ಅವಳಿಗೆ ಸಲ್ಲಿಸಿದ ನಮಸ್ಕಾರಗಳು ಎಲ್ಲ ಗ್ರಹಗಳಿಗೂ ಸಲ್ಲುತ್ತವೆ.

(5) ಬುಧನು ಲೌಕಿಕವಾದ ಸದ್ಬುದ್ಧಿಗೆ ಮಾತ್ರ ಪ್ರೇರಕನೆಂದು ಭಾವಿಸಲಾಗದು. ಆತ್ಮಜ್ಞಾನಕಾರಕ ಚಿದ್ಬುದ್ಧಿಯೂ ಆತನ ಪ್ರೇರಣೆಯಿಂದಲೇ ಬರಬೇಕು. ಚಿದ್ಬುದ್ಧಿಯಲ್ಲಿ ಸದ್ಬುದ್ಧಿಯೂ ಒಳಗೊಂಡಿರುತ್ತದೆ.

(6) ರಾಹು–ಕೇತುಗಳು ಆಧ್ಯಾತ್ಮಿಕ ಗ್ರಹಗಳೇ ಆದುದರಿಂದ ಅವರು ಮುಕ್ತಿಮಾರ್ಗ ದರ್ಶಕರಾಗಲಿ ಎಂಬ ಪ್ರಾರ್ಥನೆ ಈ ಬದಲಾವಣೆಯಲ್ಲಿದೆ.

ಸಿದ್ಧಾಂತಿ, ಪ್ರೊ॥ ಡಾ॥ ಗುರುಪಾದ ಕೆ. ಹೆಗಡೆ

520 "ಶ್ರೀಮಾತಾ", 4ನೇ ಕ್ರಾಸ್,
2ನೇ ಮೇನ್, ಮಾರುತಿ ಟೆಂಪಲ್ ರೋಡ್,
ತೊಣಚಿಕೊಪ್ಪಲು–ಕುವೆಂಪುನಗರ,
ಮೈಸೂರು–570023
ಮೊ : 8762320683

ಸಿದ್ಧಾಂತಿ, ಪ್ರೊ॥ ಡಾ॥ ಗುರುಪಾದ ಕೆ. ಹೆಗಡೆಯವರು 1941ರಲ್ಲಿ ಶಿರಸಿ ತಾಲೂಕಿನ ಪುಟ್ಟ ಗ್ರಾಮವಾದ ಉಂಬಳೇಕೊಪ್ಪದಲ್ಲಿ ಬಡ ಕೃಷಿಕ ಕುಟುಂಬದಲ್ಲಿ ಜನಿಸಿದರು. ಪ್ರಾಥಮಿಕ 4ನೆಯ ತರಗತಿಯವರೆಗೆ ಓದಿ, ನಂತರ ತಮ್ಮ 20ನೆಯ ವರ್ಷದವರೆಗೆ ದನಗಾಹಿಯಾಗಿ ಹಾಗೂ ಕೃಷಿಯಲ್ಲಿ ಮಗ್ನರಾಗಿದ್ದು, 1962ರಲ್ಲಿ ಸ್ವಂತ ಓದಿಕೊಂಡು ಬಾಹ್ಯ ಅಭ್ಯರ್ಥಿಯಾಗಿ ಎಸ್.ಎಸ್.ಸಿ. ಪೂರೈಸಿದರು. ಬಿ.ಎ. ಹಾಗೂ ಎಂ.ಎ. ಪದವಿಗಳಿಗಾಗಿ ಧಾರವಾಡದಲ್ಲಿ ಓದಿ ಎರಡರಲ್ಲಿಯೂ ಪ್ರಥಮ ರ್‍ಯಾಂಕ್ ಪಡೆದು ಕ್ರಮವಾಗಿ 'ಗುರುನಾಥ ಬೇವೂರ್ ಮೆಮೋರಿಯಲ್' ಹಾಗೂ 'ಸಿ.ಡಿ.ದೇಶಮುಖ್' ಪ್ರಶಸ್ತಿಗಳನ್ನು ಕರ್ನಾಟಕ ವಿ.ವಿ.ದಿಂದ ಗಳಿಸಿದರು. ತದನಂತರ ಸಾಗರದ ಲಾಲ್‌ಬಹಾದ್ದೂರ್ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕ–ಪ್ರಾಧ್ಯಾಪಕರಾಗಿ 31 ವರುಷ ಸೇವೆ ಸಲ್ಲಿಸಿ ಈಗ ತಮ್ಮ ನಿವೃತ್ತ ಜೀವನವನ್ನು ಮೈಸೂರಿನಲ್ಲಿ ಕಳೆಯುತ್ತಿದ್ದಾರೆ.

ವೃತ್ತಿಯ ಜೊತೆ–ಜೊತೆಗೆ ಬರವಣಿಗೆಯ ಪ್ರವೃತ್ತಿಯಲ್ಲಿ ತೊಡಗಿಕೊಂಡ ಡಾ॥ ಹೆಗಡೆಯವರು "ಸಂಸ್ಕೃತವ್ಯಾಕರಣದೀಪಿಕಾ", "ಅಂತರಂಗದರ್ಶನ", "ಅಪೂರ್ವ ಪೂರ್ವ", "ಶ್ರೀಮಾತಾಲಲಿತಾ", "ಪನ್ ಇನ್ ಸಂಸ್ಕೃತ್ ಲಿಟರೇಚರ್–ಎ ನ್ಯೂ ಅಪ್ರೋಚ್", "ಚಿತ್ರಕಾಶ", "ಶ್ಲೇಷತತ್ವ್–ವಿಶ್ವಸಾಹಿತ್ಯ ಮೇ ಏಕ್ ನಯಾ ಸಿದ್ಧಾಂತ್" ಮುಂತಾದ 25ಕ್ಕೂ ಹೆಚ್ಚು ಅಮೂಲ್ಯ ಕೃತಿಗಳನ್ನು ಸಂಸ್ಕೃತ, ಕನ್ನಡ, ಇಂಗ್ಲಿಷ್ ಹಾಗೂ ಹಿಂದೀ ಭಾಷೆಗಳಲ್ಲಿ ರಚಿಸಿದ್ದಾರೆ. ಸಂಸ್ಕೃತಕಾವ್ಯಲಾಕ್ಷಣಿಕ ಕ್ಷೇತ್ರಕ್ಕೆ ಸಾವಿರ ವರುಷಗಳ ಮೇಲೆ "ಶ್ಲೇಷಸಿದ್ಧಾಂತಃ" ಎಂಬ ತಮ್ಮದೇ ಆದ ಹೊಸಸಿದ್ಧಾಂತವನ್ನು ನೀಡಿ, ಯುರೋಪ್–ಆಸ್ಟ್ರೇಲಿಯಾಗಳಲ್ಲಿ ಹಾಗೂ ಭಾರತದ ವಿವಿಧೆಡೆಗಳಲ್ಲಿ ನಡೆದ ಅಧಿವೇಶನಗಳಲ್ಲಿ ಈ ಸಿದ್ಧಾಂತವನ್ನು ಮಂಡಿಸಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮನ್ನಣೆಯನ್ನು ಗಳಿಸಿದ್ದಾರೆ. "ಶ್ಲೇಷಸಿದ್ಧಾಂತ–ಒಂದು ಹೊಸನೋಟ" ಎಂದು ಕನ್ನಡದಲ್ಲಿಯೂ ತಮ್ಮ ಸಿದ್ಧಾಂತವನ್ನು ತಂದಿದ್ದಾರೆ.

ಡಾ॥ ಗುರುಪಾದ ಕೆ.ಹೆಗಡೆಯವರ ಸಾಹಿತ್ಯಕೃತಿಗಳಲ್ಲಿಯ ವಿಶೇಷತೆ, ಅಲಂಕಾರ ಹಾಗೂ ವ್ಯಾಕರಣಶಾಸ್ತ್ರಕ್ಕೆ ಸಂದ ಇವರ ಕೊಡುಗೆಗಾಗಿ ಇವರಿಗೆ ಬಂದ ಸಮ್ಮಾನ–ಪ್ರಶಸ್ತಿಗಳು ಅಪಾರ. ಅವುಗಳಲ್ಲಿ ಕೆಲವು...

- ❖ ಯು.ಜಿ.ಸಿ.ಯಿಂದ ಪೋಸ್ಟ್ ಡಾಕ್ಟರಲ್ ಥೀಸೀಸ್ ಮಾರ್ಗದರ್ಶನಕ್ಕಾಗಿ "ಸೂಪರ್‌ವೈಸರ್" ಮನ್ನಣೆ 1971ರಲ್ಲಿ.
- ❖ 1973ರಲ್ಲಿ "ಕನ್ನಡವಾಙ್ಮಯವಿಕಾಸೇ ಸಂಸ್ಕೃತಸ್ಯ ಪ್ರಭಾವಃ" ಕೃತಿಗೆ "ಪಂಡಿತ ನವೀನಂ ರಾಮಾನುಜಾಚಾರ್ಯ ಸಂಶೋಧನ ಪ್ರಶಸ್ತಿ" – ಮೈಸೂರು ವಿ.ವಿ.ದಿಂದ.
- ❖ 1980ರಲ್ಲಿ "ಸಂಸ್ಕೃತ ವ್ಯಾಕರಣದೀಪಿಕಾ" ಗ್ರಂಥಕ್ಕೆ "ಸುವರ್ಣಮಹೋತ್ಸವ ಸಂಶೋಧನ ಪ್ರಶಸ್ತಿ" – ಮೈಸೂರು ವಿ.ವಿ.ದಿಂದ
- ❖ 1983ರ ಮೈಸೂರು ದಸರಾದಲ್ಲಿ "ಸಂಸ್ಕೃತಕವಿ" ಮನ್ನಣೆ ಮತ್ತು ಸಮ್ಮಾನ.
- ❖ 1993ರಲ್ಲಿ ಪುಣೆಯಲ್ಲಿ ನಡೆದ ಅಖಿಲಭಾರತ ಪ್ರಾಚ್ಯಮಹಾಧಿವೇಶನದಲ್ಲಿ ಪ್ರತಿಷ್ಠಿತ "ಪಂಡಿತಪರಿಷತ್ " ಪ್ರಶಸ್ತಿ.
- ❖ 2012ರಲ್ಲಿ"ಶ್ಲೇಷಸಿದ್ಧಾಂತ" ಕೃತಿಗಾಗಿ ಶ್ರೀವೀರಾಪುರಹಿರೇಮಠದಿಂದ "ಸಿದ್ಧಾಂತೀ" ಎಂಬ ಬಿರುದು.
- ❖ 2012ರಲ್ಲಿ ಕರ್ನಾಟಕ ಸಂಸ್ಕೃತವಿಶ್ವವಿದ್ಯಾಲಯ–ಉಡುಪಿ ಸಂಸ್ಕೃತಸ್ನಾತಕೋತ್ತರ ಕೇಂದ್ರ–ಉಡುಪಿ ಶ್ರೀಕೃಷ್ಣಮಠಗಳಿಂದ ಸಂಯುಕ್ತವಾಗಿ "ಮಾನ್ಯತಾ ಪ್ರಶಸ್ತಿ".
- ❖ 2014ರಲ್ಲಿ ಮೈಸೂರಿನ ವೇದಶಾಸ್ತ್ರಪೋಷಿಣೀ ಸಭಾದಿಂದ "ಶಾಸ್ತ್ರವಿದ್ಯಾನಿಧಿ" ಎಂಬ ಬಿರುದು.
- ❖ 2014ರಲ್ಲಿ ಅಖಿಲಭಾರತ ಜ್ಯೋತಿರ್ವಿಜ್ಞಾನಸಂಸ್ಥೆಯಿಂದ ಜ್ಯೋತಿಷ್ಯಪ್ರಾವೀಣ್ಯಾ ದಿಂದಾಗಿ "ಜ್ಯೋತಿಶ್ಶಾಸ್ತ್ರಮಹಾನಿಧಿ" ಎಂಬ ಬಿರುದು.
- ❖ 2016ರಲ್ಲಿ ಆದರ್ಶ ಸೇವಾಸಂಘದಿಂದ "ಆದರ್ಶಸೇವಾರತ್ನ" ಪ್ರಶಸ್ತಿ.
- ❖ 2016ರಲ್ಲಿ ಅಮೇರಿಕಾದ ಮಿಸೌರಿ ರಾಜ್ಯದ ಕಾಸ್ಮೊಪಾಲಿಟನ್ ಯುನಿವರ್ಸಿಟಿಯಿಂದ ಗೌರವ ಡಾಕ್ಟರೇಟ್ ಪದವಿ.
- ❖ ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ 2016ರ ಪ್ರತಿಷ್ಠಿತ ರಾಷ್ಟ್ರಪತಿ ಪ್ರಶಸ್ತಿ (President's Award of Certificate of Honor).
- ❖ 2017ರಲ್ಲಿ ಮೈಸೂರಿನ ಆಯುರ್ವೇದ ವೈದ್ಯಸಂಘದಿಂದ "ದರ್ಶನವಾರಿಧಿ" ಪ್ರಶಸ್ತಿ.
- ❖ 2018ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಇವರ "ಜೀವಾತ್ಮ ಜೈತ್ರಯಾತ್ರೆ" ಕೃತಿಗೆ ಆತ್ಮಕಥೆ ಪ್ರಕಾರದಲ್ಲಿ 2016ರ ಸಾಲಿನ ಅತ್ಯುತ್ತಮ ಕೃತಿ ಎಂದು ಪರಿಗಣಿಸಿ ಸಿಂಪಿ ಲಿಂಗಣ್ಣ ದತ್ತಿನಿಧಿ ಬಹುಮಾನ.
- ❖ ಬೆಂಗಳೂರು ಅಖಿಲ ಹವ್ಯಕ ಮಹಾಸಭಾದ 2018ರ ಡಿಸೆಂಬರ್‌ದಲ್ಲಿ ನಡೆದ 'ಅಖಿಲ ಹವ್ಯಕ ವಿಶ್ವಸಮ್ಮೇಳನ"ದಲ್ಲಿ "ವೇದರತ್ನ ಪ್ರಶಸ್ತಿ"

ಸಿದ್ಧಾಂತಿ ಡಾ॥ಗುರುಪಾದ ಕೆ. ಹೆಗಡೆಯವರ ಕೃತಿಗಳು ಮತ್ತು ಅವುಗಳ ವಿಧ ಹಾಗೂ ಪ್ರಕಟಿತ ವರ್ಷ

1. ಸಾಹಿತ್ಯ ವಿಮರ್ಶೆ

1. ಕಾವ್ಯದಲ್ಲಿ ಧ್ವನಿ 1971
   ದ್ವಿತೀಯ ಆವೃತ್ತಿ 1999
2. ಕನ್ನಡವಾಙ್ಮಯವಿಕಾಸೇ ಸಂಸ್ಕೃತಸ್ಯ ಪ್ರಭಾವಃ 1999
3. ವೇದಾದಿಗಳಲ್ಲಿ ಶ್ಲೇಷಪ್ರಪಂಚ 1993
4. Thoughts Enlightening 2008
5. ಅಂತರಂಗದರ್ಶನ 2009
6. ಸಾಹಿತ್ಯದಲ್ಲಿ ವಿವಿಧಾರ್ಥತತ್ತ್ವ 2016

2. ಧಾರ್ಮಿಕ ಸಾಹಿತ್ಯ ವಿಮರ್ಶೆ

7. ಶ್ರೀಮಾತಾಲಲಿತಾ (ಲಲಿತಾ ಸಹಸ್ರನಾಮಸ್ತೋತ್ರ ವಿವರಣೆ ಸಹಿತ) 2010
8. ಲಲಿತಾಸಹಸ್ರನಾಮಸ್ತೋತ್ರ್–ಅರ್ಥ್ ಏವಂ ವಿಸ್ತ್ರತ ವ್ಯಾಖ್ಯಾ (ಹಿಂದಿ) 2016

3. ಕಾವ್ಯಶಾಸ್ತ್ರ

9. Pun In Sanskrit Literature – A New Approach 1982
10. ಶ್ಲೇಷಸಿದ್ಧಾಂತಃ (ಸಂಸ್ಕೃತ ಮತ್ತು ಇಂಗ್ಲೀಷ್) 1998
11. ಶ್ಲೇಷಸಿದ್ಧಾಂತ – ಒಂದು ಹೊಸನೋಟ 2011
12. ಶ್ಲೇಷತತ್ವ್ – ವಿಶ್ವ ಸಾಹಿತ್ಯ ಮೇ ಏಕ್ ನಯಾ ಸಿದ್ಧಾಂತ್ (ಹಿಂದಿ) 2015

4. ವ್ಯಾಕರಣ

13. ಸಂಸ್ಕೃತವ್ಯಾಕರಣದೀಪಿಕಾ 1976
    ದ್ವಿತೀಯ ಆವೃತ್ತಿ 2002

5. ಕವನಸಂಕಲನ

14. ವಾಸ್ತವ (ಕನ್ನಡ) 1982
15. ಚಿತ್ಪ್ರಕಾಶ (ಆಧ್ಯಾತ್ಮ ಕವನ ಸಂಕಲನ) 2011

6. ಸ್ತೋತ್ರಸಾಹಿತ್ಯ

16. ಆಧ್ಯಾತ್ಮಶ್ರೀರಾಮಸ್ತೋತ್ರಂ 1988
17. ಆಧ್ಯಾತ್ಮಸ್ತೋತ್ರಮಂತ್ರಭಾವಗೀತಾಃ (ಸಂಸ್ಕೃತ ಮತ್ತು ಇಂಗ್ಲೀಷ್) 1999

18 ಆಧ್ಯಾತ್ಮಸ್ತೋತ್ರ–ಮಂತ್ರ–ಭಾವಗೀತೆಗಳು 2011
19 ಶ್ರೀ ಮೂಕಾಂಬಿಕಾ ಚಾಲೀಸಾ 2020

7. ನಾಟಕ

20 ತೇಜಃಸ್ಸಂಕ್ರಮಃ (ಸಂಸ್ಕೃತನಾಟಕ– ಇಂಗ್ಲೀಷ್ ಭಾಷಾಂತರ ಸಹಿತ) 1999

8. ಪ್ರವಾಸಕಥನ

21 ಅಪೂರ್ವಪೂರ್ವ (ವಿದೇಶಪ್ರವಾಸಕಥನ) 2007

9. ಭಾಷಾಂತರ

22 ಶ್ರೀಲಲಿತಾಸಹಸ್ರನಾಮಸ್ತೋತ್ರ (ಕನ್ನಡಾನುವಾದಸಹಿತ) 2016
23 ಅಥರ್ವಶೀರ್ಷ–ದುರ್ಗಾಸೂಕ್ತ–ಭಜಗೋವಿಂದಾದಿಗಳು (ಕನ್ನಡಕ್ಕೆ) 2017

10. ಆತ್ಮಕಥೆ

24 ಜೀವಾತ್ಮಚೈತ್ರಯಾತ್ರೆ 2016

11. ವಿಶ್ವಕೋಶ

25 ಸನಾತನಶಬ್ದಾರ್ಥಚಿಂತಾಮಣಿ 2017
26. ಚಿತ್ಪ್ರಕಾಶದರ್ಶಿಕಾ (ವೇದಾದಿಗಳಲ್ಲಿ ಅಧ್ಯಾತ್ಮಚಿಂತನೆ)

ಡಾ॥ ಗುರುಪಾದ ಕೆ. ಹೆಗಡೆಯವರಿಂದ ಸಂಪಾದಿತ ಕೃತಿಗಳು

1. ಸಂಸ್ಕೃತ ಚಂದ್ರಿಕಾ–3
   (ಕರ್ನಾಟಕ ರಾಜ್ಯ ಎಸ್.ಎಸ್.ಎಲ್.ಸಿ. ಸಂಸ್ಕೃತ ಪಠ್ಯಪುಸ್ತಕ) 1994
2. ಸಂಸ್ಕೃತ ಮಯೂಖಮ್
   (ಕುವೆಂಪು ವಿ.ವಿ. ಪ್ರಥಮ ಬಿ.ಎ.,ಬಿ.ಎಸ್.ಸಿ ಪಠ್ಯಪುಸ್ತಕ) 1997
3. ಸಂಸ್ಕೃತ ವಾಣಿಜ್ಯಲಹರೀ
   (ಕುವೆಂಪು ವಿ.ವಿ. ಬಿ.ಕಾಂ. ಪಠ್ಯಪುಸ್ತಕ) 1997
4. ಸಂಸ್ಕೃತ ಸುದರ್ಶಿನೀ
   (ಕುವೆಂಪು ವಿ.ವಿ. ದ್ವಿತೀಯ ಬಿ.ಎ., ಬಿ.ಎಸ.ಸಿ ಪಠ್ಯಪುಸ್ತಕ) 1998
5. ಮೈ.ವಿ.ವಿ.ದ ಕನ್ನಡ ವಿಶ್ವಕೋಶ ಹಾಗೂ ಅನೇಕಾನೇಕ ಸಂಸ್ಮರಣ ಗ್ರಂಥ –ಗೌರವಗ್ರಂಥಗಳಲ್ಲಿ ಹಾಗೂ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಜರ್ನಲ್ಲುಗಳಲ್ಲಿ ಪ್ರಕಟಿತ ಅಸಂಖ್ಯ ಲೇಖನಗಳು